# ಕನ್ನಡ ಭಾಷಾ ಪಠ್ಯ

## ಬಿ.ಎಸ್ಸಿ. (ಫ್ಯಾಡ್)

(ಮೂರು ಮತ್ತು ನಾಲ್ಕನೇ ಸೆಮಿಸ್ಟರ್)

ಬೆಂಗಳೂರು ನಗರ ವಿಶ್ವವಿದ್ಯಾಲಯ BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS


ಪ್ರಧಾನ ಸಂಪಾದಕರು

**ಡಾ. ಡೊಮಿನಿಕ್**

ಕಾರ್ಯನಿರ್ವಾಹಕ ಸಂಪಾದಕರು

**ಡಾ. ಕೆ. ವೈ ನಾರಾಯಣಸ್ವಾಮಿ**

ಪರಿಶೀಲಕರು

**ಡಾ. ಬೆಳಕೆರೆ ಲಿಂಗರಾಜಯ್ಯ**

ಸಂಪಾದಕರು

ಪ್ರೊ. ರೇಣುಕಮ್ಮ ಜೆ.

ಡಾ. ಆರ್. ವಾದಿರಾಜು

ಪ್ರೊ. ನಾರಾಯಣಸ್ವಾಮಿ ಎಸ್.ಜಿ.


---


**ಬೆಂಗಳೂರು ನಗರ ವಿಶ್ವವಿದ್ಯಾಲಯ**

**KANNADA BHASHA PATYA :**
B.Sc. (Fad) : Third and Fourth Semester Text Book

Chief Editor : **Dr. Dominic**
Chairperson, Kannada Board of Studies
Bangalore City University.

Edited by : **Prof. J. Renukamma**
**Dr. R. Vadiraju**
**Prof. Narayanaswamy S.G.**

© ಬೆಂಗಳೂರು ನಗರ ವಿಶ್ವವಿದ್ಯಾಲಯ

ಪ್ರಥಮ ಮುದ್ರಣ : **2021**

ಪುಟಗಳು :

ಬೆಲೆ :

ಅಧ್ಯಯನ ಮಂಡಳಿ ಸದಸ್ಯರು :
ಡಾ.ಹನುಮಂತರಾಯಪ್ಪ, ಶ್ರೀ ರವೀಂದ್ರನಾಥ ಪುಣ್ಯಶೆಟ್ಟಿ
ಡಾ.ಎಚ್.ಕೆ.ಮಳಲಿಗೌಡ, ಡಾ. ಡಿ. ಸಿದ್ದರಾಜು
ಡಾ.ಶೀಲಾದೇವಿ ಎಸ್.ಮಳೀಮಠ
ಡಾ. ಟಿ.ಮಂಜುನಾಥ, ಎಚ್. ಉಮಾವತಿ.

ಪ್ರಕಾಶಕರು:

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು – 560001

# ಕನ್ನಡ ಭಾಷಾ ಪಠ್ಯ

## ಬಿ.ಎಸ್ಸಿ (ಫ್ಯಾಡ್) (ಮೂರು ಮತ್ತು ನಾಲ್ಕನೇ ಸೆಮಿಸ್ಟರ್)

## ೨೦೨೧–೨೨

## ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪರಿವಿಡಿ

## ಬಿ.ಎಸ್ಸಿ (ಫ್ಯಾಡ್)
## ಮೂರನೇ ಸೆಮಿಸ್ಟರ್


### ಒಲುಮೆ

ಆಶಯ : ನಾನು ಬಡವಿ – ಅಂಬಿಕಾತನಯದತ್ತ ೭

೧. ನನ್ನ ನಾಯಿ – ಪು.ತಿ. ನರಸಿಂಹಾಚಾರ್ ೮

೨. ಪ್ರೀತಿ – ಎಚ್. ಯೋಗನರಸಿಂಹನ್ ೧೩

೩. ಅವ್ವನ ಯಾತ್ರೆ – ಡಾ॥ ಕರೀಗೌಡ ಬೀಚನಹಳ್ಳಿ ೨೩

ಓದು ಪಠ್ಯ : ಪ್ರೀತಿ ಶಾಶ್ವತ! ಪ್ರೀತಿಸುವವರು ನಶ್ವರ
– ನಾಗತಿಹಳ್ಳಿ ಚಂದ್ರಶೇಖರ ೩೪

### ನಾಗರಿಕತೆ

ಆಶಯ : ನಾಗರಿಕತೆ – ಗೋಪಾಲಕೃಷ್ಣ ಅಡಿಗ ೩೯

೧. ಸಂಪರ್ಕ – ಗಂಗಾಧರ ಚಿತ್ತಾಲ ೪೩

೨. ಧರೆ ಹತ್ತಿ ಉರಿದೊಡೆ – ಲಿಂಗದೇವರು ಹಳೆಮನೆ ೪೫

೩. ಕಾಗೋಡಿಗೆ ಬಸ್ಸು ಬಂದಿದ್ದು – ಡಾ.ನಾ. ಡಿಸೋಜ ೫೧

ಓದು ಪಠ್ಯ : ಭೂಮಿಯ ಹಕ್ಕುದಾರರು –
ಮೂಲ ವೈ.ಕಂ. ಮಹಮದ್ ಬಷೀರ್
ಕನ್ನಡಕ್ಕೆ – ಸುನೈಫ್ ೬೨

### ಕಾಯಕ

ಆಶಯ : ವಚನಗಳು – ಆಯ್ದಕ್ಕಿ ಲಕ್ಕಮ್ಮ ೭೯

೧. ನೇಗಿಲಯೋಗಿ – ಕುವೆಂಪು ೮೧

೨ ರೈತಸಂಘ+ದಲಿತ ಸಂಘ=?
– ಡಾ. ಬಿ.ಎಂ. ಪುಟ್ಟಯ್ಯ ೮೨

೩. ಬಯಲು ಆಲಯದೆಡೆಗೆ
– ಅಮರೇಶ ನುಗಡೋಣಿ ೯೨

ಓದು ಪಠ್ಯ : ಅಂದು ಕಬ್ಬು ಕೂಲಿಗಳು
ಇಂದು ವಜ್ರ ವರ್ತಕರು – ಸಿ.ಎಸ್. ದ್ವಾರಕನಾಥ್ ೧೦೨

### ಬೇಟೆ

ಆಶಯ : ಒಂದು ಮೀನು – ಪ್ರತಿಭಾ ನಂದಕುಮಾರ್ ೧೦೬

೧. ಮಾಯಾ ವರಹ ಬೇಟೆ ಪ್ರಸಂಗ – ರಾಘವಾಂಕ
(ಹರಿಶ್ಚಂದ್ರ ಕಾವ್ಯದಿಂದ ಆಯ್ದ ಭಾಗ) ೧೦೭

೨. ಪೆಡಂಭೂತಗಳ ವಕ್ತಾರರಾಗಿ
– ಕೃಪಾಕರ ಮತ್ತು ಸೇನಾನಿ ೧೧೨

೩. ಅಜ್ಜಿ ಸಾಬಿಯ ಹುಲಿ ಬೇಟೆ
– ಬಿಳುಮನೆ ರಾಮದಾಸ್ ೧೨೧

ಓದು ಪಠ್ಯ: ಇದೇನು ಹುಲಿಯೋ ಇಲ್ಲಾ ಪಿಶಾಚಿಯೋ
ಮೂಲ : ಜಿಮ್ ಕಾರ್ಬೆಟ್
ಕನ್ನಡಕ್ಕೆ : ಡಾ॥ ಟಿ.ಎಸ್. ವಿವೇಕಾನಂದ. ೧೨೭

**ಒಲುಮೆ : ಆಶಯ**

## ನಾನು ಬಡವಿ

– ಅಂಬಿಕಾತನಯದತ್ತ

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು

ಹತ್ತಿರಿರಲಿ ದೂರವಿರಲಿ
ಅವನೆ ರಂಗಸಾಲೆ
ಕಣ್ಣು ಕಟ್ಟುವಂಥ ಮೂರ್ತಿ
ಕಿವಿಗೆ ಮೆಚ್ಚಿನೋಲೆ

ಚಳಿಗೆ ಬಿಸಿಲಿಗೊಂದು ಹದನ
ಅವನ ಮೈಯ ಮುಟ್ಟಿ
ಅದೇ ಗಳಿಗೆ ಮೈಯ ತುಂಬ
ನನಗೆ ನವಿರು ಬಟ್ಟೆ

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು

ಕುಂದುಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು?
ಹೊಟ್ಟೆಗಿತ್ತ ಜೀವ ಫಲವ
ತುಟಿಗೆ ಹಾಲು ಜೇನು.

# ನನ್ನ ನಾಯಿ

**– ಪು.ತಿ. ನರಸಿಂಹಾಚಾರ್**

ಹೆರರ ನೋವಿಗೆ ಅಯ್ಯೋ ಎಂದು
ಮರುಗಿ ಸುಯ್ಯಲನಿಡಲು ಒಲವೆ?
ಹಿರಿಯ ಸುಖದಿರವೆನ್ನದೆನ್ನುವ
ಅರಿವು ಒಲಿದವಗಿರುವುದೆ?

ಜನುಮದೊಂದಿಗೆ ಜೊತೆಯ ಕೂಡಿ
ಕೊನೆಯವರೆಗೂ ಬೆನ್ನ ಬಿಡದ
ಜನುಮದುನ್ನತಿ ಕುಲದ ಹೆಮ್ಮೆಯ
ಕಟ್ಟ ಕಳೆವುದೆ ಕರುಣೆಯು?

ಕೊಳದ ಕರೆ ಬಳಿ ಅಂದು ಮರುಗಿದೆ
ಸುಳಿದ ನೋವಿನ ಅಳುವ ಕೇಳಿ,
ಬೆಳೆದ ಇರುಳೊಳು ದನಿಯನರಸಿ
ಮನದೊಳಳುಕುತ ನಡೆದೆನು.

ಮುಗಿಲ ಬೆಳ್ಳಿಯ ಪೊರೆಯ ಹೊದೆದು
ಸೊಗಸುಕನಸನು ಕಾಣವಂದದಿ
ನಗುವ ಚಂದ್ರನ ಬೆಳಕಿನೊಳಗೆ
ಕಂಡೆ ತಬ್ಬಲಿ ಮರಿಯನು.

ತಾಯಿ ಸತ್ತರು ಮೊಲೆಯ ಬಿಡದಾ
ನಾಯ ಮರಿಯ ಗೋಳ ಕಂಡೂ
ಮೈಯ ಮುಟ್ಟಲು ತಡೆದುದಂದು
ಜಾತಿ ಹೆಚ್ಚಿನ ಹೆಮ್ಮೆಯು



ಕೊರೆವ ಚಳಿಯೊಳು ದಿಕ್ಕುಗಾಣದ
ಮರಿಯ ತೊರೆಯಲು ಮನವು ಬಹುದೆ!
ಕೊರಲೊಳಿಟ್ಟೆನು ಬಳ್ಳಿಕುಣಿಕೆಯ
ಮನೆಗೆ ನಡಸಿದೆ ಮೆಲ್ಲನೆ.

ಅಂದು ಮಕ್ಕಳ ಹರುಷ ಮೀರಿತು
ಮುಂದೆ ಕುಣಿದರು ಕೈಯ ತಟ್ಟಿ
ಕಂದನಂದದಿ ಅಂದು ಮೊದಲು
ಮರಿಯ ಸಾಕಿದೆವೆಲ್ಲರು.

ಹಾಲು ಅನ್ನವನುಣಿಸಿ ನಲಿದೆವು
ಮೇಲು ತಿಂಡಿಗಳೆಲ್ಲವಿತ್ತೆವು
ಮೈಲಿಗೆಯ ಭಯದಿಂದ ಮೈಯನು
ಮುಟ್ಟಗೊಡಿಸೆವು ಆದರೂ.

ಮರಿಯು ನಮ್ಮ ಬಿಂಕವರಿತು
ಹೊರಗೆ ನಿಲುವುದು ಹೊಸಿಲ ದಾಟದು!
ಹಿರಿಯತನದ ಹೆಮ್ಮೆಗಡಲು
ಹರಿಯಿತೆಮ್ಮಯ ಮಧ್ಯದಿ.

ಆರು ತಿಂಗಳ ಕಳೆದೆವಿಂತು.
ಊರೆ ಮೆಚ್ಚಿದ ಮರಿಯನೊಂದು
ಇರುಳೊಳೊಯ್ದನು ಕಳ್ಳನದನು
ಮನೆಯ ಮಕ್ಕಳ ಮುದ್ದನು

ಎದ್ದು ಹುಡುಗರು ನಾಯ ಕಾಣದೆ
ಬಿದ್ದು ಬೀಳುತಲೋಡಿ ಬಂದು
'ಕದ್ದರೇನೋ? ಮರಿಯ ಕಾಣೆವು'
ಎಂದು ಕಂಬನಿಗೆರೆದರು.

ಕೇರಿ ಕೇರಿಗೆ ಜನರನಟ್ಟಿದೆ
ಊರ ಉರನು ತಿರುಗಿ ಕೇಳಿದೆ
ಆರು ಕಂಡರು 'ಮರಿಯ ಕಾಣಿರ'
ಎಂದು ಹುಚ್ಚನ ತೆರದೊಳು.

ಮೂರು ದಿನಗಳು ಹುಡುಕಿ ಕೊನೆಗೆ
ಊರ ಮುಂದಿನ ಮನೆಯ ಹೊರಗೆ
ಏರು ಬಿಸಿಲೊಳು ಕುರುಬನೆಡೆಯೊಳು
ಕಂಡೆ ಮಲಗಿದ ಕುನ್ನಿಯ.

ಹರುಷ ಮೀರಿತು ಬಾಲವಾಡಿಸಿ
ಗುರುತ ಹಿಡಿಯುತ ನೆಗೆಯೆ ನಾಯಿ
ಕುರುಬಗೌಡನ ಗದರಿ ಕೇಳಿದೆ
'ಕದ್ದೆಯೇತಕೋ ಮರಿಯನು?'

ನಡುಗಿ ಕೈಗಳ ಮುಗಿದು ನಿಂತು
ನುಡಿದನೀ ಪರಿ ಕುರುಬಗೌಡನು
'ಒಡೆಯ, ಮರಿಯನು ಕದಿಯಲಿಲ್ಲವು
ಹಿಂದೆ ಬಂದಿತು ಕರೆಯದೆ



ಅಂದು ಊರೊಳಗಿರುಳ ತಂಗಿ
ಮುಂದೆ ಪಯಣದ ಬೆಳೆಸಲೆಂದು
ಮಂದಿ ಮಲಗಿದ ಹೊತ್ತಿನಲ್ಲಿ
ನಿಮ್ಮ ಜಗಲಿಗೆ ಬಂದೆನು

ಮರಿಯು ಬಗುಳುತ ಅಡ್ಡಗಟ್ಟಲು
ತೆರೆದು ಬುತ್ತಿಯ ರೊಟ್ಟಿಯಿಟ್ಟೆನು
ಹರುಷದಿಂದಲಿ ತಲೆಯ ತಟ್ಟಿ
ಮೈಯ ತಡಹಿದೆ ನಾಯಿಯ

ಚಳಿಗೆ ನಡುಗಲು ಮರುಕದಿಂದ
ಕೆಳಗೆ ಕಂಬಳಿ ಹಾಸಿ ಜೊತೆಯೊಳು
ಚೆಲುವು ಮರಿಗೂ ತಾಣವಿತ್ತೆನು
ಒಲುಮೆ ಬೆಸೆಯಿತು ಇಬ್ಬರ

ಮೂಡು ಬೆಳಗಲು ಹೊರಟೆನಂದು
ಓಡಿ ಹಿಂದೆಯೆ ಬರಲು ಮರಿಯು
ಕೂಡಲಪ್ಪುತ ಮುತ್ತನಿಟ್ಟು
ಕರೆದು ತಂದೆನು ಊರಿಗೆ

ಬಂಧು ಬಳಗಗಳಿಲ್ಲವೆನಗೆ
ಕಂದನೀ ಮರಿ ಕಳೆಯಲಾರೆ
ಎಂದ ಗೌಡನ ಕಣ್ಣು ಹನಿತುದು
ಮರಿಯ ಹಗ್ಗವ ಹಿಡಿಯಲು.

ಹಗ್ಗವೆಳೆದನು; ಕುನ್ನಿ ಬಾರದು
ಸಗ್ಗದೆನ್ನಯ ಸವಿಯ ನುಡಿಗೆ,
ಹಗ್ಗ ಸಡಿಲಿಸಿ ಬಿಟ್ಟೆನದನು
ಕುರುಬ ತಬ್ಬಿದ ಸೊಣಗನ!

ವರುಷ ನೂರರ ಕರುಣೆ ಬಿಗಿವುದೆ
ಕುರುಬನಿರುಳೊಳು ಬಿಗಿದ ಕಟ್ಟ!
ಮರಿಯ ನಡತೆಗೆ ಕೋಪಗೊಳ್ವುದೆ?
ಕರುಣೆ ಒಲುಮೆಗೆ ಸಾಟಿಯೆ?

ಒಲಿದರಿರವಿನ ಬಗೆಗಳೆರಡೆ?
ಒಲುಮೆಗಡ್ಡಲೆ ಕುಲದ ಹೆಮ್ಮೆ?
ಒಲುಮೆ ಬೆಸುಗೆಯ ಸುಖದ ಸವಿಯನು
ತಿಳಿಯದೇ ಬಡಜಂತುವು!

ಕಣ್ಣ ನೀರೊಳು ತೊಳೆದೆನಂದು
ಜನ್ಮದುನ್ನತಿ ಹೆಮ್ಮೆ ಕೊಳೆಯ
ನನ್ನ ಒಲುಮೆಗೆ ಅಡ್ಡ ಬಂದ
ಕರುಣೆ ಹಾಯದ ಬಿಂಕವ.

*****



# ಪ್ರೀತಿ

**ಎಚ್. ಯೋಗನರಸಿಂಹನ್**

ಆಸ್ಥೆ ಇಲ್ಲವಾಗುವುದಕ್ಕೆ ಒಂದು ಮುಖ್ಯ ಕಾರಣ, ತನ್ನ ಮೇಲೆ ಯಾರಿಗೂ ಪ್ರೀತಿ ಇಲ್ಲವೆಂಬ ಭಾವನೆ. ಜನಕ್ಕೆ ತನ್ನಲ್ಲಿ ಮಮತೆ ಇದೆಯೆಂಬ ಭಾವನೆಯಾದರೋ ಆಸ್ಥೆಯನ್ನು ಹೆಚ್ಚು ಮಾಡುತ್ತದೆ. ಒಬ್ಬನಿಗೆ ತಾನು ಪ್ರೀತಿಸಲ್ಪಡುತ್ತಿಲ್ಲವೆಂಬ ಭಾವನೆ ಅನೇಕ ಕಾರಣಗಳಿಂದ ಬರಬಹುದು. ಯಾರೂ ಪ್ರೀತಿ ಮಾಡಲಾರದಷ್ಟು ಭಯಂಕರ ವ್ಯಕ್ತಿ ತಾನು ಅಂದುಕೊಂಡಿರಬಹುದು; ಇಲ್ಲವೆ, ಚಿಕ್ಕಂದಿನಲ್ಲಿ ತನ್ನ ಜತೆಯ ಮಕ್ಕಳಿಗೆ ಸಿಕ್ಕುತ್ತಿದ್ದ ಪ್ರೀತಿಗಿಂತ ಕಡಿಮೆ ಪ್ರೀತಿಗೆ ಒಗ್ಗಬೇಕಾಗಿ ಬಂದಿರಬಹುದು; ಅಥವಾ ಅವನನ್ನು ನಿಜಕ್ಕೂ ಯಾರೂ ಪ್ರೀತಿಸದೆಯೇ ಇರಬಹುದು. ಈ ಮೂರನೆಯದೇ ನಿಜವಾದರೆ, ಚಿಕ್ಕಂದಿನಲ್ಲಿಯೇ ನಡೆದ ಯಾವುದೋ ದುರ್ಘಟನೆಯ ದೆಸೆಯಿಂದ ಆತ್ಮ ವಿಶ್ವಾಸ ಕಳೆದುಕೊಂಡುದೇ ಅದಕ್ಕೂ ಕಾರಣವಿರಬೇಕು. ತನ್ನನ್ನು ಕಂಡರೆ ಯಾರಿಗೂ ಪ್ರೀತಿ ಇಲ್ಲವೆಂದ ಮನುಷ್ಯ ಅದರ ಪರಿಣಾಮವಾಗಿ ಹಲವು ಬಗೆಯ ನಿಲುವು ತಾಳಿಯಾನು, ಪ್ರೀತಿಯನ್ನು ಸಂಪಾದಿಸಿಕೊಳ್ಳಲು ಅಸಾಧ್ಯ ಪ್ರಯತ್ನ ಮಾಡಿಯಾನು, ಅಥವಾ ಅಸಾಧಾರಣವಾದ ಪ್ರೀತಿಯ ನಡವಳಿಕೆ ನಡೆಸಿ ನೋಡಿಯಾನು, ಅಂಥ ಪ್ರಯತ್ನದಲ್ಲಿ ಅವನು ಯಶಸ್ವಿಯಾಗುವ ಸಂಭವ ಕಡಿಮೆ. ಅವನು ಮಾಡುವ ಉಪಕಾರಗಳ ಹಿಂದಿರುವ ಆಶಯವು ಉಪಕಾರ ಹೊಂದಿದವರಿಗೆ ಸುಲಭವಾಗಿ ತಿಳಿದುಹೋಗುತ್ತದೆ; ಮಾತ್ರವಲ್ಲ, ಮಾನವನು ಸ್ವಭಾವತಃ ಪ್ರೀತಿಯನ್ನು ಬೇಗನೆ ತೋರುವುದು, ಪ್ರತಿ ಪ್ರೀತಿಯ ನಿರೀಕ್ಷೆ ಕೊಂಚವೂ ಇಲ್ಲದಂಥವರಿಗೇನೆ, ಆದ್ದರಿಂದ ಪ್ರಿಯವಾದ ನಡವಳಿಕೆಗಳಿಂದ ನಿರೀಕ್ಷೆ ಕೊಂಚವೂ ಇಲ್ಲದಂಥವರಿಗೇನೆ. ಆದ್ದರಿಂದ ಪ್ರಿಯವಾದ ನಡವಳಿಕೆಗಳಿಂದ ಪ್ರೀತಿಯನ್ನು ಕೊಂಡುಕೊಳ್ಳಲು ಪ್ರಯತ್ನ ಮಾಡುವವನಿಗೆ, ಮನುಷ್ಯರ ಕೃತಘ್ನತೆಯ ಅರಿವಿನಿಂದ ಆಶಾಭಂಗವಾಗುತ್ತದೆ. ತಾನು ಮಾಡುವ ಉಪಕಾರದ ಬೆಲೆಗಿಂತ ತಾನು ಕೊಂಡುಕೊಳ್ಳಲು ಹವಣಿಸಿದ ಪ್ರೀತಿ ಹೆಚ್ಚಿನ ಬೆಲೆಯದು ಎಂಬ ಅಂಶವು ಅವನಿಗೆ ಹೊಳೆಯುವುದೇ ಇಲ್ಲ, ಆದರೂ ತಾನು ಕೊಟ್ಟಿದ್ದೇ ಬೆಲೆ ಎಂಬ ಭಾವನೆ ಮಾತ್ರ ಅವನ ನಡವಳಿಕೆಯನ್ನು ಪ್ರೇರಿಸುತ್ತದೆ, ಬೇರೊಬ್ಬನಾದರೋ

ತನ್ನ ಭಾಗಕ್ಕೆ ಪ್ರೀತಿ ಇಲ್ಲವಾಗಿದೆಯೆಂದು ಕೊಂಡು, ಲೋಕದ ಮೇಲೆ ಸೇಡು ತೀರಿಸಿಕೊಳ್ಳಲು ಯೋಚಿಸಿಯಾನು. ಯುದ್ಧ ಹೂಡುವುದು, ಕ್ರಾಂತಿ ಎಬ್ಬಿಸುವುದು ಅನೇಕ ಸಲ ಈ ಕಾರಣಕ್ಕಾಗಿ ಡೀನ್ ಸ್ವಿಫ್ಟ್ ವಿಷಯದಲ್ಲಿ ಲೇಖನಿ ಅದ್ದಿ ಆಡಿಸಿದ್ದು ಇದರಿಂದಲೇ. ತನಗೆ ಸಂಭವಿಸಿದ ದುರದೃಷ್ಟಕ್ಕೆ ಇದೊಂದು ವೀರತ್ವದ ಪ್ರತಿಕ್ರಿಯೆ; ಪ್ರಪಂಚವನ್ನು ಎದುರಿಸುವ ಮಟ್ಟಿನ ಪೌರುಷ ಬೇಕು ಇದಕ್ಕೆ. ಆ ಅಂತಸ್ತಿಗೆ ಏರಬಲ್ಲವರು ವಿರಳ; ಗಂಡಸರಾಗಲಿ, ಹೆಂಗಸರಾಗಲಿ ಬಹುತೇಕ ತಾವು ಪ್ರೀತಿಪಾತ್ರರಲ್ಲವೆಂದು ಮನಗಂಡರೆ, ಸಂಕೋಚಪಟ್ಟು ನಿರಾಶೆಯಲ್ಲಿ ಮುಳುಗುವವರು; ಆಗಾಗ್ಗೆ ಅಸೂಯೆ, ದ್ವೇಷಗಳು ಉಕ್ಕಿ ಬಂದರೆ ಮಾತ್ರ ಅವರ ನಿರಾಶೆಗೆ ಕೊಂಚಮಟ್ಟಿನ ಉಪಶಮನ. ಅಂಥ ಜನ ಸಂಪೂರ್ಣವಾಗಿ ಸ್ವಲೀನರಾಗದೆ ವಿಧಿಯೇ ಇಲ್ಲ. ಹಾಗೂ ಪ್ರೀತಿಯ ಅಭಾವ ಅಭದ್ರತೆಯ ಭಾವನೆಯನ್ನು ಹುಟ್ಟಿಸುತ್ತದೆ, ಈ ಭಾವನೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅವರು ಕೆಲವು ಸುಭದ್ರವಾದ ಪದ್ದತಿಗಳಿಗೆ ಅಂಟಿಕೊಂಡು ಬಾಳನ್ನು ನೀಸುತ್ತಾರೆ. ಒಂದೇ ರೀತಿಯ ರೂಢಿಗೆ ಗುಲಾಮರಾದವರು ಪ್ರೀತಿ ಇಲ್ಲದ ಹೊರ ಜಗತ್ತಿಗೆ ಅಂಜಿದವರೇಯ; ಹಿಂದಿನ ದಿನ ನಡೆದ ದಾರಿಯಲ್ಲಿಯೇ ನಡೆದರೆ ತಮಗೆ ಯಾವ ಪೆಟ್ಟೂ ಬೀಳದೆಂದು ಅವರ ನೆಚ್ಚಿಕೆ.

ತಾವು ಸುಶಿಕ್ಷಿತರೆಂಬ ಭಾವನೆಯಿಂದ ಬಾಳನ್ನು ಎದುರಿಸುವವರು ತಾವು ಅರಕ್ಷಿತರೆಂದು ಭಾವಿಸುವವರಿಗಿಂತ ಸುಖವಾಗಿರುತ್ತಾರೆ. ಸುರಕ್ಷಿತತೆಯ ಭಾವನೆಯಿಲ್ಲದವರು ಬೀಳುವ ಹಳ್ಳಕ್ಕೆ ಸುರಕ್ಷಿತತೆಯ ಭಾವನೆಯುಳ್ಳವರು ಬೀಳದೆ ತಪ್ಪಿಸಿಕೊಂಡ ನಿದರ್ಶನಗಳನ್ನೆಷ್ಟೋ ಕಾಣಬಹುದು. ದೊಡ್ಡ ಹಳ್ಳವನ್ನು ಕಿರಿದಾದ ಹಲಗೆಯ ಮೇಲೆ ದಾಟುವಾಗ ನೀವು ಅಂಜದಿದ್ದರೆ ಪಾರಾಗುವಿರಿ; ಅಂಜಿದರೆ ಬೀಳುವ ಸಂಭವವೇ ಹೆಚ್ಚು. ಬಾಳುವೆಗೂ ಇದೇ ತತ್ತ್ವ ಅನ್ವಯಿಸುತ್ತದೆ. ಅಂಜಿಕೆಯಿಲ್ಲದವನಿಗೂ ಒಂದು ವೇಳೆ ವಾಸ್ತವವಾಗಿಯೇ ಫಕ್ಕನೆ ಒಂದು ವಿಪತ್ತು ಸಂಭವಿಸಬಹುದೆನ್ನಿ, ಅಂಜುಬುರುಕ ಮುಗ್ಗರಿಸ ಬಹುದಾದಂಥ ಅನೇಕ ಅಪಾಯ ಸನ್ನಿವೇಶಗಳಲ್ಲಿಯೂ ಅಂಜಿಕೆಯಿಲ್ಲದವನು ಕೊಂಚವೂ ಗಾಸಿಯಿಲ್ಲದೆ ಪಾರಾಗಿ ಬರುತ್ತಾನೆ. ಇಂಥ ಸಫಲವಾದ ಆತ್ಮವಿಶ್ವಾಸ ನಿಜಕ್ಕೂ ಲೆಕ್ಕವಿಲ್ಲದಷ್ಟು ರೂಪಗಳಲ್ಲಿ ಹೊರಹೊಮ್ಮುತ್ತದೆ. ಒಬ್ಬ ಪರ್ವತಗಳ ಮೇಲೆ ನಿರ್ಭಯನಾಗಿದ್ದರೆ, ಇನ್ನೊಬ್ಬ ಸಮುದ್ರದಲ್ಲಿ, ಮತ್ತೊಬ್ಬ ಗಗನದಲ್ಲಿ. ಆದರೆ, ಬಾಳಿನ ಬಗ್ಗೆ



ಸರ್ವತೋಮುಖವಾದ ಆತ್ಮವಿಶ್ವಾಸ ಬರಬೇಕಾದರೆ ತಕ್ಕರೀತಿಯ ಪ್ರೀತಿ ಸಿಕ್ಕುವ ಭರವಸೆ ಇರಬೇಕು. ಹೀಗೆ ಅಕ್ಕರೆ, ರಕ್ಷೆ, ಆತ್ಮವಿಶ್ವಾಸಗಳು ಮನಸ್ಸಿಗೆ ರೂಢಿಯಾದರೆ ಹೇಗೆ ಬಾಳಿನಲ್ಲಿ ಆಸ್ಥೆಗೆ ಕಾರಣವಾಗುವುವು ಎಂಬುದನ್ನೇ ಈ ಅಧ್ಯಾಯನದಲ್ಲಿ ನಾನು ಹೇಳಬೇಕೆಂದಿರುವುದು.

ಸುರಕ್ಷೆಯ ಭಾವವನ್ನು ಹುಟ್ಟಿಸುವುದು ಒಬ್ಬರು ಪಡಕೊಂಡ ಪ್ರೀತಿಯೇ ಹೊರತು ಕೊಡುವ ಪ್ರೀತಿಯಲ್ಲ; ಪರಸ್ಪರ ಪ್ರೀತಿಯಿಂದಲಾದರೋ ಆ ಭಾವನೆ ಅತ್ಯಂತ ಹೆಚ್ಚಾಗಿಯೇ ಹುಟ್ಟುವುದು. ಹಾಗೆ ನೋಡಿದರೆ ಈ ಶಕ್ತಿ ಪ್ರೀತಿಗೆ ಮಾತ್ರವಲ್ಲದೆ ಮೆಚ್ಚಿಗೆಗೂ ಉಂಟು.

ಜನರ ಮೆಚ್ಚಿಗೆಯಿಂದ ಕಸುಬು ನಡೆಸಬೇಕಾದವರು, ಅಂದರೆ ನಟರು, ಪಾದರಿಗಳು, ಭಾಷಣಕಾರರು, ಹಾಗೂ ರಾಜಕಾರಣಿಗಳಂಥವರು ಚಪ್ಪಾಳೆಯ ಮೇಲೆಯೇ ಹೆಚ್ಚು ಹೆಚ್ಚಾಗಿ ಭರವಸೆ ಇಡುತ್ತಾ ಬರುತ್ತಾರೆ. ತಮಗೆ ಬೇಕಾದ ಜನಮೆಚ್ಚಿಕೆ ಸಂದಾಯವಾಯಿತೆಂದರೆ, ಅವರಿಗೊಂದು ಹುರುಪು; ಅದು ಸಂದಾಯವಾಗಲಿಲ್ಲವೆಂದರೆ ಅತೃಪ್ತಿ. ಕೊರಗು, ಕೇವಲ ಒಬ್ಬಿಬ್ಬರು ತೋರುವ ಗಾಢಪ್ರೇಮ ಇತರರ ಮೇಲೆ ಯಾವ ಪರಿಣಾಮ ಬೀರುವುದೋ, ಜನದ ಗುಂಪು ತೋರುವ ಹಬ್ಬಿದ ಅಭಿಮಾನ ಇವರ ಮೇಲೆ ಅದೇ ಪರಿಣಾಮವನ್ನು ಬೀರುತ್ತದೆ. ತಂದೆತಾಯಿಗಳು ಮುದ್ದಿಸುವು ಮಗು ಅವರ ವಾತ್ಸಲ್ಯವನ್ನು ಸ್ವಭಾವ ನಿಯಮದಂತೆಯೇ ಅಂಗೀಕರಿಸುತ್ತದೆ. ಮಗುವಿನ ನೆಮ್ಮದಿಗೆ ಆ ವಾತ್ಸಲ್ಯ ಅಷ್ಟು ಮುಖ್ಯವಾದರೂ, ಮಗು ಅದನ್ನು ಕುರಿತು ಯೋಚಿಸುವುದೇ ಇಲ್ಲ. ಮಗುವಿನ ಆಲೋಚನೆಯೆಲ್ಲಾ ಪ್ರಪಂಚದ ಕಡೆ, ತನ್ನ ಸಾಹಸಗಳ ಕಡೆ ದೊಡ್ಡವನದ ಮೇಲೆ ತಾನು ಮಾಡಬಹುದಾದ ಇನ್ನೂ ಅತಿಶಯವಾದ ಸಾಹಸಗಳ ಕಡೆ. ಆದರೆ ತಂದೆತಾಯಿಗಳ ಪ್ರೀತಿ ತನ್ನನ್ನು ಅಪಾಯದಿಂದ ಕಾಯುವುದೆಂಬ ಭಾವನೆ ಈ ಹೊಸ ಪ್ರಚೋದನೆಗಳ ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ. ಯಾವ ಮಗುವಿಗೆ ಏನಾದರೂ ಕಾರಣದಿಂದ ತಂದೆ-ತಾಯಿಗಳ ದೈನ್ಯಗಳಿಗೆ ಸಿಕ್ಕಿ ಪ್ರಪಂಚವನ್ನು ಉಲ್ಲಾಸದಿಂದ ಸಂಶೋಧಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅಂಥ ಮಕ್ಕಳಲ್ಲಿ ಕೆಲವು ಅಚ್ಚರಿಗೊಳ್ಳುವಷ್ಟು ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು, ವಿಷಾದಕ್ಕೆ ಸಿಕ್ಕುವ ಮಕ್ಕಳು, ಧರ್ಮಪಂಥ, ದರ್ಶನಶಾಸ್ತ್ರಗಳಿಂದ ಸಲ್ಲದ ಸಮಾಧಾನ ತಂದುಕೊಳ್ಳುವ ಮಕ್ಕಳು, ಇವರ ಪೈಕಿ. ಇದೊಂದು ತಾರೂಮಾರಿನ

ಪ್ರಪಂಚ, ಇದರಲ್ಲಿ ಇಷ್ಟವಿಷಯಗಳೂ, ಅನಿಷ್ಟ ವಿಷಯಗಳೂ ಚೆಲ್ಲಾಪಿಲ್ಲಿಯಾಗಿ ತುಂಬಿಕೊಂಡಿವೆ. ಇದರಲ್ಲಿ ಒಂದು ಅರ್ಥವತ್ತಾದ ರಚನೆಯನ್ನು, ಒಂದು ವಿನ್ಯಾಸವನ್ನು ಕಾಣುವ ಕೋರಿಕೆ ಹುಟ್ಟುವುದು ಒಂದು ಮೂಲಭಯದ ಪರಿಣಾಮವಾಗಿ; ನಿಜಕ್ಕೂ ಅದು ಒಂದು ಬಗೆಯ ಬಯಲಿನ ಭಯ. ಪುಕ್ಕಲು ವಿದ್ಯಾರ್ಥಿಗೆ ಪುಸ್ತಕಾಲಯದ ನಾಲ್ಕು ಗೋಡೆಗಳ ನಡುವೆ ಇದ್ದರೆ ನೆಮ್ಮದಿ. ವಿಶ್ವವೂ ಒಂದು ಪುಸ್ತಕಾಲಯದಂತೆಯೇ ಅಚ್ಚುಕಟ್ಟಾದ್ದೆಂದು ತನ್ನನ್ನು ತಾನು ನಂಬಿಸಿಕೊಂಡರೆ ಮಾತ್ರ ಅವನು ಧೈರ್ಯವಾಗಿ ಬೀದಿಗೆ ಬಂದಾನು. ಅಂಥ ಮನುಷ್ಯನಿಗೆ ಇನ್ನೂ ಕೊಂಚ ಹೆಚ್ಚನ ಪ್ರೀತಿ ಸಿಕ್ಕಿದರೆ, ಅವನು ವಾಸ್ತವಿಕ ಪ್ರಪಂಚಕ್ಕೆ ಅಷ್ಟಾಗಿ ಹೆದರುತ್ತಿರಲಿಲ್ಲ; ತನ್ನದೇ ನೆಚ್ಚಿನ ಒಂದು ಕಲ್ಪನಾ ಪ್ರಪಂಚವನ್ನು ನಿರ್ಮಿಸಿಕೊಳ್ಳಬೇಕಾಗುತ್ತಲು ಇರಲಿಲ್ಲ.

ಹಾಗಿದ್ದರೂ, ಎಲ್ಲ ಪ್ರೀತಿಯೂ ಹೀಗೆಯೇ ಸಾಹಸ ಪ್ರಚೋದನೆಯಲ್ಲಿ ಪರಿಣಮಿಸುವುದಿಲ್ಲ. ನಾವು ಕೊಡುವ ಪ್ರೀತಿ ಬರಿಯ ಪುಕ್ಕಲುತನದ್ದಿರಬಾರದು, ದಿಟ್ಟತನದ್ದಿರಬೇಕು, ನಮ್ಮ ಪ್ರೀತಿಪಾತ್ರರ ಸುರಕ್ಷಿತತೆಯನ್ನು ಬಯಸುವುದಕ್ಕಿಂತಲೂ ಹೆಚ್ಚಾಗಿ ಅವರಲ್ಲಿ ಗುಣಾತಿಶಯವನ್ನು ಬಯಸಬೇಕು; ಅಂದ ಮಾತ್ರಕ್ಕೆ ಸುರಕ್ಷಿತತೆಯ ಬಗ್ಗೆ ಉದಾಸೀನವಾಗಿರಬೇಕೆಂದು ಅರ್ಥವಲ್ಲ. ಪುಕ್ಕಲು ಸ್ವಭಾವದ ಒಬ್ಬ ತಾಯಿಯಾಗಲಿ, ದಾದಿಯಾಗಲಿ ಮಕ್ಕಳನ್ನು ಸಂಭವಿಸಬಹುದಾದ ಆಪತ್ತುಗಳ ಬಗ್ಗೆ ಯಾವಾಗಲೂ ಎಚ್ಚರಿಸುತ್ತಾ, ನಾಯಿ ಕಚ್ಚೀತು, ಯಾವೊಂದು ಹಸುವು ತಿವಿದೀತು ಎಂದು ತವಕಿಸುತ್ತ ಮಕ್ಕಳಲ್ಲಿಯೂ ತನ್ನದರಷ್ಟೇ ಪುಕ್ಕಲುತನವನ್ನು ಹುಟ್ಟಿಸಿಯಾಳು; ಅವಳು ಹತ್ತಿರವಿಲ್ಲದಿದ್ದರೆ ತಮಗೆ ಉಳಿಗಾಲವೇ ಇಲ್ಲವೆಂಬ ಶಂಕೆಯನ್ನು ಮಕ್ಕಳಲ್ಲಿ ಉಂಟುಮಾಡಿಯಾಳು. ಮಗುವಿಗೆ ಇಂಥ ಶಂಕೆ ಇದ್ದರೆ ಅಭಿಮಾನ ಮಿತಿಮಿರಿದ ತಾಯಿಗೆ ಇಷ್ಟವಾದೀತು. ತನ್ನ ಮಗು ಪ್ರಪಂಚವನ್ನು ಎದುರಿಸುವಷ್ಟು ಧೀರನಾಗಬೇಕೆಂದು ಕೋರುವುದರ ಬದಲು, ಅವನು ತನ್ನನ್ನೇ ಎಲ್ಲಕ್ಕೂ ಅವಲಂಬಿಸಿರಬೇಕೆಂದು ಕೋರುವವರು ಕೆಲವರುಂಟು. ಅವರು ಮುದ್ದುಮಾಡದೆಯೇ ಹೋಗಿದ್ದರೆ ಮಕ್ಕಳುಹೇಗಿರುತ್ತಿದ್ದರೋ ಮುದ್ದಿನಿಂದ ಅದಕ್ಕಿಂತ ಕಳಪೆಯೇ ಆದಾರು. ಮನಸ್ಸಿಗೆ ಚಿಕ್ಕಂದಿನಲ್ಲಿ ಬಂದ ರೂಢಿಗಳೇ ಯಾವಜ್ಜೀವವೂ ಉಳಿಯುತ್ತವೆ. ಅನೇಕರು ಪ್ರಣಯದಿಂದ ನಿರೀಕ್ಷಿಸುವುದು ಪ್ರಪಂಚದ ಹಾವಳಿಯಿಲ್ಲದ ಒಂದು ರೇವು ಸಿಗಬೇಕೆಂದು; ತಾವು ಮೆಚ್ಚಿಕೆಗೆ



ತಕ್ಕವರಲ್ಲದಿದ್ದರೂ ಮೆಚ್ಚಿಕೆ ಸಂದಾಯವಾಗಬೇಕೆಂದು, ಪ್ರಶಂಸೆಗೆ ಅರ್ಹರಲ್ಲದಿದ್ದರ ಪ್ರಶಂಸೆ ಪಡೆಯಬೇಕೆಂದು, ಅನೇಕರಿಗೆ ಸ್ವಗೃಹವೆಂಬುದು ಸತ್ಯದಿಂದ ತಲೆ ತಪ್ಪಿಸಿಕೊಂಡು ಅವಿತುಕೊಳ್ಳುವುದಕ್ಕೆ ಒಂದು ಸ್ಥಾನ. ತಮ್ಮ ಭಯ ಭೀತಿಗಳನ್ನು ಪ್ರಶಮನಗೊಳಿಸುವಂಥದು ತಾನೆ ಅಲ್ಲಿನ ಸಹವಾಸ. ಅವಿವೇಕಿಯಾದ ತಾಯಿಯಿಂದ ಹಿಂದೆ ತಾವು ಪಡೆದುಕೊಂಡುದನ್ನೇ ಅವರು ಹೆಂಗಸರಿಂದಲೂ ನಿರೀಕ್ಷಿಸುತ್ತಾರೆ. ಹೆಂಡಿರು ಅವರನ್ನು ಬೆಳೆದ ಮಕ್ಕಳಂತೆ ಕಂಡರೋ ಆಗ ಚಕಿತರಾಗುತ್ತಾರೆ.

ಉತ್ತಮ ಪ್ರೀತಿಯ ಲಕ್ಷಣವನ್ನು ಹೇಳುವುದು ಸುಲಭವಲ್ಲ. ಕೊಂಚ ಮಟ್ಟಿಗಾದರೂ ರಕ್ಷಣೆ ನೀಡಬೇಕೆಂಬ ಆಶಯ ಅದರಲ್ಲಿ ಸೇರಿರುತ್ತದೆ. ನಾವು ಪ್ರೀತಿಸುವ ಜನಕ್ಕೆ ನೋವಾದರೆ ನಾವು ಉದಾಸೀನರಾಗಿರುತ್ತೇವೆಯೇ? ಜರುಗಿದ ದುರ್ಘಟನೆಗಾಗಿ ಸಹಾನುಭೂತಿ ತೋರುವುದು ಪ್ರೇಮಕ್ಕೆ ಸಹಜ; ಆದರೆ ದುರ್ಘಟನೆ ಸಂಭವಿಸೀತೆಂಬ ಶಂಕೆಯೂ ಪ್ರೀತಿಯಲ್ಲಿ ತುಂಬಿರಬೇಕೆಂದು ಬಯಸಬಾರದು. ನಮ್ಮ ಬಗ್ಗೆ ಭಯಪಟ್ಟುಕೊಳ್ಳುವುದು ತಪ್ಪು, ಮಿಕ್ಕವರ ಬಗ್ಗೆ ಭಯಪಡುವುದು ಸರಿ ಎಂದು ಹೇಳುವಂತಿಲ್ಲ. ಮಿಕ್ಕವರ ಮೇಲೆ ಅಧಿಕಾರ ನಡೆಸಬೇಕೆಂಬ ಬುದ್ಧಿಗೆ ಇಂಥ ಭಯ ಮುಖವಾಡದಂತೆ. ಮಿಕ್ಕವರಲ್ಲಿ ಭಯ ತರಿಸಿ ಅದರ ಮೂಲಕ ಅವರ ಮೇಲೆ ತಮ್ಮ ಸ್ವತ್ತಾಗಿ ಮಾಡಿಕೊಳ್ಳುತ್ತಾರೆ. ಒಬ್ಬನು ಎಷ್ಟೇ ಆದರಕ್ಕೆ ಪಾತ್ರನಾದರೂ ತನ್ನ ಸತ್ತ್ವವನ್ನು ಅಚ್ಚಳಿಯದಂತೆ ಉಳಿಸಿಕೊಳ್ಳುವುದು ಅವನ ಶೀಲವನ್ನು ಅವಲಂಬಿಸಿದ ವಿಷಯ. ದಿಟ್ಟನೂ, ಸಾಹಸಪ್ರಿಯನೂ ಆದರೆ ತನ್ನ ವ್ಯಕ್ತಿತ್ವಕ್ಕೆ ಯಾವ ಅಪೋಹವೂ ಇಲ್ಲದೆ ಹೆಚ್ಚಿನ ಆದರವನ್ನು ತಾಳಬಲ್ಲ; ಪುಕ್ಕಲನಾದರೆ ಹೆಚ್ಚಿನ ಆದರವನ್ನು ನಿರೀಕ್ಷಿಸದಂತೆ ನೋಡಿಕೊಳ್ಳಬೇಕು.

ಪಡೆದ ಪ್ರೀತಿಗೆ ಎರಡು ಬಗೆಯ ಪ್ರಯೋಜನವುಂಟು. ಒಂದು ಸುರಕ್ಷತೆ. ಇದನ್ನು ಪ್ರಸ್ತಾಪಿಸಿದ್ದಾಯಿತು; ಪ್ರಾಪ್ತ ವಯಸ್ಕರ ಜೀವನದಲ್ಲಿ ಪ್ರೀತಿಗೆ ಇನ್ನೂ ಮುಖ್ಯವಾದೊಂದು ಪ್ರಯೋಜನವುಂಟು; ಜೀವಸಂತಾನ ಮಾಡಿಸಿ, ತಂದೆತಾಯಿತನವನ್ನು ಸ್ಥಾಪಿಸುವುದು ಒಬ್ಬ ಗಂಡಸಿಗಾಗಲಿ, ಹೆಂಗಸಿಗಾಗಲಿ ಲೈಂಗಿಕವಾದ ಒಂದು ಕಾಮನೆಯನ್ನು ಹುಟ್ಟಿಸುವ ಶಕ್ತಿ ಇಲ್ಲದಿದ್ದರೆ ಅದೊಂದು ದೊಡ್ಡ ದೌರ್ಭಾಗ್ಯವೇ ಸರಿ; ಬಾಳು ನೀಡಬಲ್ಲ ದೊಡ್ಡ ಸುಖಗಳು ಅಂಥವರಿಗೆ

ಇಲ್ಲವಾಗುತ್ತವೆ, ಈ ಲೋಪವು ಒಂದಲ್ಲ ಒಂದು ಕಾಲದಲ್ಲಿ ಉತ್ಸಾಹವನ್ನು ಧ್ವಂಸಮಾಡಿ, ಒಂದು ಅಂತರ್ಮುಖಿತ್ವವನ್ನು ಮೂಡಿಸುವುದು ಖಂಡಿತ. ಅನೇಕ ಸಲ ಚಿಕ್ಕಂದಿನಲ್ಲಿ ಸಂಭವಿಸಿದ ದುರ್ಘಟನೆಗಳು ಶೀಲಸ್ವಭಾವದಲ್ಲಿ ಕೆಲವು ಲೋಪಾದೋಷಗಳನ್ನು ಉಂಟುಮಾಡುತ್ತವೆ; ಆ ಲೋಪದೋಷಗಳು ಮುಂದೆ ಪ್ರೇಮ ಸಂಪಾದನೆಗೆ ಅಡ್ಡಿಯಾಗಿ ಪರಿಣಮಿಸುತ್ತವೆ. ಈ ಮಾತು ಹೆಂಗಸರಿಗಿಂತ ಗಂಡಸರಿಗೆ ಹೆಚ್ಚು ಅನ್ವಯಿಸುವುದು; ಒಟ್ಟಿನಲ್ಲಿ ಹೆಂಗಸರು ಗಂಡಸರನ್ನು ಪ್ರಿತಿಸುವುದು ಅವರ ರೂಪಕ್ಕಾಗಿ, ಈ ವಿಷಯದಲ್ಲಿ ಗಂಡಸರು ಹೆಂಗಸರಿಗಿಂತ ಕಡಿಮೆಯೆಂದೇ ಹೇಳಬೇಕು; ಗಂಡಸರು ಹೆಂಗಸರಲ್ಲಿ ಮೆಚ್ಚುವ ಗುಣಗಳು ಒಟ್ಟಿನ ಮೇಲೆ, ಹೆಂಗಸರು ಗಂಡಸರಲ್ಲಿ ಮೆಚ್ಚುವ ಗುಣಗಳಷ್ಟು ಯೋಗ್ಯವಲ್ಲ. ರೂಪವನ್ನು ಸಂಪಾದಿಸುವುದಕ್ಕಿಂತ ಶೀಲವನ್ನು ಸಂಪಾದಿಸುವುದು ಸುಲಭವೆಂದು ಹೇಳುವಂತಿಲ್ಲ. ಅದು ಹೇಗೇ ಇರಲಿ, ರೂಪವನ್ನು ಸಂಪಾದಿಸುವುದು ಹೇಗೆಂದು ಹೆಂಗಸರು ಬಲ್ಲರು; ಅದಕ್ಕೆ ಪ್ರಯತ್ನವನ್ನೂ ಅವರು ಮಾಡುತ್ತಾರೆ. ಶೀಲ ಸಂಪಾದಿಸುವುದು ಹೇಗೆ ಎಂದು ಗಂಡಸರು ಅಷ್ಟಾಗಿ ಚಿಂತಿಸುವುದಿಲ್ಲ; ಪ್ರಯತ್ನಿಸುವುದು ಇನ್ನೂ ಕಡಮೆ.

ವ್ಯಕ್ತಿ ಪಡೆಯುವ ಪ್ರೀತಿಯ ವಿಷಯವಾಯಿತು. ವ್ಯಕ್ತಿ ಕೊಡುವ ಪ್ರೀತಿಯ ವಿಷಯ ಈಗ ನೋಡೋಣ. ಈ ಪ್ರೀತಿಯೂ ಕೂಡ ಎರಡು ವಿಧದ್ದು. ಒಂದು ಆಸ್ಥೆಯ ಪ್ರಧಾನ ರೂಪ; ಇನ್ನೊಂದು ಭಯದ ಪರಿಣಾಮ, ಮೊದಲಿನದು ಸಂಪೂರ್ಣ ಮೆಚ್ಚತಕ್ಕದೆಂದೂ, ಎರಡನೆಯದು ಒಂದು ಸಮಾಧಾನ ಮಾತ್ರವೆಂದೂ ನನಗನ್ನಿಸುತ್ತದೆ. ಆಕಾಶ ಸ್ವಚ್ಛವಾಗಿರುವ ದಿವಸ ಹಡಗಿನಲ್ಲಿ ಕುಳಿತು ರಮ್ಯವಾದ ಸಮುದ್ರತೀರದ ಪಕ್ಕದಲ್ಲಿ ಪ್ರಯಾಣ ಮಾಡುತ್ತಿದ್ದರೆ, ತೀರವನ್ನು ಕಂಡು ಮೆಚ್ಚಿಗೆ, ಹಿಗ್ಗು ಉಂಟಾಗುತ್ತವೆ. ಈ ಹಿಗ್ಗು ಸಂಪೂರ್ಣವಾಗಿ ಹೊರದೃಷ್ಟಿಯಿಂದ ಬಂದುದು. ಸ್ವಂತದ ಯಾವೊಂದು ಪೊರಯಿಕೆಯ ಸಂಬಂಧ ಅದಕ್ಕೆ ಇಲ್ಲ. ನಿಮ್ಮ ಹಡಗು ಮುಳುಗಿತೆನ್ನಿ, ನೀವು ತೀರದ ಕಡೆಗೆ ಈಜಬೇಕು. ಆಗ ನಿಮಗೆ ತೀರದ ಮೇಲೆ ಬೇರೊಂದು ಬಗೆಯ ಪ್ರೇಮ ಬರುವುದು; ತೀರವು ಅಲೆಗಳಿಂದ ನಿಮ್ಮನ್ನು ಪಾರುಮಾಡುವ ಸುರಕ್ಷೆಯ ಪ್ರತೀಕವಾಗುತ್ತದೆ; ಆಗ ರಮ್ಯತೆ, ಅರಮ್ಯತೆಗಳ ವಿಚಾರ ಅಮುಖ್ಯ. ಉತ್ತಮ ಪ್ರೀತಿಯು ಹಡಗು ಭದ್ರವಾಗಿರುವವನ ಭಾವಕ್ಕೆ ಸರಿಹೊಂದುತ್ತದೆ. ಉತ್ತಮವಲ್ಲದ ಸಾಮಾನ್ಯ



ಪ್ರೀತಿಯು ಹಡಗು ಒಡೆದು ಹೋದವನ ಭಾವಕ್ಕೆ ಸರಿಹೊಂದುತ್ತದೆ. ಉತ್ತಮ ರೀತಿಯ ಪ್ರೀತಿಕೊಡಲು ಒಬ್ಬನಿಗೆ ಸಾಧ್ಯವಾಗುವುದು ತಾನು ಸುರಕ್ಷಿತನೆಂಬ ಭಾವನೆ ಪಡೆದಿರುವವರೆಗೆ ಮಾತ್ರ; ಅಪಾಯ ಸಂಭವಿಸಿದರೂ ಅದನ್ನು ಅಲಕ್ಷಿಸುತ್ತಿರುವವರೆಗೆ ಮಾತ್ರ; ಕಡಮೆ ರೀತಿಯ ಪ್ರೀತಿಯಾದರೋ ಅರಕ್ಷತೆಯ ಭಾವದಿಂದ ಉಂಟಾಗುವುದು, ಅರಕ್ಷತೆಯಿಂದ ಹುಟ್ಟುವ ಭಾವನೆ ಇನ್ನೊಂದು ಭಾವಕ್ಕಿಂತಲೂ ಹೆಚ್ಚು ಅಂತರ್ಮುಖವೂ, ಸವಾರ್ಥಪರವೂ ಆದುದು; ಏಕೆಂದರೆ ಪ್ರೀತಿ ಪಾತ್ರವಾದ ವ್ಯಕ್ತಿಗೆ ಅದು ಬೆಲೆ ಕಟ್ಟುವುದು ಆ ವ್ಯಕ್ತಿ ಮಾಡಿದ ಉಪಕಾರಕ್ಕಾಗಿಯೇ ಹೊರತು ಸಹಜ ಗುಣಾತಿಶಯಕ್ಕಲ್ಲ. ಆದಾಗ್ಗೂ ಈ ಬಗೆಯ ಪ್ರೀತಿಗೆ ಬಾಳಿನಲ್ಲಿ ಯಥಾವತ್ತಾದ ಒಂದು ಪಾತ್ರವಿಲ್ಲವೆಂದು ನಾನು ಸೂಚಿಸುತ್ತಿಲ್ಲ. ಹಾಗೆ ನೋಡಿದರೆ ಹೃತ್ಪೂರ್ವಕವಾದ ಎಲ್ಲ ಪ್ರೀತಿಯಲ್ಲೂ ಎರಡು ಅಂಶಗಳೂ ಕೂಡಿರುತ್ತವೆ. ಅರಕ್ಷತೆಯ ಭಾವನೆಯನ್ನು ಪ್ರೀತಿ ನಿವಾರಿಸುತ್ತದೆ. ಇದರಿಂದ ಆಪತ್ತಿನಲ್ಲಿ, ಭಯ–ನಿಮಿಷಗಳಲ್ಲಿ ಕುಂದಿದ ಲೋಕೋತ್ಸಾಹ ಮತ್ತೆ ಅರಳುತ್ತದೆ. ಇಂಥ ಪ್ರೀತಿಯ ಹೆಚ್ಚುಗಾರಿಕೆಯನ್ನು ನಾವು ಒಪ್ಪಿಕೊಂಡಾಗಲೂ, ಭಯದ ಮೇಲೆ ನಿಂತ ಪ್ರೀತಿ ಅಷ್ಟು ಉತ್ಕೃಷ್ಟವಲ್ಲವೆಂದೇ ಹೇಳಬೇಕು. ಭಯದಿಂದ ಹುಟ್ಟಿದ ಪ್ರೀತಿಯಲ್ಲಿ ಸ್ವಾರ್ಥವಿದೆ. ಉತ್ತಮ ರೀತಿಯ ಪ್ರೀತಿಯಲ್ಲಿ, ಜನ ಬಯಸುವುದು ಒಂದು ಹೊಸ ಸೌಖ್ಯವನ್ನು; ಹಳೆಯ ಅಸೌಖ್ಯವನ್ನು ಮರೆಯಬೇಕೆಂದಲ್ಲ.

ಅತ್ಯುತ್ತಮ ಪ್ರೀತಿ ಪರಸ್ಪರ ಉಜ್ಜೀವನಗೊಳಿಸುವಂಥದು; ಸಂತೋಷದಿಂದ ಪ್ರೀತಿಯನ್ನು ಪಡೆದುಕೊಂಡು, ಪ್ರಯತ್ನವಿಲ್ಲದೆಯೇ ಪ್ರೀತಿಯನ್ನು ಕೊಡುವುದರಲ್ಲಿ ಪ್ರಪಂಚ ಇಬ್ಬರಿಗೂ ಸಾರತರವೆನಿಸುತ್ತದೆ. ಇನ್ನೂ ಒಂದು ಬಗೆಯ ಪ್ರೀತಿಯುಂಟು; ಇದರಲ್ಲಿ ಒಬ್ಬರು ಇನ್ನೊಬ್ಬರ ರಸವನ್ನು ಹೀರಿ ಹಿಪ್ಪೆ ಮಾಡುತ್ತಾರೆ, ಕೊಟ್ಟ ಪ್ರೀತಿಯನ್ನು ಪಡೆದುಕೊಳ್ಳುತ್ತಾರೆಯೇ ಹೊರತು, ಅದಕ್ಕೆ ಪ್ರತಿಯಾಗಿ ಕೊಟ್ಟದ್ದೆಂಬುದು ಅಷ್ಟಾಗಿಲ್ಲ. ಈ ನೆತ್ತರು ಹೀರುವ ಗುಂಪಿನಲ್ಲಿ ಕೆಲವು ಪ್ರಚಂಡ ಜನರೂ ಇದ್ದಾರೆ. ಇವರು ಒಬ್ಬರ ನಂತರ ಒಬ್ಬರನ್ನು ಆರಿಸಿಕೊಂಡು ಅವರ ಸತ್ತ್ವವನ್ನು ಹೀರುತ್ತಾರೆ. ಈ ರೀತಿ ಅವರು ಕೊಬ್ಬುತ್ತಾ ರಸಿಕರೆನಿಸಿಕೊಳ್ಳುತ್ತಿದ್ದರೆ, ಅವರ ಹಿಡಿತಕ್ಕೆ ಸಿಕ್ಕಿದವರಾದರೋ ಸಪ್ಪೆಯಾಗಿ, ತೇಜಸ್ಸನ್ನು ಕಳೆದುಕೊಂಡವರಾಗುತ್ತಾರೆ. ಅಂಥ ಜನ ಮಿಕ್ಕವರನ್ನು ತಮ್ಮ ಪುರುಷಾರ್ಥಕ್ಕಾಗಿ

ಉಪಯೋಗಿಸಿಕೊಳ್ಳುವವರೇ ಹೊರತು, ಅವರೂ ಚೇತನಗಳೆಂದು ಭಾವಿಸುವುದೇ ಇಲ್ಲ. ತತ್‌ಕಾಲಕ್ಕೆ ಯಾರನ್ನೂ ಪ್ರೀತಿಸುತ್ತಿರುವುದಾಗಿ ತಿಳಿದಿರುವರೋ ಅವರಲ್ಲಿ ಪ್ರಾಮಾಣಿಕವಾದ ಆಸಕ್ತಿ ಇವರಿಗೆ ಇರುವುದಿಲ್ಲ. ತಮ್ಮ ಕೆಲಸಗಳಿಗೆ ಅವರಿಂದ ಒಂದು ಪ್ರಚೋದನೆ ಸಿಕ್ಕಿತೆಂದಷ್ಟೇ ಅವರಲ್ಲಿ ಇವರಿಗಿರುವ ಆಸಕ್ತಿ; ಆ ಕೆಲಸಗಳೂ ಬಹುತೇಕ ವ್ಯಕ್ತಿ ನಿರಪೇಕ್ಷವೇ ಇರಬಹುದು. ಇವರ ಸ್ವಭಾವದಲ್ಲಿನ ಒಂದು ಲೋಪದಿಂದ ಇಂಥ ಪ್ರವೃತ್ತಿ ಉಂಟಾಗುವುದೆಂಬುದು ಪ್ರತ್ಯಕ್ಷ ವಿಷಯ; ಆದರೆ ಈ ರೋಗದ ನಿಧಾನವನ್ನು ಕಂಡುಹಿಡಿಯುವುದಾಗಲಿ, ಅದನ್ನು ಚಿಕಿತ್ಸೆ ಮಾಡುವುದಾಗಲಿ, ಅಷ್ಟೇನೂ ಸುಲಭವಲ್ಲ. ಇದು ಬಹುಮಟ್ಟಿಗೆ ಅತ್ಯಂತ ಖ್ಯಾತಿ ಕಾಮನೆಯೊಂದಿಗೆ ಕೂಡಿರುವ ಒಂದು ಲಕ್ಷಣ. ಹಾಗೂ ಮಾನವನಿಗೆ ಸೌಖ್ಯ ತರುವುದು ಯಾವುದು ಎಂಬ ಅತಿ ಸಂಕುಚಿತ ದೃಷ್ಟಿಯಿಂದ ಈ ಭಾವ ಮೊಳೆಯುತ್ತದೆಯೆಂದು ನನಗನಿಸಿದೆ. ಪ್ರೀತಿ ಎಂಬುದು ಇಬ್ಬರಲ್ಲಿ ಪರಸ್ಪರ ಅವ್ಯಾಜವಾದ ಆಸಕ್ತಿ, ಅದು ಒಬ್ಬರ ಹಿತಸಾಧನೆಗಾಗಿ ಮಾತ್ರ ಏರ್ಪಟ್ಟಿದ್ದಲ್ಲ, ಪ್ರತಿಯಾಗಿ ಅದು ಇಬ್ಬರ ಸಾಮಾನ್ಯ ಹಿತದ ಒಂದು ಸಂಗ; ಇದೀಗ ನಿಜವಾದ ಸೌಖ್ಯಕ್ಕೆ ಬೇಕಾಗುವ ಸಾಮಾಗ್ರಿಯಲ್ಲಿ ಬಲು ಮುಖ್ಯವಾದ ಒಂದು ಅಂಶ; ಯಾವೊಬ್ಬನ ಅಹಂ ಇಂಥ ಪ್ರೀತಿಯಿಂದ ಹಿಗ್ಗದಷ್ಟು ಭದ್ರವಾಗಿ ಒಂದು ಕಬ್ಬಿಣದ ಪಂಜರದಲ್ಲಿಟ್ಟಂತೆ ಸೆಟೆದುಕೊಂಡಿದೆಯೋ, ಅವನು ಬಾಳು ನೀಡುವ ಉತ್ತಮವರವನ್ನು ಕಳಕೊಂಡವ; ಲೋಕದಲ್ಲಿ ಅವನು ಎಷ್ಟೇ ಏಳಿಗೆಗೆ ಬಂದಿರಲಿ, ಈ ಲೋಪ ಸರಿಯಾಗದು ಪ್ರೀತಿಗೆ ಎಡೆಗೊಡದೆ ಖ್ಯಾತಿ ಕಾಮನೆ ಸಾಮಾನ್ಯವಾಗಿ ಮನುಷ್ಯ ವರ್ಗದ ಮೇಲಿನ ಒಂದು ರೋಷದಿಂದಲೋ, ದ್ವೇಷದಿಂದಲೋ ಆದ ಪರಿಣಾಮ; ಅಂದರೆ ಯೌವನದಲ್ಲಿ ಅನುಭವಿಸಿದ ಅಸೌಖ್ಯದಿಂದಲೋ, ಪ್ರೌಢ ವಯಸ್ಸಿನಲ್ಲಿ ಅನುಭವಿಸಿದ ಅನ್ಯಾಯಗಳಿಂದಲೋ, ಇಲ್ಲವೇ ಶತ್ರುಕಾಟದ ಭ್ರಾಂತಿಯನ್ನು ಮೂಡಿಸುವ ಯಾವುದಾದರೊಂದು ಕಾರಣದಿಂದಲೋ ಉಂಟಾದ್ದು. ಅತಿ ಪ್ರಭಲವಾದ ಹಮ್ಮು ಒಂದು ಸೆರೆಮನೆಯಂತೆ; ಪ್ರಪಂಚದಲ್ಲಿ ಸಂಪೂರ್ಣ ಸುಖ ಪಡಬೇಕಾದರೆ, ಇದರಿಂದ ಮನುಷ್ಯ ತಪ್ಪಿಸಿಕೊಳ್ಳಬೇಕು. ಹಮ್ಮಿನ ಸೆರೆಮನೆಯಿಂದ ಬಿಡುಗಡೆ ಹೊಂದಿದವನ ಒಂದು ಲಕ್ಷಣವೆಂದರೆ, ಅವ್ಯಾಜವಾಗಿ ಪ್ರೀತಿ ಮಾಡುವ ಶಕ್ತಿ ಅವನಿಗಿರುವುದೇ ಪ್ರೀತಿಯನ್ನು ಬಿಡುಗಡೆ ಮಾಡಬೇಕು; ಎರಡು ಪ್ರೀತಿಗಳಿಗೂ ಸಮ ಪ್ರಮಾಣವಿದ್ದರೆ



ಮಾತ್ರ ಪ್ರೀತಿಯು ಸಂಪೂರ್ಣ ಸಾರ್ಥಕ್ಯವನ್ನು ಪಡೆಯುವುದು.

ಪರಸ್ಪರ ಪ್ರೀತಿಯ ವಿಕಾಸಕ್ಕೆ ಮಾನಸಿಕ ಹಾಗೂ ಸಾಮಾಜಿಕ ತಡೆಗಳು ತುಂಬಾ ಹಾನಿಕರವಾದವು; ಇವುಗಳಿಂದ ಲೋಕ ಯಾವಾಗ್ಲೂ ನೋವುಗೊಂಡಿದೆ, ಇಂದಿಗೂ ನೋವುಗೊಳ್ಳುತ್ತಿದೆ. ಜನ ಸುಲಭವಾಗಿ ಪರರ ಬಗ್ಗೆ ಮೆಚ್ಚುಗೆ ತೋರುವುದಿಲ್ಲ. ಅ ಪಾತ್ರದಲ್ಲಿ ಮೆಚ್ಚುಗೆ ತೋರಿದಂತಾದೀತೆಂಬ ಭಯದಿಂದ. ಅಂತೆಯೇ ಪ್ರೀತಿಯನ್ನೂ ಸುಲಭವಾಗಿ ಕೊಡುವುದಿಲ್ಲ; ಯಾರ ಮೇಲೆ ಪ್ರೀತಿ ಮಾಡುವರೋ ಅವರೇ ಆಗಲಿ, ಇಲ್ಲವೆ ದೋಷೈಕ ದೃಷ್ಟಿಯುಳ್ಳ ಜನವೇ ಆಗಲಿ ತಮಗೆ ತೊಂದರೆ ಉಂಟು ಮಾಡಿಯಾರೆಂಬ ಭಯದಿಂದ. ನೀತಿಶಾಸ್ತ್ರವೂ, ಜಾಣತನವೂ ವಿಹಿತಪಡಿಸುತ್ತಿರುವುದು ಜಾಗರೂಕತೆಯನ್ನೇ ಅದರ ಪರಿಣಾಮವಾಗಿ, ಪ್ರೀತಿಯ ವಿಷಯಗಳಲ್ಲಿ ಔದಾರ್ಯಕ್ಕಾಗಲಿ, ಸಾಹಸಕ್ಕಾಗಲಿ ಭಂಗವೇ ಸಿದ್ಧ. ಇದೆಲ್ಲಾ ಅಂಜುಬುರುಕುತನವನ್ನೂ ಮಾನವ ದ್ವೇಷವನ್ನೂ ತಂದೀತು; ಏಕೆಂದರೆ ಬಹುಮಂದಿಗೆ ಮೂಲಭೂತವಾದ ಒಂದು ಅಗತ್ಯ ಸುಖ ಯಾವಜ್ಜೀವವೂ ಸಂದಾಯವಾಗುವುದೇ ಇಲ್ಲ; ಲೋಕದ ಬಗ್ಗೆ ನೆಮ್ಮದಿಯ ಉದಾರಭಾವನೆ ತಾಳಬೇಕಾದರೆ, ಹತ್ತರಲ್ಲಿ ಒಂಭತ್ತು ಜನಕ್ಕೆ ಪ್ರೀತಿಯ ಅನುಭವ ಅಗತ್ಯ. ಅಂದರೆ ಅನೀತಿವಂತರೆನಿಸಿಕೊಂಡವರೇ ನೀತಿವಂತರಿಗಿಂತ ಈ ವಿಷಯದಲ್ಲಿ ಮೇಲೆಂದು ನನ್ನ ತಾತ್ಪರ್ಯವಲ್ಲ. ಗಂಡು ಹೆಣ್ಣುಗಳ ಸಂಬಂಧಗಳಲ್ಲಿ ತುಂಬಾ ಸಲ ನಿಜವಾದ ಪ್ರೀತಿಯೆಂಬುದು ಇರುವುದಿಲ್ಲ; ಅದಕ್ಕೆ ಪ್ರತಿಯಾಗಿ ಮೂಲಭೂತವಾದ ಒಂದು ವಿರೋಧವಿರುವುದೇನೋ ಅಪರೂಪವಲ್ಲ. ಒಬ್ಬೊಬ್ಬರು ತನ್ನನ್ನು ತಾನು ಬಿಟ್ಟುಕೊಡಬಾರದೆಂಬ ಸನ್ನಾಹದಲ್ಲಿದ್ದರೂ ಇದ್ದಾರು; ತನ್ನ ತನ್ನ ಪ್ರತ್ಯೇಕತನವನ್ನೇ ಉಳಿಸಿಕೊಂಡು ಬಂದಾರು; ದಿಟ್ಟವಾಗಿಯೇ ಉಳಿದಾರು; ಅದರಿಂದ ಇಬ್ಬರಿಗೂ ಫಲವಿಲ್ಲ. ಇಂಥ ಅನುಭವಗಳಿಗೆ ಯಾವೊಂದು ಬೆಲೆಯೂ ಇಲ್ಲ. ಅನುಭವಗಳನ್ನು ಜಾಗರೂಕತೆಯಿಂದ ದೂರವಿಟ್ಟಿರಬೇಕೆಂದು ನಾನು ಹೇಳುತ್ತಿಲ್ಲ. ಅಂಥ ಅನುಭವಗಳನ್ನು ದೂರವಿಡುವುದಕ್ಕೆ ನಾವು ಕೈಕೊಳ್ಳಬೇಕಾಗುವ ಎಚ್ಚರಿಕೆಯ ಕ್ರಮಗಳೇ ಪ್ರೇಮ ಗಾಢವಾಗಿ ಬೆಳೆದು ಪಕ್ವಗೊಳ್ಳುವ ಸಂಭವವನ್ನೂ ತಪ್ಪಿಸಿಯಾವು, ಗಂಡು ಹೆಣ್ಣುಗಳ ಸಂಬಂಧ ಉತ್ತಮವೆನಿಸಬೇಕಾದರೆ, ಅದರಲ್ಲಿ ಬಿಗುಮಾನ ಇರಬಾರದು; ಅದರಲ್ಲಿ ಇಬ್ಬರು ವ್ಯಕ್ತಿಗಳೂ ಸಂಪೂರ್ಣವಾಗಿ ಪರಸ್ಪರ ವಿಲೀನಗೊಂಡು

ಸಂಮಿಶ್ರವಾದ ಒಂದೇ ವ್ಯಕ್ತಿಯಾಗಬೇಕು. ನಾವು ಎಷ್ಟೋ ವಿಷಯಗಳಲ್ಲಿ ಎಚ್ಚರಿಕೆ ವಹಿಸಬಹುದು, ಆದರೆ ಪ್ರೀತಿಯ ವಿಷಯದಲ್ಲಿ ಎಚ್ಚರಿಕೆ ವಹಿಸುವುದು ನಿಜವಾದ ಸೌಖ್ಯಕ್ಕೆ ಅತ್ಯಂತ ಮಾರಕವಾದುದು.

* * * * *



# ಅವ್ವನ ಯಾತ್ರೆ

**– ಡಾ॥ ಕರೀಗೌಡ ಬೀಚನಹಳ್ಳಿ**

ಅವ್ವನನ್ನು ಈ ಸಾರಿ ತಿರುಪತಿಗೆ ಯಾತ್ರೆಗೆ ಕರೆದುಕೊಂಡು ಹೋಗಲೇಬೇಕು– ಎಂದು ರಾಜಣ್ಣ ನಿಶ್ಚಯ ಮಾಡಿಕೊಂಡು ಊರಿಗೆ ಬಂದಿದ್ದನು. ಅವ್ವ ಒಂದು ವರ್ಷದ ತಾವಿಂದ ಮಗನಿಗೆ, "ನನ್ನನ್ನು ತಿರುಪತಿಗೆ ಕರೆದುಕೊಂಡು ಹೋಗು" ಎಂದು ಒತ್ತಾಯಿಸುತ್ತಲೇ ಬಂದಿದ್ದಳು. ರಾಜಣ್ಣ ಕಾಲೇಜಿಗೆ ಬಿಡುವಾಗದೇ ಇದ್ದುದ್ದರಿಂದ, "ಹೋಗಾನ, ಹೋಗಾನ ಇರವ್ವ" ಎನ್ನುತ್ತಲೇ ತಿರುಪತಿಗೆ ಹೋಗುವುದನ್ನು ಮುಂದೂಡುತ್ತಲೇ ಬಂದಿದ್ದನು. ಆದರೆ ಎಲ್ಲಿಗಾದರೂ ಹೋಗಬೇಕು ಅಂದರೆ ಅವನ ಜಾಯಮಾನಕ್ಕೆ ಅದು ಒಗ್ಗದ ಕೆಲಸವಾಗಿತ್ತು. ಆದರೆ ತನ್ನವ್ವನನ್ನು ನೋಡಲು ಮಾತ್ರ ತಪ್ಪದೆ ತಿಂಗಳಿಗೊಮ್ಮೆ ತನ್ನೂರಿಗೆ ಹೋಗಿ ಬರುತ್ತಿದ್ದನು.

ಅವ್ವ ತನ್ನ ಮನೆ ದೇವರು ತಿರುಪತಿ ತಿಮ್ಮಪ್ಪನಿಗೆ ಹೊತ್ತಿರುವ ಎರಡನೆಯ ಹರಕೆಯ ಹಣದ ಕುಡಿಕೆಯು ತುಂಬಿ ಹೋಗಿ, ಮೂರನೆಯ ಹರಕೆಯ ಕುಡಿಕೆಯನ್ನೂ ಆರಂಭಿಸಿದ್ದಳು. ಇದರಿಂದ 'ನೀನು ಮಾತ್ರ ಬಂದು ನನ್ನನ್ನು ತಿರುಪತಿ ಯಾತ್ರೆಯ ಮಾಡಿಸಲಿಲ್ಲ– ನೀನು ನನ್ನನ್ನು ಈ ಜನ್ಮದಲ್ಲಿ ಯಾತ್ರೆ ಮಾಡಿಸುವಂತೆ ಕಾಣಲ್ಲ' ಎಂದು ಬೇಸರದಿಂದ ಮಗನಿಗೆ ಕಾಗದ ಬರೆಸಿದ್ದಳು. ಈ ಮಾತು ಮಗನ ಹೃದಯಕ್ಕೆ ನಾಟಿತ್ತು. ಅವ್ವನಿಗೆ ತನ್ನ ಆಯಸ್ಸಿನ ಜೀವಮಾನದಲ್ಲಿ ಒಮ್ಮೆಯಾದರೂ ತನ್ನ ಮನೆ ದೇವರು ತಿರುಪತಿ ತಿಮ್ಮಪ್ಪನ ದರ್ಶನ ಮಾಡಬೇಕೆಂಬುದು ಅಪೇಕ್ಷೆಯಾಗಿತ್ತು.

ಅವ್ವ ನಂಜವ್ವನ ಹರಕೆಯ ಹಣದ ಕುಡಿಕೆ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಲೇ ಇತ್ತು. ಅವಳು ತನ್ನ ಗಂಡನನ್ನು ಅನೇಕ ಸಲ ತಿರುಪತಿಗೆ ಕರೆದುಕೊಂಡುಹೋಗಲು ಕೇಳಿಕೊಂಡಿದ್ದಳು. ಆದರೆ ಆಕೆಯ ಗಂಡ ಚೆನ್ನಯ್ಯ, "ನಿನ್ನ ಓದೋ ಮಗನ ಕರೆದುಕೊಂಡು ಹೋಗಿ ಬಾ" ಅಂತಲೇ ಹೇಳುತ್ತಾ ಕಾಲ ತುಂಬಿಸಿದ್ದ. ರಾಜಣ್ಣನಿಗೆ ತನ್ನವ್ವ ಅಂದರೆ ಅದೇನೋ ಪ್ರೀತಿ! ಇಬ್ಬರ ಕರುಳಬಳ್ಳಿಯ ಸಂಬಂಧ ವಿಚಿತ್ರವಾದುದು, ಅವಳ ಮುಗ್ಧತೆ ಮತ್ತು ಸ್ವಚ್ಛಂದತೆಯ ಸ್ವಭಾವವನ್ನು ಆತ ಕಂಡು ಮರುಗಿ ಕರಗಿ ನೀರಾಗುತ್ತಿದ್ದನು. ತನ್ನ ಬಾಲ್ಯದಿಂದಲೂ

ತನ್ನಲ್ಲಿ ಅವಳಿಟ್ಟಿರುವ ಪ್ರೀತಿ, ತಾನು ಅವಳಲ್ಲಿ ನೆಟ್ಟಿರುವ ಅದಮ್ಯವಾದ ಮಮತೆ ಕಂಡು ಬೆರಗಾಗಿ ಹೋಗಿದ್ದನು, ಅವ್ವ ಯಾವಾಗಲೂ 'ಅವನು ನನ್ನ ಮಗ ಅಲ್ಲ ಮಗಳಿದ್ದಂಗೆ" ಎಂದು ಹೇಳುತ್ತಿದ್ದ ಮಾತು ಅವನಿಗೆ ಸದಾ ನೆನಪಾಗಿ ಕಾಡುತ್ತಿತ್ತು. ಅವರಿಬ್ಬರ ಗಾಢ ಸಂಬಂಧವನ್ನು ಹೇಳಿಕೊಳ್ಳಲಾರ; ತನ್ನ ಬಾಲ್ಯವನ್ನು ನೆನೆದರೆ ಅವನಿಗೆ ಅಚ್ಚರಿಯಾಗುತ್ತದೆ. ತಾನು ತನ್ನ ಬಾಲ್ಯ ಕಾಲದಲ್ಲಿ ತನ್ನವ್ವನ ಸೀರೆ ಒಗೆದದ್ದು, ಅವಳ ಬೆನ್ನುಜ್ಜಿದ್ದು, ಅವಳ ಬಾಣ್ತನ ಮಾಡಿದ್ದು ಇತ್ಯಾದಿಯನ್ನೆಲ್ಲಾ ನೆನೆದಾಗ ಅವು ಅವನಿಗೆ ನಿಜವೋ? ಭ್ರಮೆಯೋ: ಅನ್ನಿಸುತ್ತದೆ! ಅವುಗಳನ್ನು ನೆನೆದು ಬಾಲ್ಯಕ್ಕೆ ಹೋಗಿ ಅವುಗಳ ಜೊತೆ ತನ್ಮಯತೆಯನ್ನು ಕಾಣುತ್ತಾನೆ. ಪಟ್ಟಣದ ಪ್ರಭಾವಕ್ಕೆ ಒಳಗಾಗಿದ್ದರೂ ಆತ ತನ್ನ ಬಾಲ್ಯ ಕಾಲದ ಮೂಲ ಪ್ರವೃತ್ತಿಗಳು, ಅನುಭವಗಳು ಅವನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದುಕೊಂಡಿವೆ. ಅವು ಅವನ ನೆನಪಿಗೆ ಆಗಾಗ ಬಂದು ಕಾಡುತ್ತವೆ.

ಅವ್ವನಿಗೆ 'ಮೂರು ಮಕ್ಕಳೇ ಸಾಕಪ್ಪ ದೇವರೇ!" ಅನ್ನಿಸಿತ್ತು. ಆದರೆ ತಾನು ನಾಲ್ಕನೇ ಮಗುವಿಗೆ ಬಸುರಿಯಾದಾಗ ಅದರಿಂದ ತಪ್ಪಿಸಿಕೊಳ್ಳಲು ತನಗೆ ಗೊತ್ತಾಗದೆ ಪೇಚಾಡಿದ್ದಳು. ಅದರ ಬಗ್ಗೆ ಗಂಡನಿಗೆ, ತನ್ನಷ್ಟಕ್ಕೆ ತಾನೇ ಶಾಪ ಹಾಕಿಕೊಂಡಿದ್ದಳು. ಆದರೂ ತನಗೆ ಒಂದು ಹೆಣ್ಣು ಮಗುವಾಗಲಿಲ್ಲವಲ್ಲ! ಎಂಬ ಕೊರಗು ಮಾತ್ರ ಇದ್ದೇ ಇತ್ತು. ಹಾಳಾದ ಗಂಡಸರು ಎಷ್ಟು ಹೇಳಿದರೂ ಕೇಳಲ್ಲ, ತನಗೆ ತಾನೇ ಸಂಕಟ, ಅವಮಾನ! ಎಂದು ತನ್ನ ಗಂಡನನ್ನು ಬೈದುಕೊಂಡಿದ್ದಳು. ಆದರೆ ಈ ಸಾರಿ ಅವ್ವ ತನಗೆ ಹುಟ್ಟುವ ನಾಲ್ಕನೇ ಮಗುವಾದರೂ ಹೆಣ್ಣಾಗುತ್ತೆ ಅಂಥ ದೃಢವಾಗಿ ನಂಬಿದ್ದಳು. ಅದರಿಂದಾಗಿ ಈ ಸಾರಿ ಹೆಣ್ಣಾದರೆ ತನಗೆ ಮಕ್ಕಳು ಇನ್ನೂ ಸಾಕು ದೇವರೇ! ಎಂಬ ನಿರ್ಧಾರಕ್ಕೆ ಬಂದಿದ್ದಳು.

ಅವ್ವ ತಾನು ಅಂದುಕೊಂಡಂತೆಯೇ ನಾಲ್ಕನೆಯದು ಹೆಣ್ಣು ಮಗುವಾದಾಗ ಸಂತಸಪಟ್ಟಳು. ಒಮ್ಮೆ ತನಗೆ ಹೆಣ್ಣು ಹೆರುವ ಭಾಗ್ಯವೇ ಇಲ್ಲ ಎಂದು ತನ್ನನ್ನು ತಾನೇ ಜರಿದುಕೊಂಡಿದ್ದಳು. ಆದರೆ ಹೆಣ್ಣಾದರೆ ತನ್ನ ಕಷ್ಟ ಸುಖಕ್ಕೆ ನಾಳೆ ನೆರವಾಗುತ್ತಾಳೆ ಎಂದು ಭಾವಿಸಿಕೊಂಡಿದ್ದಳು. ಅದರಂತೆ ಅವಳ ಅಪೇಕ್ಷೆ ಈ ಸಾರಿ ನಿಜವಾಗಿತ್ತು.



ಚೆನ್ನಯ್ಯ ಗಂಡು ಮಕ್ಕಳನ್ನು ಓದಲು ಶಾಲೆಗೆ ಸೇರಿಸಿದ್ದನು. ಓದಿ ಅಂದ್ರೆ ಹಿರಿಯವನು ಮತ್ತು ಕಿರಿಯವನು ಓದು ತಲೆಗೆ ಹತ್ತಲ್ಲ– ಎಂದು ಬಳಪ ಸ್ಲೇಟು ಬಿಸಾಕಿ ಮನೆಗೆ ಬಂದರು. ಆಮೇಲೆ ಅವರನ್ನು ವ್ಯವಸಾಯಕ್ಕೆ ಗೇಯಲು ಹಚ್ಚಿದ. ಆದರೆ ಮಧ್ಯದವನು ಮಾತ್ರ ಶಾಲೆಗೆ ಹೋಗ ತೊಡಗಿದ್ದನು. ಒಬ್ಬನಾದರೂ ಓದಕ್ಕೆ ಶಾಲೆಗೆ ಹೋದನಲ್ಲ! ಎಂದು ಅಪ್ಪ ಅವ್ವನಿಗೆ ಸಮಾಧಾನವಾಗಿತ್ತು.

ಈ ನಡುವೆ ಅವ್ವನ ನಾಲ್ಕನೆಯ ಬಾಣಂತನ ಪ್ರಾರಂಭವಾಗಿತ್ತು. ಅವಳಿಗೆ ಬಾಣಂತನ ಮಾಡಲು ಅತ್ತೆ ಇಲ್ಲ. ಅವಳ ಅವ್ವ ಇಲ್ಲ; ಅಕ್ಕ ತಂಗಿಯರಿಲ್ಲ. ನಾದಿನಿಯರಿಲ್ಲ; ಮೊದಲ ಎರಡರ ಬಾಣಂತನಗಳನ್ನು ಹೇಗೋ ತನ್ನವ್ವ ಬದುಕಿದ್ದಾಗ ತನ್ನ ತವರಿನಲ್ಲಿ ಮಾಡಿ ಕಳಿಸಿದ್ದಳು. ಮೂರನೆಯದರ ಬಾಣಂತನವನ್ನು ತಾನೇ ತನ್ನ ಮನೆಯಲ್ಲೇ ಅಲ್ಪ ಸ್ವಲ್ಪ ನೆರೆಹೊರೆಯವರ ನೆರವಿನಿಂದ ನಿಭಾಯಿಸಿಕೊಂಡಿದ್ದಳು. ಈಗ ತನ್ನ ಹೆಣ್ಣು ಮಗುವಿನ ಬಾಣಂತನ ಮಾಡಿಕೊಳ್ಳಬೇಕು. ಅವ್ವ ಅವತ್ತು ಹೊತ್ತಾರೆ "ರಾಜ" ಎಂದು ಮಲಗ್ಗಿದ್ದಲಿಂದಲೇ ಐದನೆಯ ತರಗತಿಯಲ್ಲಿ ಓದುತ್ತಿದ್ದ ತನ್ನ ಓದೋ ಮಗ ರಾಜಣ್ಣನನ್ನು ಕೂಗಿದಳು. "ಬಂದೇನವ್ವಾ" ಎನ್ನುತ್ತಾ ರಾಜಣ್ಣ ತನ್ನವ್ವನ ಬಳಿಗೆ ಬಂದು ಏನವ್ವ ಕೂಗಿದೆ ಎಂಬಂತೆ–ನಿಂತನು.

"ನಿಮ್ಮಣ್ಣಾ ಎತ್ತುಗಳನ್ನು ಮತ್ತು ಹಸುಗಳನ್ನು ಹಾರು ಕಟ್ಟುವುದಕ್ಕೆ ಹಿಡ್ಕೊಂಡು ಹೋಗ್ತಾನೆ. ನೀನು ಎರಡು ಮಂಕರಿ ಕಸ ಆಗ್ತದೆ. ಅದನ್ನೆಲ್ಲಾ ಗುಡಿಸಿ ನೀರು ತುಂಬಿ ತಿಪ್ಪಾಳದಲ್ಲಿರುವ ನಮ್ಮ ಕಸದ ಗುಂಡಿಗೆ ಹಾಕಿ ಬಾ. ಅಷ್ಟೊತ್ತಿಗೆ ನಾನು ಎದ್ದು ಮೆಲ್ಲಗೆ ಹೋಗಿ ಒಲೆಗೆ ಉರಿ ಹಚ್ತೀನಿ" ಎಂದು ಹೇಳಿದಳು ಅವ್ವ.

ಅಣ್ಣ ದನಗಳ ಕೊಟ್ಟಿಗೆಯಿಂದ ಮುದಿ ಜೋಡಿಯ ಎತ್ತುಗಳನ್ನು ಮತ್ತು ಗೊಡ್ಡು ಕಡಸುಗಳನ್ನು ಹಿಡಿದುಕೊಂಡು ಹೊರಗೆ ನಡೆದಿದ್ದ. ಅವನ ಹಿಂದೆ ಇನ್ನೊಬ್ಬ ತಮ್ಮನೂ ಅವರನ್ನು ಹಿಂಬಾಲಿಸಿದ್ದ. ರಾತ್ರಿಯೆಲ್ಲಾ ಮುಂಗಾರು ಮಳೆ ಚೆನ್ನಾಗಿ ಹೂದಿತ್ತು. ಉಳಲು ನೆಲ ಒಳ್ಳೆ ಹದವಾಗಿತ್ತು. ಅವರು ಹೊಲಕ್ಕೆ ಹಾರುಗಳನ್ನು ಕಟ್ಟುವ ಸಿದ್ಧತೆಯಲ್ಲಿದ್ದರು.

ಅಪ್ಪ ಚೆನ್ನಯ್ಯ ಅಂಗಳದಲ್ಲಿ ನಿಂತು ಕೆಮ್ಮುತ್ತಾ "ಎರಡೂ ಹಾರುಗಳನ್ನು ಹೂಡಿ". ಮಳೆ ಬಿದ್ದು ಭೂಮಿ ಉಳಲು ಹದವಾಗಿದೆ. ಮಧ್ಯಾಹ್ನದ ಹೊತ್ತಿಗೆ ಕಣದೊಲದ ಉಳುಮೆ ಮುಗಿದು ಹೋಗಲಿ? ಎಂದು ಹೇಳುತ್ತಿದ್ದರು.

ರಾಜಣ್ಣ ದನಗಳನ್ನು ಕಟ್ಟುವ ಕೊಟ್ಟಿಗೆಗೆ ಬಂದ, ಅದು ದೊಡ್ಡ ಹಳೆಯ ಕಲ್ಲಿನ ಮಾಳಿಗೆ ಮನೆ. ಈಗಾಗಲೇ ಬಹುಶಃ ಎರಡ್ಮೂರು ತಲೆಮಾರಿನ ಜನ ಆ ಮನೆಯಲ್ಲಿ ವಾಸವಿದ್ದು ಕಾಲ ತುಂಬಿಸಿದ್ದರು. ಹಿಂಭಾಗಕ್ಕೆ ವಾಸ. ಅದರ ಮುಂಭಾಗಕ್ಕೆ ಅಂಟಿದಂತಿರುವ ದನಗಳನ್ನು ಕಟ್ಟುವ ಕೊಟ್ಟಿಗೆ. ಅದರ ಮುಂದಕ್ಕೆ ಅಂಗಳ. ರಾಜಣ್ಣ ಕೊಟ್ಟಿಗೆಗೆ ಬಂದವನೇ ಮೊದಲು ಒಂದು ಮಂಕರಿಗೆ ದನಗಳ ತೊಪ್ಪೆ ಎತ್ತಿ ತುಂಬಿದ ನಂತರ ಮೂಲೆಯಲ್ಲಿದ್ದ ಹಳೆ ಕಸಿನ ಪೊರಕೆ ಎತ್ತಿಕೊಂಡು ಕಸವನ್ನೆಲ್ಲಾ ಗುಡಿಸಿ ಇನ್ನೊಂದು ಮಂಕರಿಗೆ ತುಂಬಿದ. ಎರಡು ಮಂಕರಿ ಕಸವಾಯಿತು. ದನಗಳ ಗಂಜಲದಿಂದ ಕೊಟ್ಟಿಗೆ ಘಾಟು ವಾಸನೆ ಚೆಲ್ಲುತ್ತಿತ್ತು.

"ಮಂಕರಿ ಎತ್ತಬಾರಪ್ಪ" ಎಂದು ರಾಜಣ್ಣ ಅಪ್ಪನನ್ನು ಕೂಗಿದ. ಅಪ್ಪ ಕೆಮ್ಮುತ್ತಾ ಬಂದು ಕಸದ ಮಂಕರಿಯ ಮಗನ ತಲೆ ಮೇಲಕ್ಕೆ ಎತ್ತಿದ. ರಾಜಣ್ಣನಿಗೆ ತಲೆ 'ಚುರುಕ್' ಎಂದಿತು. ಎರಡು ಮಂಕರಿ ಕಸವನ್ನು ತಿಪ್ಪೆಗುಂಡಿಯಲ್ಲಿದ್ದ ತಮ್ಮ ಕಸದ ಗುಂಡಿಗೆ ಹಾಕಿ ಬಂದ. ಮಗ ಕಸವನ್ನೆಲ್ಲಾ ತಿಪ್ಪೆಗುಂಡಿಯ ಕಸದ ಗುಂಡಿಗೆ ಹೋಗಿ ಹಾಕಿ ಬಂದದ್ದು ಮಲಗಿದ ಬಾಣಂತಿ ಅವ್ವನಿಗೆ ಗೊತ್ತಾಯಿತು.

'ಬಾ ಇಲ್ಲಿ, ಸೀರೆಗಳ ತಗೊಂಡು ಕಲ್ಲ ಕಟ್ಟೆಗೆ ಹೋಗಿ ಜಾಲಿಸಿಕೊಂಡು ಬಾ' ಎನ್ನುತ್ತಾ "ಇವನ್ನು ಜಾಲಿಸೋದು ಹೇಗೆ ಗೊತ್ತಾ! ಮೊದ್ಲು ನೀರೊಳಕ್ಕೆ ಇವ ಅದ್ದು, ಆಮೇಲೆ ನಿನ್ನ ಕಾಲುಗಳಿಂದ ಚೆನ್ನಾಗಿ ತುಳಿದು ಒಸಕು. ಆಮೇಲೆ ನೀರಿನಲ್ಲಿ ಜಾಲಿಸು. ಅಷ್ಟು ಮಾಡಿದರೆ ಸಾಕು. ರಾತ್ರಿಯೆಲ್ಲಾ ಮಗು ಉಚ್ಚು ಹೂದು ನೆಂದಿರುವ ವಾಸನೆ ಹೋಗ್ತದೆ" ಎನ್ನುತ್ತಾ ಸೀರೆಗಳನ್ನು ಸೊಪ್ಪಿನ ಮಂಕರಿಗೆ ತುಂಬತೊಡಗಿದಳು. ರಾಜಣ್ಣ ಅವ್ವ ಹೇಳುವುದನ್ನೇ ಗಮನವಿಟ್ಟು ಕೇಳಿಸಿಕೊಳ್ಳುತ್ತಾ ನಿಂತಿದ್ದ.

"ಆಮೇಲೆ ಕೈಯಿಂದ ಸೀರೆಯ ಉಂಡೆ ಮಾಡಿ ನೀರನ್ನು ಹಿಂಡು, ಹೋಗ್ತದೆ ನೀರು. ಆದ್ರೆ ನಾನೇ ಮಾಡಾನ ಅಂದ್ರೆ ನಾನಿನ್ನೂ ಹಸಿ ಬಾಣಂತಿಯಂತೆ. ಇನ್ನು ಸ್ವಲ್ಪ ದಿನ ತಣ್ಣೀರು ಮುಟ್ಟಬಾರದು ಅಂತಾರೆ.



ಮುಟ್ಟಿದರೆ ಸನ್ನಿ ಆಗ್ತದಂತೆ. ಇನ್ನು ಸ್ವಲ್ಪ ದಿನ ಅಷ್ಟೆ" ಎಂದಳು ಅವ್ವ.

ರಾತ್ರಿಯೆಲ್ಲಾ ಮಳೆ ಬಿದ್ದಿದ್ದರಿಂದ ಊರಿನ ಹತ್ತಿರದ ಕರಲು ಕಟ್ಟೆಗೆ ಸಾಕಷ್ಟು ಹೊಸ ನೀರು ಬಂದಿತ್ತು. ಬಂದ ಹೊಸ ಕೆಂಪು ನೀರು ಮೊದಲಿದ್ದ ಪಾಚಿಗಟ್ಟಿದ ಹಳೆಯ ಹಸರು ನೀರನ್ನು ಒಂದು ಮೂಲೆ ಕಡೆಗೆ ಒತ್ತಿರಿಸಿತ್ತು.

ರಾಜಣ್ಣ ಸೊಪ್ಪಿನ ಮಂಕರಿಯಲ್ಲಿ ಅವ್ವ ತುಂಬಿದ ಸೀರೆಗಳನ್ನು ಎತ್ತುಕೊಂಡು ಕರಲು ಕಟ್ಟೆಯ ಬಳಿಗೆ ಬಂದನು. ಅವ್ವ ಹೇಳಿದಂತೆ ಸೀರೆಗಳನ್ನು ನೀರಿಗೆ ನೆನಸಿದನು. ತನ್ನೆರಡು ಕಾಲುಗಳಿಂದ ಸುಸ್ತಾಗುವವರೆಗೂ ತುಳಿದನು. ಒಸಕಿದನು. ಅವ್ವನ ಕಡ್ಡಿ ಸೀರೆಗಳು ಹಸನಾದವು. ಬಲವಿಲ್ಲದ ಸೋತ ಕೈಗಳಲ್ಲಿ ಬಲವಾಗಿ ಸೀರೆಗಳನ್ನು ಹಿಂಡಿ ಮಂಕರಿಯಲ್ಲಿ ತುಂಬಿಕೊಂಡು ಮನೆಗೆ ಬಂದನು.

ಅವ್ವ ಹೇಳಿದಂತೆಯೇ ಸೀರೆಗಳನ್ನು ಅಂಗಳದಲ್ಲಿ ಗೋಡೆಗೆ ಕಟ್ಟಿದ್ದ ಬಿದಿರುಗಳ ಮೇಲೆ ಒಣಗಿ ಹಾಕಿದನು. ಮುಂಗಾರಿನ ಎಳೆ ಬಿಸಿಲಿಗೆ ಅವ್ವನ ಕಡ್ಡಿ ಸೀರೆಗಳು ಮಿರಮಿರನೆ ಹೊಳೆಯತೊಡಗಿದವು.

ಅವ್ವ ಆಗಲೇ ಹಳೆ ಒಲೆ ಹಚ್ಚಿದಳು. ಒಳಗಿನ ಒಲೆಯಲ್ಲಿ ಗಂಜಿ ಮಾಡತೊಡಗಿದ್ದಳು. ಕೋಣೆಯಲ್ಲಿ ಕುಡಿಯಲು ನೀರು ಮುಗಿದುಹೋಗಿತ್ತು.

"ಸೀರೆ ಒಗೆಯೋದು ಕಷ್ಟ ಆಯ್ತೇನಪ್ಪಾ?" ಎಂದು ಮನಕರಗಿ ಮಗನನ್ನು ಕೇಳಿದಳು.

"ಇಲ್ಲ! ನೀ ಹೆಳಿದಂಗೇ ಒಗೆದೆ ಕಣವ್ವ" ಎಂದ ರಾಜಣ್ಣ. ಅವ್ವ ತನ್ನ ಮಗ ಒಗೆದ ಒಣಗಿ ಹಾಕಿರುವ ಸೀರೆಗಳನ್ನು ಮೂಸುತ್ತಾ "ವಾಸನೆ ಹೋಗಿದೆ. ಚೆನ್ನಾಗೇ ಹಸನಾಗವೆ" ಎಂದುಕೊಂಡಳು.

"ಬಾ! ಕುಡಿಯಕ್ಕೆ ಮನೇಲಿ ಒಂದು ತೊಟ್ಟೂ ನೀರಿಲ್ಲ. ಕಾಲವೇಲಿ ಇವತ್ತು ನೀರು ಬಂದಿರ್ತದೆ. ಗಡಿಗೆ ತಗೊಂಡೋಗಿ ಎರಡು ಗಡಿಗೆ ನೀರು ತಂದುಕೊಟ್ಟು ಬಿಡು. ಯಾರಾದ್ರು ಸಿಕ್ಕಿದ್ರೆ ಅವರ ಕೈಯ್ಲೀ ಹೆಗಲ್ಮೇಲಕ್ಕೆ ಎತ್ತಿಸಿಕೋ. ಇಲ್ಲದಿದ್ದರೆ ಗಡಿಗೆ ನೀರು ತುಂಬಿಕೊಂಡು ಕುಕ್ಕರಗಾಲಿನಲ್ಲಿ ಕೂತ್ಕೊಂಡು ಮೆಲ್ಲಗೆ ಮಂಡಿ ಮೇಲಕ್ಕೆ ಗಡಿಗೆ ತಗೋ. ಆಮೇಲೆ ಅಲ್ಲಿಂದ ಮೆಲ್ಲಗೆ ಎಡ ಹೆಗಲ ಮೇಲಕ್ಕೆ ತಗೊಂಡು, ಎದ್ದೇಳು. ಅಷ್ಟು ಮಾಡಿದ್ರೆ ಸಾಕು. ತುಂಬಿದ ಗಡಿಗೆ

ಸಲೀಸಾಗಿ ನಿನ್ನ ಹೆಗಲಿಗೆ ಬರ್ತದೆ' ಎಂದು ಅವನ ಕಣ್ಣಿಗೆ ಕಟ್ಟುವಂತೆ ಅದನ್ನು ಬಣ್ಣಿಸಿದಳು.

ರಾಜಣ್ಣ ಕೋಣೆಯಿಂದ ಮಣ್ಣಿನ ಗಡಿಗೆ ಎತ್ತಿಕೊಂಡು ಊರ ಹೊರಗಿನ ಕಾಲುವೆಗೆ ನಡೆದ. ತಾನು ಬಂದಾಗ ಕಾಲುವೆ ಬಳಿ ಯಾರೂ ಇರಲಿಲ್ಲ. ಗಡಿಗೆಗೆ ನೀರು ತುಂಬಿ ತನ್ನವ್ವ ಹೇಳಿದಂತೆಯೇ ಕಷ್ಟಪಟ್ಟು ಗಡಿಗೆಯನ್ನು ಎಡ ಹೆಗಲಿಗೆ ತಂದುಕೊಂಡು ಮೆಲ್ಲಗೆ ಮೇಲೆದ್ದನು.

ಆತ ಹೊರಟಾಗ ಹೆಗಲು ಉರಿತಿತ್ತು. ಅವ್ವ ಹೆಗಲಿಗೆ ಚೌಕಬಟ್ಟೆ ಮಡಿಚಿ ಇಟ್ಟುಕೊಳ್ಳಲು ಹೇಳಿದ್ದಳು. ಆದರೆ ಹಾಗೆ ಮಾಡಿದ್ದರೂ ಅದು ಪಕ್ಕಕ್ಕೆ ಸರಿದು ಬಿಟ್ಟಿತ್ತು.

"ಇನ್ನೊಂದು ಗಡಿಗೆ ತಂದಿಡು, ಸಾಕು ಸದ್ಯಕ್ಕೆ, ಸಂಜೆ ಸ್ಕೂಲಿನಿಂದ ಬಂದ್ಮೇಲೆ ಇನ್ನೆರಡು ಗಡಿಗೆ ನೀರ್ನ ತರೀವಂತೆ" ಎನ್ನುತ್ತಾ ಗಡಿಗೆಯನ್ನು ಅವನ ಹೆಗಲಿನಿಂದ ಇಳಿಸಿದಳು. ಗಡಿಗೆಯ ನೀರನ್ನು ಹಳಗೆಗೆ ಸುರಿದು, ಮತ್ತೊಂದು ಗಡಿಗೆ ನೀರನ್ನು ತರಲು ರಾಜಣ್ಣ ಕಾಲುವೆ ಬಳಿಗೆ ಬಂದನು.

ನೀರು ಮೊಗೆದು ಮೊದಲ ಸಲ ಎತ್ತಿಕೊಂಡಂತೆಯೇ ಅವನು ಎರಡನೆಯ ಸಲವು ಎತ್ತಿಕೊಳ್ಳಲು ಪರದಾಡುತ್ತಿದ್ದುದ್ದನ್ನು, ಪಾತ್ರೆಗಳನ್ನು ಬೆಳಗುತ್ತಾ ಕೂತಿದ್ದ ಊರಿನ ಕೆಂಚವ್ವ ಗಮನಿಸಿ, "ಯಾಕಪ್ಪ? ನಿಮ್ಮವ್ವ ನಿನ್ನ ಕಳಿಸವಳೆ ನೀರಿಗೆ!" ಎನ್ನುತ್ತಾ, ಅವನ ಬಳಿಗೆ ಬಂದು ತುಂಬಿದ ಗಡಿಗೆಯನ್ನು ಎತ್ತಿ ಅವನ ಹೆಗಲಿಗೆ ಸರಿಯಾಗಿ ಇಟ್ಟಳು. ಅವನು ಹೊರಟಾಗ ಆಕೆ. "ನಿಮ್ಮವ್ವ ನೀರಾಕ್ಕೋಂಡವಳಂತೆ! ಎಂತಾದು ಕೂಸು?" ಎಂದು ಕೇಳಿದಳು.

ಹೆಣ್ಣು ಎಂದನು ರಾಜ.

"ಹೆಣ್ಣಿರ್ಬೇಕು ಅಂತಿದ್ಲು. ಕೊನೆಗೂ ಅವಳ ಹೊಟ್ಟೇಲಿ ಹೆಣ್ಣು ಹುಟ್ತಲ್ಲ ಬಿಡು!" ಎಂದು ಕೊಂಡಳು. ರಾಜಣ್ಣ ನಿಂತಲ್ಲಿಂದ ಎರಡು ಹೆಜ್ಜೆ ಕಿತ್ತಿಟ್ಟಾಗ, "ಏನ್ಮಾಡ್ತಿ! ನಿಮ್ಮವ್ವನ ಬಾಣಂತನ ನೀನೇ ಮಾಡು!" ಎನ್ನುತ್ತಾ ಕೆಂಚವ್ವ ಪಾತ್ರೆಗಳನ್ನು ತೊಳೆಯ ತೊಡಗಿದಳು.

ರಾಜಣ್ಣ ಹೊತ್ತು ತಂದ ನೀರನ್ನು ಅವ್ವ ಇಳಿಸಿಕೊಂಡಳು. ಉಗಣಿ ಹಂಬಿನ



ಸಿಂಬಿಯ ಮೇಲೆ ಗಡಿಗೆಯನ್ನು ಇಟ್ಟಳು. ತಾನು ಬೇಯಿಸಿದ್ದ ಅನ್ನದ ಗಂಜಿಯನ್ನು ಹೊಲ ಉಳಲು ಹೋಗಿದ್ದವರಿಗೆ ಕೊಟ್ಟು ಬರಲು ಅವಸರಿಸಿ, "ಸ್ಕೂಲ್‌ಗೆ ಹೊತ್ತಾಯ್ತದೆ ಬೇಗ ಹೋಗಿ ಕೊಟ್ಟು ಬಿಟ್ಟು ಬಾ" ಎಂದಳು.

ತಲೆ ಮೇಲೆ ಬಟ್ಟೆ ಸಿಂಬೆ ಮಾಡಿಟ್ಟು ಅದರ ಮೇಲೆ ಅನ್ನದ ಗಂಜಿಯ ಸಿಲ್ವರ್ ಪಾತ್ರೆಯ ತಪ್ಪಲಿಯನ್ನು ಮಗನ ತಲೆ ಮೇಲೆ ಹೊರಿಸಿದಳು ಅಷ್ಟಾದರೂ ತಪ್ಪಲಿಯ ಬಿಸಿ ಅವನ ತಲೆಗೆ ತಟ್ಟುತ್ತಿದ್ದ ಬಿಸಿಯ ಅನುಭವ ಅವನಿಗಾಗುತ್ತಿತ್ತು.

ಅಣ್ಣ ಎತ್ತುಗಳ ಮುಂದಿನ ಹಾರನ್ನು ಹಿಡಿದಿದ್ದ; ಅವನ ಹಿಂದೆ ಇನ್ನೊಬ್ಬ ಅಣ್ಣ ಹಿಂದಿನ ಹಾರನ್ನು ಹಿಡಿದಿದ್ದ; ಒಂದು ಹಸು ಕಣ್ಣಿ ಹಾಕತ್ತೆ ಅಂತ ಅಪ್ಪ ಅದರ ಕೊರಳ ಪಕ್ಕ ನೊಗ ಹಿಡಿದು ಅದರ ಜೊತೆಯೇ ಸುತ್ತುತ್ತಿದ್ದ. ರಾಜಣ್ಣ ಬಂದುದನ್ನು ಕಂಡು ಅಪ್ಪ ಬಂದು ಅನ್ನದ ಗಂಜಿಯ ತಪ್ಪಲಿಯನ್ನು ಅವನ ತಲೆ ಮೇಲಿನಿಂದ ಇಳಿಸಿಕೊಂಡನು.

ರಾಜಣ್ಣ, 'ಬರ್ತೀನಿ, ಸ್ಕೂಲ್‌ಗೆ ಹೊತ್ತಾಗತ್ತೆ, ನೀರ್ನ ಬಾವಿಯಿಂದ ತಂದ್ಕೋಬೇಕಂತೆ, ಅಂಗಂತ ಅವ್ವ ಹೇಳಿದ್ಲು" ಅಂತ ಅಂದವನೇ ಊರಿನ ಕಡೆಗೆ ಹೊರಟುಬಿಟ್ಟ. ಮನೆಗೆ ಬಂದವನೇ ರಾಜಣ್ಣ ಒಂದೇ ಉಸಿರಿಗೆ ಗಂಜಿ ಕುಡಿದು, ತನ್ನ ಪುಸ್ತಕದ ಬ್ಯಾಗನ್ನು ಎತ್ತಿಕೊಂಡು, "ಬರ್ತೀನಿ ಕಣವ್ವ, ಹೊತ್ತಾಯ್ತು ಸ್ಕೂಲ್ಗ್_" ಎನ್ನುತ್ತಾ ಊರಿನಿಂದ ಹೊರಬಿದ್ದ, ದುರ್ಗದಲ್ಲಿದ್ದ ಮಿಡ್ಲಿ ಸ್ಕೂಲಿಗೆ ಮೂರು ಮೈಲಿಯ ದೂರದ ದಾರಿಯನ್ನು ಅವನು ನಡೆದು ಹೋಗಬೇಕಾಗಿತ್ತು.

ಕಾಲುವೆ ತಾವಿಂದ ಪಾತ್ರೆಗಳನ್ನು ಬೆಳಗಿಕೊಂಡು ಮನೆಗೆ ಬಂದ ಕೆಂಚವ್ವ, ತನ್ನ ಮನೆಕೆಲಸಗಳನ್ನೆಲ್ಲಾ ಮುಗಿಸಿ, ಹಾಗೆ ಮಗು, ಬಾಣಂತಿ ನೋಡಿಕೊಂಡು ಬರುವ ಎಂದು ಬಂದಾಗ ಅವ್ವ ಮಗಿಗೆ ಸ್ನಾನ ಮಾಡಿಸಲು ಕಾಯಿಸಿದ್ದ ನೀರನ್ನು ರೆಡಿ ಮಾಡುತ್ತಿದ್ದಳು. ತಾನೂ ಈ ದಿನ ಬಿಸಿ ನೀರನ್ನು ತಲೆಗೆ ಹಾಕಿ, ತಲೆಗೆ ಹೊಗೆ ಕೊಡಬೇಕೆಂದು ಕೊಂಡಿದ್ದಳು.

"ಮಗಿಗೆ ನೀರಾಕೋ ದಿನವಾದ್ರು ನೀನು ಹೇಳಿ ಕಳಿಸ್ಬಾರ್ದೆ?" ಎನ್ನುತ್ತಾ ಸಿಟ್ಟಾಗಿಯೇ ನಂಜವ್ವನ ಮೇಲೆ ರೇಗುತ್ತಾ ಕೆಂಚವ್ವ ಮನೆಯೊಳಗೆ ಹೋದಳು.

"ಬಾ ಕೆಂಚಕ್ಕ" ಎನ್ನುತ್ತಾ ಅವ್ವ ಅವಳನ್ನು ಬರಮಾಡಿಕೊಂಡಳು.

"ನೆರೆಹೊರೆಯವರು ಅಂತ ಇರೋದು ಮತ್ತೆ ಯಾಕೆ? ನಮ್ಮನ್ನ ಕರೀಬಾರ್ದೆ?

ನೀನೊಬ್ಬಳೇ ಹೀಗೆ ಭಂಗ ಪಡ್ತೀಯಲ್ಲ.." ಎನ್ನುತ್ತಾ ಕೆಂಚವ್ವ ಅವ್ವನ ಮೇಲೆ ರೇಗಿದಳು.

"ನಮ್ಮ ಮಗ ಸ್ಕೂಲ್ಗೆ ಹೋಗೋ ತನಕ ಎಲ್ಲ ಕೆಲಸಾನು ಮಾಡಿಕೊಟ್ಟು ಹೋದ ಕಣ ಬಾ. ನಾನು ನಿನಗೆ ಹೇಳಿಕಳಿಸಬಾರದು ಅಂತ ಏನೂ ಇರಲಿಲ್ಲ! ಯಾಕೆ ನಿಮಗೆ ತೊಂದರೆ ಕೊಡೋದು ಅಂತ ಸುಮ್ಮನಿದ್ದೆ ಅಷ್ಟೆ" ಎಂದು ಕೆಂಚವ್ವನಿಗೆ ಸಮಾಧಾನ ಮಾಡತೊಡಗಿದಳು.

"ನಿನ್ನ ಓದೋ ಹೈದ ರಾಜಕಾಲವೆ ಹತ್ತಿರ ಹೊತ್ತಾರೆ ಸಿಕ್ಕಿತ್ತು. ನೀರಿನ ಗಡಿಗೆಯ ಹೆಗಲ ಮೇಲಕ್ಕೆ ಎತ್ತಿಕೊಳ್ಳೋದಿಕ್ಕೆ ಒದ್ದಾಡ್ತಾ ಇತ್ತು. ಆಗ ನನಗೆ ನೀನು ನೀರಾಕಿಕೊಂಡಿದ್ದು ನೆನಪಾಯ್ತು. ನಾನೂ ವಾರದಿಂದ ಬರಾನ ಬರಾನ ಅಂತಲೇ ಇದ್ದೆ. ಬಿಡುವೇ ಆಗಿರಲಿಲ್ಲ ಆದ್ರೆ ಇವತ್ತು ಬಿಡುವು ಮಾಡಿಕೊಂಡು ಬಂದೆ"! ಎಂದಳು ಕೆಂಚವ್ವ.

"ಈಗ ಸದ್ಯಕ್ಕೆ ನನ್ನ ಬಾಣಂತನವ ಅವನೇ ಮಾಡ್ತಾ ಅವ್ನೆ ಕಣ ಬಾ!" ಎನ್ನುತ್ತಾ ಅವ್ವ ನಕ್ಕಳು. "ಅವ್ನು ನನ್ಗೆ ಅಪ್ಪಿ ತಪ್ಪಿ ಗಂಡು ಮಗನಾಗಿ ಹುಟ್ಟಿಬಿಟ್ಟವ್ನೆ! ಅವನೇ ನನ್ನ ಹೆಣ್ಣು ಮಗಳಾಗಿ ಹುಟ್ಟಬೇಕಾಗಿತ್ತು! ಏನೇಳಿದ್ರೂ ಮಾತಾಡಲ್ಲ. ಹಿಂತಿರುಗಿ ಹೇಳಲ್ಲ. ಹೊತ್ತಾರೆ ಅವ್ನೆ ಸೀರೆಗಳ್ನು ಒಗೆದುಕೊಂಡು ಬಂದು ಒಣಗಾಕವ್ನೆ ನೋಡು" ಎಂದು ಒಣಗಿ ಹಾಕಿದ್ದ ಸೀರೆಗಳ ಕಡೆ ತೋರಿಸಿದಳು. ಕೆಂಚವ್ವ ಸೀರೆಗಳನ್ನು ನೋಡುತ್ತಾ, "ನಾವೆಲ್ಲಾ ಇಲ್ಲವೇ? ನೆರೆಹೊರೆ ಅಂತ. ಅಂಗಾದ್ರೆ ನಮಗೆ ಹೇಳಿ ಕಳಿಸು. ಸಂಕೋಚ ಪಟ್ಕೋಬೇಡ ಮನುಷ್ಯರು ಮನುಷ್ಯರ ಕಷ್ಟಕ್ಕೆ ಆಗ್ದೆ ಮರಕ್ಕಾಗ್ತದ?" ಎನ್ನುತ್ತಾ ಕೆಂಚವ್ವನೇ ಮಧ್ಯಾಹ್ನಕ್ಕೆ ಅವ್ವನಿಗೆ ಮಾಡಿಟ್ಟು ಹೋದಳು. ಆಮೇಲೆ ಅವ್ವ ಮತ್ತು ಮಗು ಇಬ್ಬರೂ ಹಾಯಾಗಿ ನಿದ್ದೆ ಹೋದರು.

ಸಂಜೆ ರಾಜಣ್ಣ ಸ್ಕೂಲಿನಿಂದ ಬಂದಾಗ ಅವ್ವ ಮಗಿಗೆ ಎದೆ ಹಾಲು ಕುಡಿಸುತ್ತಾ ಕೂತಿದ್ದಳು. ಕೆಂಚವ್ವ ಮನೆಗೆ ಬಂದು ಅಡಿಗೆ ಮಾಡಿಟ್ಟು, ತನಗೆ, ಮಗಿಗೆ ಸ್ನಾನ ಮಾಡಿಸಿ, ತನಗೂ ಉಣಬಡಿಸಿ, ತಾನು ಬಿಸಿ ಬಿಸಿ ಮುದ್ದೆಯನ್ನು ಉಪ್ಪನೆಸರಿನಲ್ಲಿ ತನ್ನ ಬಲವಂತಕ್ಕೆ ಉಂಡು ಹೋದಳೆಂದು ಹೇಳಿದಳು. ಹೊತ್ತಾರೆ ತನಗೆ ಅವಳು ಗಡಿಗೆಯನ್ನು ಎತ್ತಿಕೊಟ್ಟಿದ್ದನ್ನು ಹೇಳಿದ್ದರ ಬಗ್ಗೆಯೂ ನೆನಪಿಸಿದಳು. ಮಧ್ಯಾಹ್ನ ಅಣ್ಣ ಎಲ್ಲರೂ ಬಂದು ಅವಳು ಮಾಡಿಟ್ಟ ಅಡಿಗೆಯನ್ನು ಉಂಡು



ಹೋಗುದರ ಬಗ್ಗೆಯೂ ತಿಳಿಸಿದಳು.

ರಾಜಣ್ಣ ಕೋಣೆಯೊಳಗೆ ಧಾವಿಸಿದ್ದನ್ನು ಕಂಡ ಅವ್ವ, "ಹಿಟ್ಟನ್ನು ಚೆನ್ನಾಗಿ ಹಸಿಕಲ್ಲಿನ ಮೇಲೆ ಸ್ವಲ್ಪ ಉಪ್ಪು ಖಾರ ಹಾಕಿ ಮಿದಿ" ಎಂದಳು. ರಾಜಣ್ಣ ಹೇಳಿದ ಹಾಗೆಯೇ ರಾಗಿಮುದ್ದೆಯನ್ನು ಚೆನ್ನಾಗಿ ಹಸಿ ಕಲ್ಲಿನ ಮೇಲೆ ಮಿದ್ದು ಉಂಡು, ನೀರು ತರಲು ಗಡಿಗೆ ತೆಗೆದುಕೊಂಡು ಕಾಲುವೆಗೆ ಹೊರಟನು.

ರಾತ್ರಿಗೆ ಅಣ್ಣಾನೇ ಅಡಿಗೆ ಮಾಡಲಿದ್ದನು; ಅವ್ವ ಅವನಿಗೆ ಅಡಿಗೆ ಮಾಡುವುದನ್ನು ಚಿಕ್ಕಂದಿನಿಂದಲೂ ಹೇಳಿ ಕಲಿಸಿದ್ದಳು. ಅಪ್ಪ ನಡುಮನೆಯಲ್ಲಿ ಕೂತಿದ್ದ. ಅವ್ವ ಮಗಿಗೆ ತಲೆಗೆ ಹರಳೆಣ್ಣೆ ಒತ್ತುತ್ತಿದ್ದಳು. ಸೀಮೆಎಣ್ಣೆ ಬುಡ್ಡಿಯ ಬೆಳಕಿನಲ್ಲಿ ಓದುತ್ತಾ ರಾಜಣ್ಣ ಹೋಂವರ್ಕ್ ಮಾಡುತ್ತಿದ್ದಾಗ ಅವನಿಗೆ ನಡುವೆ ನಾಳೆಯ ಮನೆಕೆಲಸಗಳು ನೆನಪಿನಲ್ಲಿ ಬಂದು ಹೋಗುತ್ತಿದ್ದವು.

ಕಾಲ ಸರಿದಿತ್ತು. ರಾಜಣ್ಣ ದುರ್ಗದಲ್ಲಿ ಹೈಸ್ಕೂಲಿನವರೆಗೆ ಓದಿ ನಂತರ ಬೆಂಗಳೂರಿನಲ್ಲಿ ಓದಲು ಕಾಲೇಜಿಗೆ ಸೇರಿಕೊಂಡಿದ್ದ. ಅವ್ವನಿಗೆ ಈ ಸಾರಿ ತಿರುಪತಿ ಯಾತ್ರೆ ಮಾಡಿಸಿ ಬಿಡುವ, ಅವಳ ಆಸೆ ನೆರವೇರಿಸಿ, ಬಿಡುವ' ಎಂಬ ದೃಢ ನಿರ್ಧಾರದಿಂದ ಕಾಲೇಜಿಗೆ ರಜೆ ಸಿಕ್ಕಿಸಿಕೊಂಡು ಊರಿಗೆ ಬಂದಿದ್ದ. ಒಂದು ಶನಿವಾರದ ದಿವಸ ಮನೆಯಲ್ಲಿ ಕುರಿ ಕೂದು ಬಾಡೂಟ ಮಾಡಿ ದೇವರಿಗೆ ಎಡೆ ಇಕ್ಕಿ ಸಂಬಂಧಿಕರನ್ನೆಲ್ಲಾ ಊಟ ಹಾಕಿ ಹೊರಡುವ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಈ ಎಡೆ ಇಕ್ಕುವ ಆಚರಣೆಯಲ್ಲಿ ನೆಂಟರು, ಅಣ್ಣ ತಮ್ಮಂದಿರೆಲ್ಲಾ ಪಾಲ್ಗೊಂಡು ಸಂಭ್ರಮಿಸಿದ್ದರು. ಮಧ್ಯಾಹ್ನದ ಮೇಲೆ ರಾಜಣ್ಣ ತನ್ನವ್ವನ ಜೊತೆ ಬೆಂಗಳೂರಿಗೆ ಬಂದು ಅಲ್ಲಿಂದ ತಿರುಪತಿಗೆ ರಾತ್ರಿ ಬಸ್ಸು ಹತ್ತಿದನು. ಅವ್ವ-ಮಗನಿಗೆ ಬಸ್ಸಿನಲ್ಲಿ ತಮ್ಮ ಕಡೆಯ ಒಬ್ಬ ದಾಸಯ್ಯ ಸಿಕ್ಕಿ ಪರಿಚಯವಾದ. ಅವನಿಗೆ ಅದು ಇಪ್ಪತ್ತೊಂದನೆಯ ತಿರುಪತಿ ಯಾತ್ರೆ ಆಗಿತ್ತಂತೆ! ಅವರಿಬ್ಬರೂ ಹೊಸದಾಗಿ ತಿರುಪತಿಗೆ ಹೋಗುತ್ತಿರುವುದು ಗೊತ್ತಾಗಿ ದಾಸಯ್ಯ, "ಏನೂ ಭಯ ಪಡಬೇಡಿ ಬನ್ನಿ, ನಾನು ನಿಮ್ಮನ್ನು ಕರೆದುಕೊಂಡು ಹೋಗ್ತೀನಿ. ನಿಮ್ಮಂಥ ಭಕ್ತರಿಗೆ ಭಗವಂತನ ದರ್ಶನ ಮಾಡಿಸುವುದೇ ನಮ್ಮಂಥ ದಾಸಯ್ಯಗಳ ಕಾಯಕ" ಎಂದನು. ಅವ್ವ-ಮಗ ಇಬ್ಬರಿಗೂ ದಾಸಯ್ಯನ ಮಾತಿನಲ್ಲಿ ನಂಬಿಕೆ ಬಂದು ಅವನ ಜೊತೆ ಪಯಣ ಮಾಡಿ ಬೆಳಿಗ್ಗೆಯ ಹೊತ್ತಿಗೆ ಇಬ್ಬರೂ ತಿರುಪತಿ ತಲುಪಿಕೊಂಡರು.

ದಾಸಯ್ಯ ತಾನು ಬಂದಾಗಲೆಲ್ಲಾ ಗೋವಿಂದರಾಜ ಪಟ್ಟಣದಲ್ಲಿ ತಂಗುತ್ತಿದ್ದ ಮನೆಗೆ ಅವರನ್ನು ಕರೆದುಕೊಂಡು ಹೋದನು. ಅಲ್ಲಿ ಒಂದು ಕಿರುಕೋಣೆಯಲ್ಲಿ ಅವರು ತಂದಿದ್ದ ಸಾಮಾನುಗಳನ್ನೆಲ್ಲಾ ಇಡಿಸಿ, ಸ್ನಾನ ಮಾಡಿಕೊಳ್ಳಲು ವ್ಯವಸ್ಥೆ ಮಾಡಿದನು. ತಾನೂ ಒಂದು ಕೋಣೆಯಲ್ಲಿ ತನ್ನ ಸಾಮಾನುಗಳನ್ನೆಲ್ಲಾ ಇಟ್ಟು ಸ್ನಾನ ಮಾಡಿ ಹಣೆಗೆ ಅಗಲವಾದ ಮೂರು ನಾಮ ಧರಿಸಿ ಬಾನಕಿಯಲ್ಲಿ ಮೂರು ಬಾರಿ ಊದಿ "ಗೋವಿಂದ! ಗೋವಿಂದ! ಎಂದು ಹೇಳಿ ಹೊರಡಲು ಸಿದ್ಧನಾದನು.

ಬಸ್ಸಿನಲ್ಲಿ ಬರ್ತಿರೋ ಬೆಟ್ಟಕ್ಕೆ, ಕಾಲ್ನಡಿಗೆಯಲ್ಲಿ ನೀವು ನಡೆದು ಬರ್ತೀರೋ?" ಎಂದು ದಾಸಯ್ಯ ಅವ್ವ–ಮಗನನ್ನು ಕೇಳಿದನು.

ಅವ್ವ, "ನಾನು ನಡೆದೇ ಬರೋದು, 'ನಿನ್ನ ನಿಧಿಗೆ ಬೆಟ್ಟ, ಹತ್ತೇ ಬರ್ತೀನಿ' ಅಂತ ಹರಕೆ ಹೊತ್ಕೊಂಡಿದ್ದೀನಿ.

ರಾಜಣ್ಣ, ಬೆಟ್ಟ ಹತ್ತೋದು ಕಷ್ಟ ಅಲ್ವೇನವ್ವ?" ಎಂದ.

ದಾಸಯ್ಯ, "ಏನೂ ಕಷ್ಟ ಆಗಲ್ಲ, ನಾನು ಈಗ ಇಪ್ಪತ್ತೊಂದನೆಯ ಸಲ ಬೆಟ್ಟ ಹತ್ತಾ ಇದ್ದೀನಿ. ಯಾವಾಗಲೂ ನನಗೆ ಸುಸ್ತಾಗಿಲ್ಲ! ಈ ತಿಮ್ಮಪ್ಪ ಹತ್ತಿಸ್ಕೊಂಡು ಹೋಗ್ತಾನೆ! ನಾವು ಹೋಗಿ ಆ ಮೆಟ್ಟಿಲ ಹತ್ತಿರ ನಿತ್ಕೊಂಡ್ರೆ ಸಾಕು!" ಎಂದ.

ಅವ್ವ ತನ್ನ ಹರಕೆಯ ಕುಡಿಕೆಗಳನ್ನು ತನ್ನ ಚೀಲವನ್ನು ಭದ್ರ ಮಾಡಿಕೊಂಡು ಹೊರಡಲು ಸಿದ್ಧಳಾದಳು. ದಾಸಯ್ಯ ಮುಂದೆ ಹೊರಟ. ಅವರಿಬ್ಬರ ಹಿಂದೆ ಇವರಿಬ್ಬರೂ ಹೆಜ್ಜೆ ಹಾಕಿದರು.

ದಾಸಯ್ಯ ಬೆಟ್ಟ ಹತ್ತುತ್ತಿದ್ದ' ಅವನ ಹಿಂದೆ ಅವ್ವ ನೋಡಿದರೆ ಅವಳು ಮೈಮೇಲೆ ದೆವ್ವನೋ ದೇವ್ರೋ ಬಂದವಳಂತೆ ಒಂದೇ ಉಸಿರಿಗೆ ಬೆಟ್ಟದ ಮೆಟ್ಟಿಲುಗಳನ್ನು ಹತ್ತಿ ಹತ್ತಿ ಹೋಗುತ್ತಿದ್ದಳು. ಅವ್ವ ಮೆಟ್ಟಿಲುಗಳನ್ನು ಹತ್ತುವುದನ್ನೇ ನೋಡುತ್ತಾ ರಾಜ ಹಿಂದಕ್ಕೆ ಹಿಂದಕ್ಕೆ ಉಳಿದ. ದಾಸಯ್ಯ ಅವ್ವನಿಗಿಂತಲೂ ಬಿರುಸಾಗಿ ಹೋಗುತ್ತಿದ್ದ. ಅವ್ವ ಹಿಂದಕ್ಕೆ ತಿರುಗಿ ನೋಡಿದಳು. ಮಗ ಸುಸ್ತಾದವನಂತೆ ಮೆಟ್ಟಿಲುಗಳನ್ನು ಹತ್ತುತ್ತಿದ್ದ. "ಬಾ ದಾಸಯ್ಯ ಆಗಲೇ ಮುಂದಕ್ಕೆ ಹೋಗಿಬಿಟ್ಟ" ಎಂದು ಕರೆದಳು.

"ಏನವ್ವ ನೀನು ಹಕ್ಕಿ ಥರಾ ಹಾರ್ತಾ ಇದ್ದೀ. ನನಗೆ ಕಾಲುಗಳೇ ಬರ್ತಾ ಇಲ್ಲ" ಎಂದ ಮಗ.



"ನಿನಗೆ ಅಭ್ಯಾಸವಿಲ್ಲ, ಅದಕ್ಕೆ ಹಾಗಾಗ್ತವೆ. ನಾನಾದ್ರೆ ಊರ್ನಲ್ಲೇ ಹೊಲ, ಗದ್ದೆ, ದನಕರು ಅಂತ ತಿರುಗಿ ತಿರುಗಿ ಅಭ್ಯಾಸವಿದೆಯಲ್ಲ" ಎಂದಳು ಅವ್ವ.

ರಾಜಣ್ಣ ಮೌನವಾಗಿ ಹೆಜ್ಜೆ ಇಡತೊಡಗಿದ್ದ; ಅವ್ವನಿಗೆ ಮಗ ಕೇಳಿದ ಪ್ರಶ್ನೆಯಿಂದ ಗೊಂದಲವಾಗಿ ಅವಳ ನಡಿಗೆಯಲ್ಲಿ ಮತ್ತಷ್ಟು ನಿಧಾನವಾಯ್ತು. ದಾಸಯ್ಯ ಆಗಲೇ ನಡೆದು ದಾರಿಯ ಆ ತುದಿಯಲ್ಲಿ ಕಾಯುತ್ತಾ ಕೂತಿದ್ದ. ಅವನಲ್ಲಿ ಯಾವ ದಣಿವೂ ಕಾಣಿಸುತ್ತಿರಲಿಲ್ಲ. ಅವ್ವ ಮಗ ಇಬ್ಬರೂ ನಡೆದು ಹೋಗಿ ದಾಸಯ್ಯನ ಸೇರಿಕೊಂಡರು. ರಾಜಣ್ಣನ ಮುಖದಲ್ಲಿ ಆಯಾಸ ಎದ್ದು ಕಾಣುತ್ತಿತ್ತು. ಅವ್ವ ಎಲ್ಲವನ್ನೂ ಮೈಮರೆತವಳಂತೆ ಕಾಣುತ್ತಿದ್ದಳು. ಕೊನೆಗೆ ತನ್ನ ಜೀವನದ ಅಂತಿಮ ಕ್ಷಣಗಳಲ್ಲಿ ಗಿರಿಯ ಹತ್ತಿ ಸ್ವಾಮಿಯ ಸನ್ನಿಧಿಗೆ ಬಂದು ತಾನು ಹೊತ್ತ ಹರಕೆಯನ್ನು ಸಲ್ಲಿಸುತ್ತಿರುವ ಸಂಭ್ರಮ, ಸಂತೋಷ, ಸಮಾಧಾನ ಅವಳಲ್ಲಿ ಮನೆ ಮಾಡಿತ್ತು.. " ಇವತ್ತು ನನ್ನ ಬಾಳು ಸಾರ್ಥಕವಾಯ್ತು! ತಿಮ್ಮಪ್ಪನ ಸಾಲದ ಹುಂಡಿಗೆ ನನ್ನ ಹರಕೆ ಹಣ ಸೇರಿತು! ನಾನು ಇನ್ನು ಮೇಲೆ ಇದ್ದರೇನು, ಸತ್ತರೇನು? ಅವನ ನಿಧಿಗೆ ಕೊನೆಗೂ ನನ್ನ ಕರೆಸಿಕೊಂಡನಲ್ಲ! ಅಷ್ಟೇ ಸಾಕು ನನಗೆ!" ಎಂದು ಕಣ್ತುಂಬ ಸ್ವಾಮಿಯ ತುಂಬಿಕೊಂಡು ಆನಂದದ ತತ್ಪರತೆಯಲ್ಲಿ ಗಿರಕಿಯ ಮೇಲಿನ ಮುಗಿಲು ನೋಡುತ್ತಾ ತನ್ಮಯಳಾಗಿ ಮೂರ್ಛೆ ಹೋದವಳಂತೆ ಕುಸಿದು ಕೂತಳು. ಮಗ ವಿಸ್ಮಿತನಾಗಿ ನಿಟ್ಟುಸಿರುಬಿಟ್ಟು ಅವ್ವನನ್ನು ನೋಡುತ್ತಾ ನಿಂತನು. ತನ್ನ ಇಪ್ಪತ್ತೊಂದನೆಯ ಕೊನೆಯ ಯಾತ್ರೆಯನ್ನು ಮುಗಿಸಿದ ಸಂಭ್ರಮ ಹಾಗೂ ಸಂತೃಪ್ತಿಯಲ್ಲಿ ದಾಸಯ್ಯ ತನ್ನ ಬಾನಕಿಯನ್ನು ಮುಗಿಲಿಗೆ ಎತ್ತಿ ಧಂಕಟ್ಟಿ ಊದ ತೊಡಗಿದನು. ಬಾನಕಿಯ ನಾದದ ಏರಿಳಿತಕ್ಕೆ ಇಡೀ ಗಿರಿಯೇ ಕರಗಿ ನೀರಾಗಿ ಹೋದಂತೆ ಕಾಣುತ್ತಿತ್ತು. ಮಗ 'ಅವ್ವಾ' ಎಂದು ಕೂಗುತ್ತಾ ಅವ್ವನನ್ನು ಎಚ್ಚರಿಸತೊಗಿದ್ದನು. ಆದರೆ ಅವ್ವನ ಜೀವಕ್ಕೆ ಏನೂ ಆಪಾಯ ಆಗಿರಲಿಲ್ಲ.

**ಓದು ಪತ್ಯ**

## ಪ್ರೀತಿ ಶಾಶ್ವತ! ಪ್ರೀತಿಸುವವರು ನಶ್ವರ

**– ನಾಗತಿಹಳ್ಳಿ ಚಂದ್ರಶೇಖರ**

ಒಲವ ತುಷಾರವೇ,

ನಿನ್ನ ನೆನಪಿನ ಸಿಂಚನ ಒಣಗಿದ ಮನಸ್ಥಿತಿಗೆ ಅದೆಂತಹುದೋ ಆಹ್ಲಾದ ನೀಡುತ್ತದೆ. ನನ್ನದೊಂದು ಅವಮಾನವನ್ನು ಹೇಳುವುದರ ಮೂಲಕ ಈ ಪತ್ರವನ್ನು ಆರಂಭಿಸುತ್ತಿದ್ದೇನೆ. ಯಾಕೆಂದರೆ ಮನಸ್ಸು ಬಯಸುವುದು ಪ್ರಶಂಸೆಯನ್ನು, ಬಹುಮಾನ, ಸನ್ಮಾನಗಳನ್ನು ಎಲ್ಲರೂ ಇಷ್ಟಪಡುತ್ತೇವೆ. ನೀನು ನನ್ನವಳು, ನಿನ್ನೊಂದಿಗೆಂಥ ಮುಚ್ಚುಮರೆ? ಮನಸ್ಸು, ದೇಹವನ್ನು ಅದರ ಎಲ್ಲ ಸೂಕ್ಷ್ಮಾತಿಸೂಕ್ಷ್ಮ ಕಣಗಳೊಂದಿಗೆ ತೆರೆದಿಟ್ಟು ನಾವಿಬ್ಬರೂ ಬಟಾಬಯಲಾದ ಮೇಲೂ ಇನ್ನೆಂಥ ಬಿಗುಮಾನ?

ಅಪ್ಪ ಒದದಾಡುತ್ತಿದ್ದರು, ನನಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ಫೀಸು ಕಟ್ಟಲು ಹಣವಿರಲಿಲ್ಲ. “ಎಸ್ಸೆಸ್ಸೆಲ್ಸಿಯವರೆಗೆ ಎಲ್ಲರನ್ನೂ ಓದಿಸುತ್ತೇನೆ” ಎಂದು ಆಗಾಗ ಹೇಳುತ್ತಿದ್ದ ಅವರಿಗೆ ವಚನ ಭಂಗವಾಗುವ ಸ್ಥಿತಿ ಬಂತು. ನಾಳೆಯೇ ಲಾಸ್ಟ್‌ಡೇಟು, ನನ್ನ ಆತಂಕ ಹೇಳತೀರದು. ಜೊತೆಗಾರರೆಲ್ಲಾ ಫೀಸು ಕಟ್ಟಿದ್ದರು. ಹೆರಗನಹಳ್ಳಿಯ ಧರಣಿ ಶ್ರೀಮಂತರ ಹುಡುಗ. ಎಲ್ಲರಿಗಿಂತ ಮುಂಚೆ ಫೀಸು ಕಟ್ಟಿದ್ದ. ದಿನವೂ ಕ್ಲಾಸಿನಲ್ಲಿ ಅನಂತು ಮೇಷ್ಟ್ರು ನನ್ನನ್ನು ಎದ್ದು ನಿಲ್ಲಿಸಿ ಯಾಕಿನ್ನೂ ಫೀಸು ಕಟ್ಟಿಲ್ಲ ಎಂದು ಕೇಳಿದಾಗ ಅವಮಾನದಿಂದ ಮುದುಡಿ ಹೋಗುತ್ತಿದ್ದೆ.

“ನಿಮ್ಮಪ್ಪ ಬರ‍್ಯಕೆ ಬತ್ತದೆ ಅಂತ ಕಾಗ್ದ ಬರ‍್ದು ಕಳಿಸ್‌ಬುಡ್ತನೆ. ಎಲ್ಲದೆ ದುಡ್ಡು? ಮದ್ಲು ಹಳೇದನ್ನ ತೀರ‍್ಸೋಕೆ ಹೇಳು. ನಾನು ದುಡ್ಡಿನ್ ಗಿಡ ಹಾಕಿಲ್ಲ ಇಲ್ಲಿ,._ ಅಂತ ನಿಮ್ಮಪ್ಪಂಗೆ ಹೇಳು, ಹೋಗು ನಿಮ್ಮಪ್ಪನ್ನೇ ಕಳ್ಸು” ಅಂತ ಕಾಯಿ ವ್ಯಾಪಾರಿ ತಿಮ್ಮಶೆಟ್ಟಿ ಎಲ್ಲರೆದುರಿಗೆ ಅವಮಾನ ಮಾಡಿದ್ದ. ಸಾಲ ಕೇಳಲು ಸಂಕೋಚಪಡುತ್ತಿದ್ದ ಅಪ್ಪ ದೈನ್ಯತೆಯ ಪತ್ರ ಬರೆದು ನನ್ನ ಕಳಿಸಿದ್ದರು. ಅವನು ಅದನ್ನು ಜೋರಾಗಿ ಓದಿ ಎಲ್ಲರಿಗೂ ಬಹಿರಂಗಗೊಳಿಸಿ ಮಾತು ಮಾತಿಗೆ



ನಿಮ್ಮಪ್ಪ ನಿಮ್ಮಪ್ಪ .. ಅಂದಾಗ ನನಗೆ ರಕ್ತ ಕುದಿಯುತ್ತಿತ್ತು.

ಬಹುಶಃ ಇದು ಕಡೆಯದಿನ ಎಂದುಕೊಂಡೇ ಸ್ಕೂಲಿಗೆ ಬಂದೆ. ಅಪ್ಪ ಏನೊಂದೂ ಮಾತಾಡದೆ ಬೆಳ್ಳಂಬೆಳಗ್ಗೆ ಎದ್ದು ಗೊಂಡೇನಹಳ್ಳಿ ಸ್ಕೂಲಿಗೆ ಮಾಸ್ತರ ಕೆಲಸಕ್ಕೆ ಹೊರಟುಬಿಟ್ಟಿದ್ದರು. ನನಗೆ ಅಳು ಒತ್ತಿ ಬರುತ್ತಿತ್ತು. ಸಹಪಾಠಿ ಧರಣಿಗೌಡ ನಾನು ಪರೀಕ್ಷೆ ತೆಗೆದುಕೊಳ್ಳುತ್ತಿಲ್ಲ ಅಂತ ತಿಳಿದು ನನಗಿಂತ ಹೆಚ್ಚು ದುಃಖಿಯಾದ. ಕಾರಣ ಬೇರೆ ಇತ್ತು.

ಈ ಕೇಂದ್ರದಲ್ಲಿ ಕಾಪಿ ಹಾವಳಿ ಬಹಳ ಎಂದು ಮೊದಲ ಬಾರಿಗೆ ನಾಗಮಂಗಲ ಸೆಂಟರ್‌ಗೆ ಪರೀಕ್ಷೆ ವರ್ಗಾಯಿಸಲಾಗಿತ್ತು. ಸಹಜವಾಗಿ ಪರೀಕ್ಷೆ ಹೆಚ್ಚು ಶಿಸ್ತಿನಿಂದ ಕೂಡಿರುತ್ತದೆ ಎಂಬ ಭಯ. “ಸಿ” ಅಕ್ಷರದಿಂದ ಶುರುವಾಗುವ ನನ್ನ ಬದಿಯಲ್ಲೇ “ಡಿ” ಅಕ್ಷರದ ಧರಣಿ ಕೂರಬೇಕಿತ್ತು. “ನ್ಯೂ ಟೈಪ್ ವಿಭಾಗದ 25 ಅಂಕಗಳನ್ನು ಹೇಗಾದರೂ ತೋರಿಸಿಬಿಡು. ಇನ್ನು ಹತ್ತು ಮಾರ್ಕ್ಸು ಹೇಗಾದರೂ ತೆಗೀತೀನಿ. 35 ಅಂಕಗಳಾದರೆ ಪಾಸಾಗಬಹುದು. ನಮ್ಮಪ್ಪ ಎಲ್ಲೀತನಕ ಬೇಕಾದ್ರೂ ಓದಿಸ್ತಾರೆ. ಈ ಸಾರಿ ಪಾಸಾಗಲೇಬೇಕು” ಇದು ಧರಣಿಯ ಬೇಡಿಕೆಯಾಗಿತ್ತು. ನಾನು ಪರೀಕ್ಷೆಗೆ ಕೂರಲಾಗುತ್ತಿಲ್ಲ ಅಂದಾಗ ಹೇಗಾದರೂ ಫೀಸು ಕಟ್ಟಬೇಕೆಂದು ಚಡಪಡಿಸಿದವನು ಅವನೇ. ಅನಾಥ ವಿದ್ಯಾರ್ಥಿಗೆ ಫೀಸು ಸಂಗ್ರಹಿಸುವವನಂತೆ ಎಲ್ಲರ ಬಳಿ ಚಂದಾಗೆ ಹೊರಟ. ನನಗೆ ನೆರವಾಗುವ ಆಸೆಯಷ್ಟೇ ತಾನು ಪಾಸಾಗುವ ಸ್ವಾರ್ಥವೂ ಇತ್ತೆಂದು ತೋರುತ್ತದೆ. ಆದರೆ ಅವನು ಅದನ್ನು ದೊಡ್ಡ ದನಿಯಲ್ಲಿ “ಚಂದ್ರುಗೆ ಫೀಸ್‌ಗೆ ದುಡ್ಡಿಲ್ಲ. ಎಲ್ಲರೂ ಸಹಾಯ ಮಾಡಿ ನಾನು ಎರಡು ರೂಪಾಯಿ ಮೊದಲೇ ಹಾಕಿದ್ದೇನೆ” ಎಂದು ಕೂಗುತ್ತಾ ಜೋಳಿಗೆ ಹಿಡಿದು ಹೊರಟಿದ್ದು ನನಗೆ ತುಂಬಾ ಅವಮಾನವೆನಿಸಿತು. ಅದೊಂದು ದೊಡ್ಡ ಸುದ್ದಿಯಾಗಿ ಸ್ಕೂಲಿನ ಆವರಣದಲ್ಲಿ ನಾನು ಕುಬ್ಜನಾಗಿಬಿಟ್ಟೆ.

ಅಷ್ಟರಲ್ಲಿ ಅದೆಲ್ಲಿದ್ದರೋ ನನ್ನ ತಂದೆ ಶುಭ್ರ ಬಿಳಿ ಬಟ್ಟೆ ತೊಟ್ಟು, ಎಕ್ಕಡದ ಝುರಕ್ ಝುರಕ್ ಸದ್ದಿನೊಡನೆ, ಛತ್ರಿ ಹಿಡಿದು ಬಂದರು. ಹೇಗೆ ಹೊಂಚಿದರೋ ಏನು ಕತೆಯೋ, ಫೀಸಿನ ಹಣ ತಂದಿದ್ದರು. ಪ್ರೀತಿಯ ಚಿನ್ನು, ಆವತ್ತು ನನ್ನಪ್ಪನ ಬಗ್ಗೆ ಉಂಟಾದ ಹೆಮ್ಮೆಯನ್ನು ಯಾವ ಪದಗಳಿಂದ ವರ್ಣಿಸಲಿ? ಎಲ್ಲರಿಗೂ

ಹಣ ಹಿಂತಿರುಗಿಸಿದ್ದಾಯಿತು. ಹಂಗಿಗೆ ಸಿಲುಕಲಿಲ್ಲ. ಅನೇಕರಿಗೆ ನಿರಾಸೆಯಾಯಿತು. ಅಪ್ಪ ಬಂದಿದ್ದು, ಮೆಲುದನಿಯಲ್ಲಿ ಹೆಡ್ಮಾಸ್ತ್ರರಿಗೆ "ಕೊಂಚ ತಡವಾಯ್ತು, ಕ್ಷಮಿಸಿ" ಎಂದಷ್ಟೇ ಹಳಿ ಫೀಸು ತುಂಬಿದ್ದು, ಮೌನವಾಗಿ ಹಿಂತಿರುಗಿದ್ದು. ಕಣ್ಣಿಗೆ ಕಟ್ಟಿದಂತಿದೆ.

ಚಿನ್ನು, ನಾನು ಅಧ್ಯಾಪಕನಾದ ಮೇಲೆ ಎಷ್ಟು ನಿಷ್ಠೆಯಿಂದ ಪಾಠ ಮಾಡಿದೆನೋ ಇಲ್ಲವೋ ಆದರೆ ಪ್ರತಿ ವರ್ಷ ಗುಟ್ಟಾಗಿ ಐವರು ಬಡ ವಿದ್ಯಾರ್ಥಿಗಳಿಗೆ ಫೀಸು–ಪುಸ್ತಕ ಕೊಡಿಸುತ್ತಿದ್ದೆ. ಇದೆಲ್ಲಾ ಬರೆಯಲು ಸಂಕೋಚ. ಆತ್ಮಸ್ತುತಿಗಾಗಿ ಹೇಳುತ್ತಿಲ್ಲ. ಹನ್ನೆರಡು ವರ್ಷದ ಅಧ್ಯಾಪಕ ವೃತ್ತಿಯಲ್ಲಿ ನನಗೆ ಶಕ್ತಿ ಇದ್ದಷ್ಟು ನೆರವಾದೆ. ಕೆಲವರು ದುರುಪಯೋಗ ಮಾಡಿಕೊಂಡರು. ಆದರೆ ಕೆಲವರು ಬೆಳೆದರು–ಬೆಳೆಯುತ್ತಿದ್ದಾರೆ. ಇದೆಲ್ಲಾ ಇರಲಿ. ಕಷ್ಟಪಟ್ಟು ದುಡಿದು, ಯಾರದೋ ಮನೆಗೆ ಹಾಲು, ಪೇಪರ್ ಹಾಕಿ. ಓಡೋಡಿ ಕ್ಲಾಸಿಗೆ ತಡವಾಗಿ ಬರುವ ಬಡ ಹುಡುಗರನ್ನು ಕಂಡಾಗ ಅವರೊಂದಿಗೆ ಗುರುತಿಸಿಕೊಳ್ಳುತ್ತಿದ್ದೆ. ನ್ಯೂಯಾರ್ಕಿನಲ್ಲೋ ಚಿತ್ರೀಕರಣ ಮಾಡುವಾಗ "ನಾನು ನಿಮ್ಮ ಸ್ಟೂಡೆಂಡ್ ಸಾರ್, 88ನೇ ಇಸವೀಲಿ!" ಅಂತ ಎಳೆಯನೊಬ್ಬ ಬಂದು ಮುಂದೆ ನಿಂತಾಗ ಎಂಥದೋ ಧನ್ಯತಾ ಭಾವ ತುಂಬುತ್ತಿತ್ತು. ಎಲ್ಲರೂ ನ್ಯೂಯಾರ್ಕಿನಲ್ಲಿದ್ದಾರೆ ಅಂದುಕೋಬೇಡ. ಅನೇಕರು ರಿಕ್ಷಾ ಓಡಿಸಿಕೊಂಡು ಇಲ್ಲೇ ಇದ್ದಾರೆ! ಮೇಸ್ಟರಿಗೆ ಮಾತ್ರ ಇಂಥ ಅನುಭವ ಸಾಧ್ಯ ಅಲ್ಲವೇ? ನ್ಯೂಯಾರ್ಕಿನವರಿಗಿಂತ ಈ ರಿಕ್ಷಾ ಸ್ಟೂಡೆಂಟ್ಸು ಕಂಡರೇ ನನಗೆ ವಿಚಿತ್ರ ಪ್ರೀತಿ! ಚಿನ್ನು ಆ ದಿನ ನೆನಪಿದೆಯೆ? ತಲೆಗೆ ಹರಳೆಣ್ಣೆ ಒತ್ತಿ, ಹಣೆಗೆ ವಿಭೂತಿ ಬಳಿದು, ರಟ್ಟೆಗಾತ್ರದ ಪೆನ್ನಿನ ತುಂಬಾ ಇಂಕು ತುಂಬಿ, ದಡ ಮುರಿದ ಸ್ಕೇಲು ಪೆನ್ಸಿಲ್‌ಗಳನ್ನು ಹಳೆ ಟ್ರಂಕಿನಲ್ಲಿದ್ದ ಜಾಮಿಟ್ರಿ ಬಾಕ್ಸ್‌ನಲ್ಲಿ ಜೋಡಿಸಿಕೊಂಡು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ನಾಗಮಂಗಲಕ್ಕೆ ಹೋಗಿದ್ದು? ಮುಸಾಫಿರ ಬಂಗಲೆಯ ಪಡಸಾಲೆಯಲ್ಲಿ ಮಲಗಿದ್ದು? ಥೇಟು ಮರಿ ವಿಶ್ವೇಶ್ವರಯ್ಯನಂತೆ ಹಳೆ ಬಸ್‌ಸ್ಟಾಂಡಿನ ದೀಪದ ಬೆಳಕಲ್ಲಿ ಓದಿದ್ದು?

ಧರಣಿ ಎಂಬ ಅಸಾಧ್ಯ ಸಹಪಾಠಿ ಬಗ್ಗೆ ಹೇಳಲೇಬೇಕು. ಮಹಾ ಪ್ರಚಂಡ ಅವನು, ನ್ಯೂಟೈಪ್ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳಲ್ಲಿ ಒಂದನ್ನು ಟಿಕ್ ಮಾಡುವ



ಅವಕಾಶವಿತ್ತು. ಸರಿ ಉತ್ತರವನ್ನು ಸೂಚಿಸಲು ನನ್ನ ನಾಲ್ಕು ಬೆರಳಲ್ಲಿ ಒಂದನ್ನೆತ್ತಿ ನಾನು ಹಣೆ ಉಜ್ಜಿಕೊಳ್ಳಬೇಕೆಂದೂ ಅದನ್ನು ಗಮನಿಸಿ ಅವನು ಉತ್ತರ ಬರೆದುಕೊಳ್ಳುವುದೆಂದೂ ತೀರ್ಮಾನವಾಯಿತು. ಹೀಗೆ ಪ್ರತಿದಿನ ಅವನಿಗೆ ಇಪ್ಪತ್ತೈದು ಅಂಕಗಳನ್ನು ಗಳಿಸಲು ನೆರವಾದಿ. ಇನ್ನುಳಿದ ಹತ್ತು ಅಂಕಗಳನ್ನು ಹೇಗೋ ನಿಭಾಯಿಸುತ್ತಿದ್ದ. ಇಡೀ ಶಾಲೆಗೆ ನಾವಿಬ್ಬರೇ ಪಾಸಾದದ್ದು. ಧರಣಿ ನನ್ನೊಂದಿಗೆ ನಾಟಕದಲ್ಲಿ ಪಾತ್ರ ವಹಿಸಿದಾಗ ನಾನು ಕೃಷ ಅವನು ಅರ್ಜುನ. ಅವನು ಅದನ್ನೇ ಪಟ್ಟಾಗಿಟ್ಟುಕೊಂಡು "ನೋಡು ನಾಟಕದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಯುದ್ಧ ಸಂದರ್ಭದಲ್ಲಿ ನೆರವಾಗುತ್ತಾನೆ. ನಿಜ ಜೀವನದಲ್ಲಿ ಪರೀಕ್ಷೆಯಲ್ಲಿ ನೀನು ಸಹಾಯ ಮಾಡದಿದ್ದರೆ ಹೇಗೆ?" ಎಂದು ಪರೀಕ್ಷೆಯಲ್ಲಿ ಕಾಪಿ ಹೊಡೆಯುವುದನ್ನು "ಧಾರ್ಮಿಕ" ಹಂತಕ್ಕೇರಿಸಿದ್ದ. ಪಾಸಾದಕೂಡಲೇ ಮೆಡಿಕಲ್ ಓದಿ, ಹೋಗಿ ಅಲ್ಲಿಂದ ಬಂದು ನೀಲಗಿರಿಯಲ್ಲಿ ದೊಡ್ಡ ತೋಟ ಮಾಡಿ ಎರಡು ಬಾರಿ ಮದುವೆಯಾಗಿ ಅವನ ಅವಸ್ಥಾಂತರಗಳು ಅನೇಕ! ಮೊನ್ನೆ ಥಟ್ಟನೆ ಅದೆಲ್ಲೋ ಸಿಕ್ಕಿ "ನೀನು ಅವತ್ತು ನ್ಯೂ ಟೈಪ್ ಪರೀಕ್ಷೇಲಿ ಇಪ್ಪತ್ತೈದು ಮಾರ್ಕ್ಸ್‌ಗೆ ಹೆಲ್ಪ್ ಮಾಡದೆ ಇದ್ದಿದ್ದರೆ ನಾನಿವತ್ತು ಹೀಗಿರ್ತಿರಲಿಲ್ಲ" ಎಂದ. ಇದೆಲ್ಲಾ ಈಗ ನಗು ತರಿಸುತ್ತದೆ. ಬದುಕು ಒಬ್ಬೊಬ್ಬರನ್ನು ಒಂದೊಂದು ದಿಕ್ಕಿಗೆ ಎಳೆದೊಯ್ದರೂ ಗುಂಡಗಿರುವ ಭೂಮಿಯಲ್ಲಿ ನಾವೆಲ್ಲಾ ಮತ್ತೆ ಮತ್ತೆ ಸಿಗುತ್ತೇವೆ; ಸಿಕ್ಕಾಗ ನಮಗೆ ನಾವೇ ನಮ್ಮ ಭೂತಕಾಲದ ಬಗ್ಗೆ ಅಸಹ್ಯಪಟ್ಟುಕೊಳ್ಳುವಂತಿರಬಾರದು.

ಆತ್ಮದೊಡವೆಯೆ, ಒಂದು ವಿಷಯ ಹೇಳಬೇಕು ನಿನಗೆ, ಪರೀಕ್ಷೆ ಬರೆಯಲು ಹೋದಾಗ ನಾಗಮಂಗಲದ ಮುಸಾಫೀರ ಬಂಗಲೆ ಎದುರು ಕೃಷ್ಣಭವನ ಎಂಬ ಹೋಟೆಲಿತ್ತು. ಅದರ ಮಾಲೀಕ ಭಾರಿ ತೂಕದ ಮನುಷ್ಯ. ಗುಜ್ಜಾನೆ ಮರಿಯಂತೆ ಅಡ್ಡಾಡಿಕೊಂಡು ಊಟ ಬಡಿಸುತ್ತಿದ್ದ. ಹತ್ತು ದಿನ ಪರೀಕ್ಷಾ ಅವಧಿಯಲ್ಲಿ ನಾನು ಅವನನ್ನು ಹಚ್ಚಿಕೊಂಡು ಬಿಟ್ಟಿದ್ದೆ. ಅವನಿಗೆ ಓದುವ ಹುಡುಗರನ್ನು ಕಂಡರೆ ಏನೋ ಪ್ರೀತಿ. ಲೋಟ ತೊಳೆಯುವ ಕ್ಲೀನರ್ ಹುಡುಗನಾಗಿದ್ದು ಬೆಳೆದು ಹೋಟೆಲ್ ಮಾಲೀಕನಾದೆನೆಂದೂ, ತಾನು ಓದಲಿಲ್ಲ ಎಂಬ ಕೊರಗು

ಸದಾ ಕಾಡುತ್ತಿರುವುದಾಗಿಯೂ ಹೇಳುತ್ತಿದ್ದ. ನೀನು ಖಂಡಿತಾ ಪಾಸಾಗುತ್ತಿ ಎಂದು ಬೆನ್ನು ಸವರಿದ್ದ.

ನಾನು ಪಾಸಾದ ಸಂತೋಷದ ಸುದ್ದಿಯನ್ನು ಹೊತ್ತು ಕೃಷ್ಣಭವನಕ್ಕೆ ಹೋಗಿದ್ದೆ. ಹಿಂದಿನ ದಿನವಷ್ಟೇ ಆತ್ಮಹತ್ಯೆ ಮಾಡಿಕೊಂಡಿದ್ದ. ಯಾವುದೋ ಪ್ರೇಮ ಪ್ರಕರಣವಂತೆ. ಭಾರವಾದ ಹೃದಯದಿಂದ ಹಿಂತಿರುಗಿದೆ. ಆ ಭಾರೀ ದೇಹದಲ್ಲೊಂದು ಪ್ರೀತಿಸುವ ಹೃದಯ, ಅದನ್ನು ಕದ್ದ ಅವನ ಪ್ರಿಯತಮೆ, ಅದಕ್ಕಾಗಿ ಜೀವ ತೆತ್ತ ಪ್ರಿಯಕರ. ಇದೆಲ್ಲಾ ರಹಸ್ಯದಿಂತೆ ವಿಷಾಧದಂತೆ ನನ್ನನ್ನು ಅಲುಗಿಸಿಬಿಟ್ಟಿತು. ಅವನು ಕಣ್ಮರೆಯಾದ ಕೆಲ ದಿನಗಳಲ್ಲಿ ಕೃಷಭವನವೂ ಕಣ್ಮರೆಯಾಯಿತು. ಪ್ರೀತಿಸುವವರು ನಶ್ವರ ಆದರೆ ಪ್ರೀತಿ ಎಂಬುದು ಶಾಶ್ವತ ಎನಿಸಿತು ನನಗೆ.

*****



**ನಾಗರಿಕತೆ : ಆಶಯ**

# ನಾಗರಿಕತೆ

– ಗೋಪಾಲಕೃಷ್ಣ ಅಡಿಗ

ನಮ್ಮ ನಾಗರೀಕತೆಯ ಕತೆ ಹಿರಿದು, ಬಲು ಹಿರಿದು;
ಒಡಕು ಮಡಕೆಗೆ ತುಂಬುತಿರುವ ಬಣ್ಣದ ನೀರು,
ನೀರು ಕಣ್ಣಿಗೆ ಸೊಗಸು; ಅಲ್ಲಿ ಮಳೆಬಿಲ್ಲುಗಳ
ಜಲ್ಲಿ; ಮಿಂಚಿನ ಬಳ್ಳಿ ಕತ್ತಲೊಡನುಯ್ಯಾಲೆ.
ಯಾಡುತಿದೆ; ತಳದ ಹಾಲಾಹಲದ ಮೇಲಮೃತ
ಬುರುಗು; ಓ, ಇದೊ ನೋಡು ಮಡಕೆ ಬರಿದೋ ಬರಿದು.
ಕರಗಿ ಕಾರ್ಮುಗಿಲು ಧುಮುಕುತ್ತಲಿದೆ ತೊರೆ ಶಿಖರ
ದೇರಿಂದ ಕೆಳನಾಡು ಬಾಯ್ದೆರೆದು ಸುಯ್ಯುವೆಡೆ,
ಬಂಡೆಬಂಡೆಯ ಜಾರುಗುಪ್ಪೆಯಲಿ ಕುಪ್ಪಳಿಸಿ
ದಡದಡಕೆ ನಗುನಲವು ಬೆಳೆಕಳೆಯ ಉಲ್ಲಾಸ
ನೀಡುತಿದೆ, ಬಂತಿದೋ ಬಯಲು, ಆ ಅದೆ ಕಡಲು!
ನಡುವೆ ಕುದಿ ಮರಳು ಬಾಯ್ದೆರೆದು ಬುಸುಗುಟ್ಟಿ ಬರೆ
ಇಳಿಯಿತಹ ಜೀವನಧಾರವೆ ರಸಾತಳಕೆ,
ಸಂಜೆ ತಂಗಾಳಿ ಬಂದಾಡುತಿರೆ ಮೈಯೆಲ್ಲಾ
ಮುಳ್ಳು ಮುಳ್ಳಾಗಿ ಧಳಥಳಿವ ತಂಗೊಳದ ಬಳಿ
ಕಲ ಕಲ ನಿನಾದರಸತಂದ್ರಿಯಲಿ ಮೈಮರೆತು
ಪಶ್ಚಿಮಾಂಗರದರುಣ ರಾಗರಥದಲಿ ಕುಳಿತು
ಗಂಧರ್ವಲೋಕ ಕಿನ್ನರಿಯ ನೂಪುರಪುರದ
ಬೀದಿಯಲಿ ಬೀದಿವರಿದಿರೆ ಕನಸು ಕಸದೊಳೂ
ರಸವ ಹಿಳಿದುಂಬೆನೆಂಬನು ನಮ್ಮ ತರುಣ ಕವಿ;
ನಂಬುವೆವೊ ಅಗೋ ಹಸಿವೆ ದಾರ ಜಗ್ಗುತ್ತಲಿದೆ;

ಇಳಿಯುತಿದೆ ಕಲ್ಪನೆಯ ಮುಗಿಲಿಂದ ನೆಲದ ಕಡೆ
ಗಾಳಿಪಟ, ಮನೆಗೆ ಬಂದೊರಗುವನು ಹುಳು ಹಿಡಿದ
ಜಂತಿಯಡಿ; ಕಮಟು ಚಾಪೆಯ ಮೇಲೆ ಸೊಳ್ಳೆಯಲಿ!

ವೇದಿಕೆಯ ಮೇಲೆ ವೇದವೂ ಕಾಣದತಿಗೂಢ
ತತ್ವಗಳ ಹೊನ್ನೆ ಬಲೆ ಬೀಸುವನು ವಕ್ತಾರ;
ವೇದಿಕೆಯನಿಳಿದು ರೂಪಾಯಿ ಆಣೆ ಕಾಸುಗಳ
ದಿಗ್ವಿಜಯಕೈದುವನು; ಒಳಗೆ ಹುಳು ಹಿಡಿದಂಥ
ಮರದ ಹೊರತೊಗಟೆ ಹಸುರೋ ಹಸುರು, ನೋಟಕ್ಕೆ
ತಂಪು ಬಲುಸೊಂಪು; ನೆಗಡಿಯಾದವನೊಬ್ಬ
ಬಚ್ಚಲಿನ ಬಳಿ ಕೂಡ ಕೂತು ತೂಕಡಿಸುತ್ತ
ಕಂಪುಗಳ ಕನಸಿನೇಣಿಯನೇರಿ ಮೇಲೇರಿ
ನಕ್ಷತ್ರ ಕುಸುಮಗಳ ಬಳಿಯೆ ಮರಿದುಂಬಿಯೋ
ಅರಗಿಳಿಯೋ ಆಗಿ ಆಡಲುಬಹುದು; ಮಳೆಬಿಲ್ಲಿ–
ನಲ್ಲೆ ತೂಗಾಡುತ್ತ ಗುಡುಗುಸಿಡಿಲಿನ ರಭಸ
ಸುಳ್ಳು ಸುಳ್ಳೆ ಎಂದು ಮೈಮರೆತು ಇರಬಹುದು.

ಹುಲಿ ಚಿರತೆ ಪೊದೆಯಲ್ಲಿ; ಚಿಗರೆಕಡವೆಗಳಾಟ
ಬಯಲಲ್ಲಿ; ನೀರು ಕುಡಿಯಲು ಬಂದು ತೊರೆಯ ಬಳಿ
ಕೊಳೆವ ಮಾಂಸದ ರಾಶಿ. ಇನ್ನೆಲ್ಲಿಯೂ ಕಾಣ–
ದಂಥ ಹೊಂಬೆಳಕು ಕುಡಿ ಕುಣಿವ ಹಣತೆಗಳಗೋ
ಮುಂದಿನ ಚರಂಡಿ ಬಳಿ ಆಡುತಿವೆ; ಬಿರುಗಾಳಿ
ಬೀಸಿ ಬರೆ ಬೆಳಕು ಆರಲು ಕಾಲ ಬೇಕೆಷ್ಟು?
ಬಳಿಕ ಬರಿ ಹಣತೆಗಳು, ಬರಿ ಮಣ್ಣ ಭಣಿತಗಳು!
ಆ ಬಳಿಕ ಆರಿಹೋದಂಥ ಬೆಳಕಿನ ಕನಸು



ಆಗಾಗ; ಅದರ ಬಣ್ಣನೆ ಕಾವ್ಯ; ಅದರ
ಚಿಂತನೆ ಯೋಗ; ಅದು ಇದೆ ಇಲ್ಲಿ ಅದರಲ್ಲಿ
ಇದರಲ್ಲಿ ಎಂಬಾತ್ಮವಂಚನೆಯೆ ಭೋಗ.

ಭೋರ್ಗರೆಯುತಿರೆ ಕಡಲು ಮರೆತದನು ಮರಳಲ್ಲಿ
ಕಟ್ಟಿ ಮನೆಕೋಟೆಗಳ, ನಾಲ್ಕು ನಿಟ್ಟಿಗೂ ಕೂಡ
ಇಟ್ಟು ಕಾವಲ ನನ್ನ ಮನೆ ಇಲ್ಲಿ ಗೆರೆಯಿಚೆ
ಅದರಾಚೆ ನಿನ್ನ ಮನೆ ಎನ್ನುವುದು; ಆ ಆಚೆ
ತನ್ನದಾದರೆ ಮೇಲೋ ಏನೋ ಎಂಬಳಿಯಾಸೆ
ಕುದಿಸೆ ನೆತ್ತರ ಬಿಲ್ಲು ಬಾಣವನೋ ಗುಂಡನೋ
ಬಾಂಬನೋ ಎಚ್ಚು ಹುಚ್ಚಾಡುವುದು; ಈ ಆಟ
ನೋಟಕ್ಕೆ ಸೊಗಸುವುದು; ನೆತ್ತರಿನ ಹೊಳೆಯಲ್ಲಿ
ಕೊಚ್ಚಿ ಹೋದರೆ ತಾನೆ ಏನು ಮನೆ ಮಠ ಕೋಟೇ?
ಕಡಲಲ್ಲಿ ಮೊರೆಯುವುದು, ಆ ದಿಗಂತದ ಹುಲುಸು
ಹೊಲದಿ ಬಿರುಗಾಳಿ ಬೀಜಗಳು ಮೊಳೆಮೊಳೆಯುವುವು;
ಈ ಇಲ್ಲಿ ಸುರಿದ ನೆತ್ತರ ಲೀಲೆ ಕಡಲ ಕೈ
ಒರಸುವುದು' ಮತ್ತೆ ಮರಳಲಿ ಮನೆಗಳೇಳುವುವು,
ಬೀಳುವುದು; ನಲವೊಲವು ನಗು ಸರಸ ಪರಿಹಾಸ
ಕಣ್ಣು ಮುಚ್ಚಾಲೆಯಾಡುವುದು; ಮತ್ತೆ ಮೊರೆದೇಳುವುದು
ಹೆಮ್ಮಾರಿಗೌತಣವನ್ನಿಕ್ಕಿ ನೆಕ್ಕುವ ಚಪಲ.

ದಿಟವಯ್ಯ, ನಿಜ ಮಾತು; ನಮ್ಮ ನಾಗರಿಕತೆಯ
ಅಕ್ಷರಾಭ್ಯಾಸ ಉಲ್ಲಾಸಕರ: ಬರೆದು ಮೊದಲ ಆಕಾರ
ಅದನೆ ಅಳಿಸುವುದು ಮತ್ತದನೆ ಬರೆವುದು ಹೀಗೆ
ನಮ್ಮ ಗತಿ ಪ್ರಗತಿ ; ಮುಂದಕ್ಕೊಂದಡಿಯಿಟ್ಟು

ಹಿಂದಕ್ಕೊಂಡದಿಯಿಡುವ ಮನದ ಸಮತೂಕವಿದು
ಸುತ್ತು ಮುತ್ತಲ ಮುಳ್ಳು ನೆಲದಿ ಈ ಎಳಗರಿಕೆ
ಎತ್ತಿ ತಲೆಯನು ಗಾಳಿಗೊಲೆವ ಮೊದಲೇ ತುತ್ತು
ಒತ್ತೊತ್ತಿ ಬರುವ ಕತ್ತೆಗೆ; ಕೋಡುಗಲ್ಲೆರಡು–
ಒಂದನಡರುತ್ತಲಿನ್ನೊಂದನೇ ಕೋರುವುದು;
ನಡುವೆ ನೀಡಿದ ಮಹಾಕಂದರದ ದೆಯ್ಯ ಮೈ
ನೋಡುವುದು; ನೋಡಿ ಹಾಡುವುದು; ಅದನೆಂತಾರೆ
ಕೂಡಿಸುವೆನೆಂಬ ಚಿಂತ್ಯದ ಚಿಂತೆ ಚಿತೆಯಲಿ
ಉರಿದು ಹೋಗುವ ಗಂಧಹೀನ ಕೊರಡಿ ಬರಡು
ಬಾಳು, ಉಂಟೆ ಹೇಳದಿ ನಮ್ಮ ನಾಗರಿಕತೆಗು ಮಿಗಿಲು?

*****



# ಸಂಪರ್ಕ

**– ಗಂಗಾಧರ ಚಿತ್ತಾಲ**

ಕಳೆದವಾರ ಕುಣಿಯುತ್ತಲೇ ಬಂದಳು ನಮ್ಮ ಸರಿತೆ
ಸಾಲೆಯಲ್ಲಿ ಹೇಳಿದರಂತೆ
ಒಂದಷ್ಟು ಗೋಧಿ, ಒಂದಿಷ್ಟು ಜೋಳ ಭತ್ತ
ಹೀಗೆಯೇ ಮತ್ತೇನೇನೊ
ಮನೆಯಲ್ಲೇ ನೆಟ್ಟು ಸಸಿ ಬೆಳೆಸಿ ತರಬೇಕು

ಸರಿ ಶುರುವಾಯ್ತು ಮಕ್ಕಳೋಡಾಟ, ಲಗುಬಗೆ, ಗಲಭೆ
ನಾವಿರುವ ಐದನೇ ಮಜಲಿನೆತ್ತರದಲ್ಲೇ ಭರದ ಬಿತ್ತನೆ ಕೆಲಸ
ಮೋಜೆನಿಸಿ ನೋಡುತ್ತಾ ಕುಳಿತೆ
ಹೊಲಗದ್ದೆ ಕಾಣದೀ ಮರಿ – ಕೃಷೀವಲರೆಲ್ಲ
ಖಾಲಿ ಟಿನ್ನುಗಳಲ್ಲಿ ಬೀದಿ ಧೂಳನು ತಂದು ಪಾತಿ ಕಟ್ಟಿ
ಸುಕ್ಕಿದೊಣಕಲು ಬೀಜವಿಷ್ಟು ಹೂಳಿ
ಬಾಟ್ಲಿ ನೀರಿನಲೆ ಪರ್ಜನ್ಯ ಸುರಿಸಿ,
ಕೃತಕೃತ್ಯರಂತೆ ಸುಗ್ಗಿ ಕನಸ ಕಾಣುತ ನಿಂತ ಮುಗ್ಧರೀವಿ
ಐದಾರು ದಿನ, ಬೆಳಗ್ಗೆ ಎದ್ದು ಕೂತರು
ಯಾವ ಸುದ್ದಿ ಸುಳಿವೂ ಇಲ್ಲ ಮೊದ್ದು ಮಣ್ಣಲಿ.

ಮೊನ್ನೆ ಮಾತ್ರ.
ಒಂದೆರಡು ಕಣ ಅಲ್ಲಿ ಇಲ್ಲಿ ಅಲುಗಿದ ಕುರುಹು
ನಿನ್ನೆಯೋ
ಒಳಗಿನೊಳಗೇ ಏನೊ
ಮೈ ಮುರಿದು ನಿದ್ದೆ ತಿಳಿದೇಳ್ವ ಥರ

ಇಂದೋ–
ಕಣ್ಣ ಮುಂದೇ ತೆರೆದ ಅದ್ಭುತೋದ್ಭವ ಪ್ರಹರ
ಚಿಣ್ಣರೊಲು ದೂಡಿ ಕೊಂಬೂದಿ ಹಣಿಕಿಕ್ಕಿ
ಇಣಕಿವೆ ಸುತ್ತ ನೂರಾರು ಅಂಕುರ!
ನೀರ್ಮಣ್ಣ ಆರೈಕೆಗೆದ್ದ ಆಗಂತುಕರ
ಈ ಸೋಜಿಗದ ಸುತ್ತ ನೆರೆದ ಮಕ್ಕಳ ಮಧ್ಯೆ
ಸೇರಿ ನಾನೂ ಕುಳಿತೆ, ಮೈ ಮರೆತೆ ಮಗುವಾಗಿ.
ನಿಯಾಳಿಸುತ ಕುಳಿತೆ
ಮುದ್ದಾದ ಮೊಳಕೆಗಳ ಹಸುಳೆ ಮಿದು ನಯ ನುಣುಪ
ತೊರೆಯ ಅಕ್ಕರೆಯೊರತೆ
ಹತ್ತಿರಕೆ ಬಾಗಿದೆ ತಟ್ಟಿ ಬೆರಳಾಡಿಸಿದೆ. ಖುಷಿಪಟ್ಟೆ
ಕುತೂಹಲದಿಂದ
ಬದಿಯ ಮಣ್ಣನಿಷ್ಟು ಸರಿಸಿ ನೋಡಿದೆ–
ಹಿಗ್ಗಿ ದುಂಡಗೆ ಗಬ್ಬವಾಗಿ ಬಿರಿದಿವೆ ಬೀಜ
ಕೆಳಕ್ಕೆ ಬಾಯೂರಿದಲ್ಲಿ ಇಳಿಸಿವೆ ಬೇರು– ಸೂಜಿಮೊನೆ ಐದಾರು–
ಒಡಲು ಬಿರಿದಲ್ಲಿ ಮೇಲಕ್ಕೆ ಕಳಿಸಿವೆ ದೇಟು ಸಸಿಯ ಮೂಲಸ್ತಂಭ
ಖಾಲಿ ಟಿನ್ನುಗಳ ಬೀದಿ ಧೂಳಲ್ಲು ಮೈತಳೆದ ಸೃಜನದೀ ಕೌತುಕವ
ನಿಯಾಳಿಸುತ, ಕುಳಿತೆ, ಸೋಕಿ–ಸೋಕಿ–ಬೆರಳಾಡಿಸಿದೆ.
ಉರದಲುಮ್ಮಜಳ, ಮತ್ತೆ ಮತ್ತೆ ಜೀಕಳಿ ಪುಳಕ
ಇಷ್ಟು ಹತ್ತಿರದ ಜೀವ ಸೃಷ್ಟಿಸಂಪರ್ಕಕ್ಕೆ

*****



# ಧರೆ ಹತ್ತಿ ಉರಿದಡೆ

– ಲಿಂಗದೇವರ ಹಳೆಮನೆ

ಗುಜರಾತಿನ ಭೂಕಂಪವನ್ನು ಕಂಡಾಗ ನೆನಪಿಗೆ ಬಂದದ್ದು ಬಸವಣ್ಣನವರ ಈ ವಚನ

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕಿಲುವಡೆ
ಇನ್ನಾರಿಗೆ ದೂರುವೆ,
ಕೂಡಲಸಂಗಮದೇವಾ!

ನಿರೀಕ್ಷೆಗೆ ಮೀರಿದ್ದು ನಡೆಯಲಾರಂಭಿಸಿದೆ. ಧರೆ ಹತ್ತಿ ಉರಿಯಲಾರಂಭಿಸಿದೆ ಏರಿ ನಿರುಣ್ಣಲಾರಂಭಿಸಿದೆ. ಬೇಲಿ ಹೊಲ ಮೇಯ್ಯುತ್ತಿದೆ, ನಾರಿ ತನ್ನಮನೆಯಲ್ಲಿ ಕದಿಯುತ್ತಿದ್ದಾಳೆ. ತಾಯ ಮೊಲೆ ಹಾಲು ವಿಷವಾಗುತ್ತಿದೆ. ಈ ಎಲ್ಲಾ ನೈಸರ್ಗಿಕ ವೈಪರೀತ್ಯಗಳಿಗೂ ಇನ್ನೊಬ್ಬರನ್ನು ದೂರುವ ಪ್ರಯತ್ನವನ್ನು ಇಂದಿನ ರಾಜಕಾರಣಿಗಳು ಮಾಡುತ್ತಿದ್ದರೋ ಏನೋ? ಆದರೆ ಆ ದೂರುಗಳನ್ನು ನಂಬುವರಾರು? ನಿಸರ್ಗವೇ ಮುನಿದಾಗ ಮನುಷ್ಯ ಕಳೆಯುವು ನಿಲುವುಗಳಿಗೆ ಸಿಗುವ ಅರ್ಥವಾದರೂ ಏನು?

ಗುಜರಾತಿನ ಭೂಕಂಪ ನಮ್ಮೆಲ್ಲರನ್ನೂ ನಡುಗಿಸಿದೆ. ಹಿಂದೆಂದೂ ಕಾಣದಂತಹ ಮಾರಣ ಹೋಮ ಅಲ್ಲಿ ನಡೆದಿದೆ. ಜನ ವಸತಿಗಳು ತಮ್ಮ ಕುರುಹನ್ನು ಕಳೆದುಕೊಂಡು ಮಣ್ಣಿನ ಗುಡ್ಡೆಗಳಾಗಿ ಬಿದ್ದಿವೆ. ನಿಸರ್ಗದ ತಾಂಡವ ನೃತ್ಯವನ್ನು ಊಹಿಸಲಾಗದ ಸರ್ಕಾರ ದಿನಕ್ಕೊಂದು ಹೇಳಿಕೆ ಕೊಡುತ್ತಾ ಸತ್ತವರ ಸಂಖ್ಯೆಯ ಅಂಕಿ ಸಂಖ್ಯೆಗಳನ್ನು ಏರಿಸುತ್ತಾ ಹೋಗುತ್ತಿದೆ. ಕೆಲವುಕ್ಷಣಗಳ ಕಂಪನದಲ್ಲಿ ಭೂಮಿ ಲಕ್ಷಾಂತರ ಮಂದಿಯನ್ನು ತನ್ನ ಗರ್ಭಕ್ಕೆ ಸೆಳೆದುಕೊಂಡಿದೆ. ಅದರಲ್ಲಿ

ಎಂತೆಂಥ ಮಂದಿ ಸೇರಿ ಹೋಗಿದ್ದಾರೋ ಏನೋ? ಸ್ಥಳೀಯವಾಗಿ ದಂತಕಥೆಯಾದವರು, ಮುಂದೆ ಪ್ರತಿಭಾನ್ವಿತರಾಗಿ ಹೆಸರು ಮಾಡಬೇಕಾಗಿದ್ದವರು. ಎಳೆಯ ಮಕ್ಕಳು, ಎಲ್ಲರೂ ಒಟ್ಟಿಗೇ ಮಣ್ಣಾಗಿದ್ದಾರೆ. ಮನುಷ್ಯ ನಾಗರೀಕತೆಯ ಹೆಸರಿನಲ್ಲಿ ಕಟ್ಟಿಕೊಂಡ ಬಹು ಅಂತಸ್ತಿನ ಕಟ್ಟಡಗಳು ತಳಾದಿ ನಡುಗಿದ ಕೂಡಲೇ ಪಟಪಟನೇ ಉರುಳಿ ದಿಬ್ಬದ ಗುಡ್ಡೆಗಳಾಗಿವೆ. ಅವುಗಳ ಮಧ್ಯೆ ಸಿಕ್ಕಿದ ಜನ ಉಸಿರೆಳೆದುಕೊಳ್ಳಲೂ ಅವಕಾಶವಿಲ್ಲದೆ ಅಸುನೀಗಿದ್ದಾರೆ. ಮಧ್ಯೆ, ಮಧ್ಯೆ ಇರಬಹುದಾದ ಕುಟುಕು ಜೀವಗಳನ್ನು ಹುಡುಕಿ ತೆಗೆಯುವ ಕೆಲಸವನ್ನು ಸರಕಾರ ತಡವಾಗಿ ಆರಂಭಿಸಿದೆ. ಈ ಅವಶೇಷಗಳ ಮಧ್ಯೆ ಹಲವಾರು ಗಂಟೆಗಳ ನಂತರವೂ ಬದುಕುಳಿದ ಎಳೆಯ ಮಗುವೊಂದನ್ನು ಹೊರತೆಗೆದುದ್ದಾರಂತೆ. ಮಣ್ಣಿನ ಬಿರುಕುಗಳ ಮಧ್ಯೆಯೂ ಕಾಣಿಸಿಕೊಳ್ಳಬಹುದಾದ ಗರಿಕೆಯ ಚಿಗುರು ಮನುಷ್ಯನ ಅದಮ್ಯ ಜೀವ ಬಯಕೆಯ ಪ್ರತೀಕ ಈ ಮಗು.

ಕೆಲವು ವರ್ಷಗಳ ಹಿಂದೆ ಮಹಾರಾಷ್ಟ್ರದ ಲಾತೂರಿನಲ್ಲಿ ಭಾರೀ ಭೂಕಂಪ ಆಗಿತ್ತು. ಅದನ್ನು ಕಂಡೇ ಜನ ನಡುಗಿ ಹೋಗಿದ್ದರು. ಗುಜರಾತಿನ ಭೂಕಂಪ ಅದನ್ನೂ ಮೀರಿದ್ದು ಕಳೆದ ವರ್ಷ ತಾನೇ ಒರಿಸ್ಸಾದಲ್ಲಿ ಬಿರುಗಾಳಿ ಮತ್ತು ಪ್ರವಾಹದ ಹಾವಳಿಯಿಂದ ಲಕ್ಷಾಂತರ ಮಂದಿ ಅಸುನೀಗಿದ್ದರು. ಪಟ್ಟಣಗಳು, ಹಳ್ಳಿಗಳು ನಾಶವಾಗಿದ್ದವು. ಆಂಧ್ರದಲ್ಲಿ ವರ್ಷ ಬಿಟ್ಟು ವರ್ಷ ಪ್ರವಾಹದ ಹಾವಳಿ ನಡೆಯುತ್ತಲೇ ಇದೆ. ದಿನದಿಂದ ದಿನಕ್ಕೆ ನೈಸರ್ಗಿಕ ವೈಪರೀತ್ಯಗಳು ಹೆಚ್ಚುತ್ತಲೇ ಇವೆ. ನಿಸರ್ಗ ತನ್ನದೇ ಆದ ನಿಯಮವನ್ನು ಕಾಪಾಡಿಕೊಳ್ಳಲೋ ಎನ್ನುವಂತೆ, ಮೈಮೇಲಿನ ಭಾರವನ್ನು ಕೊಡವಿಕೊಳ್ಳುತ್ತಿದೆ. ಒಮ್ಮೊಮ್ಮೆ ಅದು ಬಾಯ್ತೆರೆದಾಗಲೂ ಮನುಷ್ಯರು ಮಿಡತೆಯಂತೆ ಅದರ ಬಾಯೊಳಗೆ ಬೀಳುತ್ತಿದ್ದು ಬಯಲು ಬಾಯ್ದೆರೆದರೆ ಅವನಿಗೆ ಬದುಕುಳಿಯುವ ಬಟ್ಟೆ ಇನ್ನೆಲ್ಲಿದೆ?

ಒಂದು ಕಾಲಕ್ಕೆ ಭಾರತ ನೈಸರ್ಗಿಕ ಪ್ರಕೋಪದ ದೃಷ್ಟಿಯಿಂದ ಅತ್ಯಂತ ಸುರಕ್ಷಿತ ಸ್ಥಳ ಎಂದು ನಂಬಲಾಗಿತ್ತು. ಲಾವಾರಸದ ಬೆಂಕಿಯುಗುಳುವ ಅಗ್ನಿಪರ್ವತಗಳು ನಮ್ಮಲ್ಲಿಲ್ಲ. ಪಾಂಪೆಯಂತಹ ಮಹಾನ್ ನಗರವನ್ನೇ ರಾತ್ರೋರಾತ್ರಿ ಬಲಿ ತೆಗೆದುಕೊಂಡ ಈ ಅಗ್ನಿ ಪರ್ವತಗಳಿಂದ ನಾವು ಸುರಕ್ಷಿತ ಎಂದು ತಿಳಿದುಕೊಂಡಿದ್ದೆವು. ಭೂಕಂಪಗಳು ಕೂಡ ತೀವ್ರತರವಾಗಿ ಇಲ್ಲಿ ಅಪಾಯ ಮಾಡಲಾರವು. ನಾವು ಭೂಮಿಯ ಸಮಚಿತ್ತದ ಭಾಗದಲ್ಲಿ ಇದ್ದೇವೆ



ಎಂಬ ನಂಬಿಕೆಯಿತ್ತು. ನಮ್ಮ ಭಯ ಇದ್ದದ್ದು ಪ್ರವಾಹಗಳ ಬಗ್ಗೆ. ನದಿಗಳ ಪಾತ್ರಗಳ ಬಗ್ಗೆ. ನದಿಗಳ ನೀರಿನ ಸೂಕ್ತ ನಿರ್ವಹಣೆಯಿಂದಾಗಿ ಅವುಗಳ ಅಪಾಯವನ್ನೂ ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಿಕೊಂಡಿದ್ದೇವೆಂಬ ನಂಬಿಕೆಯಲ್ಲಿ ನಾವಿದ್ದೇವೆ. ಆದರೆ ಮನುಷ್ಯ ಹೊಸ ಹೊಸ ನಿಯಮಗಳನ್ನು ರೂಪಿಸಿಕೊಂಡಂತೆಲ್ಲಾ ನಿಸರ್ಗ ತನ್ನ ನಿಮಗಳನ್ನೂ ಕೂಡ ಪುನರ್ ಪರಿಶೀಲಿಸುವಂತೆ ತೋರುತ್ತದೆ. ನಿಸರ್ಗದ ಮೇಲೆ ಮನುಷ್ಯನ ಅವ್ಯಾಹತ ದಬ್ಬಾಳಿಕೆ, ಆಕ್ರಮಣ ನಡೆಯುತ್ತಲೇ ಇದೆ. ಮನುಷ್ಯ ನಿಸರ್ಗದ ಮೇಲೆ ಕ್ರೂರಿಯಾದಷ್ಟೂ, ನಿಸರ್ಗ ಅವನ ಮೇಲೆ ಇಮ್ಮಡಿ ಕ್ರೌರ್ಯವನ್ನು ತೋರುತ್ತಿದೆ.

ಲಾತೂರಿನಲ್ಲಿ ಭೂಕಂಪವಾದಾಗ ಭೂಕಂಪಕ್ಕೆ ಕಾರಣಗಳನ್ನು ಹುಡುಕುವ ಗಂಭೀರ ಪ್ರಯತ್ನಗಳನ್ನು ನಮ್ಮ ವಿಜ್ಞಾನಿಗಳು ಮಾಡತೊಡಗಿದ್ದರು. ಪರಿಸರದ ನಾಶ, ಅಡ್ಡಾದಿಡ್ಡಿ ಕೊಳವೆಬಾವಿಗಳ ಕೊರೆತ, ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣ, ಹೆಚ್ಚುತ್ತಿರುವ ಉಷ್ಣ, ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಎಲ್ಲಾ ಕಾರಣ ಇರಬಹುದೇ ಎಂಬ ಲೆಕ್ಕಾಚಾರಗಳು ನಡೆದು ಹೋದವು. ಆದರೆ ಸ್ಪಷ್ಟವಾದ ಉತ್ತರ ಮಾತ್ರ ಸಿಗಲೇ ಇಲ್ಲ. ಗುಜರಾತಿನಲ್ಲಿ ಭೂಕಂಪ ಸಂಭವಿಸುತ್ತದೆಂಬ ಕಿಂಚಿತ್ತೂ ಸೂಚನೆಯನ್ನು ಸಂಬಂಧಪಟ್ಟ ಇಲಾಖೆ ಒದಗಿಸಲಾರದೇ ಹೋಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಗಾಧವಾದ ಪ್ರಗತಿ ಸಾಧಿಸಿದ್ದೇವೆಂದು ಹೇಳಿಕೊಳ್ಳುವ ಮನುಷ್ಯ ನಿಸರ್ಗದ ಮುಂದೆ ಅಖಾಡದಲ್ಲಿ ಸೋತು ಚಿತ್ತಾಗಿದ್ದಾನೆ. ನಿಸರ್ಗ ಗಹಗಹಿಸಿ ನಗುತ್ತಿದೆ. ಆ ನಗುವಿನ ಅಬ್ಬರದ ನಡುವೆ ಮನುಷ್ಯರ ಚೀತ್ಕಾರ, ಆಕ್ರಂದನ ಕೇಳಿ ಬರುತ್ತಿದೆ.

ಅಪಾಯದಲ್ಲಿರುವ ಮನುಷ್ಯರ ನೆರವಿಗೆ ಬರುವ ಅಪರೂಪದ ಸಂಸ್ಕೃತಿಯನ್ನು ಮನುಷ್ಯ ತನ್ನ ನಾಗರೀಕತೆಯ ಜೊತೆ ಜೊತೆಗೇ ಬೆಳೆಸಿಕೊಂಡು ಬಂದಿದ್ದಾನೆ. ಅದರಲ್ಲೂ ನಿಸರ್ಗದ ವೈಪರೀತ್ಯದಿಂದಾಗಿ ನಡೆದ ಮಾರಣ ಹೋಮಗಳಲ್ಲಿ ಸತ್ತವರ ಮತ್ತು ಬದುಕುಳಿದವರ ನೆರವಿಗೆ ಧಾವಿಸುವ ಸಹಾಯ ಹಸ್ತಗಳು ಹಲವಾರು. ದೇಶದೆ'ಲ್ಲೆಗಳ ಮೀರಿ, ಜಾತಿ, ಮತಗಳ ಎಲ್ಲೆ ಮೀರಿ, ದ್ವೇಷಗಳ ಎಲ್ಲೆ ಮೀರಿ ಈ ಸಹಾಯ ಹರಿದು ಬರುತ್ತಿದೆ. ಹಿಂದೆ ಇದೇ ರೀತಿಯ ಸಹಾಯ ಒದಗಿ ಬಂದಿತ್ತು. ಈಗಲೂ ಹಾಗೆಯೇ ಸಹಾಯ ನೀಡಲು ಜನ ಮುಂದಾಗಿದ್ದಾರೆ. ಪಾಕಿಸ್ತಾನದ ಜನತೆ ಬಟ್ಟೆ ಬರೆ, ಕಂಬಳಿ, ಹಣ ಸಂಗ್ರಹಿಸಿ

ಕೊಡಲು ಮುಂದೆ ಬಂದಿದ್ದಾರೆ. ಕಾಶ್ಮೀರಿ ಉಗ್ರರು ತಮ್ಮ ದೇಹದ ರಕ್ತ ಸಂಗ್ರಹಿಸಿ ಕಳಿಸಲು ತೊಡಗಿದ್ದಾರೆ. ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಗೊಳಿಸುವುದಕ್ಕೆ ರಕ್ತದ ಕೋಡಿಯನ್ನೇ ಹರಿಸುತ್ತಿರುವ ಜೀವರಸವಾದ ಅದೇ ರಕ್ತವನ್ನು ತಮ್ಮ ತಮ್ಮ ದೇಹದಿಂದ ತೆಗೆದು ಕಳಿಸತೊಡಗಿದ್ದಾರೆ. ಇದು ಮಾನವೀಯತೆ. ಹೊರದೇಶಗಳಿಂದ ಹಣದ ರೂಪದಲ್ಲಿ, ವಸ್ತುವಿನ ರೂಪದಲ್ಲಿ ಸಹಾಯ ಬರುತ್ತಿದೆ. ಭಾರತದ ಒಳಗಂತೂ ಜನ ಇಂಥ ತುರ್ತು ಕಾಲದಲ್ಲಿ ಸಹಾಯ ಮಾಡಲು ಸದಾ ಸಿದ್ಧರಾಗೇ ಇದ್ದಾರೆ. ಆದರೆ ಸಮಸ್ಯೆ ಇರುವುದು ಈ ಸಹಾಯ ನಿಧಿಯನ್ನು ಸಂಬಂಧಪಟ್ಟವರಿಗೆ ತುರ್ತು ವಿಲೇವಾರಿ ಮಾಡುವುದರಲ್ಲಿ ಭಾರತೀಯ ಅಧಿಕಾರಿಶಾಹಿ ಜಗತ್ತಿನಲ್ಲೇ ಅತ್ಯಂತ ಭಯಂಕರವಾದದ್ದು. ಅಧಿಕಾರಿಯಾದವನು ಬಹಳಷ್ಟು ಸಾರಿ ಮಾನವೀಯತೆಯನ್ನು ಮರೆತಿರುತ್ತಾರೆ. ಮಾನವೀಯತೆಯ ಮೇಲೆ ತನ್ನ ಅಧಿಕಾರದ ದರ್ಪವನ್ನು ತೋರುತ್ತಿರುತ್ತಾನೆ ಅಲ್ಲದೆ ಅಂಥವರಲ್ಲಿ ಸ್ವಾರ್ಥವೂ ತುಂಬಿ ತುಳುಕುತ್ತಿರುತ್ತದೆ. ಅವರ ಜೊತೆ ರಾಜಕಾರಣಿ ಸೇರಿದರಂತೂ ಅದೊಂದು ಆಧುನಿಕ ಡಕಾಯಿತರ ಗುಂಪಾಗಿ ಮಾರ್ಪಡುತ್ತದೆ. ಲಾತೂರಿನ, ಒರಿಸ್ಸಾದ ಸಂದರ್ಭದಲ್ಲಿ ಹರಿದು ಬಂದ ಸಹಾಯ ಧನ ಹಂಚಿಕೆಯಾದದ್ದರ ಬಗ್ಗೆ ಅನೇಕ ದೂರುಗಳಿವೆ. ಸಂಬಂಧಪಟ್ಟ ಸಂತ್ರಸ್ಥರಿಗೆ ಅವು ಸಿಗಲೇ ಇಲ್ಲ ಎಂಬ ವ್ಯಾಪಕ ಆರೋಪಗಳಿವೆ. ಭೂಕಂಪ ಆಗಿ ಅವಶೇಷಗಳ ಮಧ್ಯೆ ನರಳುತ್ತಾ ಬಿದ್ದಿದ್ದ ಜನರ ಮಧ್ಯದಿಂದ ಹಣ ದೋಚಲು ಕಳ್ಳಕಾಕರ ಗುಂಪು ತೊಡಗಿತ್ತು ಎಂಬ ವರದಿಯಾಗಿದೆ. ಆ ಕಳ್ಳಕಾಕರಿಗೂ ಈ ಕಳ್ಳರಿಗೂ ಏನೂ ವ್ಯತ್ಯಾಸವೇ ಇಲ್ಲ ಎಂಬಂತಾಗಿದೆ. ಒಂದು ಕಡೆ ಮಾನವೀಯತೆಯ ಮಹಾಪೂರ ಇನ್ನೊಂದು ಕಡೆ ಸ್ವಾರ್ಥದ ಆಗರ. ಇವುಗಳ ಮಧ್ಯೆ ಸಂತ್ರಸ್ತರು ಸಿಕ್ಕಿ ನಲುಗುವಂತಾಗದಿರಲಿ.

ಭಾರತೀಯರ ಮನಸ್ಸೇ ಬಹಳ ವಿಚಿತ್ರವಾದ್ದು. ಆಧುನಿಕ ತಂತ್ರಜ್ಞಾನದ ಕೂಗು ಮೆಟ್ಟಲಿನ ಮೇಲೆ ನಿಂತಾಗಲು ತಮ್ಮ ಪರಂಪರಾಗತ ನಂಬಿಕೆಗಳನ್ನು ಬಿಟ್ಟುಕೊಡುವುದಿಲ್ಲ. ಗುಜರಾತಿನಲ್ಲಿ ಭೂಕಂಪವಾದಾಗ ಉತ್ತರ ಪ್ರದೇಶದ ತ್ರಿವೇಣಿ ಸಂಗಮದಲ್ಲಿ ಕುಂಭಮೇಳಕ್ಕೆಂದು ಲಕ್ಷಾಂತರ ಮಂದಿ ನೆರೆದಿದ್ದರು. ಅದರಲ್ಲಿ ಸಾಧುವೊಬ್ಬ ಹೇಳಿದನಂತೆ. ಭೂಕಂಪ ಇಲ್ಲೇ ಜರುಗುವುದಿತ್ತು. ನಮ್ಮ ತಪಃ ಶಕ್ತಿಯಿಂದ ಅದು ಬೇರೆಡೆ ಜರುಗುವಂತೆ ಮಾಡಿ ಬಿಟ್ಟು ಎಂದು. ಇಂಥ ಮೂರ್ಖ ಸಾಧು ಸಂತರು ಇರುವವರೆಗೆ ಈ ದೇಶದಲ್ಲಿ ಅಭಿವೃದ್ಧಿಯ



ಮಾತಾಡುವುದು ಕಷ್ಟ. ಅವರಿಗೇನಾದರೂ ತಪಃ ಶಕ್ತಿಯ ಬಲ ಇದ್ದಿದ್ದರೆ ಭೂಕಂಪವೇ ಆಗದಂತೆ ತಡೆಯಬೇಕಿತ್ತು. ತನ್ನನ್ನು ಕಾಪಾಡಿಕೊಂಡು ಬೇರೆಯವರನ್ನು ನಾಶ ಮಾಡುವ ಈ ಸಾಧು ಸಂತರ ನೀತಿಯೇ ಬಹುಶಃ ಭಾರತೀಯ ಅಧಿಕಾರ ವರ್ಗಕ್ಕೂ ವರ್ಗಾವಣೆಯಾಗಿರಬೇಕು. ಈ ರೀತಿಯ ಹೇಳಿಕೆಗಳು ಭಾರತೀಯ ನಂಬಿಕೆಗಳಿಗೆ ಹಾಳಾಗಿ ಹೋಗಲಿ ಮಾನವೀಯ ನಂಬಿಕೆಗಳಿಗೇ ಮಾರಕವಾದಂಥವು.

ಈ ಬಾರಿಯ ಭೂಕಂಪ ಗುಜರಾತಿನಲ್ಲಿ ಭಾರೀ ಪ್ರಮಾಣದಲ್ಲಾಯಿತು ನಿಜ. ಆದೇ ಸಮಯದಲ್ಲಿ ಸಣ್ಣ ಪ್ರಮಾಣದಲ್ಲಿ ದೇಶದ ಬೇರೆ ಕಡೆಯೂ ಕಾಣಿಸಿಕೊಂಡಿದೆ. ನಮ್ಮ ಕರ್ನಾಟಕದಲ್ಲಿ ಸಣ್ಣ ಪ್ರಮಾಣದಲ್ಲಿ ಭೂಮಿ ಕಂಪಿಸಿದೊಡನೆ ಜನ ಭಾರೀ ಪ್ರಮಾಣದಲ್ಲಿ ಕಂಪಿಸತೊಡಗಿದರು. ಪ್ರತಿಯೊಂದು ಕಂಪನದ ಹಿಂದೆ ಒಂದೊಂದು ಕತೆಗಳು ಹುಟ್ಟುಕೊಳ್ಳುತ್ತವೆ. ಇಲ್ಲಿಯೂ ಇಂದು ಕಥೆ ಹುಟ್ಟಿಕೊಂಡಿತು. ತಿರುಪತಿಯ ಅಲಮೇಲು ಮಂಗಮ್ಮನ ತಾಳಿಸರ ಕತ್ತಿನಿಂದ ಬಿದ್ದು ಹೋಗಿದೆ ಅದಕ್ಕೆ ಭೂಕಂಪವಾಯಿತು ಎಂಬುದೇ ಆ ಕಥಾನಕ. ಇದ್ದಕ್ಕಿದ್ದಂತೆ ಈ ಸುದ್ದಿ ಅಕ್ಕಪಕ್ಕದ ರಾಜ್ಯಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿ ಗರತಿಯರೆಲ್ಲಾ ಒಂದೊಂದು ಹರಿಶಿಣದ ತುಂಡನ್ನು ದಾರಕ್ಕೆ ಕಟ್ಟಿಕೊಂಡು ತಮ್ಮ ತಮ್ಮ ಕೊರಳಿಗೆ ಬಿಗಿದುಕೊಂಡರಂತೆ. ಈ ಮೌಢ್ಯಕ್ಕೆ ಏನು ಹೇಳುವುದು? ಕಡೆಗೆ ಅಲಮೇಲು ಮಂಗಮ್ಮನ ಅರ್ಚಕರೇ ಅಂಥ ಘಟನೆ ಸಂಭವಿಸಿಲ್ಲ ಎಂದು ಅಧಿಕೃತ ಹೇಳಿಕೆ ನೀಡಿ ನಿಜವಾದ ಭೂಕಂಪವನ್ನು ಸಮರ್ಥಿಸ ಬೇಕಾಯಿತು.

ಈ ಸರ್ಕಾರಗಳು, ಮನುಷ್ಯರು ಎಚ್ಚೆತ್ತುಕೊಳ್ಳಬೇಕಾಗಿದೆ. ಜಾಗತೀಕರಣದ ಹೆಸರಿನಲ್ಲಿ ಒಬ್ಬರು ಇನ್ನೊಬ್ಬರನ್ನು ಆಕ್ರಮಿಸಿಕೊಳ್ಳುವ ಕಾರ್ಯದಲ್ಲಿ ಇಂದು ಇಡೀ ಜಗತ್ತೇ ಕಾರ್ಯೋನ್ಮುಖವಾಗಿದೆ. ಆದರೆ ಇನ್ನೊಂದು ಕಡೆಯಿಂದ ಪ್ರಕೃತಿಯೇ ಮನುಷ್ಯನನ್ನು ಆಕ್ರಮಿಸಿಕೊಳ್ಳತೊಡಗಿದೆ. ಕಡೆಯ ಆಸೆಯೆಂದರೆ, ಪ್ರಕೃತಿಯೂ ಉಳಿಯಬೇಕ, ಮನುಷ್ಯನೂ ಉಳಿಯಬೇಕು. ಅದು ಮೊದಲ ಆದ್ಯತೆಯಾಗಬೇಕು. ಇಲ್ಲದಿದ್ದರೆ ಏನಾಗಬಹುದು? ಅಲ್ಲಮನ ವಚನವೊಂದು ಅದಕ್ಕೆ ಉತ್ತರ ನೀಡಿದೆ.

ಪೃಥ್ವಿಯನತಿಗೆಳೆದು ಅಪ್ಪುವುಲ್ಲ,

ಅಪ್ಪುವನತಿಗೆಳೆದು ಅಗ್ನಿಯಿಲ್ಲ,
ಅಗ್ನಿಯನತಿಗೆಳೆದು ವಾಯುವಿಲ್ಲ
ವಾಯುವನತಿಗೆಳೆದು ಆಕಾಶವಿಲ್ಲ
ಆಕಾಸವನತಿಗೆಳೇದು ನಾದವಿಲ್ಲ
ನಾದವನತಿಗೆಳೆದು ಬಿಂದುವಿಲ್ಲ
ಬಿಂದುವನತಿಗೆಳೆದು ಕಳೆಯಿಲ್ಲ
ಕಳೆಯವನತಿಗೆಳೆದು ಆತ್ಮವಿಲ್ಲ.

*****



# ಕಾಗೋಡಿಗೆ ಬಸ್ಸು ಬಂದದ್ದು

**–ಡಾ.ನಾ. ಡಿಸೋಜ**

ಕಾಗೋಡಿನ ಕಿಟ್ಟಪ್ಪನ ಹೋಟಲಿನಲ್ಲಿ ಬಿಸಿ ಚಾ ಅನ್ನು ಆರಿಸಿಕೊಂಡು ಕುಡಿಯುತ್ತಿದ್ದ ಹೊಂಕೇರಿ ತಿಮ್ಮಜ್ಜ ಹೋಟೆಲಿನ ಮುಂದೆ ಬಂದು ನಿಂತ. ಗಜಾನನ ಬಸ್ಸು ಹೊಗೆಕಾರಿ ಹೂಂಕರಿಸಿ ಹೊರಟಿದ್ದನ್ನು ನೋಡಿ ನಕ್ಕ. ಅವನ ಕೆನ್ನೆ ಗದ್ದದ ಮೇಲೆ ಚೂಪು ಚೂಪಾಗಿ ನಿಂತ ಬಳಿ ಕೂದಲುಗಳೂ ನಕ್ಕವು. ಆಳಕ್ಕೆ ಇಳಿದ ಕಣ್ಣುಗಳೂ ನಕ್ಕವು. ಕಿವಿಯಲ್ಲಿಯ ಒಂಟಿಗಳೂ ನಕ್ಕವು. ಹಲ್ಲಿಲ್ಲದ ಬಾಯಲ್ಲಿ ಈ ನಗೆ ಅಡಕೆ ಸಿಂಗಾರದಂತೆ ಕಂಡಿತು.

ತನ್ನ ಪಾಡಿಗೆ ತಾನು ಚಾ ಕುಡಿಯುತ್ತಿದ್ದ ಕಾಗೋಡು ಈರಭದ್ರ ತಿಮ್ಮಜ್ಜನ ನಗೆ ನೋಡಿ–

'ನಗಾಕೆ ಎಂತಾದಾಯ್ತೋ ತಿಮ್ಮಜ್ಜ' ಎಂದು ಕೇಳಿದ.

'ಹಳೆ ಕತೆ ಗ್ಯಾಪಕಕ್ಕೆ ಬಂತು ಬುಡು ನಮ್ಮದೇನಿದ್ರು ಇಷ್ಟೇ ಅಲ್ವ. ಹಳೇದು ಪಳೇದನ್ನ ಗ್ಯಾಪಿಸಿಕೊಳ್ಳೊದು, ನಗೋದು ಇಲ್ಲ ಅಳೋದು ಎಂದು ಮತ್ತೊಮ್ಮೆ ನಕ್ಕ ತಿಮ್ಮಜ್ಜ.

'ಸಂತೋಸಾನ ಹಂಚಿಕೋಬೇಕು ಅಂತಾರೆ. ಅದೇನು ಇಸ್ಯ ಯೋಳು. ಕೇಳಾನ' ಎಂದು ಹುರಿದುಂಬಿಸಿದ ಈರಭದ್ರ ಇಳಿಜಾರಿನಲ್ಲಿ ಎತ್ತಿನ ಮೂಗುದಾಣ ಸಡಿಲ ಬಿಟ್ಟು ಗಾಡಿಯನ್ನು ಓಡಿಸುವಂತೆ.

'ಈಗ ಕಾಗೋಡಿಗೆ ಎಷ್ಟೊಂದು ಬಸ್ ಬರತಾವಲ್ಲ.. ಗಜಾನನ, ಲಕ್ಷ್ಮಿ, ಮಂಜುನಾಥ, ದುರ್ಗಾಂಬಾ, ಈಗ ಐವತ್ತು ವರ್ಷದ ಹಿಂದೆ ಈ ದಿಕ್ಕಿಗೆ ಒಂದು ಬಸ್ಸತು ಬರ್ತಿರಲಿಲ್ಲ'.

ತಿಮ್ಮಜ್ಜ ಸುರ್ ಎಂಚು ಚಾ ಹೀರಿ ತನ್ನ ಮಾತನ್ನು ಮುಂದುವರಿಸಿದ.

'ಮೊದಲ್ನೆ ದಪ ಬಸ್ ಬಂದದ್ದು ಗ್ಯಾಪಕಕ್ಕೆ ಬಂತು' ಎಂದ

ಮೊದಲ್ನೆ ದಪ ಬಸ್ ಬಂದದ್ದು, ಫಸ್ಟ್ ಟೇಮ್ ಬಸ್ ಬಂದದ್ದು ಅನ್ನು ಎಂದ ಈರಭದ್ರ ಅಲೆಮನೆಯ ಒಲೆಗೆ ಒಣಗಿದ ಕುಂಟೆ ತುರುಕಿದಂತೆ.

'ಹುಂ. ಫಸ್ಟ್ ಟೇಮು' ಎಂದುತಿಮ್ಮಜ್ಜ ಮತ್ತೆ ನಕ್ಕ.

ನೆರಿಗೆಗಟ್ಟಿ ಉದ್ದವಾದ ಕಿವಿಗಳ ಕೆಳ ಹಾಳೆಗಳನ್ನೇ ಜೋಕಾಲಿಯನ್ನಾಗಿಸಿಕೊಂಡು ಒಂಟಿಗಳು ತೂಗಾಡಿದವು. ಬೊಚ್ಚು ಬಾಯಲ್ಲಿ ನಗೆ ನಲಿದಾಡಿತು.

'ಕಾಗೋಡಿಗೆ ಬಸ್ಸು ಬಂದದ್ದು ಹೌದು, ನಾನು ಏಟು ತಿಂದದ್ದೂ ಹೌದು' ಎಂದು ಮುದುಕ ಎಂದೋ ನಡೆದುದನ್ನು ನೆನಪಿಸಿಕೊಂಡ.

'ಹೌದಂತೀನಿ' ಬಹಳ ಹೆಮ್ಮೆಯಿಂದ ನುಡಿದ ತಿಮ್ಮಜ್ಜ.

ಬರಿದಾದ ಲೋಟವನ್ನು ಬದಿಗಿರಿಸಿ ಮುದುಕ ನೆನಪಿನ ಚೀಲಕ್ಕೆ ಕೈಹಾಕಿ ಹುಡುಕತೊಡಗಿದ.

ಸಾಗರಕ್ಕೆ ಬಸ್ಸು ಬಂದು ಕೆಲ ವರುಷಗಳಾಗಿದ್ದವು. ಚಾರ್ಕೋಲ್ ಬಸ್ಸು, ಬಸ್ಸಿನ ಹಿಂಬದಿಯಲ್ಲಿ ದೊಡ್ಡದೊಂದು ಪಿಪಾಯಿ. ಅದರ ಕೆಳಗಡೆ ಒಂದು ಒಲೆ. ನಿಗಿನಿಗಿ ಕೆಂಡಗಳು. ಆಗಾಗ್ಗೆ ಕಂಡೆಕ್ಟರ್ ಇಳಿದು ಗಾಳಿ ಹಾಕುತ್ತಿರಬೇಕು. ಅದಕ್ಕೊಂದು ತಿರುಗಣೆ ಹಿಡಿ. ಹಿಂಬದಿ ಸೀಟಿನಲ್ಲಿ ಕುಳಿತವರ ಬೆನ್ನೆಲ್ಲಾ ಬಿಸಿ.

ಬಸ್ಸು ಬಂದರೇನೆ ಒಂದು ಅದ್ಭುತ. ಎತ್ತಿಲ್ಲ, ಕೋಣಗಳಿಲ್ಲ. ಕುದುರೆಗಳಿಲ್ಲ. ರಬ್ಬರಿನ ನಾಲ್ಕು ಚಕ್ರಗಳ ಮೇಲೆ ಓಡುವ ಮಹಾ ಯಂತ್ರ ಮುಂದೆ ಚಾಚಿಕೊಂಡಿರುವ ಉದ್ದ ಮೂತಿ, ಪೊಂ ಪೊಂ ಎಂದು ರಸ್ತೆ ಮೇಲಿರುವವರನ್ನು ಅಕ್ಕಪಕ್ಕಕ್ಕೆ ತಳ್ಳುವ ಹಾರ್ನು. ಮೂರು ಮೈಲಿಯವರೆಗೂ ಕೇಳಿಸುವ ಅದರ ದಡಬಡ ಸದ್ದು.

ಮುಂಬದಿಯಲ್ಲಿ ಚಕ್ರ ಹಿಡಿದು ಕುಳಿತುಕೊಳ್ಳುವ ಓರ್ವ. ಇವನೇ ಕೃಷ್ಣ ಪರಮಾತ್ಮ. ಇವನ ಕಾಲ ಬಳಿ ಕೈ ಬಳಿ ಮತ್ತೇನೋ ಹಿಡಿಕೆಗಳು. ಚಕ್ರ ತಿರುಗಿಸುವುದರ ಜೊತೆಗೆ ಇವುಗಳನ್ನು ಎಳೆದು ಒತ್ತಿ, ಮೆಟ್ಟಿ, ಅಮುಕಿ ಆತ ಏನೆಲ್ಲಾ ಮಾಡುತ್ತಿದ್ದನೋ ಬಸ್ಸು ತೋಣಚಿ ಹೊಕ್ಕ ಗೂಳಿಯ ಹಾಗೆ ಓಡುತ್ತಿತ್ತು.

ರಸ್ತೆ ಮೇಲಿ ಮಣ್ಣೆಲ್ಲಾ ಆಕಾಶಕ್ಕೆ.

ಬಸ್ಸು ಎದ್ದು ಬಿದ್ದು ಒಳಗಿರುವವರನ್ನು ಎತ್ತಿ ಬಿಸಾಡಿ ಕುಕ್ಕಿ ಕುಣಿದಾಡಿಸಿ ಕೈಕಾಲಿನ ಕೀಲುಗಳು ಸಡಿಲವಾಗುವಂತೆ ಮಾಡಿಬಿಡುತ್ತಿತ್ತು. ಹಿಂದೊಬ್ಬ ಕಂಡಕ್ಟರ್, ಅವನು ರೈಟೆ ಎಂದರೆ ಬಸ್ಸು ಓಡುತ್ತದೆ. ಹೋಲ್ಡಾನ್ ಎಂದರೆ ನಿಲ್ಲುತ್ತದೆ.



ಬಸ್ಸಿಗೆ ನೀರು ಕುಡಿಸುವುದು, ಹಿಂದಿನ ಬೆಂಕಿ ಆರದ ಹಾಗೆ ನೋಡಿಕೊಳ್ಳುವುದು, ಟಾಪಿಗೆ ಸಾಮಾನು ಏರಿಸುವುದು ಟಾಪಿನಿಂದ ಸಾಮಾನು ಇಳಿಸುವುದು ಈ ಕಂಡಕ್ಟರನ ಕೆಲಸ.

ಡ್ರೈವರನ ಪಕ್ಕದಲ್ಲಿ ಒಂದು ಸೀಟು. ಅದು ಸರಕಾರಿ ಅಧಿಕಾರಿಗಳಿಗೆ, ಸಬ್ ಇನ್ಸ್‌ಪೆಕ್ಟರಿಗೆ, ಗೌಡರಿಗೆ, ಶಾನುಭೋಗರಿಗೆ, ಸಿಕ್ಕವರೆಲ್ಲ ಅಲ್ಲಿ ಕೂರುವಂತಿಲ್ಲ.

ಇದರ ಹಿಂದೆ ಒಂದು ಉದ್ದ ಸೀಟು. ಒಂದು ಬಾಗಿಲು. ಇದು ವಿದ್ಯಾವಂತರಿಗೆ, ಉತ್ತಮರಿಗೆ, ಮರ್ಯಾದಸ್ಥರಿಗೆ.

ಹಿಂಬದಿಯಲ್ಲಿ ಮತ್ತೊಂದು ಬಾಗಿಲು. ಒಳಹೋದರೆ ಒಂದು ತೊಟ್ಟಿ, ಅಲ್ಲಿ ರೈತರು, ಕೂಲಿಯವರು, ಕೆಲಸದವರು, ಕುರಿಗಳು, ಕೋಳಿಗಳು, ಹುಲ್ಲಿನ ಹೊರೆ ಏನೂ ತುಂಬಬಹುದು ಎಷ್ಟೂ ತುಂಬಬಹುದು.

ಬಸ್ಸಿನ ಹಿಂಬದಿಯ ತೊಟ್ಟಿ ಎಂದರೆ ಒಡೆಯರ ಮನೆಯ ಹೆದ್ದಾರಿಯ ಸಾಲುಕಟ್ಟೆಯ ಹಾಗೆ. ಬಚ್ಚಲು ನೀರು, ಕೊಟ್ಟಿಗೆ ಕಸ, ನಾಯಿಗಳು ಬೀಡಾಡಿ ದನಗಳು, ಗೇಣಿದಾರರು, ಅವರ ಹೆಂಡಿರು, ಮಕ್ಕಳು ಇತ್ಯಾದಿ ಇತ್ಯಾದಿ ಎಲ್ಲಕ್ಕೂ ಅಲ್ಲಿ ಜಾಗ. ಅಲ್ಲಿ ಮರ್ಯಾದೆ.

ಹೀಗಿದ್ದವು ಬಸ್ಸುಗಳು.

ಸುತ್ತ ಕಬ್ಬಿಣದ ಕಂಬಿಗಳು. ಕಂಬಿ ಹಿಡಿದೇ ಕೂರಬೇಕು. ಗಾಳಿ, ಬೆಳಕು, ಮಳೆನೀರು ನೇರ ಬಸ್ಸಿನೊಳಗೆ, ಮಳೆಗಾಲದಲ್ಲಿ ಇಳಿಯಬಿಡಲು ಟಾರ್‌ಪಲ್ ಶೀಟುಗಳು, ಇವು ಬಸ್ಸು ಹೋಗುವ ರಭಸಕ್ಕೆ ತಟಪಟನೆ ಬಡಿದುಕೊಂಡು ಓಡಿ ಬರುತ್ತಿರುವ ಕಾಡಾನೆಯ ನೆನಪನ್ನು ಉಂಟು ಮಾಡುತ್ತಿದ್ದವು.

ಇಂತಹ ಬಸ್ಸುಗಳು ಸಾಗರದಿಂದ ಶಿವಮೊಗ್ಗ, ಶಿರಸಿ, ಭಟ್ಕಳ, ಹೊಸ ನಗರಗಳಿಗೆ ತಿರುಗಾಡಲು ಆರಂಭವಾದ ಮೇಲೆ ಜನ ಇವುಗಳಲ್ಲಿ ಪ್ರಯಾಣ ಮಾಡುವುದು ಒಂದು ಪ್ರತಿಷ್ಠೆಯ, ಮೋಜಿನ ಸಂತಸದ, ಸುಖದ ಶ್ರೀಮಂತಿಕೆಯ ವಿಷಯ ಎಂದುಕೊಂಡರು. ಬಡವರಲ್ಲಿ ಬಹಳ ಜನ ಕಾಲ ನಡಿಗೆ, ಎತ್ತಿನ ಗಾಡಿಗಳನ್ನೇ ಅವಲಂಬಿಸಿಕೊಂಡು ಉಳಿದರು. ಕೆಲವರಂತೂ ಬಸ್ಸಿನ ಹತ್ತಿರವೇ ಹೋಗಲಿಲ್ಲ. ಎಲ್ಲೋ ಕೆಲವರಿಗೆ ಇಂದಿನ ತೊಟ್ಟಿಯೇ ಎಲ್ಲ ಸುಖ ಸೌಲಭ್ಯವನ್ನು ನೀಡಿತು.

ಅಂತೂ ಬಸ್ಸುಗಳು ಜನಪ್ರಿಯವಾಗತೊಡಗಿದವು. ಅದರ ಉಪಯೋಗ ಅನುಕೂಲತೆ ಪ್ರಯೋಜನ ಜನಕ್ಕೆ ಆಗತೊಡಗಿತು.

ಇಂತಹ ಒಂದು ದಿನ ಕಾಗೋಡು ಗೌಡರು ಸಾಗರದ ಬಸ್ ಕಂಪೆನಿಯ ಮೆಟ್ಟಿಲು ಹತ್ತಿದರು.

ಈ ಕಂಪೆನಿ ಹಿಂದೆ ಸಾಗರದಿಂದ ಶಿವಮೊಗ್ಗಕ್ಕೆ, ಶಿವಮೊಗ್ಗದಿಂದ ಸಾಗರಕ್ಕೆ ವಾರಕ್ಕೊಮ್ಮೆ ಟಪಾಲು ಗಾಡಿ ಓಡಿಸುತ್ತಿತ್ತು. ಎತ್ತಿನ ಗಾಡಿ. ಅದರಲ್ಲಿ ಟಪಾಲು ಜೊತೆಗೆ ಮೂರು ನಾಲ್ಕು ಐದು ಜನ. ಅದೂ ಮುಂಚಿತವಾಗಿ ಹೇಳಿ ಇಡಬೇಕು. ಎರಡು ದಿನಗಳ ಪ್ರಯಾಣ. ಈ ಎತ್ತಿನ ಗಾಡಿ ಕಂಪನಿಯವರು ಬಸ್ಸುಗಳು ಬಂದ ಕೂಡಲೇ ಮೊದಲು ಮಾಡಿದ ಕೆಲಸವೆಂದರೆ ಒಂದು ಬಸ್ಸು ತಂದದ್ದು. ಕೆಲ ತಿಂಗಳುಗಳಲ್ಲಿ ಒಂದು ಎರಡಾಗಿ ಮೂರಾಗಿ ಬಸ್ಸುಗಳ ಸಂಖ್ಯೆ ಬೆಳೆಯಿತು.

ಸಾಗರದ ಅಭಿವೃದ್ಧಿಗೆ ಈ ಕಂಪನಿ ಕಾರಣವಾಯಿತು. ಊರಿಗೆ ಶ್ರೀಮಂತರು ತಮಗೊಂದು ವಾಹನ ಸೌಲಭ್ಯ ದೊರೆಯಿತೆಂದು ಸಂತಸಪಟ್ಟರು. ಹಿಂದೆಯೇ ಭಟ್ಕಳ, ಶಿರಸಿ, ಹೊಸನಗರ, ಜೋಗಗಳಿಗೆಲ್ಲಾ ಬಸ್ಸುಗಳು ಹೋಗಿ ಬರಲಾರಂಭಿಸಿದವು.

ಕಾಗೋಡು ಗೌಡರು ಜರ್ಬಿನಿಂದಲೇ ಕಂಪನಿ ಒಳಗೆ ಕಾಲಿಟ್ಟರು. ಕಂಪನಿ ಮ್ಯಾನೇಜರ್ ಅವರು ಎದ್ದು ನಿಂತು_

'ಬರಬೇಕು ಬರಬೇಕು' ಎಂದು ಸ್ವಾಗತಿಸಿದರು.

ಗೌಡರು ಊರಿಗೆಲ್ಲಾ ಪರಿಚಿತರು.

ಕುಳಿತ ಮರದ ಕುರ್ಚಿ ಕಿರುಗುಟ್ಟುತ್ತಿರಲು ಗೌಡರು

'ನಾನೊಂದು ಕೆಲಸಕ್ಕೆ ಬಂದೆ' ಎಂದರು.

'ಏನು ಹೇಳಿ ಸ್ವಾಮಿ'

'ನೀವೀಗ ಸೊರಬ, ಶಿರಾಳಕೊಪ್ಪ, ಅನವಟ್ಟಿಗಳಿಗೆಲ್ಲಾ ಹಾಕಿದೀರಾ ಕಾಗೋಡಿಗೆ ಯಾಕೆ ಬಸ್ ಬಾರದು?' ಗೌಡರು ನೇರವಾಗಿಯೇ ವಿಷಯಕ್ಕೆ ಬಂದರು.



ಸೊರಬ, ಶಿರಾಳಕೊಪ್ಪ, ಅನವಟ್ಟಿಗೆಗಳಿಗೆಲ್ಲಾ ದೂರದ ಊರುಗಳೇ. ಹಿಂದೆ ವಾಹನ ಸೌಕರ್ಯವಿಲ್ಲದಿರುವಾಗ ಜನ ಹೆಚ್ಚು ಓಡಾಡುವಂತಿರಲಿಲ್ಲ. ಈಗ ಬಸ್ಸಿದೆ ಎಂಬ ಕಾರಣಕ್ಕೆ ಹೋಗಿ ಬರುವುದು ಹೆಚ್ಚಾಗಿದೆ. ಜನ ಅನವಟ್ಟಿಗೆ ಹೋಗುವ ಬಸ್ಸನ್ನು ಕಾಗೋಡಿನ  ಮೂಲಕ ಓಡಿಸೋಣವೆಂದರೆ ಮುಂದೆ ರಸ್ತೆ ಆಗಿಲ್ಲ. ಕೊನೆಗೆ ಈ ಹಳ್ಳಿಯಿಂದ  ನಿತ್ಯ ಎಷ್ಟು ಜನ ಸಾಗರಕ್ಕೆ ಬರುತ್ತಾರೆ? ಬಸ್ಸಿನ ಮೈಂಟೆನೆನ್ಸ್ ಖರ್ಚು ಹುಟ್ಟಬೇಕಲ್ಲ ಎಂದು ಕಂಪನಿ ಮ್ಯಾನೇಜರು ವಿಚಾರ ಮಾಡಿದರಾದರೂ ಬಾಯಿಬಿಟ್ಟು ಹೇಳಲಿಲ್ಲ.

ಆದರೆ ಗೌಡರು ಮ್ಯಾನೇಜರರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಓದಿಕೊಂಡವರಂತೆ ಗೌಡರು..

'ಪ್ರಯಾಣಿಕರು ಇಲ್ಲ ಅಂತ ಹೇಳಬೇಡ್ರಿ..; ಬಸ್ಸು ಬಂದಿದೆ ಅಂದರೆ ಜನ ಬರತಾರೆ– ಕುದುರೆ ಕಂಡರೆ ಕಾಲು ನೋವು ಅಂತ ಗಾದೆ ಕೇಳಿಲ್ವೇ ನೀವು.. ನಾನಂತೂ ದಿನಾ ಇರತೇನೆ.. ನಮ್ಮ ಹುಡುಗರು, ಸೊಸೆಯಂದಿರು, ಶಾನುಭೋಗರು, ಪಟೇಲರು, ನಡುವೆ ಹತ್ತುಹಳ್ಳಿಗಳಿವೆ. ಅಲ್ಲಿ ಜನ ಆಸ್ಪತ್ರೆಗೆ ಬರೋರು. ಕೋರ್ಟಿಗೆ ಬರೋರು. ಪೋಲಿಸ್ ಸ್ಟೇಷನ್ನಿಗೆ ಬರೋರು ಜನ ಆಗತಾರಪ್ಪ. ಬೆಳಿಗ್ಗೆ ಒಂದು ಸಾರಿ ಸಾಯಂಕಾಲ ಒಂದು ಸಾರಿ ಬಂದು ಹೋಗಲಿ. ನೀವು ಬಸ್ಸು ಬಿಟ್ಟು ನೋಡಿ. ಒಂದು ವೇಳೆ ನಷ್ಟ ಆಯಿತು. ಆಮೇಲೆ ಪುನಃ ವಿಚಾರ ಮಾಡಿದರಾಯ್ತು. ಎಲ್ಲವನ್ನೂ ಒಂದೇ ಉಸಿರಿಗೆ ಹೇಳಿ ಮುಗಿಸಿದರು ಗೌಡರು.

'ನೋಡೋಣ ಗೌಡರೆ' ಎಂದರು ಮ್ಯಾನೇಜರ್.

'ಪರವಾನಿಗೆಗೆ ಅರ್ಜಿ ಹಾಕಬೇಕು.. ರಸ್ತೆ ಹೇಗಿದೆ ನೋಡಬೇಕು. ಹೊಸ ಲೈನು ಅಂದರೆ ಹೊಸ ಬಸ್ಸು ಬೇಕು. ಬೇರೆ ಕಂಪನಿಗಳು ಪೈಪೋಟಿಗೆ ಬರತಾವೆ ನೋಡೋಣ.

'ನೋಡೋಣ ಗೀಡೋಣ ಅನ್ನಬೇಡಿ. ಮನಸ್ಸು ಮಾಡಿ. ಬೇಕಿದ್ರೆ ಸರಕಾರಕ್ಕೆ ನಾನು ಹೇಳತೇನೆ' ಎಂದು ಗೌಡರು ಎದ್ದರು.

ಮ್ಯಾನೇಜರು ಕಂಪನಿಯ ಬಾಗಿಲಿನವರಿಗೂ ಬಂದು ಗೌಡರನ್ನು ಬೀಳ್ಕೊಟ್ಟರು. ಗೌಡರು ಇಷ್ಟಕ್ಕೆ ಸುಮ್ಮನಾಗಲಿಲ್ಲ.

ಸಾಗರಕ್ಕೆ ಬಂದವರು ವಕೀಲ ಜೋಯಿಸರನ್ನು, ಕೃಷ್ಣಪ್ಪನ ಹೋಟೆಲನ್ನು, ಬೆಲ್ಲದ ಶೇಷಪ್ಪನವರನ್ನು, ಜವಳಿ ಅಂಗಡಿ ದುರ್ಗೋಜಿಯನ್ನು, ರೈಸ್ ಮಿಲ್ ಗೋವಿಂದಪ್ಪನವರನ್ನು ಒಮ್ಮೆ ನೋಡುವಂತೆ ಬಸ್ ಕಂಪನಿಗೂ ಭೇಟಿ ಕೊಡತೊಡಗಿದರು.

'ಎಲ್ಲಿಗೆ ಬಂತು?' ಎಂದು ಕೇಳಿ, ಹತ್ತು ನಿಮಿಷ ಕುಳಿತು ಮಾತನಾಡಿ, ಕೆಲ ಸಲಹೆಗಳನ್ನು ನೀಡಿ, ರಸ್ತೆ ಮಾಡಿಸಲು ಗ್ರಾಮ ಪಂಚಾಯಿತಿಗಳಿಗೆ ಹೇಳುವುದಾಗಿ ತಿಳಿಸಿ –

'ನೀವು ಮೊದಲು ಬಸ್ಸು ಹಾಕಿ' ಎಂದು ಹೇಳಿ ಬರತೊಡಗಿದರು.

ಬಸ್ಸಿನ ಅನುಕೂಲತೆ ಎಷ್ಟೆಂಬುದು ಅವರಿಗೆ ತಿಳಿದು ಹೋಗಿತ್ತು.

ಸೊಸೆಯಂದಿರು ಪೇಟೆಯವರಾಗಿದ್ದರು. ಅವರಿಗೆ ಆಗಾಗ್ಗೆ ಪೇಟೆಗೆ ಹೋಗಿ ಬರಬೇಕಿತ್ತು. ಸರಕಾರಿ ಆಸ್ಪತ್ರೆಗೆ ಅವರು ಹೊಂದಿಕೊಂಡಿದ್ದರಲ್ಲದೆ ಮೊಮ್ಮಕ್ಕಳು ಮುಂದೆ ಪ್ರೌಢಶಾಲೆಗೆ ಹೋಗಬೇಕು.

ತಮಗೂ ತಾಲೂಕು ಕಚೇರಿ, ವಕೀಲರು, ಕೋರ್ಟು ಎಂದು ತಿರುಗಾಟ.

ಎತ್ತಿನಗಾಡಿ ಪ್ರಯಾಣ ಈಗ ಹಿಡಿಸುವುದಿಲ್ಲ. ಮೈ ಕೈ ನೋವು, ಧಡಲ್ ಧಡಲ್ ಎಂದು ಚಕ್ರಗಳು ಕೊರಕಲಿಗೆ ಇಳಿದು ಮೈ ಜಜ್ಜಿದಂತಾಗಿ ಒಂದು ದಿನ ಪ್ರಯಾಣ ಮೂರು ದಿನಗಳ ವಿಶ್ರಾಂತಿಗೆ ಕಾರಣವಾಗುತ್ತೆ.

ಒಂದು ಬಸ್ಸಿಗಾದರೆ ಅರ್ಧಗಂಟೆ ಹಾಗೆ ಹೋದ, ಹೀಗೆ ಬಂತು ಎಂತಹಾ ಸುಖ ಅಲ್ಲವೇ?

ಗೌಡರು ಪ್ರಯತ್ನ ಫಲಕಾರಿಯಾಯಿತು.

ಒಮ್ಮೆ ಗೌಡರು ಕಂಪನಿಗೆ ಹೋದಾಗ–

'ಗೌಡರೆ ಮುಂದಿನ ಸೋಮವಾರ ನಾವು ಕಾಗೋಡಿಗೆ ಬಸ್ ಬಿಡತೇವೆ' ಎಂದರು ಮ್ಯಾನೇಜರು.

'ಹೌದೆ ಹೌದೆ?' ಗೌಡರು ಸಂಭ್ರಮದಿಂದ ಕೇಳಿದರು.



'ಹೌದು ಗೌಡರೆ, ಪರವಾನಿಗೆ ಬಂದಿದೆ. ಹೊಸ ಬಸ್ಸು ಬಂದ ಕೂಡಲೆ ಅದನ್ನ ಜೋಗ ಲೈನಿಗೆ ಹಾಕಿ ಈಗ ಜೋಗಕ್ಕೆ ಹೋಗತಿರೋ ಬಸ್ಸನ್ನ ಕಾಗೋಡಿಗೆ ಕಳಿಸುತ್ತೇವೆ. ಮೊದಲು ಸಾಯಂಕಾಲ ಸಾಗರದಿಂದ ಕಾಗೋಡಿಗೆ ಹೋಗಿ ಮಾರನೇ ದಿನ ಬೆಳಿಗ್ಗೆ ಅದು ತಿರುಗಿ ಬರುತ್ತೆ. ಮುಂದೆ ನೋಡೋಣ ಎಂದರು ಮ್ಯಾನೇಜರ್

'ಓ ನನಗಂತೂ ಸಂತೋಷ ಆಯ್ತು' ಎಂದು ಗೌಡರು ಮತ್ತೆ ಕೇಳಿದರು.

'ಮುಂದಿನ ಸೋಮವಾರ ಅಲ್ವೇ?'

'ಹೌದು ನಾಳೆ ಹೊಸ ಬಸ್ಸು ಬರುತ್ತೆ ಸೋಮವಾರ ನಿಮ್ಮೂರಿಗೆ.. ನೀವು ಅಲ್ಲಿ ಸುತ್ತ ಮುತ್ತ ಇರೋ ಹಳ್ಳಿಗಳಿಗೆಲ್ಲಾ ವಿಷಯ ತಿಳಿಸಿಬಿಡಿ' ಎಂದರು ಮ್ಯಾನೇಜರ್.

'ಬಸ್ಸು ನಮ್ಮೂರಿಗೆ ಬರೋದು ಮೊದಲ ಸಾರಿಯಲ್ವ. ಅದಕ್ಕೆ ಭಾರೀ ಸ್ವಾಗತ ಸಿಗುತ್ತೆ ನಮ್ಮೂರಿನಲ್ಲಿ. ನಾನೇ ಮೊದಲ ದಿನ ಅದರಲ್ಲಿ ಕೂತು ಕಾಗೋಡಿಗೆ ಹೋಗುತ್ತೇನೆ' ಎಂದು ಸಂಭ್ರಮ ಪಡುತ್ತಾ ಗೌಡರು ಹೊರಟರು.

ಕಾಗೋಡಿಗೆ ಬಸ್ಸು ಬರುತ್ತದೆಂಬ ಸುದ್ದಿ ಕಲ್‌ಮನೆ, ಗಿಳಿಗಾರು, ಈಚಲಕೊಪ್ಪ, ಸಣ್ಣ ಮನೆ, ಯಕಲುಂಡ್ಲಿ, ಚೌಡಿ ಬೀಡು, ಅದರಂತೆ ಹಸವಂತೆ, ಕೊರ್ಲಿಕೊಪ್ಪ, ಮಾಸೂರು, ಹಿಂಬಾಗಿಲು ಮೊದಲಾದ ಹಳ್ಳಿಗಳಿಗೆಲ್ಲಾ ತಲುಪಿ ಜನ ಕುಣಿದಾಡಿಬಿಟ್ಟರು. ಸಾಗರಕ್ಕೆ ಬಸ್ಸು ಬಂದಿದ್ದರೂ ಹಳ್ಳಿಯ ಎಲ್ಲ ಜನ ಸಾಗರಕ್ಕೆ ಹೋಗುತ್ತಿರಲಿಲ್ಲವಾದ್ದರಿಂದ ಈ ಎಲ್ಲ ಜನ ಬಸ್ಸಿನ ಬಗ್ಗೆ ಕೇಳಿದ್ದರು. ಆದರೆ ಬಸ್ಸನ್ನು ನೋಡಿರಲಿಲ್ಲ.

ಬಸ್ಸು ಅನ್ನುವ ಅದ್ಭುತ ತಮ್ಮ ಹಳ್ಳಿ ಬಾಗಿಲಿಗೆ ಬರುತ್ತದೆಂಬುದು ಒಂದು ರೋಮಾಂಚನದ ವಿಷಯವಾಯಿತು. ಇದನ್ನು ಏರುವುದಕ್ಕಿಂತ, ಅದನ್ನು ನೋಡುವುದೇ ಒಂದು ಸಂಭ್ರಮವೆಂಬಂತೆ ಜನ ಹಳ್ಳಿಗಳಿಂದ ಹೊರಟರು.

ಗೌಡರ ಮನೆಯ ಮುಂದಿನ ರಸ್ತೆಗೆ ಮಾವಿನ ತೋರಣ ಕಟ್ಟಲಾಯಿತು. ಬಾಳೆ ಕಂದುಗಳನ್ನು ತಂದು ನಿಲ್ಲಿಸಲಾಯಿತು. ಬಸ್ಸಿನಲ್ಲಿ ಬರುವ ಡ್ರೈವರ್ ಕಂಡಕ್ಟರ್‌ಗಳಿಗೆ ಗೌಡರ ಮನೆಯಲ್ಲಿ ಚಾ ಅವಲಕ್ಕಿಯ ವ್ಯವಸ್ಥೆಯಾಯಿತು.

ಗೌಡರ ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳು ಗೇಣಿ ರೈತರು ತಮ ತಮಗೆ ಸೂಕ್ತ ಜಾಗ ಹುಡುಕಿಕೊಂಡು ಕೂತರು.

ಹಳ್ಳಿ ಜನ ಕಂಬಳಿ, ಚಾಪೆ, ಹುಲ್ಲು, ಸೊಪ್ಪು ಹಾಸಿಕೊಂಡು ಅಲ್ಲಲ್ಲಿ ಕುಳಿತರು. ತಾವು ಎಲ್ಲರಿಗಿಂತಲೂ ಮೊದಲು ನೋಡಬೇಕೆಂದು ಕೆಲವರು ಮರಗಳನ್ನು ಏರಿದರು.

ಈಗಾಗಲೇ ಬಸ್ಸನ್ನು ನೋಡಿದವರು, ಬಸ್ಸನ್ನು ನೋಡದೇ ಇದ್ದವರಿಗೆ ಬಸ್ಸಿನ ಬಗ್ಗೆ ಹೇಳಲು ಇದೇ ಅವಕಾಶವನ್ನು ಬಳಸಿಕೊಂಡರು.

ಹಿಂಬದಿಯ ಬೆಂಕಿಯ ಹಂಡೆ

ಗಾಳಿ ಹಾಕುವ ತಿರುಗಣಿ

ರಬ್ಬರಿನ ಗಾಳಿ ತುಂಬಿದ ಚಕ್ರಗಳು

ಚಕ್ರಧಾರಿಯಾದ ಡ್ರೈವರ್

ರೈಟ್ ಹೇಳುವ ಕಂಡಕ್ಟರ್

ಆಸನ ವ್ಯವಸ್ಥೆ

ಎತ್ತಿನ ಗಾಡಿಗಿಂತ ನೂರು ಪಟ್ಟು ವೇಗವಾಗಿ ಓಡುವ ಅದರ ಪರಿ. ಎಲ್ಲವನ್ನು ಬಣ್ಣಿಸಿಯೇ ಬಣ್ಣಿಸಿದರು.

ಬಹಳ ದೂರದಿಂದ ಬಸ್ಸಿನ ಸದ್ದು ಕೇಳುವುದರಿಂದ ಸಾಗರದತ್ತ ಮುಖ ತಿರುಗಿಸಿ ಹಲವರು ಕುಳಿತರು.

'ಬಂತು ಬಂತು' ಎಂದು ಗೊಂದಲವೆಬ್ಬಿಸಿದರು.

ಯಾವುದೋ ಸುಂಟರಗಾಳಿ ದೂರದಲ್ಲಿ ಮಣ್ಣಿನ ಗೋಪುರ ನಿರ್ಮಿಸಲು ಬಸ್ಸು ಬಂದೇ ಬಿಟ್ಟಿತೆಂದು ಹಲವರು ಎದು ಗದ್ದಲ ಎಬ್ಬಿಸಿದರು.

ಗಂಟೆ ಮೂರಾಯಿತು, ನಾಲ್ಕಾಯಿತು.

ಮಕ್ಕಳು ಚಾಪೆ ಕಂಬಳಿಗಳ ಮೇಲೆಯೇ ಮಲಗಿದರು.



'ಮನಕ್ಕೋ ಬಸ ಬಂದ ಕೂಡ್ಡೆ ಏಳುವಂತಿ' ಎಂದರು ತಾಯಂದಿರು.

ತರುಣರು ಆತಂಕಗೊಂಡ ಮಡದಿಯರಿಗೆ ಸಮಾಧಾನ ಹೇಳಿದರು.

'ಬತ್ತದೋ ಇಲ್ಲೋ' ಎಂದರು ಕೆಲವರು

'ಬರತದೆ ಗೌಡರೇ ಹೋಗಾರಲ್ಲ'

ಗೌಡರ ಸೊಸೆಯಂದಿರು ಬಸ್ಸಿಗೆ ಆರತಿ ಎತ್ತಲು ತಟ್ಟೆ ಸಿದ್ಧಮಾಡಿಕೊಂಡು ನಿಂತರು.

'ಕಾಗೋಡಿಗೂ ಬಸ್ಸು ಬಂತು. ಅಂದ್ರೆ ಕಾಗೋಡು ಪ್ಯಾಟೆ ಆದಂತೆ ಅಲ್ವಾ?' ಎಂದು ಯಾರೋ ಮಾತಿಗೆ ತೊಡಗಿದರು.

'ಹೌದಪ್ಪ ಇನ್ನು ಹೋಟಲು ಬತ್ತದೆ. ಸಿಲೀಮಾ ಬತ್ತದೆ, ಪ್ಯಾಟೆಯೊಳಗೆ ಏನೇನು ಐತೋ ಅದೆಲ್ಲಾ ಬತ್ತದೆ' ಎಂದರು ಇನ್ನಾರೋ.

'ಬರಲಿ ಬರಲಿ ಬಸ್ಸು ಪ್ಯಾಟೇಯೋರಿಗೆ ಮಾತ್ರಾನಾ?' ಯಾರೋ ಕೇಳಿದರು.

'ಬರಲಪ್ಪ ಬಸ್ಸು ಹತ್ತಾಕೆ ಜೋಬಾಗೆ ಕಾಸು ಐತೋ ನೋಡು ತಮ್ಮ ನಾವು ಬರಿ ಬಸ್ ನೋಡೋರೆ ಹತ್ತೊ ಹಂಗಿಲ್ಲ' ಎಂಬ ಮಾತೂ ಕೇಳಿ ಬಂದಿತು.

ಮಾತಿನ ನಡುವೆ ಧಡಲ್ ಭಡಲ್ ಎಂದು ಗುಂಡಿಗಳಿಗೆ ಇಳಿದು ಹತ್ತುತ್ತ. ಪೊಂ ಪೋಂ ಹಾರ್ನ ಮಾಡುತ್ತ, ಯಮ ಧೂಳು ಹಾರಿಸುತ್ತಾ ಬಸ್ಸು ಬಂದೇ ಬಿಟ್ಟಿತು.

ಜನ ಧಡಬಡಿಸಿ ಎದ್ದು ನಿಂತರು.

ಮುದುಕಿಯರು ಹೆದರಿ ಕಂಗಾಲಾಗಿ ಮರ ಪೊದೆಗಳ ಹಿಂದೆ ಸರಿದರು. ಹೆಂಗಸರು ಮಕ್ಕಳನ್ನು ತೋಳುಗಳಲ್ಲಿ ಅಡಗಿಸಿಕೊಂಡರು. ಮಡದಿಯರು ಗಂಡಂದಿರ ಹಿಂದೆ ಸರಿದರು. ಯುವಕ ಯುವತಿಯರು ಧೈರ್ಯದಿಂದ ಮುಂದೆ ನುಗ್ಗಿದರು.

ಕಿರೋ ಸದ್ದು ಮಾಡಿ ಬಸ್ಸು ಮರಗಳ ಕೆಳಗೆ ಬಂದು ನಿಂತಿತು.

ಮೊದಲ ಸೀಟಿನಲ್ಲಿ ಕುಳಿತ ಗೌಡರು ಬಾಗಿಲು ತೆಗೆದುಕೊಂಡು ಕೆಳಗೆ ಇಳಿದು ಕುಸ್ತಿಯಲ್ಲಿ ಗೆದ್ದವರಂತೆ ಮೀಸೆಯತ್ತ ಕೈಚಾಚಿ, ಅಲ್ಲಿ ನಿಂತವರೆಲ್ಲರ ಮುಖ ನೋಡಿದರು.

ಜನ 'ಹೋ' ಎಂದಿತು.

ಹಿಂದಿನ ಉದ್ದ ಸೀಟಿನಿಂದ ಮೊದಲು ಸರಕಾರಿ ನರ್ಸಮ್ಮ ಅಲಮೇಲು ಇಳಿದು ಬಿಳಿಸೀರೆ ಸರಿಪಡಿಸಿಕೊಂಡು ನಕ್ಕಳು. ಅವಳ ಹಿಂದೆ ಫಾರೆಸ್ಟ್ ಗಾರ್ಡ್ ಮೊಹಿದ್ದೀನನ ಹೆಂಡತಿ ಫಾತಿಮಾಬಿ ಇಳಿದಳು.

ಆಗಲೂ ಜನ ಹೋ ಎಂದು ಚಪ್ಪಾಳೆ ತಟ್ಟಿದರು.

ಎರಡನೇ ಉದ್ದ ಸೀಟಿನ ಬಾಗಿಲು ತೆರೆದುಕೊಂಡು ಶಾನುಭೋಗರು ಕಡತ ಹಿಡಿದು ಇಳಿದರು. ಅವರ ಜೊತೆಗೆ ಅವರ ಮಗ, ಮತ್ತೆ ಕಾಗೋಡಿನ ರಾಮಾಭಟ್ಟರು, ದುರ್ಗಾಭಟ್ಟರು, ಆಗಲೂ ಜನರ ಗದ್ದಲ, ಕೇಕೆ, ನಗೆ, ಚಪ್ಪಾಳೆ.

ಮತ್ತೆ ಯಾರು ಇಳಿಯುತ್ತಾರೆ ಬಸ್ಸಿನಿಂದ?

ಜನ ಹಿಂಬದಿಯ ಕೊನೆಯ ಬಾಗಿಲತ್ತ ನೋಡಿದರು.

ಕಂಡಕ್ಟರ್ ಇಳಿದು ನಿಂತಿದ್ದ. ಧೂಳು ತುಂಬಿದ ತನ್ನ ಬಟ್ಟೆ ಕೊಡವಿಕೊಳ್ಳುತ್ತಿದ್ದ.

ಒಳಗೆ ಮತ್ತೆ ಯಾರೋ ಇದ್ದಾರೆ ಅನಿಸಿತು ಜನರಿಗೆ.

ಯಾರು? ಯಾರು?

ಮೊದಲು ಒಂದು ಕಂಬಳಿ ಹೊರ ಬಂದಿತು. ಕಂಬಳಿಯೊಳಗಿನಿಂದ ಹೊಂಕೇರಿ ತಿಮ್ಮ, ಮೈ ಮುದುರಿಕೊಂಡು ಆತ ಮರಗಿಡ ಪೊದೆಗಳ ಹಿಂದೆ ಅಡಗಿಕೊಳ್ಳಲು ನೋಡಿದ.

ಗೌಡರು ನೋಡಿ ಬಿಟ್ಟರು.

'ಯಾರೋ ಅದು ಬಾಂಚೋಥ, ನನ್ಮಗ, ಹಿಡೀರೋ ಅವನ್ನ' ಅವರು ಅಬ್ಬರಿಸಿದರು.



ಕೆಳದಿಗೆ ಹೋಗಿದ್ದ ತಿಮ್ಮ, ಬಸ್ಸು ಅಲ್ಲಿಗೆ ಬಂದಾಗ ರಸ್ತೆ ಪಕ್ಕದಲ್ಲಿ ನಿಂತಿದ್ದ.

'ಬರತೀಯೋ ನೆಂಟ'? ಎಂದು ಕೇಳಿದ್ದ ಕಂಡಕ್ಟರ.

ತಿಮ್ಮ ಬಸ್ಸ ಏರಿದ್ದ.

ಗೌಡರ, ಗೇಣಿದಾರರಲ್ಲಿ ಓರ್ವ ಈತ. ಗೌಡರ ಮುಂದೆ ಹೀಗೇ ಹೀಗೇ ಇರಬೇಕು ಎಂಬ ನಿಯಮವಿತ್ತು. ಚಪ್ಪಲಿ ಹಾಕಬಾರದು. ಉದ್ದ ಪಂಚೆ ಉಡಬಾರದು, ಗಾಡಿಯ ಮೇಲೆ ಕುಳಿತುಕೊಳ್ಳಬಾರದು, ಈ ಎಲ್ಲ ನಿಯಮಗಳಿದ್ದವು. ಆದರೂ ಅವನು ಒಡೆಯರು ಏರಿದ್ದ ಬಸ್ಸನ್ನು ಹತ್ತಿದ್ದ. ಈ ಅಳುಕಿನಿಂದಲೇ ಗಿಡ ಬಿದ್ದು ಓಡಿ ಹೋಗಲು ಯತ್ನಿಸಿದ.

ಆದರೆ ಗೌಡರ ಆಳು ಸಿದ್ಧಯ್ಯ ಓಡಿ ಹೋಗಿ ಗಬಕ್ಕನೆ ತಿಮ್ಮನನ್ನು ಹಿಡಿದ.

'ಬಿಗಿ ನಾಲ್ಕು ಏಟು.. ಸೂಳೆ ಮಗನಿಗೆ' ಎಂದರು ಗೌಡರು.

ಗೌಡರ ಸೊಸೆಯಂದಿರು ಬಸ್ಸಿಗೆ ಆರತಿ ಬೆಳಗುವಾಗ ತಿಮ್ಮ ಏಟು ತಿಂದು ನರಳುತ್ತಲಿದ್ದ.

ಮತ್ತೊಮ್ಮೆ ನಕ್ಕ ತಿಮ್ಮಜ್ಜ ಅಡಕೆ ಮರದಲ್ಲಿ ಸಿಂಗಾರ ತೂಗಿದಂತೆ.

'ಈಗ ಕಾಲ ಬದಲಾಗೈತೆ, ಬಸನಾಗೆ ಯಾರೂ ಹೋಗಬಹುದು.. ಅಲ್ವಾ?'

ಈರಬದ್ರ ತಲೆದೂಗಿದ.

ಕಿಟ್ಟಪ್ಪನ ಹೋಟಲಿನ ಮುಂದೆ ದುರ್ಗಾಂಬ ಬಂದು ನಿಂತು ಹಾರ್ನ ಮಾಡಿತು.

*****

ಓದು ಪತ್ಯ

# ಭೂಮಿಯ ಹಕ್ಕುದಾರರು

**– ಮೂಲ– ವೈ.ಕಂ. ಮಹಮದ್ ಬಷೀರ್**

**ಕನ್ನಡಕ್ಕೆ–ಸುನೈಫ್**

ಭೂಗೋಳದಲ್ಲಿ ಒಂದು ಹಿಡಿಯಷ್ಟು ಭೂಮಿ ಕೈಸೇರಿದಾಗ ಬದುಕು ಇನ್ನು ಗಟ್ಟಿಯಾಯಿತು ಎಂದು ದೃಢವಾಗಿಯೇ ನಂಬಿ ಬಿಟ್ಟೆ. ಸಂಗತಿ ಏನಿಲ್ಲ. ಎರಡೆಕರೆ ತೆಂಗಿನ ತೋಪು, ಸ್ವಲ್ಪ ಕೆಲಸ ಮಾಡಿದರೆ ಚಂದಗಾಣಿಸಬಹುದಾದ ಒಂದು ಮನೆಯೂ ಇದೆ. ತೆಂಗಿನಕಾಯಿ ಮಾರಿ ಜೀವನ ನಿರ್ವಹಣೆ ಎಂಬ ಮಹತ್ಕಾರ್ಯವನ್ನು ನೆರವೇರಿಸಬಹುದು. ಒಂದಷ್ಟು ಮಾವಿನ ಮರಗಳು, ಮತ್ತೆರಡು ಬರಿಕೆ ಹಲಸಿನ ಮರಗಳೂ ಇವೆ. ಮನೆ ಖರ್ಚಿನ ಸೌದೆಗೂ ಬರವಿಲ್ಲ. ಪುರಾತನ ಕಾಲದ ಬಾವಿಯೂ ಉಂಟೆಂದರೆ ನೀರಿಗೂ ತಾತ್ಸಾರವಿಲ್ಲ. ಶುದ್ಧನೀರು, ಮಿನರಲ್ ವಾಟರ್.

ಒಟ್ಟಿನಲ್ಲಿ ಬದುಕು ಸುಖಕರವೆಂದು ಭಾವಿಸಿದ್ದಾಗಲೇ, ಏನೆಂದು ಹೇಳುವುದು! ಭೂಗೋಳದ ಒಂದು ಹಿಡಿಯಷ್ಟೇ ಭೂಮಿಯನ್ನು ಕೊಂಡ ಬೆಲೆ ಪೂರ್ತಿ ಕ್ರಯಪತ್ರದಲ್ಲಿ ತೋರಿಸಿದ್ದರಿಂದ ದೊಡ್ಡ ಮೊತ್ತವೊಂದು ಸ್ಟ್ಯಾಂಪ್ ಪೇಪರಿಗೆ ಖರ್ಚಾಯಿತು. ಅಂದರೆ, ದೊಡ್ಡದೊಂದು ಕಟ್ಟು ಈಗಿನ ಸರಕಾರದ ಪಾಲಾಯಿತು ಅಂತ. ಹಾಗಾಗಿ ಭೂಮಿಯ ಒಡೆಯನಿಗೆ ಸರಕಾರ ಎಲ್ಲ ವಿಧದ ರಕ್ಷಣೆ ನೀಡಬೇಕು ತಾನೇ? ಮನೆ ತೆರಿಗೆ, ಜಾಗದ ಮೇಲಿನ ತೆರಿಗೆ ಅಂತ ಎಲ್ಲ ಕಟ್ಟುತ್ತಿದ್ದೇನೆ. ಬೆಂಕಿ ಬೆಲೆಗೆ ಕೊಂಡ ಈ ತುಂಡು ಭೂಮಿಯ ಎಲ್ಲ ವ್ಯಾಜ್ಯಗಳನ್ನು ಮುಗಿಸಿದ್ದೇನೆ. ಹಳೆಯ ದಾಖಲೆಗಳೆಲ್ಲ ಪೆಟ್ಟಿಗೆಯಲ್ಲಿ ಭದ್ರವಾಗಿವೆ. ಭೂಗೋಳದ ಈ ಎರಡೆಕರೆ ತುಂಡು ಭೂಮಿಯ ಮೇಲೆ ಕ್ಷೀರಪಥದಲ್ಲೋ, ಸೌರವ್ಯೂಹದಲ್ಲೋ, ಅನಂತ ವಿಶ್ವದಲ್ಲೋ ಅಥವಾ ಅದರಾಚೆಗಿನ ಯಾವ ಪ್ರಪಂಚದ ಯಾವೊಬ್ಬರಿಗೂ ಏನೆಂದರೆ ಏನೂ ಅಧಿಕಾರವಿಲ್ಲ. ಈ ಬಗ್ಗೆ ನಾಡಾಳುವ ಸರಕಾರವೇ ಭರವಸೆ ಕೊಟ್ಟಿದೆ. ಆದರೆ!

ಇಲ್ಲಿ ತೆಂಗು, ಮಾವು ಮತ್ತು ಹಲಸಿನ ಮರಗಳಷ್ಟೇ ಅಲ್ಲ, ಪೇರಳೆ,



ಕಸಿಮಾವು, ನುಗ್ಗೆ, ಹುಣಸೆ, ಪಪ್ಪಾಯ, ದಾಳಿಂಬೆ, ಸಪ್ಪೋಟ, ಮರಗಳೂ ಇವೆ. ತೇಗ ಮತ್ತು ಪೈನ್ ಮರಗಳೂ ಇವೆ. ಗೋಲ್ಡನ್ ದೇವಕಣಗಿಲೆ, ಮ್ಯಾಂಗೊಸ್ಟೀನ್ ಮರಗಳೂ ಇವೆ. ಅಂಗಳದ ಅಂಚಿನಲ್ಲಿ ಹೂಗಿಡಗಳು ಬಿಳಿ ಕಣಗಿಲೆ, ಎಲ್ಲವನ್ನು ಸುತ್ತುವರಿದು ಎರಡೆಕರೆಗೆ ಜಮೀನಿಗೆ ಮುಳ್ಳುಬೇಲಿ ಹಾಕಲಾಗಿದೆ. ಗಟ್ಟಿಯಾದ ಕಬ್ಬಿಣದ ಗೇಟೂ ಇದೆ. ಗೇಟಿನ ಎರಡೂ ಕಡೆಗೆ ಬಿಳಿ ಮತ್ತು ಕೆಂಪು ಬಣ್ಣಗಳಿಂದ ತುಂಬಿರುವ ಬೋಗನ್‌ವಿಲ್ಲಾ. ಗೇಟಿನಿಂದ ಅಂಗಳದ ತನಕ ಮರಳು, ಜಾಗ ಮತ್ತು ಮನೆಗಳೆರಡನ್ನೂ ಕಾಯಲು ಒಬ್ಬ ಸಮರ್ಥ ಕಾವಲುಗಾರ; ಶಾನ್ ಎಂಬ ಹೆಸರಿನ ಒಂದು ನಾಯಿ, ಮತ್ತು ನಮ್ಮನ್ನು ಆಶ್ರಯಿಸಿ ಬದುಕುವ ಕೋಳಿಗಳು. ದನಕರುಗಳು, ಆಡುಗಳು, ಬೆಕ್ಕುಗಳು. ಇವರೆಲ್ಲರೊಂದಿಗೆ ಸೌಹಾರ್ದತೆಯಿಂದ ಒಟ್ಟಾಗಿ ಬದುಕು ಸಾಗುವುದು. ನನ್ನ ಹೆಂಡತಿಯೊಂದಿಗೆ ಮಕ್ಕಳು ಮತ್ತು ಅವರ ಮಕ್ಕಳು ಇದ್ದಾರೆ. ಎಲ್ಲ ಈ ಸುಖ ನೆಮ್ಮದಿಯ ಬದುಕು ನಡೆಯುವುದು ತೆಂಗಿನ ಕಾಯಿಗಳ ಆಸರೆಯಲ್ಲಿ ತೆಂಗಿನಕಾಯಿ. ತಲೆಗೆ ಹೋಗ್ತಾ ಇದೆಯಾ? ತೆಂಗಿನಕಾಯಿ ಅದುವೇ ಕತೆ!

ಬುಡ ಅಗೆಸಿ ತೆಂಗುಗಳಿಗೆಲ್ಲ ಬೇಕಾದಷ್ಟು ಗೊಬ್ಬರ, ಉಪ್ಪು, ಗುಮ್ಮಾಯವೆಲ್ಲಾ ಹಾಕಿಸಿದ್ದೇನೆ. ಬಹಳ ಕಾಲದಿಂದ ಸರಿಯಾಗಿ ಆಹಾರ ಕಂಡಿರದಿದ್ದ ತೆಂಗುಗಳು ಈಗ ಫಲ ಕೊಡತೊಡಗಿದವು. ಹತ್ತಿಪ್ಪತ್ತು ಎಳನೀರುಗಳು ಒಂದೊಂದು ಗೊನೆಯಲ್ಲಿ ತೂಗಾಡತೊಡಗಿದವು. ಅವುಗಳನ್ನು ಕಾಣುವಾಗ ನಮ್ಮೆಲ್ಲರ ಮುಖ ಅರಳುವುದು. ತೆಂಗಿನ ಕಾಯಿಗೆ ಬೆಲೆ ಬೇರೆ ಏರುತ್ತಿದೆ. ಬೆಳೆಯಲಿ ಹೀಗೆ ಹಗಲು ರಾತ್ರಿಗಳು ನೆಮ್ಮದಿಯಿಂದ ಉರುಳುತ್ತಿರುವಾಗ..

ದಾಖಲೆ ಪತ್ರಗಳನ್ನೂ ಮುಳ್ಳು ಬೇಲಿಗಳನ್ನೂ, ಶಾನನ್ನೂ, ಸರಕಾರವನ್ನೂ ಪ್ರಪಂಚದ ಯಾರೊಬ್ಬರನ್ನೂ ಲೆಕ್ಕಿಸದೆ ಒಂದು ತಂಡ ಪ್ರತ್ಯಕ್ಷವಾಗಿದೆ. ಇವರಿಗೆ ಈ ಎರಡೆಕರೆ ಖಾಸಗಿ ಸೊತ್ತಿನಲ್ಲಿ ಏನಧಿಕಾರ?

ಮೊದಲು ಕಂಡದ್ದು ಹಕ್ಕಿಗಳು ಮತ್ತು ಚಿಟ್ಟೆಗಳನ್ನು! ಎಷ್ಟೊಂದು ಬಗೆಯ ಹಕ್ಕಿಗಳು ಇವೆಯನ್ನಿ! ಅವೆಷ್ಟು ಪಾತರಗಿತ್ತಿಗಳು. ಹಕ್ಕಿಗಳು ಮರಗಳ ಕೊಂಬೆಗಳಲ್ಲಿ, ಗಿಡಗಳ ಮೇಲೆಲ್ಲ ಕೂತು ಗಲಾಟೆ ಎಬ್ಬಿಸಿವೆ. ಚಿಟ್ಟೆಗಳು ಹಲವು ಬಣ್ಣಗಳಲ್ಲಿ ಅಂಗಳ ತುಂಬಾ ಹಾರಾಡಿಕೊಂಡಿವೆ.

ಹಾಗೆ ನೋಡಿದರೆ ಇದೆಂತ ನ್ಯಾಯ? ಇವೆರಲ್ಲ ಇಲ್ಲಿ ಯಾಕೆ ಬಂದರು? ಪುರಾತನವಾದ ಯಾವುದೋ ಹಕ್ಕು ಸ್ಥಾಪಿಸಲೆಂಬಂತೆ? ಈ ಭೂಮಿಯ ಮೇಲೆ ಮನುಷ್ಯನೆಂಬ ಪ್ರಾಣಿ ಹುಟ್ಟುವ ಮೊದಲೇ ನಾವಿಲ್ಲಿದ್ದೆವು ಎಂಬ ಭಾವ! ಇರಲಿ ಎಂದು ಹಕ್ಕಿಗಳನ್ನೂ ಚಿಟ್ಟೆಗಳನ್ನೂ ಓಡಿಸಲಿಲ್ಲ. ಆದರೆ ಕಾಗೆಗಳು! ಅಡುಗೆ ಮನೆಗೆ ನುಗ್ಗಿ ಆಹಾರ ಪದಾರ್ಥಗಳನ್ನು ಕದ್ದು ಕೊಂಡು ಹೋಗುವುದೆಂದರೆ? ಎರಡು ಕಾಗೆಗಳು ಈಗಾಗಲೇ ಯಾರ ಒಪ್ಪಿಗೆಯನ್ನೂ ಕೇಳದೆ ಎರಡು ತೆಂಗುಗಳಲ್ಲಿ ಗೂಡು ಕಟ್ಟಿವೆ. ಮೊಟ್ಟೆ ಇಟ್ಟಿವೆ. ಉಳಿದ ಹಕ್ಕಿಗಳಿಗಿಂತ ಕಾಗೆಗಳ ಕೂಗು ಸ್ವಲ್ಪ ಅಸಹನೀಯ. ಅದೂ ಅಲ್ಲದೆ ಕೋಳಿಮರಿಗಳನ್ನು ಎತ್ತಿಕೊಂಡು ಹೋಗುತ್ತವೆ! ಅದೇ ಉದ್ದೇಶದೊಂದಿಗೆ ಹದ್ದುಗಳೂ ಹಾರಾಡುತ್ತಿವೆ; ಕೋಳಿ ಮರಿಗಳಿಗೆ ಗುರಿ ಇಟ್ಟು ತೆಂಗಿನ ಮೇಲೆ ಕೂರುತ್ತವೆ.

ಈ ಕೋಳಿಮರಿಗಳ ಕದ್ದೊಯ್ಯಲು ಇನ್ನೊಂದು ಹಕ್ಕಿಯೂ ಇದೆ. ಕರಿರೆಕ್ಕೆಯ ಚಾಣ. ಪೊದೆಗಳಲ್ಲಿ ಮುಂಗುಸಿಗಳು. ತಮಾಷೆ ಅಲ್ವಾ! ಕೋಳಿ ಭೋಜನಕ್ಕೆ ಕಾದಿರುವ ನರಿಗಳ ಗುಂಪು ಅಲ್ಲೇ ಪಕ್ಕದಲ್ಲಿದೆ.

ಇವುಗಳಿಗೆಲ್ಲ ನನ್ನ ಎರಡೆಕರೆ ಜಮೀನಿನಲ್ಲಿ ಇರುವ ಅಧಿಕಾರವಾದರೂ ಏನು ಎಂದು ಯೋಚಿಸುತ್ತಿರುವಾಗಲೇ ಕೈಕಾಲುಗಳಿಲ್ಲದ, ರೆಕ್ಕೆಯೂ ಇಲ್ಲದ ಇನ್ನೊಂದು ಭೀಕರ ರೂಪ ಪ್ರತ್ಯಕ್ಷವಾಯಿತು! ಅದು ಮಧ್ಯಾಹ್ನದ ಹೊತ್ತು. ಹೊರಗಡೆ ಒಳ್ಳೆಯ ಬಿಸಿಲಿದೆ. ಕೋಳಿಗಳು ಕೂಗತೊಡಗಿದವು. ನಾಯಿ ಬೊಗಳಿತು. ಹಕ್ಕಿಗಳು ಒಟ್ಟಾಗಿ ಗಲಾಟೆ ಎಬ್ಬಿಸಿದವು. ಆಲಸ್ಯದಿಂದ ಎದ್ದು ಹೋಗಿ ನಿಂತದ್ದು ಭಯಂಕರವಾದ  ಒಂದು ನಾಗರ ಹಾವಿನ ಮುಂದೆ!

ಹಾವು ತಲೆ ಎತ್ತಿ ಹೆಡೆ ಬಿಡಿಸಿ ಗಂಭೀರವಾಗಿ ನಿಂತಿದೆ; ನೀನ್ಯಾವನೋ ಇಲ್ಲಿ ಬಂದಿರೋದು ಎಂಬಂತೆ. ಹಾವನ್ನೀಗ ಏನು ಮಾಡುವುದು? ಆಯುಧಗಳಿಲ್ಲ. ಒಂದು ಕೋಲು ಕೂಡ ಇಲ್ಲವಲ್ಲ. ಬರಿಗೈ ಮನುಷ್ಯ ಎಷ್ಟೊಂದು ಅಸಹಾಯಕ! ಹಾಗಾದರೆ ಹೆಂಡತಿಯನ್ನು ಕರೆದು ಕೋಲು ತರಲು ಹೇಳೋಣ. ಹಾವನ್ನು ಹೊಡೆದು ಕೊಂದು ಗುಂಡಿ ತೋಡಿ ಮುಚ್ಚುವ. ಆದರೆ ಇದು ಸರಿಯೇನು? ಸಕಲ ಪ್ರಪಂಚಗಳನ್ನೂ ಅದರಲ್ಲಿರುವ ಎಲ್ಲ ಜೀವಿಗಳನ್ನು ಸೃಷ್ಟಿಸಿದ ದೇವರು ಮನುಷ್ಯರನ್ನು ಸೃಷ್ಟಿಸಿದಂತೆಯೇ ಹಾವುಗಳನ್ನೂ ಸೃಷ್ಟಿಸಿದ. ಹಾವು



ಕೂಡ ಭೂಮಿಯ ಹಕ್ಕುದಾರರಲ್ಲಿ ಒಬ್ಬ. ಇಲ್ಲಿ ಪರಸ್ಪರ ಸಹಬಾಳ್ವೆ ಬೇಕಾಗಿರುವುದು. ಈ ತತ್ವ ಸರಿಯಾಗಿದೆ ತಾನೇ? ಆದರೆ ಒಟ್ಟಾಗಿ ಬಾಳಲು ಸಾಧ್ಯವೇ? ವಿಷ ಕಚ್ಚಿದರೆ  ಸಾವು! 'ಓ ಸರ್ಪವೇ_ ನಿನಗಿಲ್ಲಿ ಯಾವ ಹಕ್ಕೂ ಇಲ್ಲ. ನನ್ನ ಈ ಎರಡೆಕರೆ ಭೂಮಿಯಿಂದ ತಕ್ಷಣ ಹೊರಡಬೇಕು ನೀನು!

ಆದರೆ ಹೋಗುವುದಾದರೂ ಎಲ್ಲಿಗೆ? ಪಕ್ಕದ ಜಮೀನಿಗೆ ಹೋದರೆ ಅಲ್ಲಿಯ ಒಡೆಯರು ಉಪದ್ರವಿಸಲಾರರು ಎಂದು ಏನು ಖಾತರಿ? ಭೂಮಿಯನ್ನು ತುಂಡು ತುಂಡುಗಳಾಗಿ ಕತ್ತರಿಸಿ ಒಬ್ಬೊಬ್ಬರು ಅಂದರೆ ಮನುಷ್ಯರು, ಹಕ್ಕು ಸ್ಥಾಪಿಸಿದ್ದರಲ್ಲ. ಹೀಗಿರುವಾಗ ಈ ಖಗ–ಮೃಗಾದಿಗಳು ಏನು ತಾನೇ ಮಾಡಿಯಾವು? ಅವುಗಳು ಹೋಗುವುದಾದರೂ ಎಲ್ಲಿಗೆ? ಈ ನಾಗರಹಾವಾದರೂ ಎಲ್ಲಿಗೆ ಹೋಗಬೇಕು? ಎಲ್ಲಾದರೂ ಬದುಕಲಿ. ಕಂಡಿಲ್ಲ. ಕೇಳಿಲ್ಲ ಎಂದು ಸುಮ್ಮನಿದ್ದರಾಯಿತು. ಆದರೆ ಭಗವಂತಾ, ವಿಷ. ಇನ್ನು ಚೂರು ಎಚ್ಚರಬೇಕು. ನೋಡಿ ನಡೆಯಬೇಕು. ಬೆಳಕಿಲ್ಲದೆ ಕತ್ತಲಲ್ಲಿ ಹೊರಗಿಳಿಯಬಾರದು ಹುಷಾರು!

ಹಾವು ಸ್ವಲ್ಪ ಸಮಯದ ನಂತರ ಜಗಳ ಮುಗಿಸಿ ಶಾಂತವಾಯಿತು. ಮೆಲ್ಲನೆ ಬಾಲ ಎಳೆಯುತ್ತಾ ಸರಿಯಿತು. ನಾಯಿ ಬೊಗಳುತ್ತಾ ಅದರ ಹಿಂದೆ. ಹಾವು ಬೇಲಿಯ ತೂತಿನಿಂದ ನುಸುಳಿ ಪಕ್ಕದ ತೋಡಿಗಿಳಿಯಿತು.

ಹೆಂಡತಿ ಅಡುಗೆ ಮನೆಯಿಂದ ಹೊಗೆ ಕುಡಿದು ಕೆಂಪಾದ ಕಣ್ಣುಗಳೊಂದಿಗೆ ಓಡಿ ಬಂದು ಕೇಳಿದಳು; "ನಾಯಿ ಬೊಗಳುತ್ತಿತ್ತು. ಹಕ್ಕಿಗಳು ಒಟ್ಟಾಗಿ ಗಲಾಟೆ ಎಬ್ಬಿಸಿದ್ದವು. ಹಾವು ಕೇರೆಯೋ ಬಂದಿತ್ತಾ?"

"ಕಾಮ್ರೇಡ್ ನಾಗರ!"

"ಹೊಡೆದು ಕೊಂದಿರಾ"?

"ಇಲ್ಲ. ಭವತಿಯಂತೆ ಅದೂ ಕೂಡ ದೇವರ ಸೃಷ್ಟಿ. ಅದೂ ಬದುಕಲಿ. ಈ ಭೂಮಿಯ ಹಕ್ಕುದಾರ ಅದು."

"ಇದೊಳ್ಳೆ ಕತೆ. ನಮ್ಮ ಮಕ್ಕಳು ಆಡುವ ಜಾಗ ಇದು. ನಮ್ಮ ನೆಲದಲ್ಲಿ ಅದನ್ನು ಕಂಡರೆ ಹೊಡೆದು  ಕೊಲ್ಲಬೇಕು.

"ಕೊಲ್ಲಬೇಕು ಅಂತ ಧೈರ್ಯವಾಗಿ ಹೇಳಬಹುದು. ಕೊಂದೂ ಬಿಡಬಹುದು. ಜೀವ ಕೊಟ್ಟು ಬದುಕಿಸಲು ನಮ್ಮಿಂದ ಸಾಧ್ಯವಿದೆಯೇ"?

"ಮನುಷ್ಯರೆಲ್ಲಾ ಕಡಿದು ಕೊಲ್ಲುವ ಹಾವನ್ನು ದೇವರು ಸೃಷ್ಟಿಸಿದ್ದಾರೋ ಯಾಕೆ ಅಂತ?"

"ಆನೆಗಳು, ಹುಲಿ, ಸಿಂಹ, ಕರಡಿ, ಕಾಡೆಮ್ಮೆ, ನೀರುಕುದುರೆ, ಕಡವೆ, ಮೊಸಳೆ, ಒಂಟೆ, ಕುದುರೆ, ಒರಾಂಗುಟಾನ್, ಕಾಡು ನಾಯಿ, ಚೇಳು, ಹೆಬ್ಬಾವು, ಸೊಳ್ಳೆ, ತಿಗಣೆ, ಬಾವಲಿ, ರಣಹದ್ದು, ನವಿಲು, ಜಿಂಕೆ, ಮೈನಾ, ಗಿಳಿಗಳು ಹೀಗೆ ಭೂಮಿಯ ಹಕ್ಕುದಾರರಾಗಿ ಬಹಳಷ್ಟು ಜೀವಿಗಳನ್ನು ಸೃಷ್ಟಿಸಲಾಗಿದೆ. ಯಾಕೆ? ತಿಮಿಂಗಿಲ, ಶಾರ್ಕು, ಮೀನುಗಳು, ಅಕ್ಟೋಪಸ್, ಕಡಲು ಹಾವುಗಳು ಇವುಗಳನ್ನೆಲ್ಲ ಯಾಕೆ, ಯಾಕಾಗಿ ಸೃಷ್ಟಿಸಿದ್ದು? ಒಂದೂ ತಿಳಿಯದು. ಎಲ್ಲವೂ ದೇವ ನಿಶ್ಚಯ. ಏನೇ ಆದರೂ ಯಾವುದನ್ನೂ ಕೊಲ್ಲದೆ ಬದುಕಲು ಪ್ರಯತ್ನ ಪಡಬೇಕು. ಹಿಂಸೆ ಕೂಡದು'. "ಒಳ್ಳೆಯ ಯೋಜನೆ! ಮನೆಯೊಳಗಡೆ ಪೂರ್ತಿ ಜೇಡ, ಹಲ್ಲಿಗಳು, ಓತಿಕ್ಯಾತ, ಚೇಳುಗಳು. ಎಲ್ಲ ಅಡುಗೆ ಮನೆಗೆ ನುಗ್ಗಿತ್ತಿವೆ. ಬೇಲಿ ಪೂರ್ತಿ ಗೆದ್ದಲು ತಿಂದಿವೆ. ಮನೆಯೊಳಗಡೆಯೂ ಗೆದ್ದಲು ಹಿಡಿದಿವೆ. ಪುಸ್ತಕಗಳನ್ನು, ಬಟ್ಟೆಗಳನ್ನು ಗೆದ್ದಲು ತಿಂದು ಹಾಕುತ್ತಿವೆ. ಇಲಿಗಳ ಉಪದ್ರ ಹೇಳೋದೇ ಬೇಡ. ಆ ರೇಡಿಯೋಗ್ರಾಮಿನ ವಯರುಗಳನ್ನೆಲ್ಲಾ ಇಲಿಗಳು ಕಡಿದು ಹಾಕಿದ್ದನ್ನು ನೀವು ನೋಡಿಲ್ವಾ? ಮನೆ ಪೂರ್ತಿ ಇರುವೆಗಳು, ಕೀಟಗಳು, ಜಿರಳೆಗಳು ಇಲ್ಲಿ ನೋಡಿದ್ರೆ ನಿಮ್ಮ ಜಂತು ಪೂಜೆ!"

"ನಾನು ಯಾವ ಜಂತುವನ್ನು ಪೂಜಿಸುತ್ತಿಲ್ಲ"

ಮನುಷ್ಯರಲ್ಲಿ ಒಂದು ವರ್ಗದ ಜನತೆ ಪ್ರಾಣಿ ಪಕ್ಷಿಗಳನ್ನು ಪೂಜಿಸುತ್ತಾರೆ; ಹಾವುಗಳನ್ನೂ ಪೂಜಿಸುತ್ತಾರೆ. ಹಾವುಗಳನ್ನೂ ದೈವತ್ವಕ್ಕೇರಿಸಿ ಆರಾಧಿಸುತ್ತಾರೆ. ಹಾವಿನ ಮೇಲೆಯೇ ಒಬ್ಬ ದೇವರು ಮಲಗುವುದಂತೆ. ಅದೂ ಕೂಡ ಕಡಲಿನಲ್ಲಿ. ಮತ್ತೊಂದು ದೇವರ ಕುತ್ತಿಗೆಯಲ್ಲಿ ಹಾವು ಸುತ್ತಿಕೊಂಡಿದೆ. ಇಲಿ ಇನ್ನೊಂದು ದೇವರ ಇಷ್ಟದ ವಾಹನವಂತೆ. ಮೀನು ಅಷ್ಟಪದಿ, ಹೆಬ್ಬಾವು, ಕಡವೆ ಮೊದಲಾದ ಜೀವಿಗಳನ್ನು ಪೂಜಿಸುವ ವರ್ಗಗಳೂ ಇವೆ. ಕೆಲವರು ಭೂಗೋಳವನ್ನೇ ದೇವಿಯಾಗಿ ಭಾವಿಸುತ್ತಾರೆ ಅವರ ಪ್ರಕಾರ ಸೂರ್ಯ ಚಂದ್ರರೂ ದೇವರುಗಳು



ಭೂಮಿ ಚಪ್ಪಟ್ಟೆಯಾಗಿದೆ ಎಂದು ಕೆಲವರು ವಾದಿಸುತ್ತಾರೆ. ಈ ಭೂಮಿ ಮೇಲಿನ ಮನುಷ್ಯರ ನಂಬುಗೆಗಳು ಎಷ್ಟೊಂದು ತೆರದವು? ಕೆಲವರು ಏಕ ದೇವೋಪಾಸನೆ ಮಾಡುತ್ತಾರೆ. ಕೆಲವರು ಬಹುದೈವಾರಾಧಕರು. ಇನ್ನು ಕೆಲವರು ಯಾವ ದೇವರನ್ನೂ ನಂಬುವುದಿಲ್ಲ. ಆದರೂ ಜಗಳ ಕೊಲೆಯ ತನಕವೂ ಹೋಗುವುದಿದೆ; ಯುದ್ಧಗಳು ನಡೆಯುತ್ತವೆ. ಭೂಮಿ ದುಂಡಗಿದೆ ಎಂಬುದು ಒಂದು ನಂಬಿಕೆಯಾದರೆ, ಅದನ್ನು ಒಪ್ಪದಿರುವ ಜನರೂ ಇದ್ದಾರೆ. ಗೋಳಾಕಾರದ ಭೂಮಿ ಯಾವ ಆಸರೆಯೂ ಇಲ್ಲೆ ವ್ಯೋಮಾಕಾಶದಲ್ಲಿ ಸುತ್ತುತ್ತಿದೆ. ಅದೆಷ್ಟೋ ದೂರದಲ್ಲಿ ಹೊತ್ತುರಿಯುವ ಸೂರ್ಯನ ಕಡೆ ಬರುವಾಗ ಭೂಮಿಯಲ್ಲಿ ಹಗಲು. ಮತ್ತೊಂದು ಭಾಗದಲ್ಲಿ ಇರುಳು. ಇರುಳು ಆದಿ ಅಂಧಕಾರ. ಕಾಲದ ನಿಲ್ಲದ ಓಟದಲ್ಲಿ ಒಂದು ದಿನ ಸೂರ್ಯ ಮತ್ತೆಂದೂ ಬೆಳಗದಂತೆ ಆರಿಹೋಗುತ್ತಾನೆ. ಅದಕ್ಕೂ ಮೊದಲೇ ಈ ಭೂಮಿ ಸತ್ತಿರುತ್ತದೆ. ಸಕಲ ಚರಾಚರಗಳೂ ನಾಶವಾಗಿರುತ್ತವೆ. ಗ್ರಹಗಳು ಡಿಕ್ಕಿ ಹೊಡೆದು ಬೂದಿಯಾಗುತ್ತವೆ. ಅದೇ ಹಳೆಯ ಕೋಸ್ಮಿಕ್ ಡಸ್ಟ್, ನಂತರ ಅನಂತ ಇರುಳು. ದೇವರು ಮೊದಲು ಸೃಷ್ಟಿಸಿದ್ದು ಈ ಕತ್ತಲನ್ನೇ ಇರಬೇಕು. ಎರಡನೆಯ ಸೃಷ್ಟಿ ಬೆಳಕು. ಕಾವು ಮತ್ತು ಬೆಳಕುಗಳೆರಡರಲ್ಲವೇ ಅತಿಮುಖ್ಯ ಸಂಗತಿಗಳು. ಜೀವಿಗಳೆಲ್ಲಾ ಕಾವು ಮತ್ತು ಬೆಳಕಿನ ಸಂತತಿಗಳು ಗೆದ್ದಲೂ, ಜೇಡರೂ, ಮರಗಳೂ, ಖಗ ಮೃಗಾದಿಗಳು, ಕ್ರಿಮಿಕೀಟಗಳು, ಇರುವೆ, ಹಾವು, ಮನುಷ್ಯರೂ ಕೂಡ ಹೆಂಡತಿ ಹೇಳಿದಳು.

"ಬರಿಕೆ ಮರದಲ್ಲಿ ಹಣ್ಣಾದ ಹಲಸನ್ನು ಅಳಿಲು ಮತ್ತು ಕಾಗೆಗಳು ತಿಂದು ಮುಗಿಸುತ್ತಿವೆ. ಪೇರಳೆ, ಸಪೋಟ, ಜೀಗುಜ್ಜೆ, ದಾಳಿಂಬೆ ಎಲ್ಲವೂ ಹಕ್ಕಿಗಳ, ಬಾವಲಿಗಳ ಪಾಲಾಗುತ್ತಿವೆ". "ಅದಲ್ಲದೆ ಮೋಜು. ಯಾವ ಆಸರೆಯೂ ಇಲ್ಲದ ಕೋಟಿಗಟ್ಟಲೆ ಗ್ರಹಗಳನ್ನು ನೆಲೆ ನಿಲ್ಲಿಸಿರುವ ದೇವರು ಭೂಮಿಯಲ್ಲಿ ಜೀವಿಗಳೆಂದು ಏನೇನಲ್ಲ ಸೃಷ್ಟಿಸಿದ್ದ! ಹಣ್ಣುಗಳು, ಹೂಗಳು, ಗೆಡ್ಡೆಗೆಣಸು, ಧಾನ್ಯಗಳು, ಹುಲ್ಲು, ನೀರು, ಗಾಳಿ, ಮತ್ತೆ ಈ ಬೆಳಕು ಮತ್ತು ಶಾಖ. ಕ್ರಿಮಿ ಕೀಟಗಳು ಮೃಗಗಳು ಹಕ್ಕಿಗಳು ಮರಗಿಡಗಳೆಲ್ಲಾ ಭೂಮಿಯ ಉತ್ಪನ್ನಗಳ ಹಕ್ಕುದಾರರು ಎಂಬ ಆತ್ಯಂತಿಕ ಸತ್ಯವನ್ನು ಯಾವಾಗಲೂ ನೆನಪಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು ಎಂದು ಅನಿಸುತ್ತಿಲ್ಲವೇ?".

ಹೆಂಡತಿ ಕೇಳಿದಳು;

"ಒಂದು ಸಂಗತಿ ಕೇಳಿದರೆ ಕೋಪ ಮಾಡಲ್ಲ ತಾನೇ"?

"ಎಳ್ಳಷ್ಟೂ ಕೋಪವಿಲ್ಲ. ಕೇಳು".

"ಹಾಗಾದರೆ ತಮ್ಮಂತಹ ಮಹಾತ್ಮರು ಮದುವೆ ಆಗಿ ಹೆಂಡತಿ, ಮಕ್ಕಳು, ಮನೆ ಮಠ ಅಂತ ಸಮಯ ಹಾಳು ಮಾಡಿಕೊಳ್ಳದೆ ಯಾವುದಾದರೂ ಕಾಡಿನ ಗುಹೆಯಲ್ಲಿ ಬಟ್ಟೆ ಬರೆ ಕೂಡ ಇಲ್ಲದೆ ತಪಸ್ಸು ಕೂರಬೇಕಿತ್ತು."

"ತಿನ್ನೋದಕ್ಕೆ ಕುಡಿಯೋದಕ್ಕೆ ಮತ್ತು ಬೆನ್ನು ತುರಿಸಲು ಜೊತೆಗೆ ನೀನಿದ್ದರೆ ಯಾವ ಗುಹೆಯಲ್ಲಿ ಬೇಕಾದರೂ ಘೋರಾತಿಘೋರ ತಪಸ್ಸಿಗೆ ಕೂರುವೆ!?

"ಹಾಗಾದರೆ ನಮ್ಮ ಮನೆಯೆಂಬೋ ಈ ಗುಹೆಯೇ ಸಾಕು. ಆದರೆ ಇಲಿ ಹೆಗ್ಗಣಗಳು, ಹಾವು ಚೇಳುಗಳು ಈ ಗುಹೆಯೊಳಗೆ ಬರುವುದು ನನಗೆ ಇಷ್ಟವಿಲ್ಲ! ಅವುಗಳನ್ನೆಲ್ಲಾ ಹೊಡೆದು ಸಾಯಿಸಬೇಕು."

"ನಿನ್ನ ಅಭಿಪ್ರಾಯವನ್ನ ಬೆಂಬಲಿಸುವ ಜನರ ಕೆಲಸಗಳನ್ನು ನಾನು ನೋಡುತ್ತಿದ್ದೇನೆ. ಪಕ್ಷಿ ಮೃಗಾದಿಗಳನ್ನೂ ಮನುಷ್ಯ ಕೊಂದೇ ಹಾಕುತ್ತಾನೆ. ಮರ ಗಿಡಗಳನ್ನು ನಾಶ ಮಾಡುತ್ತಾನೆ. ಮನುಷ್ಯ ಮಾತ್ರ ಉಳಿಯುತ್ತಾನೆ. ಆಮೇಲೆ ಒಟ್ಟಾಗಿ ಸತ್ತು ಹೋಗುತ್ತಾರೆ" ಅದು ಪರವಾಗಿಲ್ಲ. ಆ ಕಾಲ ಬರುವಾಗ ನೋಡೋಣ. ಈಗ ಎದ್ದು ಆ ಏಣಿ ಇಟ್ಟು ಹಲಸಿನ ಹಣ್ಣ ಕಿತ್ತು ಕೊಡಿ. ನಾನೂ ನನ್ನ ಮಕ್ಕಳೂ, ಅದರ ಮಕ್ಕಳೂ ದನಗಳೂ ತಿನ್ನುತ್ತೇವೆ".

"ಹಕ್ಕಿಗಳೇ, ಅಳಿಲುಗಳೇ ಕ್ಷಮಿಸಿರಿ ನನ್ನನ್ನು" ಎನ್ನುತ್ತಾ ಹಲಸು ಕಿತ್ತೆ. ಹೆಂಡತಿಯೂ ಮಕ್ಕಳೂ ಈ ಗಂಡನೂ ಅವರ ಮಕ್ಕಳೂ ಚೆನ್ನಾಗಿ ತಿಂದರು. ದನಕರುಗಳೂ, ಜೇನಿನಂತ ಹಣ್ಣು ಸರ್ವಸ್ತುತಿಯೂ ದೇವರಿಗೆ!

ಹೆಂಡತಿ ಹೇಳಿದಳು.

"ಹೀಗೆ ಸುಮ್ಮನೆ ಕೂತು ಸೊಳ್ಳೆ, ತಿಗಣೆ, ಚೇಳು, ಹಾವುಗಳ ಬಗ್ಗೆ ಯೋಚಿಸುವುದನ್ನು ಬಿಟ್ಟು ನಮ್ಮ ಮನೆ ಸುತ್ತ ಮುತ್ತ ಒಮ್ಮೆ ನೋಡಿ, ಪ್ರಾಣಿ ಪಕ್ಷಿಗಳ, ಸೊಳ್ಳೆ ಹಾವುಗಳ ಯೋಚನೆಯನ್ನು ದೇವರು ನೋಡಿಕೊಳ್ಳುತ್ತಾನೆ. ನಿಮಗೊಂದು ಸಂಗತಿ ಗೊತ್ತಾ? ಮನೆಯ ಹೊರಗಡೆ ಗೋಡೆಗೆ ಒತ್ತಿಕೊಂಡು ಕೆಂಜಿರುವೆ ಗೂಡು ಕಟ್ಟುತ್ತಿದ್ದಾಗ ನಾನು ಅದಕ್ಕೆ ಬೆಂಕಿ ಇಡಲು ಹೊರಟಿದ್ದೆನಲ್ಲಾ?



ಆಗ ನನ್ನನ್ನು ತಡೆದಿರಿ. ಈಗ ಆ ಇರುವೆಗಳೆಲ್ಲಾ ಮನೆಯೊಳಗಡೆಗೆ ವಾಸ. ಮನೆಯ ಅಟ್ಟವನ್ನೆಲ್ಲಾ ಗೆದ್ದಲು ತಿಂದು ತೇಗುತ್ತಿವೆ. ಇರುವೆಗಳನ್ನೂ ಗೆದ್ದಲನ್ನೂ ಕೊಲ್ಲಬೇಕು".

"ಹಿಂಸೆ ನನ್ನಿಂದಾಗದು"

"ನಮಗೆ ತೊಂದರೆ ಕೊಡುವವರಿಗೆ ನಾವೂ ತೊಂದರೆ ಕೊಡಬೇಕು!"

"ಅದು ಬೇಡ, ಭಗವಂತ ಏನನ್ನಬಹುದು? ಪ್ರೇಮದಿಂದ ವ್ಯವಹರಿಸೋಣ. ನನಗೆ ಈ ಲೋಕವನ್ನು ಪ್ರೇಮದಿಂದ ತಬ್ಬಿಕೊಳ್ಳಬೇಕು ಅಂತ ಅನಿಸುತ್ತಿದೆ.

"ನಾನು ಮತ್ತು ಮಕ್ಕಳೇ ನಿಮ್ಮ ಲೋಕ ಅಂತ ತಿಳಿದುಕೊಳ್ಳಿ. ಕೋಪಿಸಬೇಡಿ ."

"ಅಷ್ಟು ಸಣ್ಣವನಾಗಲು ಸಾಧ್ಯವಿಲ್ಲ."

"ಹಾಗಾದರೆ ದೊಡ್ಡವರಾಗಿಬಿಡಿ!" ಅವಳು ಕೋಪಿಸಿಕೊಂಡಳು. ಅವತ್ತು ರಾತ್ರಿ ಒಂದು ಘಟನೆ ನಡೆಯಿತು. ಇಷ್ಟೇ ಇಷ್ಟು ಭಯಾನಕ! ಮನೆ ಮೇಲೆ ದಾಳಿ ಮಾಡುವ ಹುನ್ನಾರ! ಜೀವಕ್ಕೂ ಸೊತ್ತಿಗೂ ರಕ್ಷಣೆಯಿಲ್ಲ! ಇದು ಯಾವ ಸೀಮೆ ನ್ಯಾಯ?

ರಾತ್ರಿ ಊಟ ಮುಗಿಸಿ ನೆಮ್ಮದಿಯಿಂದ ಮಲಗಿದ್ದೆ. ಸೆಕೆಗಾಲ. ಫ್ಯಾನ್ ಹಾಕಿ ಒಂದು ಸಣ್ಣ ಕರೆಂಟು ದೀಪದ ಬೆಳಕಿನಲ್ಲಿ ಹಾಸಿಗೆಯಲ್ಲಿ ಮಲಗಿ ಓದುತ್ತಿದ್ದೆ. ಇನ್ನೂ ವಿಕಸನಗೊಳ್ಳುತಿರುವ ಮಹಾ ಪ್ರಪಂಚ! ಓದುತ್ತಾ ಮಲಗಿದ್ದಾಗ ಸಾವಿರಾರು ಸಂಖ್ಯೆಯ ಕ್ರಿಮಿಕೀಟಗಳು_ ಜಿರಳೆ, ಜೀರುಂಡೆ, ಮಿಂಚುಹುಳ_ ಇವರೆಲ್ಲ ಈ ಮನೆಯಲ್ಲಿ ವಾಸವಿರುವವರಾ? ಭಗವಂತಾ! ಕಿಟಕಿಯಿಂದ ನುಸುಳಿ ಬಂದಿರಬೇಕು . ಬೇಕಾದಷ್ಟು ಸೊಳ್ಳೆಗಳೂ ಇವೆ. ತಿಗಣೆ ಅಲ್ಲೇ ಬಿಡಾರ ಹೂಡಿದಂತಿದೆ. ಸೊಳ್ಳೆಯೊಂದು ತೋಳಿನಲ್ಲಿ ಕೂತು ರಕ್ತ ಕುಡಿದು ಬದುಕಲೆಂದೇ ದೇವರು ಸೊಳ್ಳೆಗಳನ್ನು ಸೃಷ್ಟಿಸಿದ. ಜೊತೆಗೆ ತಿಗಣೆಗಳನ್ನೂ ಖಂಡಿತಾ ಕಡಿಯಬೇಕು ಅವು ಒಂಚೂರು ನೋವು ಅನುಭವವಾಗುತ್ತಿದೆ. ಹೊಡೆದು ಕೊಲ್ಲಬೇಕು, ಬೇಡ. ಹೊಟ್ಟೆ ಬಿರಿಯುವಷ್ಟು ಕುಡಿಯಲಿ, ಸತ್ತು ಹೋಗುವ ಮನುಷ್ಯ ದೇಹವಲ್ಲವೇ ಇದು? ಪುರಾತನವಾದ ಈ ಮನೆ, ಇದನ್ನು

ಕಟ್ಟಿದು ಯಾರು? ಇಲ್ಲಿ ಎಷ್ಟು ಹೆಣ್ಣು ಗಂಡುಗಳು ಸತ್ತಿದ್ದಾರೆ?

ನೋಡುದಾಗ ಹೆಂಡತಿ ಮಕ್ಕಳು ಬೆವರಿ ಒದ್ದೆ ಮುದ್ದೆಯಾಗಿದ್ದಾರೆ. ಅವರಿಗೆ ಚೂರು ಗಾಳಿ ಕೊಡಬೇಕು. ರಕ್ತ ಕುಡಿದು ಕೊಬ್ಬಿದ ಸೊಳ್ಳೆ ಕೆಂಪಣ್ಣನಾಗಿ ಹಾರಿ ಹೋಯಿತು. ಸೊಳ್ಳೆ ಕಡಿದ ಕಡೆ ಸ್ವಲ್ಪ ತುರಿಕೆ. ಮಲಗಿರುವುದು ಎತ್ತರದ ದಿಣ್ಣೆಯಲ್ಲಿ. ಬಾಗಿಲ ದಾಟಿದರೆ ನಾಲ್ಕೈದು ಅಡಿ ಅಗಲದ ತಗ್ಗಿನ ಜಾಗ. ಆ ಕಡೆ ಈ ಕಡೆ ಗೋಡೆಗೆ ತಾಗಿಸಿ ಈ ಎತ್ತರದ ದಿಣ್ಣೆ. ಈ ದಿಣ್ಣೆಯನ್ನು ಪ್ರಾರ್ಥನೆಗೆಂದು ಹಿಂದೆ ಯಾರೋ ಕಟ್ಟಿಸಿದ್ದು. ಪ್ರಾರ್ಥನೆ! ಪ್ರಪಂಚಗಳ ಸೃಷ್ಟಿಕರ್ತನೇ, ಕಾಪಾಡು!

ಹೆಂಡತಿ ಮಕ್ಕಳಿಗೆ ಚೂರು ಗಾಳಿ ಕೊಡಬೇಕು. ಕೆಳಗಡೆ ಒಂಧು ಚಾಪೆ ಹಾಸಿದ್ದು ಹಾಗೇ ಇದೆ. ಅದನ್ನೊಮ್ಮೆ ಕೊಡವಿ ಯಾವ ಕಾಲವಾಯಿತೋ ಏನೋ? ಆ ಚಾಪೆಗೆ ನನ್ನ ಹಾಸಿಗೆ ಹಾಕಿದೆ. ದೀಪವನ್ನು ಪಕ್ಕಕ್ಕಿಟ್ಟೆ. ಫ್ಯಾನ್ ತಿರುಗಿಸಿದೆ. ಈಗ ಎಲ್ಲರಿಗೂ ಗಾಳಿ ಸಿಗುತ್ತಿದೆ. ಫ್ಯಾನ್ ತಿರುಗುವ ಶಬ್ಧ ಮಾತ್ರ ಬಾಕಿ. ಕೋಳಿ ಹಿಡಿಯಲು ನರಿಗಳು ಬರುತ್ತಿವೆಯೇ? ಪುನುಗು ಬೆಕ್ಕು ಕೂಡ ಬರುತ್ತದೆ. ನಾಯಿ ಬೊಗಳುತ್ತಿಲ್ಲ. ತುಂಬಾ ಹೊತ್ತು ಗಮನವಿಟ್ಟು ಕಾದೆ. ಏನೂ ಇಲ್ಲ. ಹೊರಗಡೆ ಕತ್ತಲು. ಪೂರ್ತಿ ನಿಶ್ಯಬ್ದ. ಮನುಷ್ಯ ನಿದ್ದೆಯಲ್ಲಿದ್ದಾನೆ. ಭಗವಂತಾ, ನಿದ್ದೆಯೆಂದರೆ ಒಂದು ಸಣ್ಣ ಸಾವು ತಾನೆ! ಅವೆಷ್ಟು ಸಾವುಗಳು. ಬದುಕು ಹೀಗೆ ತಿಂದು ಕುಡಿದು ರಮಿಸಿ ಜಗಳಾಡಿ ಅನಂತಕ್ಕೆ ದಾಟುತ್ತಿದೆ. ಮನಸ್ಸು ಸುಮ್ಮನೆ ಹೀಗೆ ಚಂದ್ರನ ಅಂಗಳಕ್ಕೆ ಹೋಯಿತು. ಗುಳಿ ಗುಂಡಿಗಳು ಗುಡ್ಡೆಗಳು. ಬಂಜರು ನೆಲ. ಮರಗಳಿಲ್ಲ. ಪ್ರಾಣಿಪಕ್ಷಿಗಳಿಲ್ಲ. ನಿಶ್ಯಬ್ದತೆ ತುಂಬಿದ ಮಹಾಶೂನ್ಯತೆ. ಸತ್ತ ಕಪ್ಪು ಆಕಾಶ. ಮಿನುಗುವ ಕೋಟ್ಯಾನುಕೋಟಿ ನಕ್ಷತ್ರಗಳು. ಚಂದ್ರನೆಂಬ ಉಪಗ್ರಹವನ್ನು ದೇವರು ಸೃಷ್ಟಿಸಿದ್ದು ಯಾಕೆ? ಅಥವಾ ಈ ಪ್ರಪಂಚವನ್ನೇ ಯಾಕೆ ಸೃಷ್ಟಿಸಿದ?

ನೊಣವೊಂದು ಅದೆಲ್ಲಿಂದಲೋ ಬಂದು ಪುಸ್ತಕದ ಪುಟದ ಮೇಲೆ ಕುಳಿತುಕೊಂಡಿತು. ಸಾಸಿವೆ ಕಾಳು ಕಣ್ಣು. ನೀಲಿ ರೆಕ್ಕೆ. ಎಷ್ಟು ಸುಂದರ ಈ ಸೃಷ್ಟಿ! ಭಗವಂತನ ಸೃಷ್ಟಿಗಳೆಲ್ಲ ಪರಿಪೂರ್ಣ ಕಲಾಕೃತಿಗಳು. ಫ್ಯಾನ್ ಮನುಷ್ಯನ ಕಲೆ. ತುಂಬಾ ದೊಡ್ಡ ಅನುಗ್ರಹವೆಂದೇ ಹೇಳಬೇಕು. ಎಲೆಕ್ಟ್ರಿಕ್ ದೀಪ ಕೂಡ ಹಾಗೆಯೇ. ರೇಡಿಯೋ, ಧ್ವನಿವರ್ಧಕಗಳೂ ಕೂಡ! ಕೆಲವೊಮ್ಮೆ ಇವೆರಡೂ



ಅನುಗ್ರಹಗಳು ಅಂತ ಅನ್ನಿಸುವುದಿಲ್ಲ. ಟೆಲಿವಿಷನ್? ಮನುಷ್ಯ ಸೃಷ್ಟಿ ತಾನೆ? ಒಳ್ಳೆಯದ್ದೂ, ಕೆಟ್ಟದ್ದೂ ಎರಡೂ ಇದೆ. ಇದೆಂತಹ ನಿಶ್ಯಬ್ಧತೆ? ನರಿಗಳು ಊಳಿಡುವುದು ಕೇಳಿಸುತ್ತಿಲ್ಲ. ನಿಶ್ಯಬ್ಧತೆಯಲ್ಲೂ ಸಂಗೀತವಿದೆ. ದೀಪ ಆರಿಸಿದೆ. ಅದೇ ಆ ಆದಿಮ ಇರುಳು. ನಿಧಾನಕ್ಕೆ ನಿದ್ದೆ ಆವರಿಸಿತು. ಅದೆಂತದೋ ನೋವು! ಬೆಂಕಿಯಲ್ಲಿ ಕಾದ ಸೂಜಿಯನ್ನು ಚುಚ್ಚಿದಂತೆ. ತೋಳಿನ ಮಾಂಸ ತುಂಬಿದ ಭಾಗದಲ್ಲಿ, ಚರ್ಮ ಸುಲಿದ ಹಸಿ ಮಾಂಸಕ್ಕೆ ಶೀತಲ ಗಾಳಿ ಬೀಸಿದಂತೆ. ಉರಿ, ಸೆಳೆತ, ಕಣ್ತೆರೆದೆ. ಕತ್ತಲಲ್ಲಿ ಹುಡುಕಿ ಲೈಟ್ ಹಾಕಿ ಹೆಂಡತಿಯನ್ನು ಕರೆದೆ. ಅವಳು ಎದ್ದಳು.

"ರಟ್ಟೆಯಲ್ಲಿ ಏನೋ ನೋವಿದ್ದ ಹಾಗಿದೆ".

ಅವಳು ನೋಡಿದಳು

"ಏನೋ ಕಚ್ಚಿದೆ, ಸೂಜಿ ಚುಚ್ಚಿದ ಹಾಗೆ ಎರಡು ಕೆಂಪು ಗುರುತುಗಳಿವೆ. ಎದ್ದೇಳಿ ನೋಡೋಣ.

ಎದ್ದು ಆಕೆ ಹಾಸಿಗೆ ಮತ್ತು ತಲೆದಿಂಬು ಎತ್ತಿ ನೋಡಿದಳು. ಹಾಸಿಗೆಯ ಅಂಚು ಎತ್ತಿದಳು.

ಭಗವಂತಾ, ದೊಡ್ಡದೊಂದು ಸಾವಿರ ಕಾಲಿನ ಲಕ್ಷ್ಮಿ ಚೇಳು.

"ಬಾಗಿಲು ತೆರೆದು ಅದನ್ನು ಹೆಕ್ಕಿ ಆಚೆಗೆ ಹಾಕು."

ಆಕೆ ಏನೂ ಮಾತಾಡದೆ ಶೂ ತೆಗೆದು ಅದರ ತಲೆಯನ್ನು ನಿರ್ದಯವಾಗಿ ಚಚ್ಚಿದಳು! ಅದು ಅಲ್ಲಿ ಹೊರಳಾಡತೊಡಗಿತು. ಅದೇ ಶೂ ಮತ್ತೊಮ್ಮೆ ಅದರ ದೇಹವನ್ನೆಲ್ಲಾ ಚಚ್ಚಿತು. ನಂತರ ಹೊರಗಿನ ಲೈಟ್ ಹಾಕಿ ಬಾಗಿಲು ತೆರೆದು ಕಾಗದದ ಚೂರಿನಲ್ಲಿ ಹೆಕ್ಕಿ ತೆಗೆದು ಲಕ್ಷ್ಮಿಚೇಳಿನ ಶವವನ್ನು ಹೊರಗೆಡಯಲಾಯಿತು. ಆಮೇಲೆ ಅವಳೆಂದಳು.

"ವಿಷ ಇದೆ! ನಾಳೆಗೆ ಊದಿಕೊಂಡು ಸೆಳೆತ ಶುರುವಾಗುತ್ತದೆ. ಇದಕ್ಕೊಂದು ಮದ್ದು ಇದೆ. ಒಬ್ಬ ವೈದ್ಯ ಹೇಳಿಕೊಟ್ಟದ್ದು. ಹಾವು ಚೇಳು ಏನಾದ್ರು ಕಚ್ಚಿದರೆ ಆಡುಸೋಗೆಯ ಎರಡು ಎಲೆಗಳು ಮತ್ತೆ ಚಿಗುರು ತೊಟ್ಟು ಸಮೇತ ಕಿತ್ತು ಎಲೆಯಲ್ಲಿ ಒದೊಂದು ಕಲ್ಲು ಉಪ್ಪು ಹಾಕಿ ಅಗಿಯಬೇಕು. ಬನ್ನಿ, ಹೋಗಿ ಕೊಯ್ದು ತರೋಣ. ಟಾರ್ಚ್ ತೆಗೆದುಕೊಳ್ಳಿ.

ಆಡು ಸೋಗೆಯ ಚಿಗುರು ಚಿವುಟಿ ತೆಗೆದು ಕಲ್ಲುಪ್ಪು ಸೇರಿಸಿ ಅಗಿದು ನುಂಗಿದೆ. ಸ್ವಲ್ಪ ನೀರು ಕುಡಿದೆ. ಮರುದಿನಕ್ಕೆ ನೋವು ಕಮ್ಮಿಯಾಯಿತು. ಮದ್ದು ಕೊಟ್ಟ ದೇವರಿಗೆ ಸರ್ವಸ್ತುತಿ!

ಅವತ್ತು ಬೆಳಿಗ್ಗೆ ಹೆಂಡತಿ ಒಂದು ಘೋರಾತಿಘೋರ ಸಂಗತಿಯನ್ನು ತೋರಿಸಿದಳು. ಸುಮಾರು ಮೂವತ್ತರಷ್ಟು ಎಳನೀರುಗಳು ಬಿದ್ದಿವೆ! ಅವು ಉದ್ದಕ್ಕೆ ಸೀಳಿವೆ!

"ಇಲಿಗಳ ಕೆಲಸ ಆಗಿರಬಹುದು. ಇಲಿ ಪಾಷಾಣ ತರಬೇಕು. ಅನ್ನದಲ್ಲೋ ಹಣ್ಣಿನಲ್ಲೊ ವಿಷ ಇಟ್ಟು ತುಂಬಾ ಇಲಿಗಳನ್ನು ಕೊಲ್ಲಬಹುದು."

ಅದು ಸರಿಯೇ? ಇಲಿಗಳನ್ನೂ ದೇವರು ತಾನೇ ಸೃಷ್ಟಿಸಿದ್ದು; ಮನುಷ್ಯರಂತೆ! ಭೂಮಿಯ ಉತ್ಪನ್ನಗಳ ಮೇಲೆ ಅವುಗಳಿಗೂ ಹಕ್ಕು ಇಲ್ಲವೇ?

ಮರುದಿನವೂ ಅತ್ಯಂತ ದಾರುಣವಾಗಿ ಮತ್ತಷ್ಟು ಎಳೆಕಾಯಿಗಳು ಬಿದ್ದವು!

ಇಲಿ ಪಾಷಾಣವನ್ನು ನೆನಪಿಸುತ್ತಲೇ ಹೆಂಡತಿ ಮನೆಯೆಲ್ಲಾ ಗುಡಿಸಿ ಹಾಕಿ ಹೇಳಿದಳು.

"ಇನ್ನೂರು ಜೇಡ, ಐವತ್ತು ಜಿರಳೆ, ಮೂವತ್ತು ಮಿಡತೆ, ಐದು ಚೇಳು, ನಾಲ್ಕು ಲಕ್ಷ್ಮಿ ಚೇಳು, ಏಳು ಜೀರುಂಡೆ, ಎರಡು ಸಾವಿರ ಇರುವೆಗಳು, ಐನೂರು ಗೆದ್ದಲು ಹುಳ_"

"ಲೇ ಅವುಗಳನ್ನೆಲ್ಲಾ ಏನು ಮಾಡಿಬಿಟ್ಟೆ"?

"ಕೊಂದೆ!"

"ಭೂಮಿಯ ಹಕ್ಕುದಾರರು!"

"ನಿಮ್ಮ ತಲೆ, ನೆನ್ನೆ ಚೇಳು ಕಚ್ಚಿದ ನೋವು ಮರೆತುಬಿಟ್ಟಿರಾ?"

"ನೆನಪಿದೆ".

"ಹಾಗಾದರೆ ಆದಷ್ಟು ಬೇಗ ಇಲಿ ಪಾಷಾಣ ಬೇಕು."

ಕ್ರೂರ ಕೊಲೆಪಾತಕಕ್ಕೆ ನಾನೀಗ ಸಹಾಯ ಮಾಡಬೇಕು! ನಾನು ಸುಮ್ಮನಾದೆ.



ಹೆಂಡತಿ ಹೇಳಿದಳು:

"ದಿನಕ್ಕೆ ಮೂವತ್ತು ಕಾಯಿಗಳು ಎಂದರೆ ತಿಂಗಳಿಗೆಷ್ಟಾಯಿತು?"

"ಒಂಬೈನೂರು ಆಗಬಹುದು".

"ಅಷ್ಟು ತೆಂಗಿನ ಕಾಯಿಗಳು ಹಾಳಾಗುತ್ತಿವೆ. ಅರ್ಥ ಆಯ್ತಾ? ಒಂಬೈನೂರು ತೆಂಗಿನ ಕಾಯಿಗಳು! ನಮ್ಮ ಊಟದ ಖರ್ಚು! ಪಕ್ಕಾಸು ಪೂರ್ತಿ ಗೆದ್ದಲು ತಿಂದು ಮುಗಿಸುವುದು ಗೊತ್ತಿದೆ ತಾನೇ? ಹೆಂಚು ತೆಗೆದು ಅವುಗಳನ್ನ ಸರಿ ಮಾಡುವುದು ಯಾವಾಗ? ತೆಂಗಿನಕಾಯಿ ಮಾರಿ ಈ ಕೆಲಸ ಮಾಡಿಸೋಣ ಅಂತ ಹೇಳಿದ್ದಿರಿ ತಾನೇ? ಹೀಗೆ ಹೋದರೆ ತೆಂಗಿನಕಾಯಿ ಮಾರುವುದು ಕಷ್ಟ. ಅಷ್ಟೇ ಅಲ್ಲ ನಮಗೆ ಹಸಿವೇ ಗತಿಯಾಗುತ್ತದೆ. ಹಸಿದು ಸಾಯೋಣ. ಏನಾದರೂ ತಲೆಗೆ ಹೋಗುತ್ತಿದೆಯಾ ನಿಮಗೆ? ಒಂದೋ ಇಲಿಗಳು ಬದುಕಬೇಕು. ಅಥವಾ ನಾವು. ನೀವೆ ಯೋಚಿಸಿ ಒಂದು ತೀರ್ಮಾನಕ್ಕೆ ಬನ್ನಿ."

ಭಗವಂತಾ, ಮನುಷ್ಯ ತಾನು ಬದುಕಲು ಇಲಿಗಳನ್ನು ಕೊಲ್ಲಬೇಕಾ? ಇನ್ನೊಂದು ಜೀವವನ್ನು ಕೊಲ್ಲದೆ ಬದುಕುವ ದಾರಿ ಯಾವುದೂ ಇಲ್ಲವೇ? ದೇವರು ಹಲವಾರು ರೋಗಾಣುಗಳನ್ನು ಸೃಷ್ಟಿಸಿದ. ಔಷಧಿಗಳ ಮೂಲಕ ಅವುಗಳನ್ನೂ ಕೊಂದು ಹಾಕುತ್ತೇವೆ. ಇದು ನ್ಯಾಯವೇ? ಹೊಚ್ಚ ಹೊಸ ತತ್ವಶಾಸ್ತ್ರವೊಂದರ ಅಗತ್ಯ ಇದೆ. ಹಿಂಸೆ ಇಲ್ಲದೆ ಬದುಕಬಹುದೇ? ಹಾವು ಕಪ್ಪೆಯನ್ನು ಕೊಂದು ತಿನ್ನುತ್ತದೆ. ಇಲಿಗಳನ್ನು ನುಂಗುತ್ತವೆ. ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ನುಂಗಿ ಬಿಡುತ್ತವೆ. ನರಿಗಳು ಪುನುಗು ಬೆಕ್ಕುಗಳು ಕೋಳಿಗಳನ್ನು ಕೊಂದು ತಿನ್ನುತ್ತದೆ. ಸಿಂಹ ಜಿಂಕೆಯನ್ನು ತಿನ್ನುತ್ತದೆ. ದನಕರುಗಳನ್ನು ತಿನ್ನುತ್ತದೆ. ಮನುಷ್ಯರನ್ನೂ ತಿನ್ನುತ್ತದೆ. ಮನುಷ್ಯ ಪ್ರಾಣಿ ಪಕ್ಷಿಗಳನ್ನು ತಿನ್ನುತ್ತಾನೆ; ಮೀನುಗಳನ್ನೂ, ಹೀಗೆ ನೋಡಿದರೆ ಈ ಪ್ರಶ್ನೆಯೇ ಒಂದು ಕುಣಿಕೆ. ಮನುಷ್ಯನ ರಕ್ತ ಕುಡಿದುಕೊಂಡೇ ತಲೆ ಕೂದಲ ಎಡೆಯಲ್ಲಿ ಹೇನುಗಳು ಬದುಕುತ್ತವೆ. ಬಾಯಿಯಲ್ಲಿ ಹೊಟ್ಟೆಯಲ್ಲಿ ಎಲ್ಲ ಕ್ರಿಮಿಗಳು. ಮನುಷ್ಯ ದೇಹದಲ್ಲೆಲ್ಲಾ ಸೂಕ್ಷ್ಮಾಣು ಕ್ರಿಮಿಗಳು ಜೀವಿಸುತ್ತಿವೆ. ಒಂದು ಇನ್ನೊಂದನ್ನು ನಾಶ ಮಾಡುತ್ತಾ ಬದುಕುವುದು. ನಾವು ಪ್ರೀತಿಯಿಂದ ಗುಲಾಬಿ ಗಿಡಗಳನ್ನು ಬೆಳೆಸುತೇವೆ. ಅದರ ಎಲೆ ಮತ್ತು ಹೂಗಳನ್ನು ಕೀಟಗಳು ತಿಂದು ಹಾಕುತ್ತವೆ. ಹೀಗೆಲ್ಲಾ ನೋಡುವಾಗ ಭೂಮಿ

ಮೇಲಿನ ಬದುಕು ಅಷ್ಟೊಂದು ಸ್ಟೈಲಾಗಿ ಕಾಣುತ್ತಿಲ್ಲ. ಏನೊಂದೂ ಅರ್ಥವೂ ಆಗುತ್ತಿಲ್ಲ. ನಿಜದಲ್ಲಿ ಒಂದು ನಂಬಿಕೆಯ ಮೇಲಿನ ಬಾಳು. ಭಗವಂತಾ, ಸರ್ವ ಲೋಕಗಳ ಸೃಷ್ಟಿಕರ್ತನೇ? ಒಂದೂ ಹೊಳೆಯುತ್ತಿಲ್ಲವಲ್ಲ. ಸರಿಯಾದ ದಾರಿ ಕಾಣಿಸು ದೇವಾ!

"ಒಮ್ಮೆ ಇಲ್ಲಿ ಬರ್ತೀರಾ."

"ಯಾಕೆ?"

"ದುಡ್ಡು ಸ್ವಲ್ಪ ಜಾಸ್ತೀನೇ ಬೇಕಾಗಬಹುದು. ನಾನೂ ನನ್ನ ಗೆಳತಿಯೂ ಸಂತೆಗೆ ಹೋಗುತ್ತಿದ್ದೇವೆ. ಇಲಿ ಪಾಷಾಣಕ್ಕೆ ದುಡ್ಡು ಬೇಕು".

"ಈಗ ನನ್ನ ಕೈಯ್ಯಲ್ಲಿ ದುಡ್ಡಿಲ್ಲ. ನಾವು ತೆಂಗಿನಕಾಯಿ ಕೊಡುವ ಆ ಅವರ ಹತ್ತಿರ"

"ನಾನು ಒಂದಷ್ಟು ಸಾಲ ತೆಗೆದುಕೊಳ್ಳುತ್ತೇನೆ."

ಸಂತೋಷ ಇಲಿಗಳೇ, ಕ್ಷಮಿಸಿರಿ. ಇಲಿಗಳನ್ನು ಸೃಷ್ಟಿಸಿದ ದೇವರೇ ನಮ್ಮ ಮೇಲೆ ದಯೆ ತೋರು. ಇಲಿಗಳನ್ನು ವಂಚನೆಯಿಂದ ಕೊಲ್ಲಲ್ಲು ಹೊರಟಿದ್ದಾರೆ. ತಿಂಗಳಿಗೆ ಒಂಬೈನೂರು ಕಾಯಿಗಳ ಪ್ರಶ್ನೆ ಇದು. ನಮ್ಮ ಕುಟುಂಬದ ಅನ್ನದ ಪ್ರಶ್ನೆ .ಕ್ಷಮಿಸಿರಿ? ಕ್ಷಮಿಸಿರಿ?.

ಹೆಂಡತಿ ಹೋದವಳು ಎರಡು ಗಂಟೆ ಕಳೆದು ಮರಳಿ ಬಂದಳು. ಕೈಯಲ್ಲಿ ಬಾಕಿ ಸಾಮಾನುಗಳೊಂದಿಗೆ ಒಂದು ದೊಡ್ಡ ಡಬ್ಬ ಇಲಿ ಪಾಷಾಣವೂ ಇತ್ತು. ಅವಳೆಂದಳು; "ನಿಮಗೊಂದು ವಿಷಯ ಗೊತ್ತಾ? ತೆಂಗಿನಕಾಯಿ ವ್ಯಾಪಾರಿಯನ್ನ ಕಂಡು ಒಂದಷ್ಟು ದುಡ್ಡು ಸಾಲ ತಗೊಂಡೆ. ತೆಂಗಿನಕಾಯಿಗೆ ಈಗ ಒಳ್ಳೆಯ ರೇಟ್ ಅಂತೆ. ಇನ್ನು ಏರುತ್ತಂತೆ.?

"ತೆಂಗಿನಕಾಯಿಗೆ ಬೆಲೆ ಏರುವುದಾ ನಿನ್ನ ವಿಷಯ?"

"ಅದಲ್ಲ. ನಾನು ನನ್ನ ಗೆಳತಿಯೂ ಸೇರಿ ಹಲವಾರು ಅಂಗಡಿಗಳಲ್ಲಿ ಇಲಿ ಪಾಷಾಣ ಕೇಳಿದೆವು. ಅಂಗಡಿಯವರು ನಕ್ಕರು. ನಮಗೊಂದೂ ಅರ್ಥ ಆಗಲಿಲ್ಲ. ಕೊನೆಗೆ ಒಂದು ಅಂಗಡಿಯವ ಹೇಳಿದ. ಇಲಿ ಪಾಷಾಣ ಮಾರಲು ಸರಕಾರದ ಅನುಮತಿ ಇಲ್ಲವಂತೆ. ಬೇಕಿದ್ದರೆ ಸರಕಾರದ ಆಫೀಸಿನಲ್ಲಿ ಅರ್ಜಿ ಕೊಡಬೇಕಂತೆ. ಆದರೂ ಸಿಗುವುದು ಕಷ್ಟವಂತೆ. ಕಾರಣ ಗೊತ್ತಾ? ಇದೇ ನೋಡಿ ವಿಷಯ. ಮನುಷ್ಯರು ಇಲಿ ಪಾಷಾಣ ಕುಡಿತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರಂತೆ. ಅದಕ್ಕೆ ಸರಕಾರ ನಿಷೇಧ ಮಾಡಿದ್ದಂತೆ."



"ದಡ್ಡ ಶಿಖಾಮಣಿ ಸರಕಾರ! ರೈಲು ಹಳಿಗಳು, ಹಗ್ಗ-ಮರಗಳು, ನದಿಕೆರೆಗಳು, ಕಠಾರಿ-ಚಾಕುಗಳು, ದತ್ತೂರಿ ಬೀಜ.. ಅದಿರಲಿ. ಈಗ ಇಲಿ ಪಾಷಾಣ ಎಲ್ಲಿಂದ ಸಿಕ್ಕಿತು? ಇದರಲ್ಲಿ ಒಂದು ಲಕ್ಷ ಜನರಿಗೆ ಸಾಯಬಹುದಾದಷ್ಟು ವಿಷ ಉಂಟಲ್ಲ?"

"ನನ್ನ ಗೆಳತಿಯ ಗಂಡನ ಆಫೀಸಿನಲ್ಲಿತ್ತು. ಅವರು ಉಚಿತವಾಗಿಕೊಟ್ಟರು."

"ಸಂತೋಷ ಹಾಗಾದರೆ ಕೊಲೆ ಶುರುವಾಗಲಿ. ಆದರೆ ನನಗೆ ಮಾತ್ರ ಈ ರಕ್ತದಲ್ಲಿ ಪಾಲಿಲ್ಲ. ನೀವೇ ಎಲ್ಲ ಮಾಡಿಕೊಳ್ಳಿ, ಕೊಲೆ!"

"ಕೊಲೆಯಲ್ಲ. ನಾವು ಕೋಳಿ, ಆಡುಗಳನ್ನೆಲ್ಲ ಕುಯ್ದು ತಿನ್ನುವುದಿಲ್ಲವೇ? ಅದು ಕೊಲೆ ಹೇಗಾಗುತ್ತದೆ? ನಮಗೆ ತಿನ್ನಲು ದೇವನಾಮದಿಂದ ಕುಯ್ಯುವುದು. ಈಗ ಇಲಿಗಳಿಗೆ ವಿಷ ಕೊಟ್ಟು ಕೊಲ್ಲುವುದು ನಾವು ಮನುಷ್ಯರು ಬದುಕಲು. ದೇವರು ನಮ್ಮನ್ನು ಕ್ಷಮಿಸುತ್ತಾನೆ. ಕರುಣಾನಿಧಿಯಲ್ಲವೇ ದೇವರು?"

ಕರುಣಾನಿಧಿಯಾದ ದೇವರು ಮನ್ನಿಸಲಿ! ಹಣ್ಣು, ಅನ್ನ, ಗೆಣಸು ಎಲ್ಲದರಲ್ಲೂ ವಿಷ ಹಾಕಲಾಯಿತು. ಅವುಗಳನ್ನು ಮನೆಯ ಮೂಲೆ ಮೂಲೆಗಳಲ್ಲಿ ಮತ್ತು ತೆಂಗಿನ ಬುಡದಲ್ಲಿ ಇಡಲಾಯಿತು. ನಾಲ್ಕೈದು ದಿನಗಳಲ್ಲಿ ಐದು ಕೋಳಿಗಳು, ಹನ್ನೆರಡು ಅಳಿಲುಗಳು, ಇನ್ನೂರರಷ್ಟು ಇಲಿಗಳು, ಒಂದು ಬೆಕ್ಕು ಅಕಾಲಿಕ ಮರಣಕ್ಕೆ ತುತ್ತಾದರು. ಸಾವು ಬೇಟೆಗಿಳಿಯಿತು!. ಮನೆಯ ಅಟ್ಟದಲ್ಲಿ ಅಲ್ಲಲ್ಲಿ ಇಲಿಗಳು ಸತ್ತು ಬೀಳುತ್ತಿವೆ. ನಾತ ಮನೆಯಿಡೀ ಹಬ್ಬಿತು. ಆದರೆ ಆಗಲೂ ಎಳೆಕಾಯಿಗಳೂ ಬೀಳುತ್ತಲೇ ಇದ್ದವು! ಹತ್ತು ಹದಿನೈದು ದಿನಗಳು ಹಾಗೆ ಉರುಳಿದವು. ತೆಂಗು ಹತ್ತುವವ ಹೇಳಿದ;

"ಗೂಬೆಯ ಕೆಲಸ ಇದು!"

ಹಳೆಯ ಘೋಷಣೆ ಅದು! ಅವರು ಅದನ್ನು ತಮ್ಮ ಪೂರ್ವಜರಿಂದ ಕಲಿತಿರುತ್ತಾರೆ. ಗೂಬೆಗಳ ಕೊಕ್ಕು ಬಾಗಿರುತ್ತದೆ. ಅವು ಸಣ್ಣವು, ಮತ್ತು ಗೂಬೆಗಳು

ಸಸ್ಯಾಹಾರಿಗಳಲ್ಲ. ಕೊನೆಗೂ ಒಂದೆರಡು ತಿಂಗಳುಗಳು ಉರುಳಿದಾದ ಎಳನೀರು ಪೋತರನ್ನು ಕಂಡು ಹಿಡಿದೆವು.

ಬಾವಲಿ!

ಬಾವಲಿ, ಕಣ್ಕಪ್ಪಡಿ, ಕಡೆಬಾಗಿಲು ಎಂದೆಲ್ಲಾ ಹೆಸರುಗಳಿವೆ. ಸಂಜೆಯಾಗುತ್ತಲೇ ದೊಡ್ಡ ದೊಡ್ಡ ಬಾವಲಿಗಳು ಗುಂಪು ಗುಂಪಾಗಿ ಬಂದು ತೆಂಗಿನ ಗೊನೆಗೆ ಅಂಟಿಕೊಂಡು ಉದ್ದಕ್ಕೆ ಸೀಳಿ ನೀರು ಕುಡಿದು ಗಂಜಿ ತಿಂದು ತೃಪ್ತಿಯಿಂದ ದೇವರಿಗೆ ಸ್ತುತಿ ಹೇಳುತ್ತಾ ಹಾರಿ ಹೋಗುತ್ತವೆ!

ಏನು ಮಾಡುವುದು?

ರಾಶಿ ರಾಶಿ ಮುಳ್ಳುಬಳ್ಳಿಗಳನ್ನು ತಂದು ಗೊನೆಗಳಿಗೆ ಸುತ್ತಲಾಯಿತು, ಪಟಾಕಿ ಸಿಡಿಸಲಾಯಿತು. ಪಾತ್ರೆ ಬಡಿದು ಸದ್ದು ಮಾಡಲಾಯಿತು. ದೀಪಗಳನ್ನು ಇಟ್ಟೆವು. ಮನುಷ್ಯಾಕೃತಿ ಮಾಡಿ ಅದಕ್ಕೊಂದು ಅಂಗಿ ತೊಡಿಸಿ ತೆಂಗಿನ ಮೇಲೆ ಕೂರಿಸಿದ್ದಾಯಿತು. ಕಲ್ಲೆಸೆದು ನೋಡಿದೆವು. ಕೂಗಿ ಗಲಾಟೆ ಎಬ್ಬಿಸಿದೆವು. ಏನೇನೂ ಪ್ರಯೋಜನವಿಲ್ಲ. ತೆಂಗಿನಕಾಯಿ ಮಾರಿ ಸಿಗುವ ದುಡ್ಡಿನಿಂದ ಅಕ್ಕಿ ಮತ್ತಿತರ ದಿನಸಿ ತಂದು ಬೇಯಿಸಿ ತಿಂದು ಬದುಕೋದಾದರು ಹೇಗೆ? ಮನೆ ಮಂದಿಯೆಲ್ಲ ಮಲಗುವಾಗ ಬಾವಲಿಗಳು ಮತ್ತೆ ಬಂದು ಎಳನೀರು ಕುಡಿದು ಬಿಸಾಕಿ ಹೋಗುತ್ತವೆ. ಹೆಂಡತಿ ಮಕ್ಕಳು ಅವರ ಮಕ್ಕಳು ಎಲ್ಲ ಸೇರಿ ಬಿದ್ದ ಕಾಯಿಗಳನ್ನು ಹೆಕ್ಕಿ ರಾಶಿ ಹಾಕಿದರು. ಕಾಯಿಗಳ ಒಂದು ಸಣ್ಣ ಗುಡ್ಡೆ! ಹಾಳಾದ ತೆಂಗಿನಕಾಯಿಗಳ ದೊಡ್ಡ ರಾಶಿ!

ಹೀಗೆ ಹೋದರೆ ಕುಟುಂಬ ಭೂಮಿಗೆ ಬೀಳುತ್ತದೆ. ಹಸಿವು ಬೆನ್ನಿಗಂಟುತ್ತದೆ. ಕೊನೆಗೆ ಬಾವಲಿಗಳನ್ನು ಗುಂಡು ಹಾರಿಸಿ ಕೊಲ್ಲುವುದು ಎಂಬ ತೀರ್ಮಾನಕ್ಕೆ ಬರಲಾಯಿತು. ಐಡಿಯಾ ಚೆನ್ನಾಗಿದೆ ಹೆಂಡತಿ ಹೇಳಿದಳು;

"ನಮಗೊಂದು ಬಂದೂಕು ಬೇಕು. ಬಾವಲಿಗಳನ್ನ ಗುಂಡು ಹಾರಿಸಿ ಕೊಲ್ಲೋಣ! ನರಿಗಳನ್ನೂ ಕೊಲ್ಲಬಹುದು."

"ಬಂದೂಕು ಪಾಪದ ಪ್ರತಿರೂಪ! ಮನುಷ್ಯ ಬಂದೂಕು ಕಂಡು ಹಿಡಿದದ್ದೇ ದೊಡ್ಡ ತಪ್ಪು. ಪಾಪದ ಕೂಸು ಈ ಬಂದೂಕು! ಗುಂಡು ಸಿಡಿಸಲು ನಾನಿಲ್ಲ!"



ಹೆಂಡತಿ ಹೇಳಿದಳು;

"ನಾನು ಕಲಿಯುತ್ತೇನೆ. ನನ್ನ ಮಾವನ ಮಗನ ಕೈಯ್ಯಲ್ಲಿ ದೊಡ್ಡದೊಂದು ಬಂದೂಕು ಇದೆ. ಅದನ್ನು ಸಿಡಿಸಿದರೆ ಗುಂಡುಗಳು ಕೊಡೆಯಂತೆ ಹಾರುತ್ತವೆ. ಒಂದೇ ಹೊಡೆತಕ್ಕೆ ಐವತ್ತು ಬಾವಲಿಗಳಾದರೂ ಸಾಯಬಹುದು." ಅವಳು ಮತ್ತೆ ನೆನೆಪಿಸುತ್ತಾ ಹೇಳಿದಳು; "ಅದು ಸರಿ. ನಾವು ಯಾಕೆ ಬಂದೂಕು ತೆಗೆದುಕೊಳ್ಳೋದು? ನಾನು ಹೋಗಿ ಮಾವನ ಮಗನನ್ನ ಅವನ ಬಂದೂಕು ಸಮೇತ ಕರಕೊಂಡು ಬರುತ್ತೇನೆ".

ಆಗಲಿ, ಬಾವಲಿಗಳೇ ಕ್ಷಮಿಸಿರಿ. ನಿಮ್ಮ ರಕ್ತದಲ್ಲಿ ನನಗೆ ಪಾಲಿಲ್ಲ. ಭಗವಂತಾ ನಾನೇನು ಮಾಡಲಿ? ದುಷ್ಟ ಸಂಹಾರಕ್ಕೆ ಇಳಿದಾಯಿತು! ನಾನು ನಿರಪರಾಧಿ. ಬಾವಲಿಗಳೇ ಓಡಿ ಬಚಾವಾಗಿರಿ.

ಹೆಂಡತಿಯ ಮಾವನ ಮಗ ದುಬಾರಿ ಬಂದೂಕೊಂದನ್ನು ಹಿಡಿದುಕೊಂಡು ಬಂದ. ಆತ ಹೇಳಿದ;

"ಗುಂಡು ಹೊಡೆಯಬೇಕಿರುವುದು ಇಲ್ಲಲ್ಲ. ಇಲ್ಲೇ ಪಕ್ಕದಲ್ಲಿ ಒಂದು ನಡುಗುಡ್ಡೆಯಲ್ಲಿ ಪುರಾತನ ಕಾಲದ ಒಂದು ಗುಡಿ ಇದೆ. ಅದರ ಪಕ್ಕ ಎರಡು ಆಲದ ಮರಗಳಿವೆ. ಅದರಲ್ಲಿ ಎರಡು ಮೂರು ಸಾವಿರ ಬಾವಲಿಗಳು ನೇತಾಡುತ್ತಿವೆ. ನಾನು ಅವುಗಳನ್ನು ಹೊಡೆದು ಹಾಕುತ್ತೇನೆ. ಎರಡು ದಿನದಲ್ಲಿ ಅಥವಾ ಮೂರು ದಿನಗಳು ಸಾಕು. ಎಲ್ಲ ಬಾವಲಿಗಳೂ ಸಾಯುತ್ತವೆ. ಸುಮಾರು ಹತ್ತು ಮೈಲಿ ಸುತ್ತ ಮುತ್ತ ಎರಡು ಮೂರು ಸಾವಿರ ಕಾಯಿಗಳು ದಿನಾ ಹಾಳಾಗುತ್ತಿವೆ. ಮೂರು ಸಾವಿರ ಬಾವಲಿಗಳ ಮಾರಣಹೋಮ ನೋಡೋದಕ್ಕೆ ಯಾರೆಲ್ಲಾ ಬರುತ್ತೀರಿ?"

ಅದನ್ನು ಕಣ್ಣಾರೆ ಕಾಣಲು ಹೆಂಡತಿಯೂ ಅವಳ ಗೆಳತಿಯೂ ಹೊರಟು ನಿಂತರು. ಚಾ ಕುಡಿದು ಮೂವರು ಬಾವಲಿ ವಧೆಗೆ ಹೋದರು. ಗಂಡನಾದವನ ಪ್ರಾರ್ಥನೆ; 'ಬಾವಲಿಗಳೇ ಬಚಾವಾಗಿರಿ!"

ಪವಾಡ ಎಂದರೆ ಇದಲ್ಲವೇ! ಬಾವಲಿಗಳು ಬದುಕಿದವು! ಹೆಂಡತಿಯೂ ಅವಳ ಗೆಳತಿಯೂ ಬಂದೂಕುದಾರಿಯೂ ಮಾನಗೆಟ್ಟು ನಿರಾಶೆ ಮತ್ತು

ಭಯದಿಂದ ಮರಳಿ ಬಂದರು.

ಹೆಂಡತಿ ಹೇಳಿದಳು:

"ನಾವು ಜೀವ ಉಳಿಸಿಕೊಂಡು ಬಂದದ್ದೇ ಪುಣ್ಯ. ಆ ಗುಡಿಯ ಸುತ್ತ ಸುಮಾರು ಮನೆಗಳಿವೆ. ಒಂದೆರಡು ಕ್ಷಣದಲ್ಲೇ ಮುನ್ನೂರರಷ್ಟು ಜನರು ಮಾರಕಾಯುಧಗಳಿಂದ ನಮ್ಮನ್ನು ಸುತ್ತುವರಿದರು. ಬಾವಲಿಗಳಿಗೆ ಗುಂಡು ಹೊಡೆದರೆ ನಮ್ಮನ್ನು ಕೊಂದು ಹಾಕುತ್ತಾರಂತೆ! ಕಾರಣ ಎಂತ ಗೊತ್ತಾ? ಬಾವಳಿಗಳು ಮನುಷ್ಯರ ಪೂರ್ವಜರ ಆತ್ಮಗಳಂತೆ! ಗುಂಡು ಹೊಡೆದು ಕೊಲ್ಲಬಾರದಂತೆ!"

ಬಾವಲಿಗಳು ಮನುಷ್ಯನ ಪೂರ್ವಜರ ಆತ್ಮಗಳು! ಸಂಗತಿ ಚೆನ್ನಾಗಿದೆ!

ಗಂಡ ಅತಿ ಸುಂದರವಾದೊಂದು ತೀರ್ಮಾನಕ್ಕೆ ಬಂದು ಹೀಗೆ ಹೇಳಿದ; "ನೆನಪಿಡಿ ಬಾವಲಿಗಳು ಯಾರ ಪೂರ್ವಿಕರ ಆತ್ಮಗಳೂ ಅಲ್ಲ. ಮೂಢನಂಬಿಕೆಯನ್ನು ತಲೆಗೇರಿಸಿ ಮನುಷ್ಯರನ್ನು ಕೊಲ್ಲಬೇಡಿ. ಬಾವಲಿಗಳು ಭಗವಂತನ ಕೋಟ್ಯಾನುಕೋಟಿ ಸೃಷ್ಟಿಗಳಲ್ಲಿ ಹಾರುವ ಜೀವಿಗಳು. ಎಳನೀರು ಹಾಳಾಗಲಿ. ತೆಂಗಿನಕಾಯಿಗಳು ಹಾಳಾಗಲಿ. ಪರವಾಗಿಲ್ಲ. ಬಾಕಿ ಉಳಿಯುವುದು ನಮಗೆ ಸಾಕು. ದೇವರು ಸೃಷ್ಟಿಸಿದ ತೆಂಗಿನ ಮರಗಳ ಮೇಲೆ, ಆ ಕಾಯಿಗಳ ಮೇಲೆ ಬಾವಲಿಗಳಿಗೂ ಹಕ್ಕಿದೆ. ಭಗವಂತ ಚರಾಚರಗಳನ್ನು ಸೃಷ್ಟಿಸಿದ ಆ ದಿವ್ಯ ಮುಹೂರ್ತದಲ್ಲಿ ದಯಪಾಲಿಸಿದ ಪುರಾತನವಾದ ಹಕ್ಕಿದು. ನೆನಪಿರಲಿ; ಸಕಲ ಜೀವರಾಶಿಗಳೂ ಭೂಮಿಯ ಹಕ್ಕುದಾರುರು".



**ಕಾಯಕ : ಆಶಯ**

## ವಚನಗಳು

– ಆಯ್ದಕ್ಕಿ ಲಕ್ಕಮ್ಮ

1. ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ  
ಭಾವಶುದ್ಧವಾಗಿ ಮಹಾಶರಣರ  
ತಿಪ್ಪೆಯ ತಪ್ಪಲ ಅಕ್ಕಿಯ ತಂದು  
ನಿಶ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ  
ಬೇಗ ಹೋಗು ಮಾರಾಯ್ಯಾ

2. ಸಂದಣಿಗೊಂಡು ಮನ ಹರುಷದಿಂದ  
ಬಸವಣ್ಣನ ಅಂಗಳಕ್ಕೆ ಹೋಗಿ

ತಿಪ್ಪೆಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು  
ಎಯಿದಾಗಿ ತರಲು ಎಯಿದಾಗಿ ಬಂದಿತ್ತಲ್ಲಾ

ನಮಗೆ ಎಂದಿನಂದವೆ ಸಾಕು  
ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ

ಮಾರಯ್ಯಾಪ್ರಿಯ ಅಮರೇಶ್ವರಲಿಂಗ ಕೊಟ್ಟ  
ಕಾಯಕವೆ ಸಾಕು ಮಾರಯ್ಯಾ.

3. ಒಮ್ಮನವ ಮೀರಿ  
ಇಮ್ಮನದಲ್ಲಿ ತಂದಿರಿ

ಇದು ನಿಮ್ಮ ಮನವೊ  
ಬಸವಣ್ಣನ ಅನುಮಾನದ ಚಿತ್ತವೊ

ಈ ಮಾತು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ
ಸಲ್ಲದ ಬೋನ
ಅಲ್ಲಿಯೇ ಸುರಿದು ಬನ್ನಿ ಮಾರಯ್ಯಾ.

4. ಆಸೆಯೆಂಬುದು ಅರಸಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?

ಈಸಕ್ಕಿಯಾಸೆ ನಿಮಗೇಕೆ?
ಈಶ್ವರನೊಪ್ಪ

ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ
ದೂರ ಮಾರಯ್ಯ.



# ನೇಗಿಲಯೋಗಿ

**– ಕುವೆಂಪು**

ನೇಗಿಲ ಹಿಡಿದಾ, ಹೊಲದೊಳು ಹಾಡುತ,
ಉಳುವಾ ಯೋಗಿಯ ನೋಡಲ್ಲಿ.
ಫಲವನ್ನು ಬಯಸದ ಸೇವೆಯೆ ಪೂಜೆಯು,
ಕರ್ಮವೇ ಇಹಪರ ಸಾಧನವು.
ಕಷ್ಟದೊಳನ್ನವ ದುಡಿವನೆ ತ್ಯಾಗಿ,
ಸೃಷ್ಟಿನಿಯಮದೊಳಗವನೆ ಭೋಗಿ

ಲೋಕದೊಳೇನೇ ನಡೆಯುತಲಿರಲಿ
ತನ್ನೀ ಕಾರ್ಯವ ಬಿಡನೆಂದೂ;
ರಾಜ್ಯಗಳುದಿಸಲಿ, ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮುಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೇ ಇಲ್ಲ.

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣೊಣಿ ನೇಗಿಲಿನಾಶ್ರಯದಿ;
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು,
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಿಗಳೆಸೆದರು, ಕವಿಗಳು ಬರೆದರು.

ಯಾರೂ ಅರಿಯದ ನೇಗಿಲ ಯೋಗಿಯೇ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ.
ನೇಗಿಲ ಕುಲದೊಳಗಡಗಿದೆ ಕರ್ಮ;

# ರೈತಸಂಘ+ದಲಿತ ಸಂಘ=?

**– ಡಾ. ಬಿ.ಎಂ. ಪುಟ್ಟಯ್ಯ**

ಕರ್ನಾಟಕದಲ್ಲಿ ರೈತ ಸಂಘ ಮತ್ತು ದಲಿತ ಸಂಘ ಒಂದು ಗೂಡಿ 'ಪರ್ಯಾಯ ರಾಜಕಾರಣ'ವನ್ನು ಹುಟ್ಟು ಹಾಕಲು ಪ್ರಯತ್ನಿಸಿವೆ. ಇದಕ್ಕೆ ಪೂರ್ವಭಾವಿಯಾಗಿ ಮೈಸೂರಿನಲ್ಲಿ ಮೂರು ದಿನಗಳ ಕಾಲ ಚಿಂತನ ಸಮಾವೇಶ ನಡೆಸಲಾಗಿತ್ತು. ಅದರಲ್ಲಿ ಎರಡೂ ಸಂಘಟನೆಗಳ ನಾಯಕರು, ಕಾರ್ಯಕರ್ತರು, ಸಾಹಿತಿಗಳು, ಚಿಂತಕರು ಭಾಗವಹಿಸಿದ್ದರು. ಆ ಮೂರು ದಿನಗಳ ಚರ್ಚೆ–ಸಂವಾದಗಳ ಫಲಶ್ರುತಿಯಾಗಿ ಅನಂತರದ ದಿನಗಳಲ್ಲಿ ಮೇಲಿನ ಎರಡೂ ಸಂಘಟನೆಗಳು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಚರ್ಚೆ ಸಮಾವೇಶ ನಡೆಸಿವೆ. ಅವೆರಡು ಒಟ್ಟಾಗಿ ಕರ್ನಾಟಕದಲ್ಲಿ ಒಂದು ಪರ್ಯಾಯ ರಾಜಕೀಯ ಪಕ್ಷವನ್ನು ಹುಟ್ಟುಹಾಕಬೇಕೆಂದು ಪ್ರಯತ್ನ ನಡೆಸಿವೆ. ಈಗಾಗಲೇ ಇದರ ಪ್ರಕ್ರಿಯೆ ಶುರುವಾಗಿದೆ. ಪಕ್ಷದ ಹೆಸರು, ಚಿನ್ಹೆ, ಸಂವಿಧಾನ ಇತ್ಯಾದಿಗಳ ಸಿದ್ಧತೆ ಸಾಗಿದೆ. ಇಂತಹ ಹೊತ್ತಿನಲ್ಲಿ ಈ ಬಗ್ಗೆ ಚರ್ಚೆ ಸಂವಾದಗಳು ವ್ಯಾಪಕವಾಗಿ ನಡೆಯಬೇಕಾದ ಅವಶ್ಯಕತೆ ಇದೆ. ಸಮಾಜ, ರಾಜಕೀಯ, ಸಂಸ್ಕೃತಿ, ಸಂಘಟನೆ, ಹೋರಾಟ ಮುಂತಾದವುಗಳ ಬಗೆ ಆಸಕ್ತಿ ಮತ್ತು ಕಾಳಜಿ ಇರುವವರು ಈ ಬಗ್ಗೆ ಚರ್ಚೆ ಮಾಡುವ ಅಗತ್ಯವಿದೆ.

ರೈತ ಸಂಘ ಮತ್ತು ದಲಿತ ಸಂಘ ಯಾಕೆ ಒಂದುಗೂಡಬೇಕು? ಹೇಗೆ ಒಂದುಗೂಡಬೇಕು? ಎಂಬ ಪ್ರಶ್ನೆಗಳಿಗೆ ಅವರು ಈಗಾಗಲೇ 'ತಮ್ಮದೇ ಉತ್ತರ' ಕಂಡುಕೊಂಡಿದ್ದಾರೆ. ಯಾವುದೇ ಎರಡು ಸಂಘಟನೆಗಳು ಅಥವಾ ಎರಡಕ್ಕಿಂತ ಹೆಚ್ಚು ಸಂಘಟನೆಗಳು ಐಕ್ಯಗೊಳ್ಳುವುದು ವರ್ತಮಾನದ ಸಂದರ್ಭದಲ್ಲಿ ಬಹಳ ಮುಖ್ಯವಾದುದು. ಇದು ಎಲ್ಲಾ ಬಗೆಯ ಸಂಘಟಣೆಗಳಲ್ಲೂ ನಡೆಯಬೇಕಾಗಿದೆ. ಸಾಮಾನ್ಯ ಉದ್ದೇಶಗಳಿಗಾಗಿ ಹೋರಾಡುವ ಎರಡು ಸಂಘಟನೆಗಳು ಕೆಲವು ನಿರ್ದಿಷ್ಠ ಷರತ್ತುಗಳನ್ನು ಇಟ್ಟುಕೊಂಡು, ಮೊದಲ ಹಂತದಲ್ಲಿ ಸಂಯುಕ್ತ ರಂಗದ ಮೂಲಕ ಹೋರಾಟ ಮಾಡಿ, ಅನಂತರ ಎರಡೂ ಪಕ್ಷಗಳು/ಸಂಘಟನೆಗಳು ಐಕ್ಯಗೊಂಡು ಬೇರೆ ಪಕ್ಷ.ಸಂಘಟನೆ ರಚಿಸಿಕೊಳ್ಳುವುದು ಹೋರಾಟ ಮತ್ತು ಸಂಘಟನೆಗಳ ಇತಿಹಾಸದಲ್ಲಿ ಒಂದು ಸಾಮಾನ್ಯ ರಾಜಕೀಯ ಪದ್ಧತಿ, ಎರಡು



ಸಂಘಟನೆಗಳು, ಎರಡು ಹೋರಾಟಗಳು ಐಕ್ಯಗೊಳ್ಳುವ ಪ್ರಕ್ರಿಯೆಯನ್ನು ಯಾರಾದರೂ ಬೆಂಬಲಿಸಬೇಕು. ಆದರೆ ಸೈದ್ಧಾಂತಿಕವಾಗಿ ಇದನ್ನು ಯಾರೂ ಸರಳವಾಗಿ ಪರಿಗಣಿಸಬಾರದು.

ರೈತ ಸಂಘ ಮತ್ತು ದಲಿತ ಸಂಘಗಳು 60ರ ದಶಕದ ಕೊನೆಯಲ್ಲಿ ಮತ್ತು 70ರ ದಶಕದ ಆರಂಭದಲ್ಲಿ ಹುಟ್ಟಿದವು. ಆ ಸಮಯದಲ್ಲಿ ಇಂತಹ ಅನೇಕ ಹೋರಾಟಗಳು ಹುಟ್ಟಿದವು ಎನ್ನುವುದಕ್ಕಿಂತಲೂ ಆ ಕಾಲಕ ವಸ್ತುನಿಷ್ಠ ಪರಿಸ್ಥಿತಿಯೇ ಅವುಗಳನ್ನು ಹುಟ್ಟಿಸಿತು. ಅ ಕಾಲದ ವಾಸ್ತವ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ಸ್ವಲ್ಪ ನೋಡಬಹುದು. ಇಂಡಿಯಾಕ್ಕೆ ಅಧಿಕಾರ ಹಸ್ತಾಂತರವಾಗಿ ಸುಮಾರು ಎರಡು ದಶಕಗಳು ಕಳೆದಿದ್ದವು. ಆದರೂ ಆಧುನಿಕ ಸರಕಾರಗಳು ರೈತರ ಮತ್ತು ದಲಿತರ ಸಾಮಾನ್ಯ ಬೇಡಿಕೆಗಳನ್ನು ಈಡೇರಿಸಿರಲಿಲ್ಲ. ರೈತರ ಸಮಸ್ಯೆ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ್ದು, ಕೃಷಿಯ ಉತ್ಪಾದನೆ, ಕೃಷಿಯ ಬೆಳೆಗಳಿಗೆ ಬೆಲೆಯ ನಿರ್ಧಾರ, ಕೃಷಿ ಮಾರುಕಟ್ಟೆ, ವ್ಯವಸಾಯ ಉಪಕರಣಗಳು ಮುಂತಾದವು ರೈತರ ಸಮಸ್ಯೆಗಳು. ಇನ್ನು ದಲಿತರ ಸಮಸ್ಯೆಗಳು ಇದಕ್ಕಿಂತ ಭಿನ್ನ. ಅವು ಮೂಲಭೂತವಾಗಿ ಹಸಿವಿನ ಸಮಸ್ಯೆ, ಅನ್ನದ ಸಮಸ್ಯೆ ಕೂಲಿ, ಸಾಮಾಜಿಕ ಅಪಮಾನ, ದೌರ್ಜನ್ಯ, ಹಲ್ಲೆ, ಶಿಕ್ಷಣ, ಆರೋಗ್ಯ, ಗ್ರಾಮಗಳ ಸಾಮಾನ್ಯ ಅಭಿವೃದ್ಧಿ, ಕೂಲಿ ಕೆಲಸಕ್ಕೆ ಸರಿಯಾದ ಕೂಲಿ ಸಿಗದೇ ಇರುವುದು ಇವು ದಲಿತರ ಸಮಸ್ಯೆಗಳು. ಇಂಡಿಯಾಕ್ಕೆ ಅಧಿಕಾರ ಹಸ್ತಾಂತರ ಆಗಿ, ಇಂಡಿಯಾ ದೇಶದ್ದೇ ಆಧುನಿಕ ಸರಕಾರಗಳು ಅಧಿಕಾರ ನಡೆಸಲು ಶುರುಮಾಡಿ 20 ವರುಷಗಳು ಕಳೆದು ಹೋಗಿದ್ದರೂ ರೈತರ ಮತ್ತು ದಲಿತರ ಮೂಲಭೂತ ಸಮಸ್ಯೆಗಳು ಹಾಗೇ ಉಳಿದಿದ್ದವು. ಅವುಗಳನ್ನು ಯಾವುದೇ ರಾಜಕೀಯ ಪಕ್ಷ, ಯಾವುದೇ ಆಳುವ ಸರಕಾರ ಬಗೆಹರಿಸಲಾರದು ಎಂಬುದು ರೈತರಿಗೆ ಮತ್ತು ದಲಿತರಿಗೆ ನೇರವಾಗಿ ಅನುಭವಕ್ಕೆ ಬಂತು. ಪರಿಣಾಮವಾಗಿ ರೈತ ಸಮುದಾಯದಿಂದ ರೈತ ಸಂಘವೂ, ದಲಿತ ಸಮುದಾಯದಿಂದ ದಲಿತ ಸಂಘವೂ ಈ ನೆಲದ ಒಡಲಿನ ಕಾವಿನಿಂದಲೇ ಹುಟ್ಟಿದವು.

60–70ರ ದಶಕದಲ್ಲಿ ಇಂಡಿಯಾದ ಕೃಷಿ ರಂಗದಲ್ಲಿ ಬಹುದೊಡ್ಡ ಒಂದು ಗಂಭೀರ ಜೋಕ್ ನಡೆದು ಹೋಯಿತು. ಅದು 'ಹಸಿರು ಕ್ರಾಂತಿ' ಎಂಬುದು. ಬಂಡವಾಳಶಾಹಿ ಮಾರುಕಟ್ಟಿಗೆ ಲಾಭ ತರುವಂತೆ ಕೃಷಿ ವಲಯವನ್ನು ಸಂಪೂರ್ಣ

ಮಾರ್ಪಡಿಸಲಾಯಿತು. ಹಳೆಯ ಉತ್ಪಾದನೆಯ ವಿಧಾನದ ಬದಲಾಗಿ ಹೊಸ ಉತ್ಪಾದನೆಯ ವಿಧಾನಗಳನ್ನು ಜಾರಿಗೆ ತರಲಾಯಿತು. ರಾಸಾಯನಿಕ ಗೊಬ್ಬರಗಳು, ಕ್ರಿಮಿ ನಾಶಕಗಳು, ಕಳೆನಾಶಕಗಳು ಮಾರುಕಟ್ಟೆಗೆ ಬಂದವು. ಜೊತೆಗೆ ಸಸಿ ಕೀಳಲು, ನಾಟಿ ಮಾಡಲು, ಕಟಾವು ಮಾಡಲು, ತೂರಲು ಈ ಎಲ್ಲದಕ್ಕೂ ಯಂತ್ರಗಳು ಬಂದವು. ಭಾರೀ ಜಮೀನ್ದಾರರು ಇವುಗಳ ಲಾಭ ಪಡೆಯಲು ಮುಂದಾದರು. ಆ ಕಡೆ ಬಂಡವಾಳಶಾಹಿ ಮಾರುಕಟ್ಟೆ ಇವರನ್ನು ನೇರವಾಗಿ ಸುಲಿಗೆಮಾಡಿ ಬೆಳೆಯಿತು. ಇದು ಕೃಷಿಯ ಉತ್ಪಾದನೆಯನ್ನು ದ್ವಿಗುಣಗೊಳಿಸಿತು ಎನ್ನುವದಕ್ಕಿಂತ ಹೆಚ್ಚಾಗಿ ಕೃಷಿ ಯಂತ್ರೋಪಕರಣಗಳ ಮಾರುಕಟ್ಟೆಯನ್ನು ಬೆಳೆಸಿತು. 'ಹಸಿರು ಕ್ರಾಂತಿಯ' ಮುಚ್ಚಿಟ್ಟ ಉದ್ದೇಶ ಕೂಡ ಅದೇ ಆಗಿತ್ತು. ಎಲ್ಲದಕ್ಕೂ ಯಂತ್ರಗಳು ಬಂದುದರಿಂದ ಕೃಷಿ ವಲಯದಲ್ಲಿ ನಿರುದ್ಯೋಗ ಕೂಡ ತಲೆ ಎತ್ತಿತ್ತು. ಇದು ಕೃಷಿ ಕೂಲಿ ಕಾರ್ಮಿಕರಾದ ದಲಿತ ವರ್ಗದಲ್ಲಿ ಹೊಸ ಬಗೆಯ ಸಮಸ್ಯೆಯನ್ನು ಸೃಷ್ಟಿಸಿತ್ತು.

ಇದೇ ಅವಧಿಯಲ್ಲಿ ಇಂಡಿಯಾಕ್ಕೆ ಅಪಾರ ಪ್ರಮಾಣದ ವಿದೇಶೀ ಸಾಲವನ್ನು ತರಲಾಯಿತು. 60ರ ದಶಕದ ಮಧ್ಯ ಅವಧಿಯಲ್ಲಿ ಬಂದ ಒಂದು ಭೀಕರ ಬರಗಾಲ ಇಂಡಿಯಾದ ಸಾಮಾನ್ಯ ಜನತೆಯನ್ನು ನೇರವಾಗಿ ಬಲಿ ತೆಗೆದುಕೊಂಡಿತು. ಈ ದಶಕದ ಕೊನೆಯಲ್ಲಿ ಇಂಡಿಯಾದ ರೂಪಾಯಿ ಅಪಮೌಲ್ಯಗೊಂಡಿತು. ಆಡಳಿತ ಪಕ್ಷವಾಗಿದ್ದ ಕಾಂಗ್ರೆಸ್ ದೇಶವನ್ನು ಮತ್ತಷ್ಟು ಇನ್ನಷ್ಟು ಸಾಮ್ರಾಜ್ಯ ಶಾಹಿಗೆ ಗುಲಾಮರಾಗಿಸುವ ಕೆಲಸದಲ್ಲಿ ನಿರತವಾಗಿತ್ತು. ಹಾಗಾಗಿ ಜನತೆಯ ನೆಲೆಯಲ್ಲಿ ಕಾಂಗ್ರೆಸ್ಸಿನ ವಿರುದ್ಧ, ಆಡಳಿತದ ವಿರುದ್ಧ ಅಸಹನೆ, ಆಕ್ರೋಶ, ಪ್ರತಿಭಟನೆಗಳು ಬೀಜರೂಪಿಯಾಗಿ ಮೊಳಕೆಯೊಡೆದವು. ಕ್ರಮೇಣ ಅವು ಚಿಗುರತೊಡಗಿದವು. ಈ ಎಲ್ಲಾ ಬಿಕ್ಕಟ್ಟುಗಳ ಫಲವಾಗಿ ಕರ್ನಾಟಕದಲ್ಲಿ ರೈತ ಸಂಘ ಮತ್ತು ದಲಿತ ಸಂಘಗಳು ಹುಟ್ಟಿಕೊಂಡವು. ಕೃಷಿಯ ಮೇಲೆ ಸಾಮ್ರಾಜ್ಯಶಾಯಿಯ ದುಷ್ಪರಿಣಾಮ, ದುಡಿವ ವರ್ಗವಾದ ದಲಿತರ ಮೇಲೆ ಕೃಷಿ ವಲಯದ ದುಷ್ಪರಿಣಾಮ ಮತ್ತು ಕೃಷಿ ವಲಯದ ಭೂಮಾಲೀಕರ ದಬ್ಬಾಳಿಕೆಗಳು ಒಟ್ಟಿಗೆ ಸೇರುವುದರ ಮೂಲಕ ಈ ನೆಲದಲ್ಲಿ ಎರಡು ಸಮುದಾಯಗಳ ಹೋರಾಟಗಳು ಹುಟ್ಟಲು ಕಾರಣವಾಯಿತು. ಇದು ಮೊದಲ ಹಂತ. ಎರಡನೇ ಹಂತವೆಂದರೆ, 90ರ ದಶಕದಲ್ಲಿ ನರಸಿಂಹರಾವ್ ಸರಕಾರದ



ಅವಧಿಯಲ್ಲಿ ಗ್ಯಾಟ್, ಡಂಕೆಲ್ ಮುಂತಾದವುಗಳಿಗೆ ಸಹಿ ಹಾಕುವ ಮೂಲಕ ಇಡೀ ಉತ್ಪಾದನಾ ವಲಯವನ್ನೇ ಖಾಸಗೀಕರಿಸಲಾಯಿತು. ಆ ಮೂಲಕ ಇಂಡಿಯಾದ ಎಲ್ಲಾ ಬಗೆಯ ಸಂಪತ್ತನ್ನು ಮತ್ತು ಸಂಪನ್ಮೂಲಗಳನ್ನು ನೇರವಾಗಿ ಜಾಗತಿಕ ಮಾರುಕಟ್ಟೆಗೆ ತೆರೆದಿಡಲಾಯಿತು. ಈ ಎರಡನೇ ಹಂತದಲ್ಲಿ ರೈತರು ಮತ್ತು ದಲಿತರು ಎಂದಿಲ್ಲದ ಕಷ್ಟ ಸಂಕಟಗಳಿಗೆ ಒಳಗಾದರು. ರೈತರಿಗೆ ಕೃಷಿ ಉತ್ಪಾದನೆಯೇ ಮುಳುವಾಯಿತು. ದಲಿತರಿಗೆ ಕೃಷಿ ವಲಯದಲ್ಲಿ ಕೂಲಿ ಕೆಲಸ ಕೂಡ ಸಿಗಲಾರದಂತಹ ವಿಕೃತ ಪರಿಸ್ಥಿತಿ ನಿರ್ಮಾಣವಾಯಿತು.

ಮೊದಲ ಹಂತದಲ್ಲಿ, ರೈತ ಸಂಘ ಹುಟ್ಟಿದ್ದೇ ಸಾಮ್ರಾಜ್ಯಶಾಹೀಯ ನೇರ ಪರಿಣಾಮದಿಂದ. ಆದರೆ ರೈತ ಸಂಘ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ತನ್ನ ಪ್ರಧಾನ ಗುರು/ಅಜೆಂಡಾವನ್ನಾಗಿ ಪರಿಗಣಿಸಲೇ ಇಲ್ಲ. ಬೆಂಗಳೂರಿನಲ್ಲಿ ಕೆಂಟುಕಿ ಚಿಕನ್ ಮೇಲೆ, ಬಳ್ಳಾರಿಯಲ್ಲಿ ಕಾರ್ಗಿಲ್ ಕಂಪೆನಿಯ ರೈತ ಸಂಘ ಮಾಡಿದ ದಾಳಿಗಳನ್ನು ಹೊರತುಪಡಿಸಿದರೆ, ಸಾಮ್ರಾಜ್ಯಶಾಹಿ ವಿರೋಧಿ ಬಲಾಢ್ಯ ಹೋರಾಟವನ್ನು ರೂಪಿಸುವುದಕ್ಕೆ ರೈತಾಪಿ ವಲಯದಲ್ಲಿ ವಸ್ತುಸ್ಥಿತಿ ನಿರ್ಮಾಣವಾಗಿದ್ದರೂ ಕೂಡ ಅದನ್ನು ಹೋರಾಟಕ್ಕೆ ಬಳಸಿಕೊಳ್ಳುವ ಪ್ರಯತ್ನವನ್ನು ರೈತ ಸಂಘ ಮಾಡಲಿಲ್ಲ. ಅದೇ ರೀತಿ ಮೊದಲ ಹಂತದಲ್ಲಿ ಭೂಮಾಲಿಕರ ಕ್ರೌರ್ಯದ ಒಡಲಿನಿಂದಲೇ ಹುಟ್ಟಿದ ದಲಿತ ಸಂಘ ಜಮೀನ್ದಾರಿ ವಿರೋಧಿ ಹೋರಾಟವನ್ನು, ಭೂಮಿಯ ಹೋರಾಟವನ್ನು, ಭೂಪ್ರಶ್ನೆಯನ್ನು ತನ್ನ ಪ್ರಧಾನ ಹೋರಾಟವನ್ನಾಗಿ ಪರಿಗಣಿಸಲೇ ಇಲ್ಲ. ಮೂಲಭೂತವಾಗಿ ಊಳಿಗಮಾನ್ಯ ಸಂಬಂಧಗಳು, ಊಳಿಗಮಾನ್ಯ ಮೌಲ್ಯಗಳೆಲ್ಲವೂ ದಲಿತರ ಪಾಲಿಗೆ ಮಹಾನ್ ಶಾಪಗಳು. ಜಾತಿ ಅಸ್ಪೃಶ್ಯತೆ ಆಚರಣೆಗಳ ವಿರುದ್ಧ ಕೂಡ ದಲಿತ ಸಂಘ ನಿರ್ದಿಷ್ಠ ರಚನಾತ್ಮಕ ಹೋರಾಟಗಳನ್ನು ರೂಪಿಸಲಿಲ್ಲ. ಭೂಮಾಲಿಕ ವ್ಯವಸ್ಥೆಯ ಖಾಸಾಗಿ ಭೂ ಒಡೆತನಕ್ಕೂ ಮತ್ತು ಜಾತಿ ಅಸ್ಪೃಶ್ಯತೆಗಳ ವಿರುದ್ಧದ ರಾಜಕೀಯ ಹೋರಾಟವು ಭೂ ಹೋರಾಟದ ಒಂದು ರೂಪವೇ ಆಗುತ್ತದೆ. ಅದೇ ರೀತಿ ಭೂಮಿಗಾಗಿ ದಲಿತರು ರಾಜಕೀಯ ಹೋರಾಟವನ್ನು ಕೈಗೆತ್ತಿಕೊಂಡರೆ ಅದು ಜಾತಿ ಅಸ್ಪೃಶ್ಯತೆಗೆ ವಿರುದ್ಧದ ಹೋರಾಟದ ರೂಪವನ್ನೂ ತಾಳುತ್ತದೆ. ಆದರೆ ಇಡೀ ದಲಿತ ಸಂಘದ ಇತಿಹಾಸದಲ್ಲಿ ಈ ಬಗೆಯ ಹೋರಾಟಗಳನ್ನು ಕೈಗೆತ್ತಿಕೊಳ್ಳಲೇ ಇಲ್ಲ. ಇನ್ನೊಂದುಕಡೆ ರೈತ ಸಂಘವು, 'ರೈತ ಎಂದರೆ ಯಾರು'? 'ಈ ನೆಲದ ರೈತರ ಮೂಲಭೂತ ಸಮಸ್ಯೆ ಯಾವುದು?" ಎಂಬ ಪ್ರಶ್ನೆಯನ್ನು

ಕೇಳಿಕೊಳ್ಳಲು ಇಂದಿಗೂ ಸಿದ್ಧವಿಲ್ಲ. ರೈತರಲ್ಲೇ ಇರಬಹುದಾದ ಬೇರೆ ಬೇರೆ ವರ್ಗಗಳ ಬಗ್ಗೆಯೂ ಒಂದು ಖಚಿತವಾದ ನಿಲುವನ್ನು ಅದು ತಾಳಿಲ್ಲ. ಪರಿಣಾಮವಾಗಿ ಅದು ಬಹುತೇಕ ಭಾರೀ ಭೂಮಾಲೀಕರ ಮತ್ತು ಮಧ್ಯಮ ರೈತರ ಪರವಾಗಿ ಕೆಲಸ ಮಾಡುವುದು ಅನಿವಾರ್ಯವಾಗಿದೆ.

ಎರಡನೇ ಹಂತದಲ್ಲಿ ಅಂದರೆ ನಿರ್ದಿಷ್ಟವಾದ 90ರ ದಶಕದ ನಂತರ ಜಾಗತೀಕರಣ, ಉದಾರೀಕರಣಗಳು ತುಂಬಾ ಪರಿಣಾಮಕಾರಿಯಾಗಿ ಜಾರಿಗೆ ಬಂದ ಮೇಲೆ ರೈತಾಪಿ ವಲಯದಲ್ಲಿ ತೀವ್ರತರ ಸಮಸ್ಯೆಗಳು ತಲೆ ಎತ್ತಿವೆ. ಭಾರೀ ಭೂಮಾಲೀಕ ವರ್ಗವು ವ್ಯಾಪಾರಿ ವರ್ಗವಾಗಿ ರೂಪಾಂತರಗೊಂಡಿದೆ. ಅದು ತನ್ನ ಕೆಳಗಿರುವ ಬೇರೆ ಬೇರೆ ಸ್ತರಗಳ ರೈತರಿಗೆ ಸಾಲ ಕೊಡುವ ಮೂಲಕ ನೇರವಾಗಿ ಅವರನ್ನು ಶೋಷಣೆ ಮಾಡುತ್ತಿದೆ. ಈ ರೀತಿ ರೈತಾಪಿ ವಲಯದಲ್ಲೇ ವರ್ಗ ವೈರುದ್ಧಗಳು ಹೊಸ ರೂಪ ತಾಳುತ್ತಿವೆ. ಕೃಷಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳಿಗೆ ಸಂಬಂಧಿಸಿ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ, ಅಂತಿಮವಾಗಿ ಜಾಗತೀಕರಣದ ವಿರುದ್ಧವೇ ರೈತ ಸಂಘ ಹೋರಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಜಾಗತೀಕರಣದ ವಿರುದ್ಧ ಹೋರಾಡುವುದರ ಜೊತೆಗೆ ವಿವಿಧ ಸ್ತರಗಳಲ್ಲಿ ವಿಭಾಗವಾಗಿರುವ ಯಾವ ರೈತರ ನೆಲೆಯಿಂದ ಹೋರಾಟವನ್ನು ರೂಪಿಸಬೇಕೆಂಬುದೂ ಕೂಡ ಅಷ್ಟೇ ಮುಖ್ಯವಾದ ಪ್ರಶ್ನೆಯಾಗಿದೆ. ಇನ್ನೊಂದು ಕಡೆ 90ರ ದಶಕದ ನಂತರ ದಲಿತ ಸಮುದಾಯದಲ್ಲಿ ಅನ್ನ, ಬಟ್ಟೆ, ವಸತಿ ಮುಂತಾದ ಮೂಲಭೂತ ಸೌಕರ್ಯಗಳೇ ಇಲ್ಲದ ಪರಿಸ್ಥಿತಿ ಹಾಗೇ ಮುಂದುವರಿಯುತ್ತಿದೆ. ಇದರಿಂದ ಸಂಘಟನೆ ವಿಶಾಲವಾದ ತಳಹದಿಯ ಮೇಲೆ ಬೆಳೆಯಬೇಕಾಗಿತ್ತು. ಆದರೆ ದುರಂತವೆಂದರೆ ಈ ದಶಕದಲ್ಲೇ ದಲಿತ ಹೋರಾಟಗಳು ಛಿದ್ರ ಛಿದ್ರವಾಗಿ ಒಡೆದು ಹೋದವು. ತಮ್ಮ ಮುಂದಿರುವ ಸಮಸ್ಯೆಗಳನ್ನು ಯಾವ ದೃಷ್ಟಿಕೋನದಲ್ಲಿ ಗ್ರಹಿಸಬೇಕು? ಎಂಥ ಪರ್ಯಾಯವನ್ನು ದಲಿತರ ಮುಂದಿಡಬೇಕು? ಎಂಬುದರ ಬಗ್ಗೆ ಒಂದು ಸಾಮಾನ್ಯ ನಿಲುವು ದಲಿತ ಸಂಘಟನೆಗಳಿಗೆ ಕಾಣದೇ ಹೋಯಿತು. ಪರಿಣಮವಾಗಿ ಸರಕಾರಿ ಸೌಲತ್ತುಗಳನ್ನು ಕೇಳುವುದಕ್ಕೆ ಇಲ್ಲವೇ ಒಳ ಮೀಸಲಾತಿ ಕೇಳುವುದಕ್ಕೆ ಇಡೀ ಹೋರಾಟ ಸೀಮಿತವಾಗಿ ಹೋಯಿತು. ದಲಿತ ಸಂಘಟನೆಗಳ ಈ ಅಧೋಗತಿಯ ವಸ್ತುನಿಷ್ಠ ಪರಿಸ್ಥಿತಿಯನ್ನು ತೆರೆಮರೆಯಲ್ಲಿ ಬೆಕ್ಕಿನಂತೆ ನಿಂತು ವೀಕ್ಷಿಸುತ್ತಿದ್ದ



ಆಳುವ ವರ್ಗಗಳು ಮತ್ತು ಎನ್.ಜಿ.ಓ.ಗಳು ಇದಕ್ಕೆ ನೇರವಾಗಿ ಕುಮ್ಮಕ್ಕು ಕೊಟ್ಟವು. ಜೊತೆಗೆ ದಲಿತರ ಹೋರಾಟಕ್ಕೆ ತಾವೂ ಮಾರ್ಗ ಸೂಚಿಸುತ್ತೇವೆ ಎಂಬುದನ್ನು ಗೌಪ್ಯವಾಗಿಟ್ಟುಕೊಂಡು ಅವೂ ಕೂಡ ಇದೇ ಕೆಲಸವನ್ನು ಶುರುಮಾಡಿದವು. ದಲಿತ ಹೋರಾಟಗಾರರಿಗೆ ಇದು ರೊಟ್ಟಿಯೇ ಮುರಿದು ತುಪ್ಪಕ್ಕೆ ಬಿದ್ದಂತಾಯಿತು. ಪರಿಣಾಮವಾಗಿ ತಮ್ಮ ಉದ್ಧಾರ ಎನ್.ಜಿ.ಓ. ಗಳು ಸಾಗುತ್ತಿರುವ ಮಾರ್ಗದಲ್ಲೂ ಕೂಡ ಸಾಧ್ಯ ಎಂಬ ಅಘೋಷಿತ ತೀರ್ಮಾನ ಮತ್ತು ಸ್ವೀಕಾರ ದಲಿತ ನಾಯಕರ ತಲೆಯಲ್ಲಿ ಹೊಕ್ಕಿತು. ಅದರಿಂದ ಅವರಿಗೆ ಖಾಸಗೀಕರಣ ಮತ್ತು ಎನ್‌ಜಿ.ಓಗಳ ನೆಟ್‌ವರ್ಕ್ ಕುರಿತು ಒಂದು ಸಮರ್ಥವಾದ ರಾಜಕೀಯ ದೃಷ್ಟಿಕೋನ ಬಾರದೇ ಹೋಯಿತು. ಫಲವಾಗಿ ದಲಿತ ಸಂಘಟನೆಗಳಿಗೆ ಒಂದು ಸರಿಯಾದ ರಾಜಕೀಯ ದೃಷ್ಟಿಕೋನವಿಲ್ಲದೆ ಅದು ಶತ್ರುವಲಯದ ವಿಚಾರಗಳನ್ನೇ, ಶತ್ರುವಲಯದ ದೃಷ್ಟಿಕೋನವನ್ನೇ ತನ್ನದೆಂದು ಭ್ರಮಿಸುವಂತಾಯಿತು.

ಯಾವುದೇ ಎರಡು ಸಂಘಗಳು ಅಥವಾ ಎರಡು ರಾಜಕೀಯ ಪಕ್ಷಗಳು ಐಕ್ಯಗೊಳ್ಳಲು ಎರಡೂ ಕಡೆ ಒಂದೇ ಬಗೆಯ ಪರಿಸ್ಥಿತಿ ಎದುರಾಗಿರಬೇಕು. ಎರಡು ಕಡೆಯವರಿಗೆ ಒಂದೇ ಬಗೆ ಸಾಮಾನ್ಯ ಶತ್ರು ಇರಬೇಕು. ಆ ಸತ್ರು ಬಾಹ್ಯ ಶತ್ರುವೋ? ಆಂತರಿಕ ಶತ್ರುವೋ? ಎಂಬುದನ್ನು ಆ ಎರಡೂ ಕಡೆಯವರು ಗುರುತಿಸಿಕೊಂಡಿರಬೇಕು. ಅದನ್ನು ಗುರುತಿಸಿಕೊಂಡ ನಂತರ ಆ ಸಮಾನ ಶತ್ರುವಿನ ವಿರುದ್ಧ ಹೋರಾಡಲು ಈ ಎರಡೂ ಶಕ್ತಿಗಳು ಒಂದಾಗಬೇಕಾಗುತ್ತದೆ. ಈ ದೃಷ್ಟಿಯಲ್ಲಿ ನೋಡುವುದಾದರೆ, ರೈತ ಸಂಘ ಮತ್ತು ದಲಿತ ಸಂಘ ಈ ಎರಡಕ್ಕೂ ಯಾವುದು ಸಮಾನ ಶತ್ರು? ಎಂಬುದನ್ನು ಮೊದಲು ಸ್ಪಷ್ಟ ಮಾಡಿಕೊಳ್ಳಬೇಕಾಗಿದೆ. ಈ ಎರಡೂ ಸಂಘಗಳಿಗೆ ಅಥವಾ ವಿಶಾದ ಅರ್ಥದಲ್ಲಿ ರೈತರಿಗೆ ಮತ್ತು ದಲಿತರಿಗೆ ಸಾಮ್ರಾಜ್ಯಶಾಹಿಯ ಜಾಗತೀಕರಣವೇ ಸಾಮಾನ್ಯ ಶತ್ರು ಎಂಬುದು ಮೇಲ್ನೋಟಕ್ಕೆ ತಿಳಿಯುವ ಸಂಗತಿಯಾಗಿದೆ. ಹಾಗಾದರೆ ಇದು ಬಾಹ್ಯ ಶತ್ರುವೋ ಆಂತರಿಕ ಶತ್ರುವೋ ಎಂಬುದು ಕೇಳಿದರೆ ಎರಡಕ್ಕೂ ಜಾಗರೀಕರಣವು ಬಾಹ್ಯ ಶತ್ರು ಎಂಬುದು ಒಂದು ಹಂತದಲ್ಲಿ ತಿಳಿಯುತ್ತದೆ. ಆದರೆ ಇದನ್ನು ಕೇವಲ ಹೇಳಿಕೆಯ ಮಟ್ಟದಲ್ಲೇ ಉಳಿಸಲು ಬರುವುದಿಲ್ಲ. ಜಾಗತೀಕರಣವು ತನ್ನ ಪರಿಣಾಮದಲ್ಲಿ ಏಕಕಾಲದಲ್ಲಿ ರೈತರಿಗೂ ಮತ್ತು ದಲಿತರಿಗೂ

ಹೇಗೆ ಶತ್ರು ಎಂಬುದನ್ನು ಖಚಿತ ಮಾಡಿಕೊಳ್ಳಬೇಕು. ಬಡವಾಳಶಾಹಿ ಮಾರುಕಟ್ಟೆಯು ಕೃಷಿಯ ಮೇಲೆ ನೇರವಾಗಿ ದಾಳಿಮಾಡಿರುವುದರಿಂಧ, ಆಳುವ ಸರಕಾರಗಳು ಕೃಷಿ ವಲಯವನ್ನು ನೇರವಾಗಿ ಬಂಡವಾಳಶಾಯಿ ಮಾರುಕಟ್ಟೆಗೆ ಮಾರಾಟ ಮಾಡಿರುವುದರಿಂದ ಭಾರೀ ಭೂಮಾಲಿಕ ವರ್ಗವನ್ನು ಬಿಟ್ಟು ಉಳಿದ ರೈತಾಪಿ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ ಭಾರೀ ಬಿಕ್ಕಟ್ಟಿನಲ್ಲಿದೆ. ಈ ಬಿಕ್ಕಟ್ಟು ಭಾರೀ ಭೂಮಾಲೀಕರಿಗೆ ತಮ್ಮ ಲಾಭವನ್ನು ಮುಂದುವರಿಸಿಕೊಂಡು ಹೋಗಲು ಒಂದು ವರವೇ ಆಗಿದೆ. ಇದನ್ನು ಇನ್ನೂ ಸ್ಪಷ್ಟಗೊಳಿಸಬೇಕೆಂದರೆ, ರೈತಾಪಿ ವಲಯದಲ್ಲೇ ಸಣ್ಣ, ಅತಿ ಸಣ್ಣ ರೈತರಿಗೆ ಭಾರೀ ಭೂಮಿ ಉಳ್ಳ ರೈತರು ಶತ್ರುಗಳಗಿದ್ದಾರೆ. ಭಾರೀ ಭೂಮಾಲೀಕರು ಸಣ್ಣ ಅತಿ ಸಣ್ಣ ರೈತಾಪಿ ವಲಯವನ್ನು ಬೇರೆ ಬೇರೆ ಬಗೆಗಳಲ್ಲಿ ಶೋಷಣೆ ಮಾಡುತ್ತಲೇ ಮುಂದುವರಿದಿದ್ದಾರೆ. ಹಾಗಾಗೀ ಭಾರೀ ಭೂಮಾಲಿಕ ವರ್ಗ ಮತ್ತು ಸಣ್ಣ, ಅತಿಸಣ್ಣ ರೈತಾಪಿ ವರ್ಗದ ನಡುವೆ ಆಂತರಿಕ ಶತ್ರುತ್ವದ ಸ್ವರೂಪ ಇದೆ. ಇನ್ನು ದಲಿತ ಸಂಘರ್ಷ ಸಮಿತಿಯ ವಿಷಯಕ್ಕೆ ಬಂದರೆ, ಜಾಗತೀಕರಣವು ಇಡೀ ದಲಿತ ಸಮುದಾಯಕ್ಕೆ ಇಂದು ಶಾಪವಾಗಿ ಕಾಡುತ್ತಿರುವುದು ಅದರ ಪರಿಣಾಮದ ನೆಲೆಯಿಂದಲೇ ನಮಗೆ ಗೊತ್ತಾಗಿದೆ. ಕೃಷಿ ವಲಯದಲ್ಲಿ ಭಾರೀ ಭೂಮಾಲೀಕ ವರ್ಗ ವ್ಯಾಪಾರಿ ವರ್ಗವಾಗಿ ಮಾರ್ಪಟ್ಟಿದೆ. ಅದರ ಜೊತೆಗೆ ಕೃಷಿ ಉತ್ಪಾದನೆಗೆ ಸಂಪೂರ್ನ್ಮೂಲ ಇಲ್ಲವೇ ಬಹುತೇಕ ಯಂತ್ರಗಳನ್ನು ಬಳಸಲಾಗುತ್ತಿದೆ. ಇದು ಸಹಜವಾಗಿ ಕೃಷಿಕೂಲಿ ಕಾರ್ಮಿಕರಾದ ದಲಿತರ ಕೂಲಿ ಕೆಲಸವನ್ನು ಕಿತ್ತುಕೊಂಡಿದೆ. ಪರಿಣಾಮವಾಗಿ ಇತ್ತೀಚಿನ ವರ್ಷಗಳಲ್ಲಿ ಕೃಷಿ ವಲಯದಲ್ಲಿ ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗಿದೆ. ಇಲ್ಲಿಯೂ ಕೂಡ ಭಾರೀ ಜಮೀನುಳ್ಳ ಭೂಮಾಲೀಕರು ದಲಿತರಿಗೆ ಶತ್ರುಗಳಾಗಿದ್ದಾರೆ. ದಲಿತ ಸಂಘ ತನ್ನ ಸಮುದಾಯದ ಸಮಗ್ರ ವಿಮೋಚನೆಯ ದಾರಿಯನ್ನು ಬಿಟ್ಟು ಕೇವಲ ಸರಕಾರಿ ಸೌಲತ್ತುಗಳನ್ನು ದಲಿತರಿಗೆ ಕೊಡಿಸುವ ಏಜೆಂಟಗಳ ಕೆಲಸಕ್ಕೆ ತನ್ನನ್ನು ಸೀಮಿತ ಮಾಡಿಕೊಂಡಿದ್ದರಿಂದ, ಅಲ್ಲಿ ಒಳಜಾತಿ ಒಳಮೀಸಲಾತಿಯ ಪ್ರಶ್ನೆಗಳು ದಲಿತರ ವಿಮೋಚನೆಯ ಏಕೈಕ ದಾರಿಗಳೆಂಬಂತೆ ಬಿಂಬಿಸಲಾಗುತ್ತದೆ. ಇದೂ ಸೇರಿದಂತೆ ಇಂದು ಜಾತಿ ಮತ್ತು ಅಸ್ಪೃಶ್ಯತೆ ಸಮಸ್ಯೆಗಳು ಮತ್ತಷ್ಟು ಬೇರೂರಿ ಬೆಳೆಯಲು ಕಾರಣವಾಗಿದೆ. ತಮ್ಮ ಒಳಜಾತಿ, ಗುಂಪುಗಳಿಗೆ ಅಂಟಿಕೊಳ್ಳುವುದರ



ಮೂಲಕವೇ ದಲಿತರ ವಿಮೋಚನೆ ಎಂಬ ಹುಸಿ ದಾರಿಯು ದಲಿತರ ವಿಶಾಲವಾದ ಒಗ್ಗಟ್ಟನ್ನು ಮುರಿದು ಹಾಕಿದೆ. ದಲಿತರ ಮೇಲೆ ಹಲ್ಲೆ, ಕೊಲೆ, ಬಹಿಸ್ಕಾರಗಳನ್ನು ನಡೆಸಿದಾಗ, ಅದಕ್ಕೆ ಒಳಗಾದವರು 'ಹೊಲೆಯರೋ?, ಮಾದಿಗರೋ?' ಎಂದು ಸೀಮಿತವಾಗಿ ನೋಡುವಂತಹ ಸಂಕುಚಿತ ಮನೋಭಾವ ದಲಿತರಲ್ಲಿ ಮೂಡಿ ಬಲವಾಗಿ ಬೆಳೆದು ನಿಂತಿದೆ. ಒಳಮೀಸಲಾತಿಯ ಪ್ರಶ್ನೆಯನ್ನು ದಲಿತರ ಏಕೈಕ ಪ್ರಧಾನ ಸಮಸ್ಯೆ ಎಂದೇ ಈಗ ಬಿಂಬಿಸಲಾಗುತ್ತದೆ. ಪರಿಣಾಮವಾಗಿ ಭೂಮಾಲೀಕರ ವಿರುದ್ಧ, ಜಾಗತೀಕರಣದ ವಿರುದ್ಧ ಹೋರಾಡಬೇಕಿದ್ದ ದಲಿತರ ಆಕ್ರೋಶದ ವಸ್ತು ನಿಷ್ಠ ಪರಿಸ್ಥಿತಿಯನ್ನು ನಯವಾಗಿ ನೈಸ್ ಮಾಡಿ, ಅದನ್ನು ದಿಕ್ಕು ತಪ್ಪಿಸಿ, ಅವರ ಆಕ್ರೋಶವು ಅವರ ಒಳಪಂಗಡದ ಒಳಗೇ ಕ್ರಿಯಾಶೀಲವಾಗುವಂತೆ ನೋಡಿಕೊಳ್ಳಲಾಗಿದೆ. ಇದರ ಫಲಿತಾಂಶ ಈಗಾಗಲೇ ತುಂಬ ಯಶಸ್ವಿಯಾಗಿಯೇ ಕೆಲಸ ಮಾಡುತ್ತಿದೆ. ಇದು ಸಹಜವಾಗಿ ಭೂಮಾಲಿಕ ವರ್ಗಕ್ಕೆ, ಆಳುವ ವರ್ಗಕ್ಕೆ ಮತ್ತು ಎನ್.ಜಿ.ಓ ಗಳಿಗೆ ಒಳಗೊಳಗೇ ಖುಷಿಪಡುವ ಸಂಗತಿಯಾಗಿದೆ. ಇದರರ್ಥ ಭೂಮಾಲಿಕ ವರ್ಗ ಮತ್ತು ಜಾಗತೀಕರಣಗಳು ನೇರವಾಗಿ ದಲಿತರ ಶತ್ರುಗಳೇ ಆಗಿರುವಾಗಲೂ ಅವನ್ನು ಮುಚ್ಚಿಡಲಾಗುತ್ತಿದೆ.

ದಲಿತ ಸಂಘದಲ್ಲಿ ಈಗಾಗಲೇ ಹಲವಾರು ಬಣಗಳಿವೆ. ಜಯಣ್ಣ ಬಣ, ಡಿ.ಜಿ ಸಾಗರ್ ಬಣ, ಎನ್. ಮೂರ್ತಿ ಬಣ, ಅಂಬೇಡ್ಕರ್ ವಾದ, ಎಸ್.ಎಸ್.ಡಿ. ಸಂಯೋಜಕ ಸಮಿತಿ, ಪ್ರಜಾ ವಿಮೋಚನಾ ಚಳುವಳಿ ಇತ್ಯಾದಿ. ಇವುಗಳಲ್ಲಿ ಒಂದು ಗುಂಪಾದ ಇಂದೂಧರ ಹೊನ್ನಾಪುರ ಅವರ ನೇತೃತ್ವದ ದಲಿತ ಸಂಘ ಮಾತ್ರವೇ ರೈತ ಸಂಘದೊಂದಿಗೆ ಸೇರಲು ಮುಂದಾಗಿದೆ. ಇನ್ನುಳಿದ ಹಲವಾರು ದಲಿತ ಸಂಘಟನೆಗಳು ಈ ಪ್ರಕ್ರಿಯೆಯಲ್ಲಿ ಬಂದೇ ಇಲ್ಲ. ಅವೆಲ್ಲಾ ಈಗಲೂ ಸ್ವತಂತ್ರವಾಗಿಯೇ ಹೋರಾಟ ಮುಂದುವರಿಸಿವೆ. ಅದೇ ರೀತಿ ರೈತ ಸಂಘಗಳಲ್ಲಿ ಎರಡು ಮುಖ್ಯ ಬಣಗಳಿವೆ. ಇವುಗಳಲ್ಲಿ ಸಧ್ಯಕ್ಕೆ ಪುಟ್ಟಣ್ಣಯ್ಯ ಅವರ ಬಣ ಮಾತ್ರ ದಲಿತ ಸಂಘದ ಒಂದು ಗುಂಪಿನೊಂದಿಗೆ ಐಕ್ಯತೆಗೆ ಮುಂದಾಗಿದೆ. ಅಂದರೆ ರೈತ ಸಮುದಾಯದಲ್ಲಿ ಮತ್ತು ದಲಿತ ಸಮುದಾಯದಲ್ಲಿ ಇದು ಇಡಿಯಾಗಿ ಸಂಭವಿಸುತ್ತಿರುವ ವಿಶಾಲವಾದ ಐಕ್ಯತೆಯ ಪ್ರಕ್ರಿಯೆಯಲ್ಲ.

'ರೈತರು' ಎಂದು ಕರೆಯಲಾಗಿರುವವರೆಲ್ಲ ಹೆಚ್ಚಾಗಿ ಈ ನೆಲದಲ್ಲಿ ಮೇಲುಜಾತಿ ಭೂಮಾಲಿಕ ವರ್ಗದವರೇ. ಅವರು ಆರ್ಥಿಕವಾಗಿ ಬಡವರೇ ಇರಬಹುದು. ಆದರೆ ಊಳಿಗಮಾನ್ಯಶಾಹೀ ಮೌಲ್ಯಗಳಿಂದ ಅವರು ಕಿಂಚಿತ್ತೂ ಹೊರಗೆ ಬಂದಿಲ್ಲ. ಹಾಗೆ ನೋಡಿದರೆ ಈ ಬಗೆಯ ಐಕ್ಯತೆಯ ಪ್ರಕ್ರಿಯೆಗಳು ಆ ವರ್ಗದ ಮೇಲರಿಮೆಯ ಪ್ರಜ್ಞೆಯನ್ನು ಬಿಡಿಸಿ, ಅವರನ್ನು ಊಳಿಗಮಾನ್ಯಶಾಹಿ ಸಾಮಾಜಿಕ ಮೌಲ್ಯಗಳಿಂದ ಹೊರಬರುವಂತೆ ಪ್ರೇರೇಪಿಸಲು ಬಹಳ ಒಳ್ಳೆಯ ದಾರಿ. ಆದರೆ ಮೇಲುಜಾತಿ ಭೂಮಾಲೀಕರಾದ ರೈತ ಸಂಘದ ನಾಯಕರೂ, ಕೃಷಿ ಕೂಲಿಗಳಾದ ದಲಿತರ ನಾಯಕರೂ ಏಕಕಾಲಕ್ಕೆ ಸೃಷ್ಟಿಸಿಕೊಂಡಿರುವ ಬಹುದೊಡ್ಡ ಸಮಸ್ಯೆ ಎಂದರೆ ಹುಸಿ 'ಬ್ರಾಹ್ಮಣ ವಿರೋಧ'ದ ಸಮಸ್ಯೆ. ರೈತ ಮತ್ತು ದಲಿತ ಸಮುದಾಯದ ನಾಯಕರು ಸೇರಿಕೊಂಡು 'ನಮ್ಮ ಶತ್ರು ಸಂಘ ಪರಿವಾರ' ಎಂದು ಕೊಳ್ಳುವುದರಿಂದ ದಲಿತರು ಮತ್ತು ಭೂಮಾಲಿಕರ/ರೈತರ ನಡುವಿನ ವೈರುಧ್ಯವನ್ನು ಅಥವಾ ಶತ್ರುತ್ವವನ್ನು ನಯವಾಗಿ ಮುಚ್ಚಿಡುವ ಕೆಲಸವನ್ನು ಮಾಡಿದಂತಾಗುತ್ತದೆ. ಈಗಾಗಲೇ ಈ ಕೆಲಸವನ್ನು ಅತ್ಯಂತ ನಯವಾಗಿ ಮಾಡಲಾಗಿದೆ, ಮಾಡಲಾಗುತ್ತಿದೆ.

ವಾಸ್ತವವಾಗಿ ಉತ್ಪಾದನಾ ಸಂಬಂಧಗಳಿಂದ ಮತ್ತು ಊಳಿಗಮಾನ್ಯಶಾಹಿ ಮೌಲ್ಯಗಳಿಂದ ತಮ್ಮ ಸಮುದಾಯಕ್ಕೆ ಶತ್ರುಗಳೇ ಆಗಿರುವ, ಅದರಲ್ಲೂ ಭಾರೀ ರೈತಾಪೀ ವರ್ಗದ ಹಿತ ಕಾಯುವಂತಹ ರೈತ ಸಂಘದೊಂದಿಗೆ ದಲಿತ ಸಂಘದ ಒಂದು ಬಣ ಕೈಜೋಡಿಸಲು ಮುಂದಾಗಿರುವುದು ಬಹಳ ದೊಡ್ಡ ಜೋಕ್ ಮತ್ತು ದಲಿತರ ಪಾಲಿಗೆ ದುರಂತ.

ಹಾಗಾದರೆ ದಲಿತರು ಮತ್ತು ರೈತರು ಒಂದಾಗಿ ಹೋರಾಡಲು ಸಾಧ್ಯವೇ ಇಲ್ಲವೇ? ಎಂಬ ಪ್ರಶ್ನೆಯನ್ನು ಕುರಿತು ಕೂಡ ಆಲೋಚಿಸಬಹುದು. ಈ ಎರಡೂ ವರ್ಗದವರು ಐಕ್ಯತೆಯಿಂದ ಹೋರಾಡಲು ಎಂದಿಗಿಂತಲೂ ಇಂದು ಪರಿಸ್ಥಿತಿ ಬಹಳ ಚೆನ್ನಾಗಿ ಪಕ್ವಗೊಂಡಿದೆ. ಆದರೆ ರೈತರಲ್ಲೇ ಇರುವ ಸಣ್ಣ, ಅತಿಸಣ್ಣ ರೈತಾಪಿಗಳು ತಮ್ಮ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತು ಸ್ಪಷ್ಟಮಾಡಿಕೊಳ್ಳಬೇಕು. ಅವರು ತಮ್ಮ ಶತ್ರುಗಳು ಯಾರು? ತಮ್ಮ ಮಿತ್ರರು ಯಾರು? ಎಂಬ ಪ್ರಶ್ನೆಯನ್ನು ಸರಿಯಾಗಿ ವಿವರಿಸಿಕೊಳ್ಳಬೇಕು. ಅದೇ ರೀತಿ ದಲಿತರನ್ನು ಗುರುತಿಸುವಾಗ, ದಲಿತರಲ್ಲೇ ನೌಕರಿಯಲ್ಲಿದ್ದುಕೊಂಡು ಕತೆ, ಕಾದಂಬರಿ



ಬರೆಯುವವರನ್ನು ಬಿಟ್ಟು, ಜಮೀನ್ದಾರರ ಮನೆಗಳಲ್ಲಿ ಕೂಲಿ, ಜೀತ ಮಾಡಿಕೊಂಡಿರುವ, ಏಕವಚನದಲ್ಲಿ ಕರೆಸಿಕೊಳ್ಳುತ್ತ ಕ್ಷಣಕ್ಷಣಕ್ಕೂ ಅವಮಾನಕ್ಕೆ –ಹಿಂಸೆಗೆ ಒಳಗಾಗುತ್ತಿರುವ ಅಪಾರ ಸಂಖ್ಯೆಯ ದಲಿತರನ್ನು ಮುಖ್ಯವಾಗಿ ನಿಜವಾದ ದಲಿತರೆಂದು ಪರಿಗಣಿಸಬೇಕು. ಇವರ ವಿಮೋಚನೆಗಳಾಗಿ, ಇವರ ವಿಮೋಚನೆಯ ದಾರಿಗೆ ಅನುಗುಣವಾಗಿ ದಲಿದ ಸಮುದಾಯ ಯಾರೊಂದಿಗಾದರೂ ಐಕ್ಯಗೊಳ್ಳಬಹುದು. ಆದರೆ ಹೀಗೆ ಐಕ್ಯಗೊಳ್ಳುವ ಕರೆ ಮಾತ್ರ ಅತ್ಯಂತ ಕೆಳದಲಿತನ ವಾಸ್ತವದ ನೆಲೆಯಿಂದಲೇ ಬರಬೇಕು. ಹಾಗೆ ಬಾರದಿದ್ದರೆ ಅದು ದಲಿತ ವರ್ಗಕ್ಕೆ ಶಾಪವಾಗುತ್ತದೆ. ಕೇವಲ ಪುರೋಹಿತಶಾಹಿ ಬ್ರಾಹ್ಮಣಶಾಹಿ, ವೈದಿಕಶಾಹಿ, ಕೋಮುವಾದ ಬಿಜೆಪಿ ಸಂಘ ಪರಿವಾರ ಮಾತ್ರವೇ ದಲಿತರ ಶತ್ರುಗಳು ಎಂಬ ಹೇಳಿಕೆಯ ಬಗ್ಗೆ ಮತ್ತು ಹೀಗೆ ಹೇಳುವವರ ಬಗ್ಗೆ ಸಾಮಾನ್ಯ ದಲಿತರಿಗೆ ಅಸಾಮಾನ್ಯ ಎಚ್ಚರಿಕೆ ಬೇಕು. ಇಂತಹ ವಿಚಾರಗಳು ನಿಜ ದಲಿತರ ನಿಜ ಶತ್ರುಗಳನ್ನು ಮುಚ್ಚಿಡುತ್ತವೆ. ನಿಜ ದಲಿತರ ಹೊಸ ಶತ್ರುಗಳನ್ನು ಸೃಷ್ಟಿಸುತ್ತವೆ. ಆ ಹುಸಿ ಶತ್ರುವಿನ ವಿರುದ್ಧ ಹೋರಾಡುವಂತೆ ಭ್ರಮಾತ್ಮಕ ಒತ್ತಾಯವನ್ನು ತರುತ್ತವೆ. ಈ ಭ್ರರಮಾತ್ಮಕ ಒತ್ತಾಯ ಸಾಮಾಜಿಕ ಸಹಜಕ್ರಿಯೆ ಆಗಿರುವುದಿಲ್ಲ. ಅದು ಒತ್ತು ಹಾಕಿ ಹಣ್ಣು ಮಾಡುವುದು ಅನ್ನುತ್ತಾರಲ್ಲ ಹಾಗಿರುತ್ತದೆ. ಹಾಗಾಗಿ ಒತ್ತು ಹಾಕಿ ಹಣ್ಣು ಮಾಡುವ ಕೆಲಸವನ್ನು ಬಿಟ್ಟು ಸಾಮಾನ್ಯ ದಲಿತರು ಮತ್ತು ಸಣ್ಣ ಅತಿಸಣ್ಣ ರೈತರು ಐಕ್ಯರಾಗಿ ಭಾರಿ ಭೂಮಾಲೀಕರ ವಿರುದ್ಧ ಹಾಗೂ ಸಾಮ್ರಾಜ್ಯಶಾಹಿಯ ಜಾಗತೀಕರಣದ ವಿರುದ್ಧ ಹೋರಾಡಲು ಮುಂದಾಗಬೇಕಿದೆ. ಇಂತಹ ಸೈದ್ಧಾಂತಿಕ ಪ್ರಯತ್ನ ಮಾತ್ರವೇ ವರ್ತಮಾನದಲ್ಲಿ ಎಲ್ಲ ಕೆಳವರ್ಗದ ಆಶೋತ್ತರಗಳಿಗೆ ರಾಜಕೀಯವಾಗಿ ಸ್ಪಂದಿಸಲು ಸಾಧ್ಯವಾಗುತ್ತದೆ.

# ಬಯಲು ಆಲಯದೆಡೆಗೆ

**– ಅಮರೇಶ ನುಗಡೋಣಿ**

ಆತ, ನಿನ್ನೆ ಹಗಲೆಲ್ಲಾ ತೋಟದಲ್ಲಿ ಗಿಡಗಳಿಗೆ ನೀರು ಬಿಡುತ್ತಲೇ ಔಷಧ ಸಿಂಪಡಿಸಿದ್ದರಿಂದ ಕೆಲಸ ಹೆಚ್ಚಾಗಿ ದಣದಿದ್ದ. ಎಂದೂ ಮುಂಬೆಳಗಿನ ಮುಂಚೆ ಎದ್ದು ತೋಟವೆಲ್ಲಾ ಸುತ್ತಾಡಿ, ನಿತ್ಯ ಕರ್ಮಗಳನ್ನು ಮುಗಿಸುತ್ತಿದ್ದ. ಇಂದು ಕಣ್ಣುಬಿಟ್ಟು ಗುಡಿಸಲಿನಿಂದ ಎದ್ದು ಹೊರಬಂದಾಗ ಚುಮು ಚುಮು ಬೆಳಕು ಹರಿಯುತ್ತಿತ್ತು. ಕವಿದ ಮಂಜು ಕರಗತೊಡಗಿತ್ತು. ಸುತ್ತಲ ಸಣ್ಣಪುಟ್ಟ ಬೆಟ್ಟಗಳು ಸೂರ್ಯನ ಹೊಂಗಿರಣಗಳನ್ನು ಹೊದ್ದು ಹೊಳೆಯುತ್ತಿದ್ದವು. ಹಕ್ಕಿ ಪಕ್ಷಿಗಳು ಆಗಲೇ ಬಾನಲ್ಲಿ ಈಸತೊಡಗಿದ್ದವು. ಆತ ನಿಂತ ಪಕ್ಕದ ಜಾಲಿಮರದಲ್ಲಿರುವ ಗುಬ್ಬಿಗಳೆಲ್ಲಾ ಒಂದೇ ಸಮನೆ ಕಬ್ಬ ಬಿಟ್ಟೆದ್ದವು. ಆ ಮರದ ತುಂಬ ಗುಡುಕಟ್ಟಿಕೊಂಡಿದ್ದವು. ಏನಾದರೂ ಅಪಾಯ ಒದಗಿದರೆ ಮಾತ್ರ ಈ ರೀತಿ ಕವಕವ ನಡೆಸುತ್ತಿರುತ್ತವೆಂದು ಆತ ಬಂದು ನೋಡಿದ. ಗುಬ್ಬಿಗಳೆಲ್ಲಾ ಮರದಿಂದೆದ್ದು ಮರದ ಗುಬ್ಬಿಗಳಲ್ಲಿ ಗೂಡು ಕಟ್ಟಿಕೊಂಡಿದ್ದವು ಸುತ್ತಲೇ ಕಿವಿಗಡಚಿಕ್ಕುವಂತೆ ಚೀರುತ್ತಾ ಹಾರಾಡುತ್ತಿದ್ದವು,. ಆತ ಮರದ ಸುತ್ತಲೂ ನೋಡಿದ. ಮರದ ಒಳಗೆ ಕಣ್ಣಾಡಿಸಿದ. ಹಾವೇನಾದರೂ ಬಂದಿದೆಯೋ ಎಂದು ಮನಸ್ಸಿನಲ್ಲಿ ಸುಳಿಯುವ ಹೊತ್ತಿಗೆ ಕಣ್ಣಿಗೆ ಬಿದ್ದೇಬಿಟ್ಟಿತು. ಸಾಧಾರಣ ಹಾವೊಂದು ಗುಬ್ಬಿಯ ಗೂಡಿನ ಹತ್ತಿರ ಮೂತಿಟ್ಟುಕೊಂಡಿತ್ತು. ಇದರ ಹಾಳಾಗ– ಎಂದು ಕಲ್ಲೊಂದನ್ನು ಕೈಗೆತ್ತಿಕೊಂಡು ಎಸೆದೆ. ಹಾವು ಅದರ ಸಪ್ಪಳಕ್ಕೆ ಚುರುಕಾಯಿತು. ಸರಸರ ಬೇರೆ ಕಡೆ ಹರಿಯತೊಡಗಿತು. ಅದರ ಹೊಟ್ಟೆಯ ಮಧ್ಯಭಾಗ ಉಬ್ಬಿಕೊಂಡಿತ್ತು. ಗುಬ್ಬಿ ಮರಿಗಳನ್ನು ನುಂಗಿ ಹಾಕಿದೆ. ರುಚಿ ಹತ್ತಿದೆ ಮತ್ತೆ ಮತ್ತೆ ಬರುತ್ತದೆಂದು, ಒಮ್ಮೆ ಮುಗಿಸಿದರೆ ಸರಿಯಾದೀತೆಂದು ಆತ ಗುಡಿಸಲಿನಿಂದ ಬೊಂಬೊದನ್ನು ತಂದು ತಿವಿದು ಕೆಳಗಿಳಿಯುವಂತೆ ಮಾಡಿದ. ಗುಬ್ಬಿಗಳ ಚೀರಾಟ ಮತ್ತಷ್ಟು ಹೆಚ್ಚಾಯಿತು. ಹಾವು, ಮರಿಗಳನ್ನು ನುಂಗಿದ್ದರಿಂದ ವೇಗವಾಗಿ ಹರಿಯಲು ಬರುತ್ತಿರಲಿಲ್ಲ. ಬೊಂಬಿನಿಂದ ಹೊಡೆಯಲು ಅನುವಾಗಲಿಲ್ಲ. ಕೆಳಗಿಟ್ಟು ಕಲ್ಲೊಂದರಿಂದ ಮರದ ಬೊದ್ದೆಗುಂಟ ಇಳಿಯುವ ಹಾವಿಗೆ ಗುರಿಯಿಟ್ಟು ಹೊಡೆದೆ. ಏಟು ತಗುಲಿತೋ ಎಂದು ಕೆಳಗೆ ಬಿದ್ದಿತು. ಇನ್ನೊಂದು ಕಲ್ಲು ಕೈಗೆತ್ತಿಕೊಂಡು



ಜಜ್ಜಲು ಆತುರದಿಂದ ನೋಡ ನೋಡುತ್ತಲೇ ಅದು ಪೊದೆಯಲ್ಲಿ ಹೊಕ್ಕು ಕಣ್ಮರೆಯಾಯಿತು. ಆ ಕಡೆ ಕಲ್ಲು ಎಸೆದು ನಿಂತ. ಅದು ಸಿಗುವುದುಲ್ಲವೆಂದು ಖಾತ್ರಿಯಾಗಿ ನಿರಾಶೆಯಾಯಿತು. ಗಾಯವಾಗಿದೆ. ಗಾತವಾದರೆ ಸಾಕು ಅದು ಬದುಕುವುದಿಲ್ಲ. ಇರುವೆಗಳು ಮುತ್ತಿ ಬಿಡುತ್ತವೆ ಎಂಬ ನಂಬಿಕೆಯಿಂದ ಸಮಾಧಾನ ಹೊಂದಿದೆ. ಈ ಕ್ರಿಯೆಯಲ್ಲಿ ಉದ್ವೇಗಗೊಂಡು ಬೆವರಿದ್ದ. ಗಳಿಗೆ ಹೊತ್ತು ನಿಂತೇ ಇದ್ದ. ಗುಬ್ಬಿಗಳು ಮತ್ತೆ ಮರದಲಿದ್ದ ತಮ್ಮ ತಮ್ಮ ಗೂಡುಗಳನ್ನು ಸೇರಿದ್ದರೂ ಅವುಳ ದನಿ ಕಮ್ಮಿಯಾಗಿರಲಿಲ್ಲ. ಮರದ ಕೆಳಗೆ ಗುಬ್ಬಚ್ಚಿಯ ಗೂಡೊಂದು ಕತ್ತರಿಸಿ ಬಿದ್ದಿತು. ಆತ ಆದನ್ನು ಕಂಡು ಭಯ ಕುತೂಹಲದಿಂದ ಎತ್ತಿ ನೋಡಿದ. ಒಳಗೆ ಮೂರು ಮರಿಗಳು ಬಾಯಿ ತೆರೆದು ಚೀರುತ್ತಿದ್ದವು. ರಕ್ತದಿಂದ ಒದ್ದೆಯಾದಂತೆ ಅವುಗಳ ಮೈ ಲೋಳೆಲೋಳೆಯಂತಿತ್ತು. ಅವುಗಳ ಸ್ಥಿತಿ ಕಂಡು ಆತನ ಕರುಳು ಚುರ್ ಎಂದವು! ತನ್ನ ಕಲ್ಲೇಟಿಗೋ, ಬಂಬು ತಿವಿದಾಗ ಸಿಕ್ಕ ಆ ಗೂಡು ಕತ್ತರಿಸಿ ಬಿದ್ದಿರಬೇಕೆಂದು ಮಿಡಿಕಿದ.

ಅವಸರದಿಂದಲೇ ಮರ ಏರಿ ಕೊಲ್ಲೆಯ ತುದಿಯೊಂದಕ್ಕೆ ಅದನ್ನು ಕಟ್ಟಿ ತೂಗುಹಾಕಿ ಕೆಳಗಿಳಿದು ಬಂದ. ಬಂದಮೇಲೆ ಹೊಳೆಯಿತು. ಯಾರೋ ಮುಟ್ಟಿದ ಗೂಡ ಬಳಿ ಮತ್ತೆ ತಾಯಿ ತಂದೆ ಹಕ್ಕಿಗಳು ಸುಳಿಯುವುದಿಲ್ಲವೆಂದು ಅದರಲ್ಲೂ ಅದು ಕತ್ತರಿಸಿ ಬಿದ್ದದ್ದನ್ನು ಜಾಗವಲ್ಲದ ಜಾಗದಲ್ಲಿ ಕಟ್ಟಿ ಬಂದಿದ್ದನು. ಅವು ಗುರುತುಹಿಡಿಯುವುದಾದರೂ ಹೇಗೇ? ಆತನ ಜೀವ ಮೆತ್ತಗಾಯಿತು. ಬೆಳಿಗ್ಗೆ ಬೆಳಿಗ್ಗೆ ಈ ಹಾವು ಯಾಕಾದರೂ ಬಂದು ಕಾಟ ಕೊಟ್ಟಿತೋ ಎಂದು ಅದು ಹೊಕ್ಕ  ಪೊದೆ ಕಡೆ ನೋಡಿದ. ಆ ದಿಕ್ಕಿನಿಂದ ತುಡುಗ ದನಗಳ ಹಿಂಡು ಬರುತ್ತಿರುವುದು ಕಂಡು ‘ಹೋಯ್ಹೋತ್” ಎಂದು ಕೂಗು ಹಾಕಿ ಎತ್ತಿಕೊಂಡು ಓಡಿದ. ಆಗಲೇ ಮೂರು ದನ ತಂತಿ ಬೇಲಿಯಿಂದ ತೂರಿ ಒಳಗೆ ಬಂದಿದ್ದವು. ಉಳಿದವು ಅವುಗಳ ಬೆನ್ನು ಹತ್ತಿದ್ದವು. ಬೆಳಗ್ಗೇನೆ ಒಂದು ಹಿಂಡೇ ಬಂದಿದೆಯಲ್ಲಾ ಎಂದು ಎಲ್ಲವುಗಳನ್ನು ಸಾಲುಗಟ್ಟಿ ಓಡಿಸಿ ಬೆಟ್ಟದ ಆ ಕಡೆಗೆ ಇಳಿಸಿ ಬಂದ. ಆಗಲೇ ಸೂರ್ಯ ಮಾರುದ್ದ ಏರಿದ್ದ. ಎತ್ತಿಂದಲೋ ವಲಸೆ ಬರುವ ದೊಡ್ಡ ದೊಡ್ಡ ಪಕ್ಷಿಗಳು ಈ ವರ್ಷ ಹೆಚ್ಚು ಬಂದಿದ್ದು ಅನುಭವದಿಂದ ಕಂಡಿದ್ದ. ಅವು ಬೆಳಕು ಹರಿಯುವ ಮುಂಚೆ ಹಾರಾಡುತ್ತಾ ಬಂದು ಈ ಬೆಟ್ಟಗಳ ಮೇಲೆ ಸುತ್ತು ಹಾಕಿ ನಾಲ್ಕಾರು ಮೈಲು ದೂರದ ಕರೆ ಕಡೆಗೆ ಹೋಗುತ್ತಿದ್ದವು. ಮುಸ್ಸಂಜೆಯ

ನಂತರ ಇದೇ ಮಾರ್ಗವಾಗಿ ಎತ್ತಲೋ ಹೋಗುತ್ತಿದ್ದವು. ಆತನ ಇವತ್ತು ಅವುಗಳನ್ನು ಕಾಣಲಿಲ್ಲ. ಅವು ಆಗಲೇ ಕೆರೆಕಡೆ ಹೋಗಿದ್ದವು. ಬೆಳಗು–ಸಂಜೆ ಅವುಗಳ ಸಾಲು ಹಾರಾಟದ ಪಯಣ ನೋಡಿ ಸಂತೋಷದಿಂದ ತಣಿಯುತ್ತಿದ್ದ!.

ಚಳಿಗಾಲದ ನಂತರ ಅವುಗಳೆಲ್ಲಾ ಮಾಯವಾಗಿ ಬಿಡುತ್ತಿದ್ದವು. ಆರೇಳು ಚಳಿಗಾಲ ಆತ ಅವುಗಳನ್ನು ಕಂಡಿದ್ದ. ತೋಟದ ಒಳಗೆ ಬಂದ. ಒಂದೆರಡು ಗಿಡಗಳು ದನಗಳ ತುಳಿತಕ್ಕೆ ಸಿಕ್ಕು ಮುರಿದಿದ್ದವು. ಆರೇಳು ವರ್ಷದ ಹಿಂದೆ ಹಾಕಿದ್ದ ತಂತಿ ಬೇಲಿ ಅಲ್ಲಲ್ಲಿ ಸಡಿಲವಾಗಿತ್ತು. ಒಂದೆರಡು ಕಂಬಗಳು ಕುಸಿದು ಬಿದ್ದಿದ್ದವು. ಹೀಗಾಗಿ ಮತ್ತೊಮ್ಮೆ ದುರಸ್ತಿಯಾಗಬೇಕಿತ್ತು! ಆತ ತನ್ನ ಒಡೆಯ ಶ್ಯಾಮಪ್ಪನವರಿಗೆ ಈಚೀಚೆ ದಿನ ಹೇಳುತ್ತಾ ಬಂದಿದ್ದರೂ ಖರ್ಚು ಬಹಳ ಬಂದಿದೆಯೆಂದು, ಆಗ ಮಾಡಿಸೋಣ, ಈಗ ಮಾಡಿಸೋಣ, ಆಗ ಮಾಡಿಸೋಣವೆಂದು ದಿನ ನೂಕುತ್ತಿದ್ದರು. ಈ ವರ್ಷ ತಂತಿ ಬೇಲಿ ದುರಸ್ತಿ ಮಾಡಿಸಿ, ಬಂದೋಬಸ್ತು ಮಾಡಿಸದಿದ್ದರೆ ತೋಟ, ತುಡುಗು ದನಗಳ ತುಳಿತಕ್ಕೆ ಸಿಕ್ಕು ಹಾಳಾಗುವುದು ಖಾತ್ರಿಯೆಂದು ಆತ ಅಂದುಕೊಂಡ. ಹೋದ ವರ್ಷವೇ ಮಾವಿನ ಗಿಡಗಳು ಹೂವು ಬಿಟ್ಟಿದ್ದರೂ ಕಾಯಿಯಾಗುವ ಮೊದಲೇ ಉದುರಿದ್ದವು. ಮೊದಲ ವರ್ಷದ ಫಲ ಹೀಗೆ ಖಾಲಿಯಾಗಿರುವುದು ಸಹಜ! ನಿಂಬೆ ಗಿಡಗಳು ಮುಂದಿನ ವರ್ಷದಿಂದ ಫಲ ಶುರುವಾಗುತ್ತವೆ. ತೆಂಗಿನ ಗಿಡಗಳಲ್ಲಿ ಹೋದ ವರ್ಷವೇ ಹೂವಿನ ಗೊನೆ ಇಳಿದರೂ ಕಾಯಿ ಬಲಿಯಲಿಲ್ಲ ಎಂದು ▯ ಯೋಚಿಸುತ್ತಾ ತೋಟ ಸುತ್ತುತ್ತಿದ್ದ. ಎತ್ತಿಂದಲೋ ಮನುಷ್ಯರ ದನಿಗಳು ಕೇಳಿಬಂದವು. ನಿಂತು ನೋಡುತ್ತಾ ಆಲಿಸಿದ. ಹತ್ತಿರದ ಹನುಮನ ಬೆಟ್ಟದ ಮೇಲೆ ಹನುಮನ ಗುಡಿಯ ಮುಂದೆ ಎರಡು ಚಿಕ್ಕ ಮಕ್ಕಳು ಕುಣಿದಾಡುತ್ತಿದ್ದವು. ಆತನಿಗೆ ಕುತೂಹಲ ಮೂಡಿತು. ಯಾರಿವರು? ಯಾಕೆ ಬಂದರೋ! ಆ ಕಡೆ ಹೆಜ್ಜೆ ಹಾಕಿ ತೋಟದ ಬಾವಿ ಸುತ್ತ, ತೋಟದಿಂದ ಹೊರಬಿದ್ದು ಹನುಮನ ಬೆಟ್ಟ ಹತ್ತಿ ಮೇಲೆ ಬಂದ. ಗುಡಿಯ ಮುಂದೆ ಆಡುವ ಆ ಮಕ್ಕಳು ಈತನನ್ನು ಕಂಡು ಒಳಗೆ ಓಡಿದವು. ಗುಡಿಯಿಂದ ಹೊರಗೊಬ್ಬ ಬಂದು ಈತನನ್ನು ಕಂಡು ಕೈ ಮುಗಿದು "ನಾವು ಈ ಹನುಮಪ್ಪ ದೇವ್ರಿಗೆ ಸೇವಾ ಸಲ್ಲಿಸಾಕ ಬಂದೀವಿ" ಎಂದ. ಆತನ ಹೆಂಡತಿಯಿರಬೇಕು, ಅಕೆಯೂ ಬಂದು ನಿಂತಳು. ಅವರ ಮಕ್ಕಳು ಅವರ ಪಕ್ಕಕ್ಕಿದ್ದವು. ಅದೊಂದು ಸಂಸಾರ! ಈತ "ಹನುಮಪ್ಪನ್ನ



ಕೇಳವುರಿಲ್ಲಂದಿದ್ದೆ. ನೀವು ಸೇವಾ ಸಲ್ಲಿಸಕ್ ಬಂದೀರಿ ನೋಡ್ರಿ" ಎಂದು ಆ ಸಂಸಾರವನ್ನು ತುಂಬುಗಣ್ಣಿನಿಂದ ನೋಡಿದ. ಯಾಕೋ ಸಂತೋಷವಾಯಿತು! ತಾನು ಇಲ್ಲೇ ತೋಟದಲ್ಲಿರುವುದಾಗಿ ಹೇಳಿ ಕುಳಿತ. ಕುಶಲ ಮಾತನಾಡಿದರು. ಆ ಸಂಸಾರ ದೂರದ ಹಳ್ಳಿಯಿಂದ ಬಂದಿತ್ತು. ಬದುಕಿನಲ್ಲಿ ಬಂದ ಯಾವುದೋ ಒಂದು ಕಷ್ಟ ಪರಿಹಾರಕ್ಕೆ ಯಾರೋ 'ಹೇಳಿಕೆ' ಹೇಳುವವರು ಈ ಬೆಟ್ಟದಲ್ಲಿರುವ ಹನುಮಪ್ಪನಿಗೆ ಮೂರು ದಿನ ಸೇವೆ ಮಾಡಿದರೆ ಬಂದ ಕಷ್ಟ ಪರಿಹಾರವಾಗುತ್ತದೆಂದು ಹೇಳಿದ್ದಕ್ಕಾಗಿ ಬಂದಿದ್ದರು. ಆ ಸಂಸಾರ ಮೂರು ದಿನ ಹನುಮನ ಗುಡಿಯಲ್ಲೇ ಇದ್ದು, ಅಲ್ಲೇ ಅಡಿಗೆ ಮಾಡಿಕೊಂಡು ಉಣ್ಣುವ ವ್ಯವಸ್ಥೆ ಮಾಡಿಕೊಂಡಿದ್ದರು. ಎಲ್ಲವನ್ನೂ ಕೇಳಿದ, ಈತನಿಗೆ ಹೆಚ್ಚು ಕಮ್ಮಿ ಮನುಷ್ಯರ ಸಂಪರ್ಕ ಕಮ್ಮಿಯಾಗಿತ್ತು. ಗಿಡಗಂಟಿ, ಕಾಡುಮೇಡು, ಹಕ್ಕಿ–ಪಕ್ಷಿ, ಪಶುಗಳ ಜೊತೆ ಒಡನಾಟವೇ ಒಡನಾಟ.

"ಶಿವಯ್ಯ" ಎಂದು ಕೂಗು ಬಂದಿತು. ಎದ್ದು ತೋಟಕ್ಕೆ ಬಂದಾಗ ಶ್ಯಾಮಪ್ಪನವರು ಬುತ್ತಿ ತಂದಿದ್ದರು. ಬೆಳಗ್ಗೆ ಬಂದಿದ್ದ ತುಡುಗು ದನಗಳ ಹಾವಳಿಯಿಂದ ಮುರಿದ ಗಿಡಗಳನ್ನು ಮುಟ್ಟಿ ನೋಡಿದ ಶ್ಯಾಮಪ್ಪನವರ ಮುಖ ಸಣ್ಣದಾಯಿತು. ಆದರೂ ತೋರಗೊಡದೆ, "ಮಾಗಿ ಕಳೆದ್ರಾಗ ಎಲ್ಲ ಗಿಡಗಳು ಹೂವು ಬಿಡ್ತಾವಲ್ಲ ಶಿವಯ್ಯಾ" ಎಂದು ತೋಟದ ಸುತ್ತು ಹಾಕತೊಡಗಿದರು.

"ಎಳ್ಳಮಾಸಿ ದಾಟದ್ರಾಗ ಬಿಸುಲು ಜಾಸ್ತಿಯಾಗ್ತಾದ. ಮಾವಿನ ಗಿಡಗಳೂ ಹೂವು ಬಿಡ್ತಾವ. ಹೋದ ವರ್ಷದಂಗ ಆಗಂಗಿಲ್ಲ. ಈ ವರ್ಷ ಫಲ ನಿಲ್ತಾದ" ಶಿವಯ್ಯ ಹೇಳಿದ.

"ಹೌದೌದು, ಮೊದ ಮೊದಲ ವರ್ಷದ ಫಲ ಹೇಳಿಕಳ್ಳಂಗ ಬರಾದಿಲ್ಲ. ಈ ವರ್ಷದಿಂದ ತೆಂಗು, ನಿಂಬೆ, ಮಾವು ಎಲ್ಲ ಫಲ ನಿಲ್ತಾವ" ಎಂದು ಹೇಳುತ್ತಾ ಶ್ಯಾಮಪ್ಪನವರು ತೋಟದ ತುಂಬ ಸುತ್ತಿ ಗುಡಿಸಲಿಗೆ ಬಂದು ಕುಳಿತರು. "ಉಗಾದಿಗೆ ಊರು ಜನಕ್ಕೆ ಊಟ ಹಾಕಿಸಿ, ಫಲ ದಾನ ಮಾಡಿ, ಮುಂದಿನ ವರ್ಷದಿಂದ ಸಂತಿಗೆ ವ್ಯಾಪಾರಕ್ಕ ನಿಂದ್ರಮು" ಶ್ಯಾಮಪ್ಪ ಹೇಳಿದರು.

ಹಂಗೆ ಮಾಡಾಮು ಏನಂತೆ? ಶಿವಯ್ಯಾ ಹೇಳಿದ ಹಾಗೆ ಹನುಮನ ಬೆಟ್ಟಕ್ಕೆ ಬಂದ ಸಂಸಾರದ ವಿಷಯ ತಿಳಿಸಿದ.

"ಶಿವಯ್ಯಾ, ನೀನು ಸಿಗಲಿಲ್ಲಂದ್ರೆ ಈ ತೋಟ ಹಿಂಗ್ ಇರ್ತಿತ್ತಾ?" ಯಪ್ಪಾ ನನ ಕೈಯಾಗೇನ ಕರಕಂದು ಬಂದ್ರಿ ಕೂಳು ಹಾಕಿ ಇಲ್ಲೆ ಇರುವಂಗೆ ಮಾಡಿದ್ರಿ. ಕಾಯ್ಕೊಂಡು ಬಿದ್ದೀನಿ" ಅವರಿಬ್ಬರಲ್ಲಿ ತುಂಬ ಸ್ನೇಹವಿತ್ತು. ಆಳು ಒಡೆಯ ಎಂಬ ತಾರತಮ್ಯವಿರಲಿಲ್ಲ.

ಈಗ್ಗೇ ಆರೇಳು ವರ್ಷಗಳ ಹಿಂದಿನ ಮಾತು.

ಮಧ್ಯ ವಯಸ್ಸು ಸಮೀಪಿಸಿದ ಶಿವಯ್ಯ ಪ್ರಸಿದ್ಧ ದೇವಸ್ಥಾನವೊಂದರಲ್ಲಿ ಪೂಜಾರಿಗಳ ಮಾತು ಕೇಳಿಕೊಂಡು, ಅವರು ಹಾಕಿದ ಊಟ ಉಂಡುಕೊಂಡು ಕಾಲ ನೂಕುತ್ತಿದ್ದ. ಕೆಲ ಸಮಯ ಯಾತ್ರೆಗೆಂದು ಬಂದ ಜನಕ್ಕೆ ಹಲವಾರು ರೀತಿಯಲ್ಲಿ ಸಹಾಯ ಮಾಡುತ್ತಿದ್ದ. ಯಾರಿಂದಲೂ ಕಾಡಿ ಬೇಡಿ ಹಣ ಸುಲಿಯುತ್ತಿರಲಿಲ್ಲ. ಎಷ್ಟೋ ಸಲ ಅವರ ಜತೆ ಊಟ ಮಾಡಿದರೆ ಸಾಕು ಮತ್ತೇನನ್ನೂ ಕೇಳುತ್ತಿರಲಿಲ್ಲ. ಶ್ಯಾಮಪ್ಪನವರು ಒಮ್ಮೆ ಆ ದೇವಸ್ಥಾನಕ್ಕೆ ಯಾತ್ರೆಗೆಂದು ಬಂದಾಗ ಸಹಜವಾಗಿ ಶಿವಯ್ಯ ಅವರಿಗೆ ರಾತ್ರಿ ಇಳಿದುಕೊಳ್ಳಲು ಸ್ಥಳ ತೋರಿಸಿದುದು ಅಲ್ಲದೆ ಬೆಳಿಗ್ಗೆ ಆ ಪ್ರದೇಶದ ಕೆಲವು ನೋಡುವ ಸ್ಥಳಗಳಿಗೂ ಕರೆದುಕೊಂಡು ತಿರುಗಿದ. ಅವರ ಜತೆಯಲ್ಲೇ ಊಟ ಮಾಡಿದ. ಆತನ ಸರಳ ಸ್ವಭಾವಕ್ಕೆ ಶ್ಯಾಮಪ್ಪನವರು ಮೆಚ್ಚಿಕೊಂಡು ಹತ್ತು ರೂಪಾಯಿ ಕೊಡಲು ಹೋದರು. ಶಿವಯ್ಯ ಬೇಡವೆಂದ. "ನನ್ಗೆ ಹೊತ್ತಿಗೆ ಸರಿಯಾಗಿ ಉಣ್ಣಲು ಸಿಕ್ರೆ ಸಾಕು. ಈ ಹಣದಿಂದ ನನ್ಗೇನಾಗಬೇಕು? ಈ ಹೊತ್ತಿಗೆ ಉಣ್ಣಲು ನಿಮ್ಮಿಂದ ಸಿಕ್ಕಿದೆ ಸಾಕು" ಇಂಥ ಕಾಲದಲ್ಲಿ ಶಿವಯ್ಯನನ್ನು ನೋಡುವುದೆಂದರೆ ದೇವರನ್ನು ನೋಡಿದಂತೆಯೇ– ಎಂದುಕೊಂಡರು! ಆತನ ಪ್ರಾಮಾಣಿಕ ಜೀವನ ರೀತಿ ಕಂಡು ಸಂತೋಷಗೊಂಡು ಊರಿಗೆ ಹೋಗುವ ಮುನ್ನ, "ನೀನು ನಮ್ಮೂರಿಗೆ ಬಾ. ನಮ್ಮದೇ ತೋಟ ಐತೆ. ಊರಿಂದ ದೂರಾದ. ಅಲ್ಲಿ ನೀನಿರುವಂತಿ ಇರಲು ಎಲ್ಲ ಅನುಕೂಲ ಮಾಡಿಕೊಡ್ತೀನಿ. ನನಗೆ ಆಸರಾದಂಗಾತದ" ಶ್ಯಾಮಪ್ಪನವರು ಕೇಳಿಕೊಂಡರು, ಏನು ಬಂಧವೋ ಋಣವೋ ಶಿವಯ್ಯ ಆ ಮಾತಿಗೆ ಸಮ್ಮತಿ ಇತ್ತು ಅವರ ಹಿಂದೆ ನಡೆದೇ ಬಿಟ್ಟ.

ಶ್ಯಾಮಪ್ಪನವರ ಸಂಸಾರ ಚಿಕ್ಕದು. ಗಂಡ–ಹೆಂಡತಿ, ಹದಿನೈದು ವರ್ಷದ ಒಬ್ಬ ಮಗ. ಅವರಿಗೆ ಅವರ ತಾತನ ತಲೆಯಿಂದ ಉಳಿದು ಬಂದದ್ದು ಮೂರುವರೆ



ಎಕರೆ ಹೊಲ. ಅದು ಹನುಮನ ಬೆಟ್ಟದ ಕೆಳಗಿತ್ತು. ಊರು ಅಲ್ಲೇ ಇತ್ತು, ಶಾಮಪ್ಪನವರು ಸರಕಾರಿ ನೌಕರಿ ಸಿಕ್ಕು ಊರು ಬಿಟ್ಟಿದ್ದರು. ಅವರ ಊರಿಗೆ ಮಾರಿಬೇನೆ (ಪ್ಲೇಗ್) ಬಂದು ಜನವೆಲ್ಲಾ ಊರುಬಿಟ್ಟು ಬೇರೆ ಕಡೆ ನೆಲಸಿದರು. ನೆಲೆಸಿದವರು ಮತ್ತೆ ಮೊದಲಿನ ಸ್ಥಳಕ್ಕೆ ಹೋಗದೆ ಉಳಿದುಕೊಂಡರು. ನಿವೃತ್ತರಾದ ಶ್ಯಾಮಪ್ಪನವರು ತಮ್ಮ ಉಳಿದ ಜೀವನ ಹಳ್ಳಿಯಲ್ಲೇ ಕಳೆಯಲು ಊರಿಗೆ ಬಂದರು. ತಮಗಿರುವ ಹೊಲವನ್ನೇ ಬೇಸಾಯ ಮಾಡಿಕೊಂಡಿರಬೇಕೆಂದು ಆಶೆಯಾಯಿತು. ಹೋಗಿ ನೋಡಿದರು, ಅಲ್ಲಿ ಹೊಲವಿದೆ ಎಂಬುದನ್ನಾಗಲೂ ಊರಿತ್ತು ಎನ್ನುವದನ್ನಾಗಲೀ ಕೋನ ಹಿಡಿಯುವುದೇ ಕಷ್ಟವಾಗಿತ್ತು. ಹನುಮನ ಬೆಟ್ಟದ ಸುತ್ತ ಓಡಾಡಿದರು. ಬಹಳ ವರ್ಷದ ಗಾಳಿ–ಮಳೆಗೆ, ಸುತ್ತಲ ಗುಡ್ಡ ಬೆಟ್ಟಗಳ ಜತೆಗೆ ಆ ಹೊಲವೂ ಗಿಡಗಂಟೆ ಬೆಳೆದು ಕಾಡುಮೇಡಾಗಿ ಹೋಗಿತ್ತು. ಊರ ಕೆಲ ಜನರ ಹೊಲಗಳೂ ಇದೇ ರೀತಿಯಾಗಿ ಹೋಗಿದ್ದವು. ಶ್ಯಾಮಪ್ಪನವರು ತಮ್ಮ ಹೊಲವನ್ನು ಸರಕಾರದಿಂದ ಪುನಃ ಅಳತೆ ಮಾಡಿಸಿಕೊಂಡು ಹೊಲದಲ್ಲೇ ಇದ್ದ ಹಾಳು ಬಾವಿಗೆ ದುರಸ್ತಿ ಮಾಡಿಸಿ ನೀರು ಹೊಲಕ್ಕೆ ಹಾಯಿಸುವಂತೆ ಮಾಡಿಸಿಕೊಂಡರು. ಹತ್ತಾರು ಆಳುಗಳಿಂದ ತಿಂಗಳುಗಟ್ಟಲೆ ಹೊಲವನ್ನು ಹದಮಾಡಿಸಿ, ತೋಟ ಮಾಡಿದರು. ಹೊಲದ ಸುತ್ತ ತಂತಿ ಬೇಲಿ ಹಾಕಿದರು. ಲಿಂಬೆ, ಮಾವಿನ ಗಿಡ, ತೆಂಗಿನ ಸಸಿಯನ್ನು ನೆಡುವುದರ ಮೂಲಕ ಅದಕ್ಕೊಂದು ರೂಪಕೊಟ್ಟರು. ಆದರೆ ಶ್ಯಾಮಪ್ಪನವರಿಗೆ ಆದ ತೊಂದರೆಯೆಂದರೆ ತೋಟವನ್ನು ಕಾಯ್ದು ಕೊಂಡಿರಲು ಒಂದು ಆಳೂ ಸಿಗಲಿಲ್ಲ. ಸಿಕ್ಕರೂ ತಿಂಗಳೊಪ್ಪತ್ತಿನಲ್ಲೇ ಬಿಡುತ್ತಿದ್ದರು. ಕಾಡಿನಲ್ಲಿ ರಾತ್ರಿ ಯಾರಿರುತ್ತಾರೆಂದು ಎಲ್ಲರೂ ಬಂದುಬಿಡುತ್ತಿದ್ದರು. ಮೇಲಾಗಿ ಈಗಿರುವ ಊರು ದೂರವಿತ್ತು. ಅದೇ ಚಿಂತೆಯಲ್ಲಿ ಇರುವಾಗ ಶ್ಯಾಮಪ್ಪನವರಿಗೆ ಶಿವಯ್ಯ ಸಿಕ್ಕಿದ. ಶಿವಯ್ಯ ಬಂದು ನೋಡಿದ ಪ್ರಶಾಂತ ಸ್ಥಳಕ್ಕೆ ಮೆಚ್ಚಿಕೊಂಡ. ದೇವಸ್ಥಾನದ ಕೊಳಕು ಜೀವನದಿಂದ ದೂರಾದ ಸಂತೋಷವೂ ಇತ್ತು. ಇರಲು ಒಪ್ಪಿ ತೋಟದಲ್ಲೇ ಗುಡಿಸಲು ಹಾಕಿಕೊಂಡ. ಶ್ಯಾಮಪ್ಪನವರಾಗಲಿ, ಮಗನಾಗಲಿ ದಿನಾಲು ಊಟ ತಂದು ಕೊಡುತ್ತಿದ್ದರು. ಶಿವಯ್ಯ ಬಂದಾಗ ತೋಟದಲ್ಲಿ ನಿಂಬೆ, ಮಾವು, ತೆಂಗುಗಳ ಸಸಿಗಳೆಲ್ಲಾ ಆರೇಳು ತಿಂಗಳುಗಳ ಬೆಳೆ. ಅವುಗಳ ರಕ್ಷಣೆ ಮಾಡುತ್ತಾ, ರೋಗ ಬಂದರೆ ಔಷಧಿ ಸಿಂಪಡಿಸುತ್ತಾ, ಗಾಳಿ, ಬಿಸಿಲು ಎನ್ನದೆ ಆತ ತೋಟದಲ್ಲೇ ಕಾಲ

ಕಳೆಯತೊಡಗಿದ. ಆರೇಳು ವರ್ಷಗಳಲ್ಲಿ ಶಿವಯ್ಯ ಪ್ರಕೃತಿಯಲ್ಲಿಯೇ ಒಂದಾಗಿ ಹೋದ! ಹಕ್ಕಿ–ಪಕ್ಷಿಗಳಿಗೂ ಆತ ಪರಿಚಿತನಾದ! ಕಾಡು ಪ್ರಾಣಿಗಳು ಅಷ್ಟಾಗಿ ಇರಲಿಲ್ಲ! ಊರ ತುಡುಗು ದನಗಳ ಕಾಟ ಬಿಟ್ಟರೆ ತೋಟಕ್ಕೆ ಮತ್ತಾವ ತೊಂದರೆ ಇರಲಿಲ್ಲ. ಹೀಗಾಗಿ ಆತ ಸುಖಿಯಾಗಿದ್ದ! ಶ್ಯಾಮಪ್ಪನವರು ಇದೆಲ್ಲವನು ನೆನಸಿಕೊಂಡರು.

ಅವರು ಮನೆಗೆ ಹೋದರು. ಹೋಗುವಾಗ ಶಿವಯ್ಯ ಈ ವರ್ಷ ತಂತಿ ಬೇಲಿ ದುರಸ್ತಿ ಮಾಡಿಲೇಬೇಕು ಎಂದು ಎಚ್ಚರಿಸಿದ. ಸಣ್ಣಪುಟ್ಟ ಕೆಲಸವನ್ನು ಮುಗಿಸಿದ ಮೇಲೆ ಗುಡಿಯಲ್ಲಿರುವ ಸಂಸಾರ ನೆನಪಾಯಿತು. ಯಾಕೋ ಅಲ್ಲಿಗೆ ಹೋಗಬೇಕೆನಿಸಿ ಪುನಃ ಬೆಟ್ಟ ಹತ್ತಿ ಹನುಮನ ಗುಡಿಗೆ ಬಂದ. ಅವರ ಮಕ್ಕಳನ್ನು ಎತ್ತಿ ಆಡಿಸಿದ. ಅವರ ಜತೆ ತನ್ನ ಬುತ್ತಿ ಸೇರಿಸಿ ಅವರು ಮಾಡಿದ ಅಡಿಗೆ ರುಚಿ ಹೊಗಳುತ್ತಾ ಉಂಡ. ಸಂಜೆಯಾಗುತ್ತಿದ್ದಂತೆ ತನ್ನ ಗುಡಿಸಲಿಗೆ ಹೊರಟ. ಆ ಸಂಸಾರ ಆತನಲ್ಲಿ ಒಂದು ರೀತಿಯ ಸೆಳೆತ ಮೂಡಿಸಿತು!

## ಎರಡು

ಸೂರ್ಯ ಮೂಡುವ ಮುನ್ನ ಶಿವಯ್ಯ ಎದ್ದು ತೋಟ ಸುತ್ತತೊಡಗಿದ್ದ. ಮಂಜು ಕವಿದು ಜಗವೆಲ್ಲಾ ತೋದಿತ್ತು. ಚಳಿಗೆ ಹಕ್ಕಿ–ಪಕ್ಷಿಗಳಿನ್ನು ಗೂಡಿನಿಂದೆದ್ದು ಹೊರಬರಲು ಅಂಜುತ್ತಿದ್ದವು. ತುಡುಗು ದನಗಳು ಬಂದ ಲಕ್ಷಣ ಕಾಣಲಿಲ್ಲ. ನಿತ್ಯಕರ್ಮ ಮುಗಿಸಲು ತಯಾರಾಗಿ ಗುಡಿಸಲ ಕಡೆ ಬಂದ. ಬಾವಿಯಲ್ಲಿ ಏನೋ ಸಪ್ಪಳವಾಯಿತು. ಬಂದು ನೋಡಿ ಬೆಕ್ಕಸ ಬೆರಗಾಗಿ ನಿಂತುಬಿಟ್ಟ. ಆಕೆ ಬಾವಿಯಲ್ಲಿ ಕುಳಿತು ಮೈಯಿಗೆ ನೀರು ಹಾಕಿಕೊಳ್ಳುತ್ತಿದ್ದಾಳೆ. ಮೈಮೇಲೆ ಚೂರು ಬಟ್ಟೆಯಿಲ್ಲ,. ಆತ ನೋಡು ಭಯದಿಂದ ಸರಿದು ಮರೆಯಾಗಿ ನಿಂತ. ನೋಡು ನೋಡುತ್ತಿದ್ದಂತೆ ಆಕೆ ಮೇಲೇರಿ ಬಂದು ಹಾಗೆಯೇ ಬೆತ್ತಲೆ ಬೆಟ್ಟೆ ಕಡೆ ನಡೆದಳು. ಬೆಟ್ಟ ಹತ್ತಿ ಹನುಮನ ಗುಡಿ ಸುತ್ತಿದ್ದಳು. ಚುಮು ಚುಮು ಬೆಳಕು ಹರಿಯುತ್ತಿತ್ತು. ಕಣ್ಣಾರೆ ಕಂಡ ಆತನ ಮನಸ್ಸು ಕದಡಿತು! ತನ್ನ ಹೆಂಡತಿ ನೆನಪಾದಳು! ಏನೇನೋ ಬಯಕೆಗಳು ಎದ್ದು ಕುಳಿತವು! ಎಷ್ಟು ಪ್ರಯತ್ನಿಸಿದರೂ ಮನಸ್ಸಿನ ಉದ್ವೇಗ ಕಮ್ಮಿಯಾಗಲಿಲ್ಲ. ತನ್ನ ಸಂಸಾದರ ಯಾವುದೋ ತೊಂದರೆಗೆ ಗಂಡ ಹೆಂಡತಿಯಲ್ಲಿ ಒಂದು ದಿನ ಜಗಳವಾಯಿತು. ಅದೊಂದು ವಿಷಗಳಿಗೆ. ವಿಧಿಯ ಕೈವಾಡವೂ



ಇರಬಹುದು. ಹತ್ತು ವರ್ಷದ ಒಬ್ಬ ಮಗನನ್ನು, ಹೆಂಡತಿಯನ್ನು ಬಿಟ್ಟು ಬಂದ ಶಿವಯ್ಯ ಹದಿನೈದು ವರ್ಷಗಳಾದರೂ ಆ ಕಡೆ ಹೋಗಿರಲಿಲ್ಲ. ಅವರ ನೆನಪನ್ನು ಮಾಡಿಕೊಂಡಿದ್ದ. ಈಗ ಈ ಸಂಸಾರ ನೋಡಿ ತನ್ನ ಹೆಂಡತಿ–ಮಗನ ನೆನಪು ತೀವ್ರವಾಗಿ ಮರುಕಳಿಸಿತು. ಈ ದಿನವಿಡೀ ಆ ಸಂಸಾರದ ಜತೆ ಕುಳಿತು ಮಾತನಾಡಿದ. ಆಕೆಯನ್ನು ನೋಡಿ ನೋಡಿ ಅವ್ಯಕ್ತವಾದ ನೋವಿನಿಂದ ನರಳಿ ಸಕಾರ ನೋವಿಗಾಗಿ ಬಳಲತೊಡಗಿದ. ಆಗಿನಿಂದ ಆತ ಹುಚ್ಚನಾಗತೊಡಗಿದ. ತೋಟದ ಕಡೆ ಲಕ್ಷ್ಯ ಹರಿಯದೆ ನಿಗಾ ಕಮ್ಮಿಯಾಯಿತು. ಉಳಿದ ಎರಡು ದಿನ ಆಕೆ ಬೆತ್ತಲೆ ಬಾವಿಯಲ್ಲಿ ಮುಳುಗುವುದನ್ನು, ಹನುಮನ ಗುಡಿ ಸುತ್ತುವುದನ್ನು ಮರೆಯಲ್ಲಿ ನಿಂತು ನೋಡಿದ. ಮತ್ತಷ್ಟು ವ್ಯಥೆ ಶುರುವಾಯಿತು. ಹದಿನೈದು ಮರ್ಷಗಳ ಕಾಲ ಮರೆತ ತನ್ನ ಸಂಸಾರಿಕ ಬದುಕು ಕಣ್ಣು ಮುಂದೆ ಮೂಡಿತು. ಈಗಲೇ ಹೆಂಡತಿಯನ್ನು ಹೋಗಿ ಅಪ್ಪಿಕೊಳ್ಳಲೇ ಎಂದು ತವಕಿಸಿದ. ಪ್ರಕೃತಿಯಲ್ಲಿ ಒಂದಾಗಿ ಬೆಳೆಸಿಕೊಂಡ ಒಂದು ರೀತಿಯ ಶಕ್ತಿ ಕಳೆದುಕೊಂಡು ಸೋಲ ತೊಡಗಿದ! ಈ ಮೂರು ದಿನಗಳಲ್ಲಿ ನಾಲ್ಕಾರು ಸಲ ತುಡುಗು ದನಗಳು, ಬಂದು ತೋಟ ಹೊಕ್ಕು ಹಾಳು ಮಾಡುತ್ತಲೇ ಇದ್ದುವು. ಶಿವಯ್ಯ ಬಂದು ಬಂದು ಓಡಿಸುತ್ತಲೇ ಇದ್ದ. ಶ್ಯಾಮಪ್ಪನವರು ಬಂದು ನೋಡಿ ಕೋಪಿಸಿಕೊಂಡರು. ದಿನೇ ತೋಟ ಹಾಳಾಗುವುದು ಕಂಡು ಮರುಗಿದರು. ಶಿವಯ್ಯನಿಗೆ ಎಚ್ಚರಿಸಿದರು. ಮೂರನೆ ದಿನ ಆ ಸಂಸಾರ ಹನುಮಪ್ಪನಿಗೆ ಸೇವೆ ಸಲ್ಲಿಸಿ ಹೊರಟುಹೋದರು. ಆ ದಿನವಂತೂ ಆತ ಗುಡಿಸಲು ಸೇರಿ ಚಿಂತೆಯಲ್ಲಿ ನರಳುತ್ತ ಉಳಿದ.

## ಮೂರು

ಶಿವಯ್ಯ ರಾತ್ರಿಯಿಡೀ ಮಾನಸಿಕವಾಗಿ ದಣಿದಿದ್ದ. ದುಗುಡ, ಆತಂಕದಿಂದ ದೂರಾಗಿರಲಿಲ್ಲ. ಮನಸ್ಸು ಜಡವಾಗಿತ್ತು. ಇನ್ನೇನು ಕಣ್ಣು ಮುಚ್ಚಲಾರವು ಎಂದುಕೊಂಡು ಬೇಸರದಿಂದ ಗುಡಿಸಿಲಿನಿಂದ ಹೊರಗೆದ್ದು ಬಂದ. ಬೆಳಗಾಗುವ ಲಕ್ಷಣಗಳು ಕಂಡವು. ಬಯಲ ತುಂಬ ಮಂಜು ಕವಿದಿತ್ತು. ಚಳಿ ಮೈ ಚುಚ್ಚತೊಡಗಿತು. ಗಿಡಮರಗಳಲ್ಲಿ ತಂಗಿದ್ದ ಹಕ್ಕಿ–ಪಕ್ಷಿಗಳು ಹೊರಬರುವ ತವಕದಲ್ಲಿದ್ದವು. ನೋಡ ನೋಡುತ್ತಲೇ ಸೂರ್ಯ ಹೊರಬಿದ್ದ. ನೆಲ, ಹುಲ್ಲು ಗಿಡಗಂಟೆಗಳ ಮೇಲೆ ವಶಪಡಿಸಿದ್ದ ಮಂಜು ಹನಿಗಳು ಸೂರ್ಯನ ಕಿರಣಗಳಿಗೆ ಹೊಳೆಯ ತೊಡಗಿದವು. ಶಿವಯ್ಯ ಅದೆಲ್ಲವನ್ನು ನೋಡಿ ದೀರ್ಘವಾಗಿ

ಮೈಮುರಿದು ಆಕಳಿಸಿದಾಗ ಏನೋ ಹಿತವೆನಿಸಿತು. ನಿನ್ನೆ ಹೋದ ಆ ಸಂಸಾರ ನೆನಪಾಯಿತು. ಆ ಸಂಸಾರ ತನ್ನಲ್ಲಿ ಬಿರುಗಳಿ ಎಬ್ಬಿಸಿದ್ದುದು, ತನಗರಿವಿಲ್ಲದೆ ಅದಕ್ಕೆ ಸಿಕ್ಕೊ ಹಗಲು ರಾತ್ರಿ ಬಳಲತೊಡಗಿದ್ದ. ರಾತ್ರಿ ಕಂಡ ಕನಸು ಭಯಂಕರವಾಗಿದ್ದರು ಅದರ ಚಿತ್ರ ಸ್ಪಷ್ಟವಾಗಿ ಮನಸ್ಸಿನಲ್ಲಿ ಮೂಡಲಿಲ್ಲ. ಅರೆ ಎಚ್ಚರ, ಅರೆ ನಿದ್ರೆಯಲ್ಲಿ ಕಡ ಆ ಕನಸು ಮಾತ್ರ ಕಾಡತೊಡಗಿತು. ಅನತಿ ದೂರದಲ್ಲಿದ್ದ ತೆಂಗಿನ ಗರಿಯ ಮೇಲೆ ದೊಡ್ಡ ಬೆಳ್ಳಕ್ಕಿಯೊಂದು ಕೂಡಲು ಪ್ರಯತ್ನಿಸುತ್ತಿತ್ತು. ಅದು ರೆಕ್ಕೆ ಬಡಿಯುತ್ತಾ ನಿಧಾನವಾಗಿ ಆ ಗರಿಯ ಮೇಲೆ ಕೂಡುತ್ತಿದ್ದಂತೆ ಭಾರಕ್ಕೆ ಗರಿ ಬಾಗುತ್ತಾ ಬಾಗುತ್ತಾ ಕೆಳಗೆ ಬಗ್ಗುತ್ತಿದ್ದಂತೆ ಬೆಳ್ಳಕ್ಕಿ ಕೆಳಗೆ ಬೀಳುತ್ತದೋ ಎನ್ನುವಾಗಲೇ ಹಾರಿಬಿಡುತ್ತಿತ್ತು. ತೆಂಗಿನ ಗರಿ ಮತ್ತೆ ಮೊದಲಿನ ಸ್ಥಿತಿಗೆ ಬಂದು ನಿಲ್ಲುತ್ತಿತ್ತು. ತುಸು ಸಮಯದ ಮೇಲೆ ಆ ಪಕ್ಷಿ ಅದೇ ಗರಿಯನ್ನು ಸಮೀಪಿಸಿ ಕೂಡಲು ಯತ್ನಿಸಿದಾಗ ಅದು ಮೊದಲಿನಂತೆಯೇ ಆದಾಗ ಪಕ್ಷಿ ಮೇಲಕ್ಕೆ ಹಾರಿತು. ಆ ಕ್ರಿಯೆ ಹಾಗೆಯೇ ಮತ್ತೆ ಮತ್ತೇ ನಡೆದೇ ಇತ್ತು. ಶಿವಯ್ಯ ಅದನ್ನು ನೋಡುತ್ತಾ ನಿಂತ. ಮುಖದ ಮೇಲೆ ತಿಳಿನಗೆಯೊಮ್ಮೆ, ಗಂಭೀರ ಭಾವವೊಮ್ಮೆ, ವಿಷಾದದ ಛಾಯೆ ಮೂಡಿ ಮಾಯವಾದವು. ಅವ್ಯಕ್ತವಾದ ವಿಚಾರವೊಂದು ಆತನಲ್ಲಿ ಮಂಥನಗೊಳ್ಳುತ್ತಿತ್ತು. ಆ ಬಗ್ಗೆ ಅಭಿವ್ಯಕ್ತಿ ಸಾಲದೆ ನಿಟ್ಟುಸಿರುಬಿಟ್ಟ.

ದೃಷ್ಟಿ ತೋಟದ ಕಡೆ ಹರಿಯಿತು. ದುಗುಡ ತನ್ನಿಂದ ತಾನೇ ತುಂಬಿಕೊಂಡಿತು. ತೋಟದಲ್ಲಿರುವ ಮಾವಿನ ಗಿಡಗಳು, ನಿಂಬೆ ಗಿಡಗಳು, ತೆಂಗಿನ ಗಿಡಗಳು ಎಂದಿನಂತೆ ಕಾಣದೆ ಯಾಕೋ ಅಸ್ತವ್ಯಸ್ತವಾದಂತೆ ಕಂಡವು. ನಾಲ್ಕಾರು ಹೆಜ್ಜೆ ನಡೆದು ತೋಟದ ಒಳಗೆ ಕಾಲಿಟ್ಟು ನೋಡುತ್ತಾನೆ. ನಿಂಬೆಯ ಗಿಡದ ಕೊನೆಯೊಂದು ಮುರಿದು ಬಿದ್ದಿದೆ. ಮಾವಿನ ಗಿಡದ ಅರ್ಧ ಭಾಗವೇ ಎತ್ತೆತ್ತಲೋ ಬಗ್ಗಿ ಹೋಗಿದೆ. ಇಡೀ ತೋಟವೇ ದನಗಳ ತುಳಿತಕ್ಕೆ ಸಿಕ್ಕು ಹಾಳಾಗಿ ಹೋಗಿದೆ. ಕನಸ್ಸಿನಲ್ಲಿ ತೋಟದ ತುಂಬ ತುಡುಗು ದನಗಳು ತುಂಬಿ ಹಾಳು ಮಾಡುತ್ತಿದ್ದ ಚಿತ್ರ ಮನಸ್ಸಿಗೆ ಹೊಳೆಯಿತು. ಸಂಕಟದಿಂದ ಮುಂದೆ ಬಿದ್ದ ನಿಂಬೆ ಗಿಡದ ಕೊಲ್ಲೆಯನ್ನು ಎತ್ತಿ ಸರಿಯಾಗಿ ನಿಲ್ಲಿಸಲು ಪ್ರಯತ್ನಿಸಿದಾಗ ಅದು ಕಿತ್ತು ಕೈಗೆ ಬಂದುಬಿಟ್ಟಿತು. ತಾನೇ ಬೆಳೆಸಿದ ಆ ಗಿಡವನ್ನು ಎದೆಗೆ ಒತ್ತಿಕೊಂಡು ನಿಂತ. ತೋಟದ ಮೂಲೆಯಲ್ಲಿ ತನ್ನ ಒಡೆಯ ಕಾಣಿಸಿದ. ಆಗ



ಶಿವಯ್ಯ ದಂಗಾಗಿ ಹೋದ. ಶ್ಯಾಮಪ್ಪನವರು ತೋಟದ ಗಿಡಗಳನ್ನೆಲ್ಲಾ ಒಂದೊಂದೆ ನೋಡುತ್ತಾ, ಬಿದ್ದವುಗಳನ್ನು ಎತ್ತುತ್ತಾ ಹುಚ್ಚನಂತೆ ಅತ್ತಿತ್ತ ಅಡ್ಡಾಡಿ ಕೊನೆಗೆ, "ಶಿವಯ್ಯಾ" ಎಂದು ಕೂಗು ಹಾಕಿದ. ಬೆಳಗಿನ ಪ್ರಶಾಂತ ವಾತಾವರಣವನ್ನೇ ಕದಡಿದ ಆ ಕೂಗು ನಾಲ್ಕು ದಿಕ್ಕಿನಿಂದ ಪ್ರತಿಧ್ವನಿ ಮಾಡಿತು. ಶಿವಯ್ಯಾ ನಡುಗುತ್ತಾ ಓಡೋಡಿ ಬಂದ. ಬರುವಾಗ ಕಾಲಿಗೆ ಸಿಕ್ಕ ಹತ್ತಾರು ಗಿಡಗಳು ಪಟಪಟ ಮುರಿದುಹೋದವು. ಚಳಿಯಲ್ಲಿಯೂ ಮೈ ಬೆವರಿತು. ಮುಖ ಕಮರಿಹೋಯಿತು. ಶ್ಯಾಮಪ್ಪನವರು ತನ್ನ ಆಳನ್ನು ದಿಟ್ಟಿಸಿ ನೋಡಿದರು. ನೋಡಿಯೇ ನೋಡಿದರು. ಅದೆಷ್ಟು ಹೊತ್ತು ಹಾಗೆಯೇ ನೋಡುತ್ತಾ ನಿಂತು ಕೊನೆಗೆ, "ಶಿವಯ್ಯಾ ನಿನ್ನ ಬಯ್ಯದ್ರಾಗ ಏನು ಅರ್ಥ ಇಲ್ಲ. ಆಳು ಎಷ್ಟಿದ್ದರೂ ಆಳು, ನಾವೇ ತೋಟದಾಗ ಮನೆ ಮಾಡಿಕೊಂಡಿರುತ್ತೇವೆ. ಇನ್ನು ಮೇಲೆ ನಿನ್ನ ದಾರಿ ನೀನು ನೋಡಿಕೋ ಋಣ ಮುಗದಂಗ ಸರಿ" ಎಂದು ಹೇಳಿ ಅವರು ಊರ ಕಡೆ ನಡೆದೇಬಿಟ್ಟರು. ಶಿವಯ್ಯನಿಗೆ ವ್ಯಥೆಯಾಯಿತು. ಮಾಡುವುದೇನು? ನನ್ನ ನಾನು ಗೆಲ್ಲಲಾಗಲಿಲ್ಲ. ನಾನು ಮೇಲೇರಿ ಹೋಗಲಿಲ್ಲ– ಎಂದುಕೊಂಡು ಗುಡಿಸಲಿಗೆ ಬಂದ. ಆ ಬೆಳ್ಳಕ್ಕಿ ಆ ತೆಂಗಿನ ಗರಿಯ ಮೇಲೆ ಕೂಡಲು ಪ್ರಯತ್ನ ನಡೆಸಿಯೇ ಇತ್ತು. ಆ ಎಳೆಗರಿ ಅದರ ಭಾರಕ್ಕೆ ತಡೆಯದೆ ಬಾಗಿದಾಗ ಬೆಳ್ಳಕ್ಕಿ ಆಕಾಶಕ್ಕೆ ಹಾರುತ್ತಿತ್ತೇ ಹೊರತು ಕೆಳಗೆ ಬೀಳುತ್ತಿರಲಿಲ್ಲ. ಶಿವಯ್ಯ, ನೋಡಿದ ನಗು ತನಗೆ ತಾನೇ ತೇಲಿಬಂತು. ಆ ಬೆಳ್ಳಕ್ಕಿ ಕೊಲ್ಲೆಯನ್ನು ನಂಬಿ ಕೂಡುವುದಿಲ್ಲ. ಅದು ತನ್ನ ರೆಕ್ಕೆಯನ್ನು ನಂಬಿಕೊಂಡು ಇರುತ್ತದೆ' ಅಂದುಕೊಂಡ. ಸುತ್ತಲೂ ನೋಡಿದ. ಕಣ್ಣು ತುಂಬ ನೋಡಿ ತೋಟ ಬಿಟ್ಟು, ಬಯಲಿಗೆ ಬಿದ್ದು ನಡೆಯತೊಡಗಿದ.

*********

ಓದು ಪತ್ಯ

# ಅಂದು ಕಬ್ಬು ಕೂಲಿಗಳು ಇಂದು ವಜ್ರ ವರ್ತಕರು

**– ಸಿ.ಎಸ್. ದ್ವಾರಕನಾಥ್**

ಮುನೀರಾ ಸಲೇಖ್‌ರ ಅಜ್ಜಿ ನಮ್ಮ ಆಸಕ್ತಿಯನ್ನು ಗಮನಿಸಿ ಇನ್ನಷ್ಟು ಸೀರಿಯಸ್ ಆಗಿ ದಕ್ಷಿಣ ಆಫ್ರಿಕಾ, ಡರ್ಬಾನ್, ಭಾರತೀಯರು, ಗಾಂಧಿ ಮುಂತಾಗಿ ಸ್ವಾರಸ್ಯಕರವಾಗಿ ಹೇಳುತ್ತಲೇ ಹೋದರು. ಅವರಿಗೂ ಸಾಕಷ್ಟು ದಿನಗಳಿಂದ ಅವರ ಮಾತುಗಳನ್ನು ತಾಳ್ಮೆಯಿಂದ ಕೇಳುವವರಿರಲಿಲ್ಲ ಎನಿಸುತ್ತದೆ. ಅಂತೆಯೇ ಅಲ್ಲಿನ ವಿಚಾರಗಳ ಬಗ್ಗೆ ತಿಳಿಯದವರ್‍ಯಾರೂ ಅವರ ಕೈಗೆ ಸಿಕ್ಕಿರಲಿಲ್ಲವೆನಿಸುತ್ತದೆ. ಒಟ್ಟಿನಲ್ಲಿ ಅವರಿಗೆ ತೋಚಿದ್ದನ್ನೆಲ್ಲಾ ನಿಧಾನಕ್ಕೆ ಹೇಳತೊಡಗಿದರು.

ಭಾರತೀಯರು ದಕ್ಷಿಣ ಆಫ್ರಿಕಾಗೆ ಬಂದದ್ದೇ ಒಂದು ರೋಚಕ ಕಥೆ!

ಹದಿನೇಳನೇ ಶತಮಾನದಲ್ಲಿ ಬಹುತೇಕ ಭಾರತೀಯರು ಡರ್ಬಾನ್‌ಗೆ ಬಂದು ನೆಲೆಸಿದರು. ಭಾರತಕ್ಕೂ ದಕ್ಷಿಣ ಆಫ್ರಿಕಾದ ಡರ್ಬಾನಿಗೂ ನಡುವೆ ಎರಡು ಸಮುದ್ರ ದಂಡೆಗಳಷ್ಟೇ ಅಂತರ. ಭಾರತದ ಹಿಂದೂ ಮಹಾಸಾಗರದ ದಂಡೆಯಿಂದ ದಕ್ಷಿಣ ಆಫ್ರಿಕಾದ ಹಿಂದೂ ಮಹಾಸಾಗರದ ದಂಡೆಗೆ ತಲುಪಲು ಒಂದು ಹಡಗಿಗೆ ತಿಂಗಳಾನುಗಟ್ಟಲೆ ಹಿಡಿಯುತ್ತಿತ್ತಂತೆ. ಆಗ ದಕ್ಷಿಣ ಆಫ್ರಿಕಾ ಮತ್ತು ಭಾರತ ಎರಡನ್ನೂ ಆಳುತ್ತಿದ್ದವರು ಬ್ರಿಟೀಷರೇ. ಈ ಕಾರಣಕ್ಕೆ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ತೀರ ಹತ್ತಿರದ 'ಸಂಬಂಧ'ವಿತ್ತು ಎನ್ನಿಸುತ್ತದೆ. ಭಾರತದಲ್ಲಿ ಕಬ್ಬು ಬೆಳೆ ಹಿಂದಿನಿಂದಲೂ ಇದ್ದುದ್ದರಿಂದ ಕಬ್ಬನ್ನು ನಾಟುವುದು, ಬೆಳೆಯುವುದು ಮತ್ತು ಕುಯ್ಯುವುದು ಮುಂತಾದ ಕೆಲಸಗಳಲ್ಲಿ ಭಾರತೀಯರು ಪರಿಣಿತರಾಗಿದ್ದರು. ಈ ಕಾರಣಕ್ಕಾಗಿ ಭಾರತದಿಂದ ಸಾವಿರಾರು ಮಂದಿ ಕಬ್ಬು ಬೆಳೆಯುವ ಪರಿಣಿತಿ ಹೊಂದಿರುವ ಕೂಲಿ ಆಳುಗಳನ್ನು ದಕ್ಷಿಣ ಆಫ್ರಿಕಾದ ಡರ್ಬಾನಿಗೆ ಹಡಗಿನ ಮೂಲಕ ಆಗಿನ ಬ್ರಿಟೀಷರು ಸಾಗಿಸಿದರು.



ಭಾರತದಿಂದ ದಕ್ಷಿಣ ಆಫ್ರಿಕಾಗೆ ಬಂದು ಕಬ್ಬು ಕೂಲಿಗಳಾದವರ ನೆನಪಿಗಾಗಿ ಕಬ್ಬು ಕೂಲಿಯೊಬ್ಬನ ಗೊಂಬೆಯೊಂದನ್ನು ಡರ್ಬಾನಿನ 'ಲೋಕಲ್ ಹಿಸ್ಟರಿ ಮ್ಯೂಸಿಯಂ'ನಲ್ಲಿ ಈಗಲೂಇಡಲಾಗಿದೆ.

ಡರ್ಬಾನಿಗೆ ಬಂದ ಭಾರತದ ಕೂಲಿಗಳ ಆಗಿನ ಸ್ಥಿತಿಗತಿಯನ್ನು ಹೇಳಿದರೆ ಅದೇ ಒಂದು ಬೃಹತ್ ಪುಸ್ತಕವಾಗುತ್ತದೆ! .ಈ ಕಬ್ಬು ಕೂಲಿಗಳಿಗೆ ತಲೆಯ ಮೇಲೊಂದು ಸೂರಿರಲಿಲ್ಲ. ಬಿಸಿಲಿಗೆ ಬಳುಕುತ್ತಾ ಚಳಿಯಲ್ಲಿ ಮೀಯುತ್ತಾ ಕಬ್ಬಿನ ಗದ್ದೆ ಬಯಲುಗಳಲ್ಲಿ ಇವರು ವಾಸಿಸಬೇಕಿತ್ತು. ಈ ಕೂಲಿಗಳನ್ನು ಕರೆತಂದ ಬಿಳಿಯರು ಈ ಭಾರತೀಯರನ್ನು ಕೂಡ ನೀಗ್ರೋಗಳಿಗಿಂತಲೂ ಕಡೆಯಾಗಿ, ಅಮಾನುಷವಾಗಿ ನೋಡಿಕೊಂಡರು. ಕ್ರಮೇಣ ಈ ಕೂಲಿಗಳು ಕಬ್ಬಿನ ಸೋಗೆಯಲ್ಲೇ ಒಂದಷ್ಟು ಸೂರನ್ನು ಮಾಡಿಕೊಂಡರು. ಕೂಲಿಗಳಾಗಿ ಹೋದ ಭಾರತೀಯರಲ್ಲಿ ಅನೇಕರಿಗೆ ಅಲ್ಲಿನ ವಾತಾವರಣ, ಊಟ ಒಗ್ಗದೆ ಖಾಯಿಲೆಯಿಂದ ನರಳಿದರು. ಪ್ರಾಣಿಗಳಂತಿದ್ದ ಅವರಿಗೆ ಔಷಧಿಯ ನೆರವೂ ಸಿಗುತ್ತಿರಲಿಲ್ಲ. ಅನೇಕರು ಅಲ್ಲೇ ಅಸು ನೀಗಿದರು! ಎಲ್ಲಾ ಕಷ್ಟಗಳನ್ನು ಉಂಡು ಉಳಿದ ವಾರಸುದಾರರು ಮಾತ್ರ ಇಂದು ದಕ್ಷಿಣ ಆಫ್ರಿಕಾದ ಭಾರತೀಯರಾಗಿ ಉಳಿದಿದ್ದಾರೆ.

ಭಾರತದ ಗುಜರಾತ್, ಆಂಧ್ರಪ್ರದೇಶ ಮತ್ತು ತಮಿಳುನಾಡಿನಿಂದ ಅಂದು ದಕ್ಷಿಣ ಆಫ್ರಿಕಾಗೆ ಬಹುತೇಕ ಕೂಲಿಗಳು ಬಂದಿರುವುದಕ್ಕೆ ದಾಖಲೆಗಳಿವೆ. ಆಶ್ಚರ್ಯವೆಂದರೆ ಅಂದು ಈ ಕೂಲಿಗಳಾಗಿ ಬಂದ ಇವರ ಮೊಮ್ಮಕ್ಕಳು, ಮರಿ ಮಕ್ಕಳು ಅಥವಾ ಅವರ ಸಂತಾನದವರು ಇಂದು ಕೂಲಿಗಳಾಗಿ ಉಳಿದಿಲ್ಲ! ಡರ್ಬಾನಿನ ಬಹುತೇಕ ಮೇಲು ವರ್ಗಕ್ಕೆ ಸೇರಿಬಿಟ್ಟಿದ್ದಾರೆ! ಗುಜರಾತಿಗಳು ಇಂದು ಡರ್ಬಾನ್‌ನ ಪ್ರಮುಖ ವರ್ತಕರು. ಮಿಕ್ಕಂತೆ ಆಂಧ್ರದ ನಾಯ್ಡುಗಳು ವ್ಯಾಪಾರದೊಂದಿಗೆ ದಕ್ಷಿಣ ಆಫ್ರಿಕಾದ ಸರ್ಕಾರದಲ್ಲಿ ನೌಕರರಾಗಿ ರಾಜಕಾರಣದಲ್ಲೂ ಸಕ್ರಿಯರಾಗಿಬಿಟ್ಟಿದ್ದಾರೆ!. ಮಿಕ್ಕಂತೆ ತಮಿಳುನಾಡಿನವರು ದಕ್ಷಿಣ ಆಫ್ರಿಕಾದ ಪೊಲೀಸ್ ಮತ್ತಿತರ ಕೆಲಸಗಳೊಂದಿಗೆ ಖಾಸಗಿ ವೃತ್ತಿಗಳಲ್ಲಿ ತೊಡಗಿದ್ದಾರೆ. ಇಂದು ಡರ್ಬಾನಿನ ಯಾವುದೇ ಅಂಗಡಿಗೆ ಹೋದರೂ ಭಾರತೀಯರ ಮುಖಗಳು ಕಾಣಿಸಿ ಕೊಳ್ಳುತ್ತವೆ. ಹಿಂದೂಗಳೊಂದಿಗೆ ಮುಸ್ಲಿಮರೂ ಕೂಡ ಅತಿ ಹೆಚ್ಚು ಪ್ರಮಾಣದಲ್ಲಿ ಡರ್ಬಾನಿನಲ್ಲಿದ್ದಾರೆ.

ದಕ್ಷಿಣ ಆಫ್ರಿಕಾ ವಜ್ರಗಳಿಗೆ ಖ್ಯಾತಿಯಾದುದು, ಅಲ್ಲಿದ್ದಷ್ಟು ವಜ್ರದ ಗಣಿಗಳು ಬೇರೆಲ್ಲೂ ಇಲ್ಲ. ವಜ್ರ ಮಾರಾಟ ಇಲ್ಲಿನ ಪ್ರಮುಖ ದಂಧೆ. ಆಶ್ಚರ್ಯವೆಂದರೆ ಬಹುತೇಕ ವಜ್ರ ಮಾರಾಟಗಾರರು ಇಂದು ಭಾರತೀಯ ಮೂಲದ ಗುಜರಾತಿಗಳು! ಇನ್ನೊಂದು ಆಶ್ಚರ್ಯವೆಂದರೆ ಇಲ್ಲಿನ ಭಾರತೀಯರಲ್ಲಿ ಜಾತಿ ಪದ್ಧತಿಯಿಲ್ಲ. ಮತೀಯ ವೈರುದ್ಯಗಳೂ ಇಲ್ಲ! ಭಾರತೀಯರಲ್ಲಿ ಯಾರನ್ನು ಯಾರು ಬೇಕಾದರೂ ಮದುವೆಯಾಗಬಹುದು! ಆದರೆ ಹಿಂದು ಮತ್ತು ಮುಸ್ಲಿಮರೂ ತಮ್ಮ ತಮ್ಮ ಧರ್ಮಗಳನ್ನು ಅನುಸರಿಸುತ್ತಾರೆ. ಹಾಗೇನಾದರೂ ಅಂತರ ಮತೀಯ ವಿವಾಹವಾಗಿದ್ದರೆ ವಿವಾಹ ಬಂಧನದ ನಂತರವೂ ಅವರವರಿಗೆ ಬೇಕಾದ ಮತಗಳನ್ನು ಅವರವರು ಅನುಸರಿಸಬಹುದು, ಹುಟ್ಟುವ ಮಗುವಿಗೆ ಧರ್ಮದ ಆಯ್ಕೆಯ ಸ್ವತಂತ್ರವಿರುತ್ತದೆ.

ಹಿಂದುಗಳಲ್ಲಿ ಬಹುತೇಕರು ಶಿವನ ಭಕ್ತರು, ಮಿಕ್ಕಂತೆ ಲಕ್ಷ್ಮಿ, ಸರಸ್ವತಿ ಮುಂತಾದ ದೇವತೆಗಳನ್ನು ಆರಾಧಿಸುತ್ತಾರೆ. ಈಚೆಗೆ ಅಲ್ಲೂ ಕೂಡ ಪುಟಪರ್ತಿಯ ಸಾಯಿಬಾಬ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ. ಸದ್ಯಕ್ಕೆ ಅಯೋಧ್ಯೆಯ ರಾಮ ಅಲ್ಲಿಗಿನ್ನೂ ತಲುಪಿಲ್ಲ!

ಈಚೆಗೆ ಹಣ, ಸಂಪತ್ತು ನೀಡುವ ದೇವರೆಂದು ಭಾರತದ ಖದೀಮರನೇಕರು ತಪ್ಪಾಗಿ ನಂಬಿರುವ ಶಿರಡಿಯ ಸೂಫಿ ಸಂತ ಸಾಯಿಬಾಬ ಅಲ್ಲೆಲ್ಲೂ ಕಾಣಿಸಲಿಲ್ಲ.

ಮುನೀರಾ ಸಲೇಖ್‌ರ ಅಜ್ಜಿ ಇಷ್ಟೆಲ್ಲಾ ಹಿನ್ನೆಲೆ ಹೇಳಿದ್ದು, ನಾನು ಕಣ್ಣಾರೆ ಕಂಡ ಭಾರತೀಯರ ಇಂದಿನ ಸ್ಥಿತಿಗತಿಗಳಿಗೆ ಪೂರಕವೆನ್ನಿಸುವಂತಿತ್ತು. ಅಷ್ಟರಲ್ಲಿ ಪೊಲೀಸ್ ಅಧಿಕಾರಿ ವಸಂತ ಈಚೆಗೆ ದಕ್ಷಿಣ ಆಫ್ರಿಕಾಗೆ ಸ್ವಾತಂತ್ರ್ಯ ಬಂದ ನಂತರ, ಕೆಲಸದ ಸ್ಥಳಗಳಲ್ಲಿ ಭಾರತೀಯರ ವಿರುದ್ಧ ಕರಿಯರು ಮಾಡುತ್ತಿರುವ ಭೇದ ಭಾವಗಳ ಬಗ್ಗೆ ವಿವರಿಸಿದರು. ಆಕೆ ಭಾರತೀಯಳೆಂಬ ಕಾರಣಕ್ಕೆ ಆಕೆಗೆ ಇನ್ನೂ ಬಡ್ತಿ ಸಿಗದ ಬಗ್ಗೆ ಬೇಸರದಿಂದ ಹೇಳಿಕೊಂಡರು. ಭಾರತೀಯರಿಗೆ ಇನ್ನು ಮುಂದೆ ದಕ್ಷಿಣ ಆಫ್ರಿಕಾದಲ್ಲಿ ಒಳ್ಳೇಯ ಪ್ಯೂಚರ್ ಇಲ್ಲ ಎಂದು ನೊಂದು ನುಡಿದರು. 'ಯಾವುದೇ ದೇಶದಲ್ಲೂ ಆ ದೇಶೀಯರನ್ನು ಬಿಟ್ಟು ಬೇರೆಯವರು ಅವರ ಅವಕಾಶಗಳನ್ನು ಕಬಳಿಸಿದರೆ ಆ ದೇಶಿಯರಿಗೆ ಅಸಹನೆಯಾಗುವುದು ಸಹಜ' ಎಂದು ನಾವು ವಸಂತರವರನ್ನು ಸಮಾಧಾನ



ಪಡಿಸಲು ಪ್ರಯತ್ನಿಸಿದೆವು. ಒಟ್ಟಾರೆಯಾಗಿ ವಸಂತರವರಿಗೆ ಅಲ್ಲಿನ ಕರಿಯರ ಬಗ್ಗೆ ತೀರ ಅಸಹನೆಯಿದ್ದಂತೆ ಕಂಡು ಬಂತು. ಈಚೆಗೆ ಒಂದಷ್ಟು ಕಡೆ ಭಾರತೀಯರ ಮನೆಗಳನ್ನು ಅಲ್ಲಿನ ಕರಿಯರು ಲೂಟಿ ಮಾಡಿದ ಪ್ರಸ್ತಾಪ ಮಾಡಿದ ವಸಂತ'. ನನ್ನ ಮನೆಗೇನಾದರೂ ಯಾವನಾದರೂ ಕರಿಯ ಕಾಲಿಟ್ಟರೆ ಸುಟ್ಟು ಬಿಸಾಕುತ್ತೇನೆ. ಎಂದು ಅವರೊಂದಿಗೆ ಇದ್ದ ರಿವಾಲ್ವಾರ್ ತೋರಿಸಿದರು. ಅಲ್ಲಿನ ಮೂಲ ನಿವಾಸಿಗಳಾದ ಕರಿಯರು ತಮ್ ನೆಲದಲ್ಲೇ ನಿರ್ಗತಿಕರಾಗಿ ಬೇರೆ ದೇಶಗಳಿಂದ ಬಂದ ಬ್ರಿಟೀಷರು, ಬರ್ಮದವರು ಮತ್ತು ಭಾರತೀಯರ ಬಳಿ ಕೂಲಿಗಳಾಗಿ ಇಂದಿಗೂ ನರಳುತ್ತಿರುವ ದೃಶ್ಯ ವಸಂತ ತರದವರಿಗೆ ಸಹಜವೆನ್ನಿಸುವಂತಿತ್ತು! ದಕ್ಷಿಣ ಆಫ್ರಿಕಾದ ಕರಿಯರಷ್ಟೇ ಕಪ್ಪಗಿರುವ, ಭಾರತದ ಮುಖ ಚಹರೆಯಿರುವ ವಸಂತರವರ ಒಳಗೆ ಬಿಳಿಯರ ಕ್ರೂರ ಮನಸ್ಸಿದ್ದಂತಿತ್ತು.

ಸುಮಾರು ಮೂರು ನಾಲ್ಕು ಗಂಟೆಗಳ ಕಾಲ ನಾವೆಲ್ಲಾ ಮುನೀರಾ ಸಲೇಖ್‌ರ ಪುಟಾಣಿ ಹೋಟಲಿನಲ್ಲಿ ಕುಂತು ಇಷ್ಟೆಲ್ಲಾ ಸುದೀರ್ಘ ಚರ್ಚೆ ಮಾಡುತ್ತಿರುವಾಗ ನಮ್ಮ ಭಾಷೆ, ನುಡಿಗಟ್ಟುಗಳನ್ನು ಕೊಂಚವೂ ಅರಿಯದ ಮುನೀರಾ ಸಲೇಖ್‌ರ ಅಂಗಡಿಯಲ್ಲಿ ಕ್ಲೀನಿಂಗ್ ಕೆಲಸ ಮಾಡುವ ನೀಗ್ರೋ ಕೂಲಿ ಆಳು ಜೂನ್ ಗೋಡೆಯ ಮರೆಯಲ್ಲಿ ನಿಂತು ನಮ್ಮನ್ನೇ ನೋಡುತ್ತಾ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದಳು..!

**ಬೇಟೆ : ಆಶಯ**

# ಒಂದು ಮೀನು

**– ಪ್ರತಿಭಾ ನಂದಕುಮಾರ್**

ಒಂದು ಮೀನಿನ ಕನಸಿಗೆ
ಎಷ್ಟೆಲ್ಲ ರೆಕ್ಕೆಗಳಿವೆ

ಹತ್ತು ಕೆರೆಯ ನೀರು ಬಂದು
ಕೆಮ್ಮಣ್ಣು ಸೇರಿ ಗಾಳ ತಪ್ಪುತ್ತದೆ
ಹುಳ ಜಾರಿ ಬಾಯಿಗೇ ಬರುತ್ತದೆ.
ಬಲೆಯ ತೂತಲ್ಲಿ ತೂರಿ ಓಡುವಾಗ
ಸೂರ್ಯನ ಕಿರಣ ಮಾತ್ರ ಹಿಂಬಾಲಿಸುತ್ತದೆ.

ಏನಿಲ್ಲದಿದ್ದರೂ ಕೊನೆಗೆ
ಮೌನದಲೆಯಲ್ಲಿ ಹಿಡಿ ಮಾತಿನ ಪುರಿ
ತೇಲಿ ಬರುತ್ತದೆ.

ದೇವರ ಕೊಳದ ಮೀನು
ಮೂಗಿನ ಬಂಗಾರದ ಉಂಗುರ
ಹೊಳೆದು ಬೆರಗಾದರು.

ಇಲ್ಲಿ ಬೇಟೆಯಾಡಬಾರದೆನ್ನುವುದು ನಿಯಮ
ಮೀನಿಗೂ ಎಂಥ ಸಂಯಮ

ಕತೆ ಹೇಳುತ್ತದೆ–
ಗಾತ್ರ ಭಾರಿಯಾಗಿ
ಈ ಕೊಳ ಸಾಲದಾದಾಗ
ಸಾಗರಕ್ಕೆ ಪ್ರಯಾಣ.

ಕನಸಿನರ್ಥ ಬಿಡಿಸಲು
ಒಂದು ಸುಳಿವು ಸಾಕು
ಯಾರಿಗೆ ಬೇಕು ಇಷ್ಟೆಲ್ಲ ಪುರಾಣ?



# ಮಾಯಾ ವರಹ ಬೇಟೆ ಪ್ರಸಂಗ

**– ರಾಘವಾಂಕ**

(ಹರಿಶ್ಚಂದ್ರ ಕಾವ್ಯದಿಂದ ಆಯ್ದ ಭಾಗ)

**ಷಷ್ಠ ಸ್ಥಲಂ**

**ಸೂಚನೆ**
ಕೂಡಿರ್ದ ಬೇಡರಂ ಕೆಡಹಿದಡೆ ಕೋಪಾಗ್ನಿ
ಮೂಡಿ ಬೆನ್ನಟ್ಟುವ ಹರಿಶ್ಚಂದ್ರನೃಪನ ಕೊಂ
ಡೋಡಿ ಬಂದಡಗಿತ್ತು ಕೌಶಿಕನ ಬನದೊಳಗೆ ಮಾಯಾವರಾಹನಂದು

ಸಿಡಿಲ ಕಿಡಿಯಂತೆಸೆವ ಕಣ್ಣು ಬ್ರಹ್ಮಾಸ್ತ್ರದೆರ
ಡುಡಿಯನಿಱುಕಿದೆ ತೇಱದ ದಾಡೆ ವಜ್ರದ ಚಿಪ್ಪ
ನಿಡಿಕಿದರೆನಿಪ್ಪ ಕಿವಿ ಬಲನ ನೇಗಿಲ ಪೋಲ್ವ ತುಂಡ ಮೃತ್ಯುವಿನ ಕಯ್ಯ
ನಿಡಿಯ ನಾರಾಚದಗೆಯೆನಿಪ ಮೆಯ್‌ರೋಮತತಿ
ಕಡಗಿ ಕಾಲನ ಕೋಣನರರೆ ವಾರಾಹಮುಖ
ವಡೆದಿರದೆನಿಪ್ಪೊಡಲು ಮೆಱೆವ ಸೂಕರನಿರಲು ಕಂಡರಂಶಾ ಬೇಡರು.

ಎಲೆಲೆಲೆಲೇ ಹಂದಿಯನುವಾದುದುಬುಬುಬೆಂ
ದುಲಿದು ನಾಯ್ಗಳುವೆರಸಿ ಮುಕ್ಕುಱಿಕ್ಕಲು ಮೆಲ್ಲ
ನೊಲೆದುಬ್ಬಿ ಪುಟನೆಗೆದು ಗಜಱಿ ಗರ್ಜಿಸಿ ಪುಳಿಂದರ ಮೇಲೆ ಬವರಿದಿರುಗಿ
ಬಲವಂದು ಹೊಯ್ದು ಬೇಗಕ್ಕೆ ಬಮಱುಂದಿ ನಾ
ಳಲ ಹೊಱೆಗಳಂ ಕೊಚ್ಚಿದಂತೆಲ್ಲರೊಡಲ ಕಳ
ವಳಿಗೆಯ್ದು ಬೀದಿವರಿದೊಕ್ಕಲಿಕ್ಕಿತ್ತು ರಕ್ಕಸಮಿಗಂ ಕಾಡೊದಱಲು.

ಅಡವಿ ನಡುಗಲು ದೆಸೆಗಳೊಡೆಯೆ ಘುಡುಘುಡಿಸುತ್ತ
ಲೊಡಸಾರ್ದು ಪಡೆಯ ಕೆಡಹುತ್ತ ಬರೆ ಕೋಪದಿಂ
ಹೊಡಕರಿಸಿ ತಡವಿಱಿದೆ ಕುಡುದಾಡೆಯಿಂ ಬೇಡವಡೆಯೊಡಲನೀಡಿಱಿವುತ

ಕಡಿವಡೆದ ಕಡಿಗಳೊಳು ಬಿಡದೆ  ನಡೆಯಲು ಕಂಡು
ಕೆಡೆಕೆಡೆಯೆನುತ್ತ ಮೂದಲಿಸಿ ಮರಳಿದೊಡಡಗ
ಕಡಿ ಮಾರಿಗೆಜ಼್ ನೆತ್ತರಂ ಹೊದೆಸು ಚರ್ಮಮಂ ತೊಡು ಬೇಗ ಬಿಡು ಸರಳನು.

ಅಟ್ಟಿ ಮೃಗ ಗಜಜ಼್ ಕವಡಿಕೆಯ ರಾಸಿಯ ಕಲ್ಲು
ತಟ್ಟಿದಂತಾಗಿ ಚೆಲ್ಲಿದ ಶಬರಸಂಕುಲಂ
ಕಟ್ಟೋಡಿ ಮಗುಳ್ದು ಮೊಳಕಾಲಿಕ್ಕಿಯಂಡುಗೊಂಡುಸಿರ ಸಂತೈಸಿಕೊಳುತ
ಮುಟ್ಟುಗೊಂಡಿರದುರಿಯ ನೊರಜು ಕಾಡುವ ತೆಱದಿ
ನಿಟ್ಟೆಲುವ ಮುಜೆ ಕೊರಳ ಕೊಜೆ ಬರಿಯನಿಜೆ ಮಾಣ
ದಿಟ್ಟಯಿಂದಿಡುಕುವುದೆನುತ್ತುಲಿದು ನಾಲ್ದೆಸೆಗೆ ಕವಿದರಂತಾ ಬೇಡರು.

ಕಣ್ಣ ನಿಜೆ ಕೇಸರವ ಸುಡು ಬಿಡದೆ ಖಂಡಮಂ
ಸಣ್ಣಗಡಿಯಲ್ಲಿ ನಾಯಿ ಮೂಳೆಯುಂ ಮೋದು ನೀಂ
ತಣ್ಣನೆ ತಣಿಯ ತಿನ್ನು ತೊಡೆಯಡಗನೆನುತಲಿಟ್ಟಿಯ ಕಲಿಗಳುರವಣಿಸಲು
ಬಣ್ಣಿಸಲದೇಕೆ ಹರಿ ಕರಿಗಳಿಗೆ ಕೆರಳಿ ಸೌ
ಪರ್ಣನಹಿಕುಲಕೆ ಮುನಿದೆಱಗಿ ಕೊಲುವಂತೆ ಮು
ಕ್ಕಣ್ಣ ಸಮನಿಪ ವಿಶ್ವಾಮಿತ್ರ ಕಳುಹಿದ ವರಾಹ ಕೊಂದುದು ಪಡೆಯನು

ಕಡುಗಿ ಕೈಕೊಂಡು ಬೊಬ್ಬಿಟ್ಟುಲಿವ ಲುಬ್ಧಕರ
ಎಡೆಗೆ ವುರವಣಿಸಿ ಹರಿದೆಯ್ದಿ ತೊತ್ತಳದುಳಿದು
ಕೆಡಹಿ ಸತ್ವದಿ ಬಂದ ಪಡೆಯ ನೆಜೆತಜೆದು ವೀರರ ಜಜೆದು ಕರುಳ ಹಜೆದು
ಕಡುಬಳಲಿ ಕಣ್ಣು ಕೆಂಪಡರಲುಸುರಿಕ್ಕಿ ಮೊಗ
ಜಡಿದು ಕಟವಾಯೊಸರ್ವ ನೊರೆ ತೇಂಕುವಳ್ಳೆಯಿಂ
ಬಿಡದಂಡುಗೊಂಡು ಮುಸುಡಂ ನೆಗಹಿ ಜೊಪ್ಪವಂ ಮಲಗಿ ಮತ್ತನುವಾದುದು

ಬಿಟ್ಟ ತಲೆ ಗಿಡುಹಿಡಿದು ಕಳೆದುಡುಗೆ ಕಾಡ ಮುಳು
ನಟ್ಟು ಕುಂಟುವ ಪದಂ ಬೆನ್ನ ಬಿಗುಹಳಿದಳಲ್ವ
ಮೊಟ್ಟೆಗೂಳೆಡಹಿ ಕೆಡೆದೊಡೆದ ಮೊಳಕಾಲ್ ತೇಕುವಳ್ಳೆಗಳುವೆರಸೊಱಲುತ



ಕೆಟ್ಟೋಡುತಿರಲೊರ್ವನವನ ಕಂಡಿದಿರಡ್ಡ
ಗಟ್ಟಿ ಕೇಳಲು ಹುಹುಹು ಹುಲಿಯಲ್ಲ ಹಂದಿಯಜೆ
ಯಟ್ಟಿ ಬರುತಿರ್ದುದೆನೆಯೆಲ್ಲಿ ತೋಜ಼್ಸೊರನಲು ನೀವೇ ಆಜೆಸಿಕೊಂಬುದೆಂದ

ನಡುಗುವವಯವ ಬಿಕ್ಕುಪಾಱುವೆದೆ ಬಱತ ಬಾಯ್
ಸಿಡಿದರಳ್ವ ನಾಸಾಪುಟಂ ನಟ್ಟ ಕಣು ಬೆಮ
ರಿಡುವ ಮೊಗ ಬಿಟ್ಟೆಳಲ್ವ ಮಂಡೆ ನಿಟ್ಟೋಟದಿಂದೋಡುತ್ತಲೆಡಹಿ ಕೆಡೆದು
ಒಡೆದು ಮೊಣಕ್ಕೆ ಕಾಲ್ಗಳತಿಭಯರಸವನೆಯ್ದೆ
ಯೆಡೆಗೊಂಡ ಚಿತ್ತದಿಂ ಹೊಱಗನಾಲಿಸದೆ ದುಡು
ದುಡನೋಡಿ ಬರುತಿರ್ಪ ಬೇಡನಾಕಾರಮಂ ನೋಡಿದಂ ರೂಢೀಶನು.

ಕೊಬ್ಬಿ ಬೆಳೆದ ವರಾಹನಿರಲಾಗದೇ ಕಾಡೊ
ಳಬ್ಬರಿಸಿ ನುಡಿವೆಯದಜೆಂ ಬೇಡವಡೆಗೆ ಬ
ಪ್ಪುಬ್ಬಸದೇನೋ ನೀನೋಡಿಹೋಹುದಕೆ ಕಾರಣವಾವುದೆಲವೊ ಎನಲು
ಉಬ್ಬಿ ಮುಂಗುಡಿವಿದು ಕಡುಕೈದ ಶಬರರೊಳ
ಗೊಬ್ಬರುಳಿಯದ ತೆಱದಿ ಕೊಂದಿಕ್ಕಿ ನಾಯ್ಗಳಂ
ಗಬ್ಬವಿಕ್ಕಿಸಿದ ರಕ್ಕಸವಂದಿ ತಾನೆ ಹೇಳಿತ್ತು ನಾನೇಕೆಂದನು

ಎಲೆ ದೇವ ಶಬರಾರಿಯಿದೆ ನೋಡು ನೋಡು ಮ
ತ್ತೆಲೆ ದೇವ ಮಲೆವ ವೀರರ ಮಾರಿಯಿದೆ ನೋಡು
ಎಲೆ ದೇವ ಕುನ್ನಿಗಳ ಗುನ್ನವಂ ಕೊಂಬ ಸತ್ವಸಮರ್ಥ ಮೃತ್ಯುರೂಪು
ಎಲೆ ದೇವ ಕತ್ತಲೆಯ ಮೊತ್ತ ಹರಣಂಬಡೆದು
ದೆಲೆ ದೇವ ತರಣಿಕುಲ ನೀನು ಕೊಲುವೆಡೆಗೆ ತಾಂ
ಗೆಲುವೆನೆಂಬಿ ಭರದಿ ಹಂದಿಯಿದೆ ನೋಡೆನುತ್ತಿರ್ದರಮತಾ ಬೇಡರು
ಕೂಡೆ ಬೇಡರ ಮೊತ್ತವುಲಿದು ಬೊಬ್ಬಿಕ್ಕಲದು

ದಾಡೆಗುಟ್ಟುತ್ತ ಧಿಕ್ಕರಿಸಿ ಕೆಕ್ಕರಿಸುತ್ತ
ಲೋಡುತ್ತ ಘುಡುಘುಡೆಂದುಲಿಯೆ ಬಱಸಿಡಿಲ ಬಳಗಂ ಮೊಳಗಿದಂತಾಗಲು
ಈಡಿಱಿದು ಶಬರಸಂಕುಳವ ಸೀಳುತ್ತಲತಿ
ಝಾಡಿಸುತ ಕದಳಿವೆನದೊಳು ಸೂನಿಗೆಯ ಬಂಡಿ
ಯೋಡಿದಂತಾಗೆ ಮರಳಿತ್ತು ಮಂದಿಯ ಕೆದಱೆ ಹಿಂದೆ ಮುಗುಳ್ದಾಲಿಸುತ್ತ

ಮಸೆವ ದಾಡೆಯ ಕುಡಿಗಳಿಂದ ಕಿಡಿ ಸುರಿಯೆ ಘೂ
ರ್ಮಿಸುವ ಮೂಗಿಂದ ಕರ್ಭೊಗೆ ನೆಗೆಯೆ ಮುನದು ನಿ
ಟ್ಟಿಸುವ ಕೆಂಗಣ್ಣ ಕಡೆಯಿಂದ ದಳ್ಳುರಿ ಸೂಸೆ ಬಲಿದ ಕೊರಳೊಲೆದ ಮುಸುಡು
ಕುಸಿದ ತಲೆ ನೆಗೆದ ಬೆನ್ ನಟ್ಟ ರೋಮಾಳಿ ಮೆ
ಳ್ವಿಸಿದ ಬಾಲಂ ರೌದ್ರಕೋಪಮಂ ಬೀಱೆಗ
ರ್ಜಿಸಿ ಬೀದಿವರಿದು ತೊತ್ತಳದುಳಿದು ಕೊಂದು ಕೂಗಿಡಿಸಿತ್ತು ಲುಬ್ಧಕರನು

ಇದ್ದ ಬೇಡರನೆಯ್ದೆ ಕೆಡಹಿದಡೆ ರಥದ ಮೇ
ಲಿದ್ದು ಕೋಪಾಟೋಪದಿಂದ ಕರತಳವ ಮಾ
ಱುದ್ದಿ ಕೋದಂಡಮಂ ಸೆಳೆದು ಶರಮೂಡಿಗೆಯ ಮಡಲಿಱಿದು ಕೈಹೊಡೆಯನು
ತಿದ್ದಿ ನಾರಿಯ ನೀವಿ ಮಿಡಿದು ಬಾಗಿದ ಕೊಪ್ಪಿ
ನಿದ್ದೆಸೆಯನಾರ್ದೆದು ನೆಱೆಮೃತ್ಯುದೇವತೆಗೆ
ಬಿದ್ದನಿಕ್ಕುವೆನೆಂದು ಭೂವಲ್ಲಭಂ ನುಡಿಯೆ ದಿಗುಪಾಲರಳವಳಿದರು

ಗರಳಗೊರಳವನರಳ ಸರಳಂಗೆ ಮುನಿವಂತೆ
ಯಿರುಳ ತಿರುಳಿನ ಹೊರಳಿಗಾ ತರಣಿ ಕೆರಳ್ವಂತೆ
ಸರಳ ತೆರಳಿಕೆಗೆ ಮರಳಿತು ಕರುಳ ಸುರುಳಿಯೊಳು ಹೊರಳುತ್ತ ಬೀಳುತ್ತಲು
ಹುರುಳಳಿದುದುರವೊಡೆದು ಸರಳುರ್ಚೆ ನರಳುತ್ತ
ತೊರಳೆಯಡಸಲು ಮೂಗನರಳಿಸೆಚ್ಚಂಬ ಹೊ
ತ್ತುರುಳ್ವ ಕಂಬನಿಯಿಂದ ತರಳಚಿತ್ತದ ಹಂದಿ ಮರಳಿ ಕಾನನಕೆಯ್ದಿತು



ಪುದಿಯ ಗಿಡುವಿನೊಳು ಮಡುವಿನೊಳು ಬೆಟ್ಟದೊಳು ಘ
ಟ್ಟದೊಳು ಸರುವಿನೊಳು ದರುವಿನೊಳು ಹಳ್ಳದೊಳು ಕೊ
ಳ್ಳದೊಳು ಬೆಳೆದಿಱುಬಿನೊಳು ತುಱುಬಿನೊಳು ಸಂದಿಯೊಳು ಗೊಂದಿಯೊಳು ಹೊಕ್ಕುಮಿಕ್ಕು
ಇದಿರೊಳೊಡ್ಡಿದ ಮರಂ ಮುರಿಯೆ ಮೆಳೆಯೊಡೆಯೆ ಮೃಗ
ಬೆದಱಿ ಕೆದಱಿ ಧರೆ ಕಳಿದೋಡುವೆಕ್ಕಲನನ
ಟ್ಟದನಬುಜಸಜಕುಲಲಾಮನರಿ ಭೂಪಾಲದರ್ಪಸರ್ಪಮಯೂರನು

**ಸೂಚನೆ :**

ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯಂ ಯಿಂದ ಆಯ್ದ ಭಾಗ ಷಷ್ಠ ಸ್ಥಲಂನಲ್ಲಿ ಮಾಯಾವರಹ ಬೇಟೆ ಪ್ರಸಂಗ.

ಸಂಪಾದಕರು : ಎನ್. ಬಸವಾರಾಧ್ಯ

ಪಂಡಿತ ಎಸ್. ಬಸಪ್ಪ

# ಫೆಡಂಭೂತಗಳ ವಕ್ತಾರರಾಗಿ....

**– ಕೃಪಾಕರ ಮತ್ತು ಸೇನಾನಿ**

'ನೀವು ಕಾಡುನಾಯಿಗಳನ್ನೇ ಏಕೆ ಆಯ್ಕೆ ಮಾಡಿಕೊಂಡಿರಿ?' ನಮಗಿದು ಪದೇ ಪದೇ ಎದುರಾಗುವ ಪ್ರಶ್ನೆ.

'ಹೌದಲ್ಲ.. ಕಾಡುನಾಯಿಗಳೇ ಏಕೆ?' ಎಂದು ನಮಗೂ ಅನಿಸಿದ್ದಿದೆ.

ಸಮಸ್ಯೆ ಎಂದರೆ ಈ ಪ್ರಶ್ನೆಗೆ ಸರಳವಾಗಿ, ತಾತ್ವಿಕವಾಗಿ ಉತ್ತರಿಸಲು ನಮಗೆ ಸಾಧ್ಯವೇ ಇಲ್ಲ. ಒಂದೆರಡು ಸಾಲಿನಲ್ಲಿ ಉತ್ತರಿಸಲು ಪ್ರಯತ್ನಿಸಿದರೆ ಶುದ್ಧ ಮೂರ್ಖರಾಗಿ ಹಾಸ್ಯಾಸ್ಪದವಾಗಿ ಕಾಣುವ ಸಾಧ್ಯತೆಗಳೇ ಹೆಚ್ಚು.

ಏಕೆಂದರೆ ಈ ಕಾಡುನಾಯಿಗಳು ತಮ್ಮ ಗೌಪ್ಯ ಬದುಕಿನ ರಹಸ್ಯಗಳನ್ನು ಸುಲಭವಾಗಿ ಬಿಟ್ಟುಕೊಡುವುದೇ ಇಲ್ಲ. ಬೇಟೆಯ ಬೆನ್ನುಹತ್ತಿದಾಗ ಗಾಳಿಯಲ್ಲಿ ಗಾಳಿಯಾಗಿ ಕರಗಿ ಹೋಗುವ ಇವುಗಳನ್ನು ಹಿಂಬಾಲಿಸುವುದೇ ಕಷ್ಟ. ಇದಲ್ಲದೆ ತಮ್ಮನ್ನು ಕುರಿತು ಸಾಕ್ಷ್ಯಚಿತ್ರ ನಿರ್ಮಿಸಲು ಆಗಮಿಸಿದ ವಿಶ್ವದ ಅಗ್ರಗಣ್ಯ ಚಿತ್ರ ನಿರ್ಮಾಪಕರ ಭಗೀರಥ ಪ್ರಯತ್ನಗಳನ್ನೆಲ್ಲಾ ವಿಫಲಗೊಳಿಸಿ ನಿರಾಶೆ ಮೂಡಿಸಿದ್ದು ಸಹ ಅಪರಾಧವೆ. ಇವ್ಯಾವುವೂ ಒಪ್ಪುವಂತವಲ್ಲ..! ಕಾಡಿನ ಕಾಲುದಾರಿಗಳು ಕೂಡುವೆಡೆ ಸಾಮೂಹಿಕ ಮಲ ವಿಸರ್ಜನೆ ಮಾಡಿ, ತಮ್ಮ ಸಾಮ್ರಾಜ್ಯದ ಗಡಿಯನ್ನು ಗುರುತು ಮಾಡುವುದು ಅಥವಾ ಇದೇ ರೀತಿಯ ಅನೇಕ ಅಸಭ್ಯ ನಡವಳಿಕೆಗಳನ್ನು ಬೆಳೆಸಿಕೊಂಡಿರುವ ಈ ಕಾಡುನಾಯಿಗಳು ಅಭ್ಯಸಿಸಲು ಯೋಗ್ಯವಾದ ಜೀವಿಗಳೆನಿಸುವುದಿಲ್ಲ.

ಹಾಗೆ ನೋಡಿದರೆ ಈ ಕಾಡುನಾಯಿಗಳು ಒಂದಿಷ್ಟೂ ಕರುಣೆಯಿಲ್ಲದ ಸರಣಿ ಕೊಲೆಗಾರರಂತೆ ಕಾಣತೊಡಗುತ್ತವೆ. ಜಿಗಿದು ಓಡುವ ಜಿಂಕೆಗಳ ತೊಡೆಗಳನ್ನು ಗರಗಸದಂತೆ ತಮ್ಮ ಹರಿತವಾದ ಹಲ್ಲುಗಳಿಂದ ಹರಿದು, ಅವಿನ್ನೂ ಸಾಯುವ ಮುನ್ನವೇ ತಮ್ಮ ಊಟವನ್ನು ಶುರುಮಾಡಿರುತ್ತವೆ. ಖಂಡಿತವಾಗಿ ಇದು ಸಭ್ಯ ನಡವಳಿಕೆಯಲ್ಲ.

ಇಂತಹ ರಕ್ತಸಿಕ್ತ ಚರಿತ್ರೆಯ ಕಾಡು ನಾಯಿಗಳನ್ನು ನಾವು ಹಚ್ಚಿಕೊಂಡಿದ್ದೇಕೆ? ಅವುಗಳ ಜಾಡಿನಲ್ಲಿ ಅಲೆಯುತ್ತಾ ಬದುಕಿನ ಅರ್ಧಭಾಗವನ್ನೇ



ಕಳೆದುದನ್ನು ನೆನಸಿಕೊಂಡಾಗಲಂತೂ ನಮಗೇ ಅಚ್ಚರಿಯಾಗುತ್ತದೆ.

ಕಾಲಾಂತರದಲ್ಲಿ ಕಾಕತಾಳೀಯವಾಗಿ ಸಂಭವಿಸುವ ಘಟನಾ ಸರಣಿಗಳು ಮನಸ್ಸಿನ ಮೇಲೆ ಬೀರುವ ಪರಿಣಾಮ ಕೆಲವೊಮ್ಮೆ ಪೆಡಂಭೂತಗಳ ಪರವಾಗಿಯೆ ವಕಾಲತ್ತು ವಹಿಸುವಂತೆ ಪ್ರೇರೇಪಿಸಿದರೆ ಅಚ್ಚರಿಯೇನಿಲ್ಲ. ಎಲ್ಲ ಕತೆಗಳಿಗೂ ಮತ್ತೊಂದು ಮುಖವಿರುತ್ತದೆ. ಹಾಗೆಂದು ಯೋಚಿಸುವುದಾಗಲಿ, ನಂಬುವುದಾಗಲಿ ಬಹಳ ಸುಲಭ. ಆದರೆ ಅದರ ಸತ್ಯಾಸತ್ಯತೆಗಳನ್ನು ಅರಿಯಲು ನೀವೆ ಅನ್ವೇಷಣೆಯಲ್ಲಿ ತೊಡಗಿಸಿಕೊಂಡಾಗ ಹಾದಿ ಕಠಿಣವಾಗುತ್ತದೆ. ಈ ಅನ್ವೇಷಣೆಗಳು ನಿಮ್ಮ ಇಡೀ ಜೀವಿತಾವಧಿಯನ್ನೇ ಕಬಳಿಸಿದರೆ ಆಶ್ಚರ್ಯವೇನಿಲ್ಲ. ನೀವು ಆ ಹಾದಿಯ ಪ್ರತಿ ಕ್ಷಣಗಳನ್ನು ಆನಂದಿಸಲು ಸಾಧ್ಯವಾದರೆ ಮಾತ್ರ ಪಯಣ ಆಹ್ಲಾದಕರವಾಗಿರುತ್ತದೆ. ಹಾಗೂ ಈ ಪ್ರಯತ್ನದಲ್ಲಿ ತೊಡಗಿಸಿಕೊಳ್ಳುವ ಮುನ್ನ ತಲೆಕೆಟ್ಟವರೆಂದು ಸಮಾಜ ತೀರ್ಮಾನಿಸಿಬಿಟ್ಟರೆ ನಿಮ್ಮ ಕೆಲಸ ಮತ್ತಷ್ಟು ಸುಗುಮವಾಗಿ ಸಾಗುತ್ತದೆ.

ನಮ್ಮ ಕಾಡಿನ ದಿನಗಳು ಆರಂಭಗೊಂಡಿದ್ದು ತಮಿಳುನಾಡಿನ ಮದುಮಲೈ ಅರಣ್ಯದಲ್ಲಿ ಕಾಡಿನ ನಡುವೆ ಹರಿದಿದ್ದ ಮೊಯಾರ್ ನದಿಯ ಬದಿಯಲ್ಲಿದ್ದ ಪುಟ್ಟ ಮನೆಯೊಂದನ್ನು ಅರಣ್ಯ ಇಲಾಖೆ ನಮಗೆ ನೆಲೆಸಲು ನೀಡಿತ್ತು. ನೀರಿಗೆ ಸಂಬಂಧಿಸಿದ ಪ್ರತಿ ಕರ್ತವ್ಯಗಳಿಗೂ ನಾವು ಮೋಯಾರ್ ನದಿಗಿಳಿಯಬೇಕಿತ್ತು. ನಾವು ಬೆಳಗಿನ ಜಾವದ ನಸುಗತ್ತಲಿನಲ್ಲಿ, ಕಾಲುದಾರಿಯಲ್ಲಿ ಎಡವುತ್ತಾ ಸಾಗಿ, ನದಿ ತಲುಪುವ ವೇಳೆಗಾಗಲೇ ಕಾಡುಕುರುಬರ ಹೆಂಗಸರು ಪಾತ್ರೆ ಉಜ್ಜುತ್ತಾ ನೀರಿಗೆ ಗಾಳ ಎಸೆದು ಬಂಡೆಗಳ ಮೇಲೆ ಕುಳಿತಿರುತ್ತಿದ್ದರು. ಹೊಳೆಯುತ್ತಿದ್ದ ಕಪ್ಪು ಬಂಡೆಗಳ ನಡುವೆ ನುಸುಳಿ ಹರಿಯುತ್ತಿದ್ದ ಮೋಯಾರ್ ನದಿ ಅದ್ಭುತವಾಗಿತ್ತು. ನಾವೆಂದು ಅಷ್ಟು ಸುಂದರವಾದ ನದಿಯಂಚಿನ ಕಾಡನ್ನು ನೋಡಿರಲಿಲ್ಲ. ನದಿಯ ದಂಡೆಯ ಇಳಿಜಾರಿನಲ್ಲಿ ದೈತ್ಯಾಕಾರವಾಗಿ ಬೆಳೆದಿದ್ದ ಮರಗಳಿದ್ದವು. ಅಲ್ಲಲ್ಲಿ ದಟ್ಟವಾಗಿ ಅರವತ್ತು ಎಪ್ಪತ್ತು ಅಡಿ ಎತ್ತರಕ್ಕೆ ಬೆಳೆದಿದ್ದ ಬಿದಿರಿನ ಮೆಳೆಗಳು ನದಿಯತ್ತ ಬಾಗಿ, ಬೀಸುವ ಗಾಳಿಗೆ ತೂಗುತ್ತಿದ್ದವು. ಕಾಡಿನ ಮೇಲ್ಚಾವಣಿಯಲ್ಲಿ ಕೆಂದಳಿಲುಗಳು ಮರದಿಂದ ಮರಕ್ಕೆ ರೆಂಬೆಯಿಂದ ರೆಂಬೆಗೆ ಹಾರುತ್ತಿದ್ದ ನೋಟ ಮನಮೋಹಕವಾಗಿರುತ್ತಿತ್ತು. ನೂರಾರು ವರ್ಷಗಳಷ್ಟು ಹಳೆಯದಾದ ಕಾಡು ಮಾವಿನ ಮರಗಳು, ಅವುಗಳ ರೆಂಬೆಗಳನ್ನೇರಿ ಕುಳಿತ

ಆರ್ಕಿಟ್ ಗಿಡಗಳು ಇನ್ಸ್ಟಾಲೇಷನ್ ಆರ್ಟ್‌ನಂತೆ ಕಾಣುತ್ತಿದ್ದವು. ಉಳಿದಂತೆ ಮುಗಿಲೆತ್ತರದ ಬೇಟೆ, ನಂದಿ, ಮತ್ತಿಮರಗಳ ಸೊಬಗು ಪ್ರತಿ ಕ್ಷಣ ಉಲ್ಲಾಸ ಮೂಡಿಸುತ್ತಿತ್ತು. ಬೆಳಗಿನ ಮಂಜಿನಲ್ಲಿ ಒಮ್ಮೊಮ್ಮೆ ಕಂಡು ಅದೃಶ್ಯವಾಗುತ್ತಿದ್ದ ಕಾಡಾನೆಗಳು, ಕಾಡೆಮ್ಮೆಗಳು.. ಎಷ್ಟೋ ಮಂದಿ ದೇವರ ಪಟಕ್ಕೆ ವಂದಿಸಿ ತಮ್ಮ ದಿನಚರಿ ಶುರುಮಾಡಿದರೆ, ಮೋಯಾರ್ ನದಿಯ ಈ ಚಿತ್ರಣದೊಂದಿಗೆ ನಮ್ಮ ದಿನ ಆರಂಭಗೊಳ್ಳುತ್ತಿತು. ಹಾಗಾಗಿ ಈ ಎಲ್ಲಾ ದೃಶ್ಯಾವಳಿಗಳು ನಮ್ಮ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದಂತಿವೆ.

ಒಂದು ದಿನ ಮುಂಜಾನೆ ನದಿಯಿಂದ ಹೊರಬರುವಾಗ ದಡದ ಮತ್ತೊಂದು ಬದಿಯಿಂದ ವಿಚಿತ್ರವಾದ ಸದ್ದು ಕೇಳಿ ಬಂತು. ಯಾವುದೋ ಗೊರಸಿನ ಸದ್ದು ಅದು ನಮ್ಮತ್ತಲೇ ಬರುತ್ತಿತ್ತು. ನಮಗೇನು ಕಾಣಲಿಲ್ಲ. ನೆಲಮಟ್ಟದಲ್ಲಿದ್ದ ಪೊದರುಗಳು ಅಲ್ಲಿ ದಟ್ಟವಾಗಿದ್ದವು. ಸ್ವಲ್ಪ ಹೊತ್ತಿನಲ್ಲಿ ಹುಲ್ಲುಗಳ ನಡುವಿನಿಂದ ಜಿಂಕೆಯ ಕೊಂಬು, ಬಳಿಕ ಜಿಂಕೆಯ ತಲೆ ಗೋಚರಿಸಿತು. ಅತ್ತಿತ್ತ ನೋಡಿದ ಅದು ಚಿಮ್ಮಿ ಓಡಿ, ಮತ್ತೆ ನಿಂತಿತು. ಅದರ ಏದುಸಿರು ನಮಗೆ ಕೇಳಿಸುವಂತಿತ್ತು. ಮತ್ತೆ ನಿಧಾನವಾಗಿ ಹಾರಿ ಓಡಲಾರಂಬಿಸಿತು. ಅದು ಗಿಡಬಳ್ಳಿಗಳನ್ನು ಹಾರಿ ಇಳಿದು ಓಡುತ್ತಿದ್ದಾಗ ಅದರ ಗೊರಸುಗಳು ಒದ್ದೆಯ ನೆಲದಲ್ಲಿ ಭಾರವಾಗಿ ಇಳಿಯುತ್ತಿದ್ದ ಸದ್ದು ಕೇಳುತ್ತಿತ್ತು. ನದಿಯ ದಡದಂಚಿನಲ್ಲಿ ಓಡಿ, ಕಾಡಿನಲ್ಲಿ ಮರೆಯಾದ ಆ ಜಿಂಕೆಯನ್ನು ನಾವು ಕಂಡಿದ್ದು ಕೆಲವು ಕ್ಷಣಗಳು ಮಾತ್ರ. ಮರುಕ್ಷಣವೇ ಜಿಂಕೆ ಕಾಣಿಸಿಕೊಂಡ ಸ್ಥಳದಿಂದ ಚಲಿಸುವ ಬೆಂಕಿಯ ಚೆಂಡುಗಳಂತೆ ಏನೋ ಅವತರಿಸಿ ಮಾಯವಾಗುತ್ತಿದ್ದವು. ಆ ಕೆಂಪು ಬಣ್ಣದ ಜೀವಿಗಳು ತಮಗಿಂತ ಎತ್ತರವಿದ್ದ ಪೊದೆಗಳನ್ನು ಹಾರುತ್ತಾ ಬಂದಾಗ, ಇಬ್ಬನಿಯಿಂದ ತೋಯ್ದಿದ್ದ ಅವು ಹೊಳೆಯುತ್ತಿದ್ದವು. ನದಿಯ ದಡಕ್ಕೆ ಬಂದು ಏನೋ ತಪಾಸಣೆ ಮಾಡಿ, ನಮ್ಮನ್ನು ಗಮನಿಸಿ ಹಿಂದಿರುಗಿ ಕಾಡಿನಲ್ಲಿ ಮರೆಯಾದ ಪ್ರಾಣಿಯೊಂದನ್ನು ನಾವು ನೋಡಿದೆವು. ನಾವು ಕಂಡಿದ್ದನ್ನೆಲ್ಲಾ ಒಟ್ಟುಗೂಡಿಸಿ, ಆಲೋಚಿಸಿ, ನೋಡಿದ ಬಳಿಕ ಕಾಡುನಾಯಿಗಳು ಬೇಟೆಯಲ್ಲಿರುವುದು ತಿಳಿಯಿತು. ಕಣ್ಮುಚ್ಚಿ ಕಣ್ಬಿಡುವ ಹೊತ್ತಿಗೆ ಇದೆಲ್ಲಾ ಮುಗಿದು ಹೋಗಿತ್ತು. ಆದರೂ, ಇಂದಿಗೂ ಆ ಚಿತ್ರಣ ನಮ್ಮ ಮನಸ್ಸಿನಲ್ಲಿ ಮಾಸಿಲ್ಲ. ಅದು ನಮ್ಮ ನೆನಪಿನಿಂದ ಇಂದಿಗೂ ಮರೆಯಾಗಿಲ್ಲ. ಆ ಸಮಯದಲ್ಲಿ ಮೂಡಿದ ಉಳಿದ ಸದ್ದುಗಳನ್ನು ಮಾತ್ರ ನಾವು ನೆನಪಿಸಿಕೊಳ್ಳಲು



ಸಾಧ್ಯವಾಗುತ್ತಿಲ್ಲ. ಬಹುಶಃ ಆಗಿನ್ನೂ ಕಾಡಿನ ಭಾಷೆಗಳಿಗೆ ನಮ್ಮ ಕಿವಿಗಳು ತೆರದುಕೊಂಡಿರಲಿಲ್ಲ.

ಆ ದೃಶ್ಯವನ್ನೇ ಮೆಲಕು ಹಾಕುತ್ತಾ ನಮ್ಮ ಕೊಠಡಿಗೆ ಹಿಂದಿರುಗುತ್ತಿದ್ದಾಗ ಆದಿವಾಸಿಗಳಿಬ್ಬರು ಅವಸರದಲ್ಲಿ ಎಲ್ಲಿಗೋ ಹೋಗುತ್ತಿದ್ದುದ್ದನು ನೋಡಿದೆವು. ಕೆಲವು ಕ್ಷಣಗಳ ಅನಂತರ ಫಾರೆಸ್ಟರೊಬ್ಬರು ಓಡಿ ಬರುತ್ತಿರುವುದು ಕಂಡಿತು. ಲುಂಗಿಯನ್ನು ಮೇಲೆತ್ತಿ ಕಟ್ಟುತ್ತಾ ಕತ್ತಿ ಮತ್ತು ಚೀಲ ತರುವಂತೆ ತನ್ನ ಮಗನಿಗೆ ಕೂಗಿ ಹೇಳುತ್ತ ಗಡಿಬಿಡಿಯಲ್ಲಿ ಕಾಡಿನ ಕಡೆ ಹೊರಟಿದ್ದರು. ಏನೆಂದು ಕೇಳಿದರೆ, ಕೆನ್ನಾಯಿಗಳು ಜಿಂಕೆ ಹಿಡಿದ ಶಬ್ದ ಕೇಳಿಬಂತೆಂದು, ಕಾಡು ಕುರುಬರಿಗಿಂತ ಮುಂಚೆ ಅಲ್ಲಿಗೆ ತಲುಪದಿದ್ದರೆ ಅನಾಹುತವಾಗುವುದೆಂದು ತಿಳಿಸಿದರು. ಏನು ಶಬ್ದ. ಏಕೆ ಇಷ್ಟೆಲ್ಲ ಅವಸರ ನಮಗೆ ಅರ್ಥವಾಗಲಿಲ್ಲ. ಆದರೆ ಆ ದಿನಗಳಲ್ಲಿ ನಮಗಿದ್ದ ಅಪರಿಮಿತ ಕುತೂಹಲ ಯಾವುದನ್ನು ನಿರ್ಲಕ್ಷಿಸಲು ಬಿಡುತ್ತಿರಲಿಲ್ಲ.

ಓಡುತ್ತಿದ್ದ ಫಾರೆಸ್ಟರ್‌ನ ಹೆಜ್ಜೆಯನ್ನು ಹಿಂಬಾಲಿಸಿದೆವು. ನಮಗಿಂತ ಎರಡು ಪಟ್ಟು ವಯಸ್ಸಾಗಿದ್ದ ಆ ದಢೂತಿ ಫಾರೆಸ್ಟರ್ ಮಗನೊಂದಿಗೆ ನದಿಯ ಬಂಡೆಗಳನ್ನು ಮಂಗಗಳಂತೆ ಹಾರುತ್ತಿದ್ದರು. ಕಾಡಿಗೆ ಬೆಂಕಿ ಬಿದ್ದಾಗಲು ಅವರು ಅಷ್ಟು ಅವಸರದಿಂದ ವರ್ತಿಸಿದ್ದು ನಮಗೆ ನೆನಪಿರಲಿಲ್ಲ. ವೇಗವನ್ನು ಕಾಯ್ದುಕೊಂಡು ಅವರನ್ನು ಹಿಂಬಾಲಿಸುವುದು ನಮಗೆ ಸುಲಭವಾಗಿರಲಿಲ್ಲ. ದಾರಿತಪ್ಪಿ ಕೆಸರಿಗಿಳಿದು ಹೇಗೋ ಸಾವರಿಸಿಕೊಂಡು ತುಸುದೂರ ಸಾಗಿದ ಬಳಿಕ, ಫಾರೆಸ್ಟರ್ ಸೇರಿದಂತೆ ಹತ್ತಾರು ಮಂದಿ ವೃತ್ತಾಕರದಲ್ಲಿ ನೆರೆದು ನೆಲಕ್ಕೆ ಮುಖಮಾಡಿ ಯಾವುದೋ ಕೆಲಸದಲ್ಲಿ ತೊಡಗಿದ್ದಿದ್ದು ಕಂಡಿತು. ಅವರ ಕೆಲಸದಲ್ಲಿ ಗಡಿಬಿಡಿಯಿತ್ತು. ಅವಸರವಿತ್ತು.

ಅದು ಬೆಚ್ಚಿ ಬೀಳುವ ದೃಶ್ಯ. ಕೆಲವೇ ನಿಮಿಷಗಳ ಹಿಂದಷ್ಟೇ ನಮ್ಮ ಕಣ್ಣೆದುರಿಗೆ ಚಿಮ್ಮಿ ಮಾಯವಾಗಿದ್ದ ಜಿಂಕೆ ನೂರೆಂಟು ಚೂರುಗಳಾಗಿ ಅವರೆಲ್ಲರ ಚೀಲಗಳನ್ನು ಸೇರುತ್ತಿತ್ತು. ಇಡೀ ದೃಶ್ಯ ದಾರುಣವಾಗಿ ಕಂಡರೂ ನಾವು ಅಸಹಾಯಕರಾಗಿದ್ದೆವು. ಆದರೆ ಅಲ್ಲಿ ಜರುಗಿದ್ದೇನೆಂದು ನಮಗೆ ಸ್ಪಷ್ಟವಾಗಿ ತಿಳಿಯಲಿಲ್ಲ. ಆಗಿನ್ನು ನಾವು ಕಾಡುನಾಯಿಗಳನ್ನು ಅರ್ಥಮಾಡಿಕೊಂಡಿರಲಿಲ್ಲ. ಅವುಗಳ ಕಥೆಯನ್ನೂ ಕೇಳಿಸಿಕೊಂಡಿರಲಿಲ್ಲ.

ಕೆನ್ನಾಯಿ ಅಥವಾ ಕಾಡುನಾಯಿಗಳು ಪಕ್ಕಾ ಕಾಡುಜೀವಿಗಳು. ನಾಚಿಕೆ ಸ್ವಭಾವದ ಅವು ಊರುಕೇರಿಗಳನ್ನು ಎಂದೂ ಪ್ರವೇಶಿಸುವುದಿಲ್ಲ. ಇವುಗಳಿಗೂ ಸಾಕು ನಾಯಿಗಳಿಗೂ ಯಾವ ಸಂಬಂಧವೂ ಇಲ್ಲ. ಸಾಕು ನಾಯಿಗಳು ರೂಪ ಪಡೆದದ್ದು ತೋಳಗಳಿಂದ.

ದುರದೃಷ್ಟವೆಂದರೆ ಚರಿತ್ರೆಯುದ್ದಕ್ಕೂ ಕಾಡುನಾಯಿಗಳಷ್ಟು ಅಪಾರ ಕಷ್ಟನಷ್ಟಗಳನ್ನು ಅನುಭವಿಸಿದ ಜೀವಿ ಮತ್ತೊಂದಿಲ್ಲ.

ಬ್ರಿಟೀಷರು ಭಾರತಕ್ಕೆ ಕಾಲಿರಿಸಿದಾಗ ಅವುಗಳನ್ನು ನೀಚ ಜೀವಿಗಳೆಂದು ಜರಿದು,. ಕ್ಷುದ್ರ ಜೀವಿಗಳೆಂಬ ಪಟ್ಟ ಕಟ್ಟಿದರು. ತಾವು ಬೇಟೆಯಾಡಿ ಕೊಲ್ಲಬೇಕಾಗಿದ್ದ ಜಿಂಕೆ ಕಡವೆಗಳನ್ನು ಕೆನ್ನಾಯಿಗಳು ತಿಂದು ಮುಗಿಸುತ್ತವೆ ಎಂಬುದು ಬ್ರಿಟೀಷರ ಆತಂಕಕ್ಕೆ ಕಾರಣವಾಗಿತ್ತು. ಹಾಗಾಗಿ ಕಾಡುನಾಯಿಗಳನ್ನು ನಿರ್ನಾಮಗೊಳಿಸಬೇಕೆಂದು ಪಣತೊಟ್ಟು, ಅಧಿಕೃತ ಸರ್ಕಾರಿ ಆಜ್ಞೆಯನ್ನು ಹೊರಡಿಸಿದರು. ಕಾಡುನಾಯಿಗಳನ್ನು ಕೊಲ್ಲುವವರಿಗೆ ಬಹುಮಾನವನ್ನು ಪ್ರಕಟಿಸಿದರು. ವಸಾಹತುಶಾಹಿಗಳ ಈ ಕಾನೂನು 1972ರವರೆಗೂ ಮುಂದುವರೆದಿತ್ತು.

ಬ್ರಿಟೀಷರು ಕಾಡುನಾಯಿಗಳನ್ನು ಬದುಕಲು ಅನರ್ಹವಾದ ರಕ್ತಪಿಪಾಸುಗಳೆಂದು ತೀರ್ಮಾನಿಸಿದ್ದರು. ಬಹುಶಃ ಅವುಗಳ ಬೇಟೆಯ ಶೈಲಿ ಮತ್ತು ಬ್ರಿಟೀಷರ ಅಜ್ಞಾನ ಅದಕ್ಕೆ ಕಾರಣವಾಗಿರಬೇಕು. ಗಾತ್ರದಲ್ಲಿ ಬೀದಿನಾಯಿಗಳಷ್ಟಿರುವ ಅವುಗಳಿಗೆ ತಮಗಿಂತ ಹತ್ತಿಪ್ಪತ್ತು ಪಟ್ಟು ತೂಗುವ ಜಿಂಕೆಗಳನ್ನಾಗಲಿ, ಕಡವೆಗಳನ್ನಾಗಲಿ ಸುಲಭವಾಗಿ ಬೇಟೆಯಾಡಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಗುಂಪಿನಲ್ಲಿ ಕಾರ್ಯಾಚರಣೆ ನಡೆಸುವ ತಂತ್ರ ಅವುಗಳದ್ದು. ಬೇಟೆಯ ಬೆನ್ನುಹತ್ತಿ, ಸುತ್ತುವರಿದು, ವಿವಿಧ ದಿಕ್ಕುಗಳಿಂದ ಏಕಕಾಲದಲ್ಲಿ ಎರಗಿದಾಗ ಬೇಟೆ ಪ್ರಾಣಿಗಳು ರಕ್ತಸ್ರಾವದಿಂದ ಅಸುನೀಗುತ್ತವೆ. ಇವುಗಳ ಬೇಟೆ ಮುಂಜಾನೆ ಅಥವಾ ಮುಸ್ಸಂಜೆಯ ಬೆಳಕಿನಲ್ಲಿ ಜರುಗುವುದರಿಂದ ಕೆಲವೊಮ್ಮೆ ಮನುಷ್ಯನ ಕಣ್ಣಿಗೆ ಗೋಚರಿಸುತ್ತದೆ. ಅದನ್ನು ಕಂಡ ಕಣ್ಣುಗಳಿಗೆ ಕಾಡು ನಾಯಿಗಳ ಬೇಟೆ ಕ್ರೌರ್ಯದಂತೆ ಕಾಣಬಹುದು. ಅಮಾನುಷ ವೆನಿಸಬಹುದು. ಅದರ ಬದುಕುಳಿಯಲು ಅವು ಜಿಂಕೆ ಕಡವೆಗಳನ್ನು



ಬೇಟೆಯಾಡಲೇಬೇಕು. ಅದು ಅವುಗಳ ಆಹಾರಕ್ರಮ ಅಷ್ಟೆ.

ಹುಲಿ ಚಿರತೆಗಳು ಸಹ ಬೇಟೆಯಾಡಿ ಬದುಕುತ್ತವೆ. ಆದರೆ ಅವುಗಳ ಬೇಟೆ ಜರುಗುವುದು ಕತ್ತಲಲ್ಲಿ. ಹಾಗಾಗಿ ಅದು ಹೆಚ್ಚಾಗಿ ಮನುಷ್ಯರ ಗಮನಕ್ಕೆ ಬರುವುದಿಲ್ಲ. ಅಲ್ಲದೆ ಬೇಟೆಯನ್ನು ಕೊಲ್ಲಲು ಹುಲಿ, ಚಿರತೆ ಕಾಡುನಾಯಿಗಳು ತೆಗೆದುಕೊಳ್ಳುವ  ಸಮಯ ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ.

ಈ ವಾದಗಳು ಏನೇ ಇರಲಿ, ನಿಸರ್ಗದಲ್ಲಿ ಬದುಕುಳಿಯುವ ಹೋರಾಟದಲ್ಲಿ ಕ್ರೌರ್ಯ, ಕುತಂತ್ರ, ಅಪರಾಧಗಳೆಂಬ ಪದಗಳಿಗೆ ಅಸ್ತಿತ್ವವೇ ಇರುವುದಿಲ್ಲ ಸಾವು. ಸಾವಷ್ಟೆ. ಸಾವಿನಲ್ಲಿ ಸುಖ ಅಥವಾ ಸೌಂದರ್ಯಗಳಿರುವುದಿಲ್ಲ. ಚಿಗುರೊಡೆದ ಬಳ್ಳಿಗಳನ್ನೊ, ಮೊಳೆತ ಕಾಳುಗಳನ್ನೊ ಕತ್ತರಿಸಿದಾಗ ಅವುಗಳಿಗೆ ಖಂಡಿತವಾಗಿ ಹಿತವೆನಿಸುವುದಿಲ್ಲ. ಮೊಳೆಯುವ ಕಾಳಿಗೂ ಭವಿಷ್ಯದ ಕನಸುಗಳಿರುತ್ತವೆ. ಬೆಳೆದು ಇನ್ನಷ್ಟು ಕಾಳುಗಳನ್ನು ಭೂಮಿಗೆ ಚೆಲ್ಲಿ ಸಸಿಗಳನ್ನು ಹೆರಬೇಕೆಂಬ ಬಯಕೆ ಇದ್ದೇ ಇರುತ್ತದೆ. ಚಿಗುರು, ಬಳ್ಳಿಗೂ ಹೂಬಿಟ್ಟು, ಬೀಜಗಳನ್ನು ಉತ್ಪಾದಿಸುವ ಕನಸನ್ನು ಹೊಂದಿರುತ್ತವೆ. ಸಂತತಿ ಮುಂದುವರೆಸುವುದು ಎಲ್ಲ ಜೀವಿಗಳ ಬದುಕಿನ ಅಂತಿಮ ಗುರಿಯಾಗಿರುತ್ತದೆ. ಹಾಗಾಗಿ ಪ್ರಕೃತಿಯಲ್ಲಿ ಕ್ರೌರ್ಯ, ಕಪಟ, ಮೋಸಗಳೆಂಬ ಅನುಬಂಧಗಳಿರುವುದಿಲ್ಲ. ಅವುಗಳೇನಿದ್ದರೂ ಮಾನವ ಸಮಾಜಕ್ಕೆ ಸೀಮಿತವಾದ, ಭಾವನೆಗಳನ್ನು ಉತ್ತೇಜಿಸುವ ಪದಪುಂಜಗಳು, ಕಾಳುಗಳಾಗಲಿ, ಬಳ್ಳಿಗಳಾಗಲಿ ಬಾಣಲೆಯಲ್ಲಿ ಬೆಂದು ಮಾನವನನ್ನು ಸಂತೃಪ್ತಿಗೊಳಿಸಲು ಅರಳಿದ ಜೀವಿಗಳಲ್ಲ.

ಗಿಡಮರಗಳಿಗೆ ಸಂವೇದನಾವಾಹಕ ಸಾಮರ್ಥ್ಯವಿರುತ್ತದೆ. ಕುಲಬಾಂಧವರು ಎದುರಿಸುತ್ತಿರುವ ಚಾಕು, ಚೂರಿಗಳ ಆಕ್ರಮಣವನ್ನು ನೆರೆಯ ಸಸ್ಯಗಳು ರಾಸಾಯನಿಕ ಭಾಷೆಯಲ್ಲಿ ಗ್ರಹಿಸುತ್ತವೆ. ಅಪಾಯಗಳು ತಮ್ಮತ್ತ ಬರುತ್ತಿರುವುದು ಖಚಿತವಾಗುತ್ತಿದ್ದಂತೆ ಚಡಪಡಿಸುತ್ತವೆ. ಇವೆಲ್ಲಾ ವಿಜ್ಞಾನ ಇತ್ತೀಚಿನ ದಿನಗಳಲ್ಲಿ ಕಂಡುಕೊಳ್ಳುತ್ತಿರುವ ಹೊಸ ಅಧ್ಯಾಯ. ಈ ಹಿನ್ನೆಲೆಯಲ್ಲಿ ನಮ್ಮ ಜ್ಞಾನದ ವ್ಯಾಪ್ತಿ, ಮತ್ತು ನಮ್ಮ ಅನುಕೂಲಕ್ಕೆ ತಕ್ಕಂತೆ 'ಯಾತನೆ, ಪರಿತಾಪ, ತಳಮಳ'ಗಳೆಂಬ ಪದಗಳ ಅರ್ಥಗಳನ್ನು ವ್ಯಾಖ್ಯಾನಿಸಲು ಸಾಧ್ಯ.

ಇಷ್ಟಲ್ಲದೆ, ಕಾಡುನಾಯಿಗಳು ಕಷ್ಟಪಟ್ಟು ಶ್ರಮಿಸಿ ಸಂಪಾದಿಸಿದ ಆಹಾರವನ್ನು

ಕಾಡಿನಲ್ಲಿ, ಕಾಡಿನಂಚಿನಲ್ಲಿ ನೆಲಸಿರುವ ಜನ ಕದ್ದೊಯ್ಯುವುದು ಯುಗಯುಗಾಂತರಗಳಿಂದ ಎಲ್ಲೆಡೆ ನಡೆದು ಬಂದಿರುವ ಪದ್ಧತಿ.

ಇವೇನೇ ಇರಲಿ, ಬ್ರಿಟಿಷರು ಇಂಗ್ಲೆಂಡಿಗೆ ಮರಳಿದ ಬಳಿಕವೂ ಕಾಡುನಾಯಿಗಳ ಮಾರಣಹೋಮ ಮುಂದುವರೆಯಿತು. ಸತ್ಯ ಶೋಧನೆಗೆ ಯಾರೂ ಮುಂದಾಗಲಿಲ್ಲ. ಜನರಾಡುವ ಮಾತೆ ವಿಜ್ಞಾನವಾಗಿ ಉಳಿಯಿತು,. ಹುಲಿಗಳ ಉಳಿವಿಗೆ ಕಾಡು ನಾಯಿಗಳು ಮಾರಕವೆಂದು ವಿಜ್ಞಾನಿಗಳು, ಅರಣ್ಯ ಇಲಾಕೆಯ ಅಧಿಕಾರಿಗಳು ಖಚಿತವಾಗಿ ನಂಬಿದ್ದರು. ಹುಲಿ, ಚಿರತೆ, ಕಾಡುನಾಯಿಗಳೆಲ್ಲ, ಜೀವ ಪರಿಸರದಲ್ಲಿ ಜೊತೆಜೊತೆಯಾಗಿ ಉದಯಿಸಿ ವಿಕಾಸ ಹೊಂದಿದ ಜೀವಿಗಳೆಂಬ ಸಣ್ಣ ಸಂಗತಿ ಯಾರಿಗೂ ತಿಳಿಯಲೇ ಇಲ್ಲ. ಪೂರ್ವಾಗ್ರಹಪೂರಿತವಾಗಿ ನಡೆದ ಈ ಎಲ್ಲ ಘಟನೆಗಳು ಅಪರಾಧವೆಸಗದ ಜೀವಿಯೊಂದನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿತ್ತು.

ಕಾಡು ನಾಯಿಗಳ ಚರಿತ್ರೆಯನ್ನು ಹೇಳುವ ಆವೇಶದಲ್ಲಿ ಮೋಯಾರ್ ನದಿಯ ಬಳಿ ಅಂದು ನಡೆದ ಘಟನೆ ಅರ್ಧಕ್ಕೆ ನಿಂತು ಹೋಯಿತು. ಅಲ್ಲಿ ಫಾರೆಸ್ಟರ್ ಮತ್ತು ಉಳಿದ ಮಂದಿ ಜಿಂಕೆಯ ಬಾಡನ್ನು ಪಾಲು ಮಾಡಿಕೊಂಡು ತಮ್ಮ ಚೀಲಗಳಿಗೆ ತುಂಬಿಕೊಳ್ಳುತ್ತಿದ್ದರು. ಮಾಂಸದ ತುಂಡುಗಳ ಹಂಚಿಕೆಯ ಬಗ್ಗೆ ಅವರ ನಡುವೆ ಅಸಮಾಧಾನಗಳಿದ್ದವು. ಅವುಗಳನ್ನೆಲ್ಲಾ ಬಗೆಹರಿಸಿಕೊಂಡ ಗುಂಪು ವಿಜಯೋತ್ಸಾಹದಿಂದ ತಮ್ಮ ತಮ್ಮ ಮನೆಗಳತ್ತ ಸಾಗಿತು. ಅಲ್ಲೆ ಉಳಿದ ನಾವು ಆತಂಕದಿಂದ ಮರವೊಂದರ ಬದಿಗೆ ಸರಿದು ನಿಂತೆವು. ಸ್ವಲ್ಪ ಹೊತ್ತಿನಲ್ಲಿ ಪೊದರಿನ ಮರೆಯಲ್ಲಿ ಏನೋ ಓಡಾಡಿದಂತಾಯಿತು. ನಾವು ಅಲುಗಾಡದೆ ನಿಂತೆವು. ಹುಲ್ಲಿನೊಳಗಿನಿಂದ ಒಂದು ಕೆನ್ನಾಯಿ ಹೊರಬಂತು. ಅನಂತರ ಇನ್ನೊಂದು ಅನಂತರ ಮತ್ತೊಂದು, ಕೆಲವೇ ನಿಮಿಷಗಳಲ್ಲಿ ಏಳೆಂಟು ಕಾಡುನಾಯಿಗಳು ಬೇರೆ ಬೇರೆ ದಿಕ್ಕಿನಿಂದ ಪ್ರತ್ಯಕ್ಷಗೊಂಡವು. ಅವು ಅತ್ತಿತ್ತ ನೋಡುತ್ತಾ, ದಟ್ಟವಾಗಿ ಹರಡಿದ್ದ ಮನುಷ್ಯರ ವಾಸನೆಯನ್ನು ಗ್ರಹಿಸುತ್ತಾ ನಿಂತವು. ಅವುಗಳ ಮುಖದಲ್ಲಿ ಭಯವಿತ್ತು. ಆತಂಕವಿತ್ತು. ಗೊಂದಲಕ್ಕೆ ಸಿಕ್ಕಿದಂತೆ ಸರಸರನೆ ಅಲ್ಲೆಲ್ಲಾ ಓಡಾಡಲಾರಂಭಿಸಿದವು. ಜಿಂಕೆ ಹಿಡಿದಿದ್ದ ಸ್ಥಳದಲ್ಲಿ ನಿಂತು ಚಡಪಡಿಸಿದವು. ಐವತ್ತು ಮೀಟರ್ ದೂರದಲ್ಲಿ ಮರೆಯಲ್ಲಿ ನಿಂತು ಎಲ್ಲವನ್ನು



ಗಮನಿಸುತ್ತಿದ್ದ ನಮ್ಮನ್ನು ಅವು ನೋಡಿರಲಿಲ್ಲ.

ನಮಗಿನ್ನು ಅಲ್ಲಿ ಏನು ನಡೆಯುತ್ತಿದೆ ಎಂದು ಮನವರಿಕೆಯಾಗಿರಲಿಲ್ಲ. ಕೆನ್ನಾಯಿಗಳನ್ನು ನೋಡುತ್ತಾ ಕಲ್ಲಿನಂತೆ ಅಡಗಿ ನಿಂತಿದ್ದ ನಮಗೆ, ನಮ್ಮ ಎಡಭಾಗದ ಹುಲ್ಲಿನಲ್ಲಿ ಏನೋ ಚಲಿಸಿದ ಅನುಭವವಾಯಿತು.

ಅನಂತರ ಕೆಲವೇ ಕ್ಷಣಗಳಲ್ಲಿ ಆರು ಏಳು ಪುಟ್ಟ ಕಾಡುನಾಯಿಮರಿಗಳು ಹುಲ್ಲೊಳಗಿಂದ ಹೊರಬಂದವು. ಅವುಗಳು ಬಹಳ ಹಸಿದಿದ್ದಂತೆ ಕಾಣುತ್ತಿದ್ದವು. ಇದ್ದಕ್ಕಿದ್ದಂತೆ ನಿಲ್ಲುತ್ತಿದ್ದ ಆ ಚಿಕ್ಕಮರಿಗಳು ಹುಲ್ಲಿನಲ್ಲಿ ಎಡವಿ ಬಿದ್ದು ಮತ್ತೆ ಎದ್ದು ಮಾಂಸದ ವಾಸನೆ ಹಿಡಿದು ಓಡಾಡುತ್ತಿದ್ದವು. ತಮ್ಮ ಊಟ ಕಳುವಾಗಿರುವುದು ಅವುಗಳಿಗೆ ತಿಳಿದಿರಲಿಲ್ಲ. ತಾಯಿ ಕೂಡ ಅವುಗಳೊಂದಿಗಿತ್ತು. ಅದು ಬಂದ ತಕ್ಷಣ ನೇರವಾಗಿ ಜಿಂಕೆ ಮಾಂಸವನ್ನು ಮನುಷ್ಯರು ಹಂಚಿಕೊಂಡ ಜಾಗಕ್ಕೆ ಹೋಯಿತು. ಅದರ ಹೊಟ್ಟೆ ಚಪ್ಪಟೆಯಾಗಿದ್ದು ಅದು ಏನೂ ತಿಂದಿರಲಿಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಬಹುಶಃ ಜನರು ಬಂದು ಕಾಡುನಾಯಿಗಳನ್ನು ಓಡಿಸಿ, ಜಿಂಕೆಯ ಮಾಂಸವನ್ನು ಕಸಿದುಕೊಂಡಿರಬಹುದು. ಈ ನಾಯಿಗಳು ಕಳ್ಳರನ್ನು ನೋಡಿರಬಹುದೆಂದು ನಾವೆಣಿಸಿದ್ದೆವು.

ಆದರೆ ದಶಕಗಳ ಕಾಲ ಕಾಡುನಾಯಿಗಳನ್ನು ಹಿಂಬಾಲಿಸಿದ ಬಳಿಕ ಅಂದು ಮೊಯಾರ್ ನದಿಯ ದಡದಲ್ಲಿ ಜರುಗಿದ್ದೇನೆಂಬುದು ಸ್ಪಷ್ಟವಾಗಿ ಅರಿವಾಯಿತು. ಆಹಾರ ಸಂಪಾದಿಸಿದಾಗ ಸಣ್ಣಮರಿಗಳಿಗೆ ಆದ್ಯತೆ ನೀಡುವುದು ಕಾಡುನಾಯಿಗಳ ಸಂಸ್ಕೃತಿ. ಅವು ಸಂತೃಪ್ತಿಗೊಂಡ ನಂತರವೆ ಗುಂಪಿನ ಉಳಿದ ಸದಸ್ಯರ ಊಟ, ಅವುಗಳ ಸಮಾಜದಲ್ಲಿ ಇದೊಂದು ಕಟ್ಟುನಿಟ್ಟಿನ ಸಂಪ್ರದಾಯ.

ಅಂದು ಜಿಂಕೆಯನ್ನು ಬೇಟೆಯಾಡಿದ್ದ ಕಾಡುನಾಯಿಗಳು ದೂರದಲ್ಲಿದ್ದ ಗುಂಪು ಹಾಗೂ ಅಡಗಿಸಿಟ್ಟಿದ್ದ ಮರಿಗಳನ್ನು ಕರೆತರಲು ಹೋಗಿವೆ. ಅದೇ ಸಮಯದಲ್ಲಿ ಬಂದ ಜನ ಅವುಗಳು ಶಿಕಾರಿ ಮಾಡಿ ಸಂಪಾದಿಸಿದ್ದ ಆಹಾರವನ್ನು ಕದ್ದು ಸಾಗಿಸಿದ್ದಾರೆ. ಹಾಗಾಗಿ ನಾಯಿಗಳಿಗೆ ತಮ್ಮ ಆಹಾರ ಎಲ್ಲಿ ಹೋಯಿತು? ಕದ್ದವರಾರು? ಎಂದು ತಿಳಿದಿರಲಿಲ್ಲ.

ಅನಂತರದ ದೃಶ್ಯ ಮನಕರಗುವಂತಿತ್ತು.

ಅವ್ವನ ಬಾಯೊಳಗೆ ನಾಲಿಗೆ ಚಾಚಿ ಮರಿಗಳು ಆಹಾರಕ್ಕಾಗಿ ಬೇಡುತ್ತಿದ್ದವು. ಕೊಡಲು ಅವಳ ಬಳಿ ಏನೂ ಇರಲಿಲ್ಲ. ಹಸಿದು ಹಣ್ಣಾಗಿದ್ದ ಗುಂಪು ನಿರಾಶೆಗೊಂಡಿತ್ತು. ಆಗ ಏನನ್ನೋ ಹುಡುಕುತ್ತಾ ನಾಯೊಂದು ನಮಗೆ ತೀರ ಸನಿಹ ಬಂದು ನಮ್ಮನ್ನು ಗಮನಿಸಿ ಬೆಚ್ಚಿ, ತಕ್ಷಣ ಅಪಾಯದ ಸೂಚನೆಯನ್ನು ಎಲ್ಲರಿಗೂ ಸಾರಿ ಹೇಳಿತು.

ಮರಿಗಳು ಸೇರಿದಂತೆ ಗುಂಪಿನ ಎಲ್ಲ ನಾಯಿಗಳು ಒಟ್ಟಿಗೆ, ನೇರವಾಗಿ ನಮ್ಮತ್ತ ನೋಡಿದವು. ನಾವು ಕಳ್ಳರಲ್ಲ, ನಿಮ್ಮ ಆಹಾರವನ್ನು ನಾವು ಕದ್ದಿಲ್ಲ. ಎಂದು ಅವುಗಳಿಗೆ ಮನದಟ್ಟು ಮಾಡಿಕೊಡಲು ಅಂದು ಸಾಧ್ಯವೇ ಇರಲಿಲ್ಲ. ಇಂದಿಗೂ ಸಾಧ್ಯವಾಗಿಲ್ಲ.

ಹಸಿದಿದ್ದ ಮರಿಗಳ ಹತಾಶೆ ತುಂಬಿದ ಕಣ್ಣುಗಳು ನಮ್ಮನ್ನು ಇಂದಿಗೂ ಕಾಡುತ್ತವೆ.

ಅವು, ತಮ್ಮ ಮೇಲೆ ಇತಿಹಾಸದುದ್ದಕ್ಕೂ ಮಾನವ ಎಸಗುತ್ತಾ ಬಂದಿರುವ ಪ್ರತಿಯೊಂದು ಪಾಶವಿಕ ಕೃತ್ಯಗಳಿಗೂ ನಮ್ಮನ್ನೇ ಹೊಣೆಗಾರರನ್ನಾಗಿ ಮಾಡಿದಂತೆ ಕಾಣಿಸುತ್ತವೆ.

ಅಲ್ಲಿಂದಾಚೆಗೆ ನಮಗೆ ಹೆಚ್ಚು ಆಯ್ಕೆಗಳಿರಲಿಲ್ಲ. ಈ ಪೆಢಂಭೂತಗಳ ವಕ್ತಾರರಾಗಿ, ವಕಾಲತ್ತುದಾರರಾಗಿ ನಮ್ಮ ಅರ್ಧ ಜೀವನವನ್ನೇ ಮುಡುಪಿಟ್ಟೆವು.

*****



# ಅಜ್ಜಿ ಸಾಬಿಯ ಹುಲಿ ಬೇಟೆ

**– ಬಿಳುಮನೆ ರಾಮದಾಸ್**

ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮೂರಿನಲ್ಲಿ 'ಅಜ್ಜಿ ಸಾಬಿ' ಎಂಬುವವನೊಬ್ಬನಿದ್ದ. ಆತನ ನಿಜವಾದ ಹೆಸರೇನೆಂದು ಯಾರಿಗೂ ತಿಳಿದಿರಲಿಲ್ಲ. ನಾನು ದೊಡ್ಡವನಾದ ಮೇಲೆ ಅವನ ಹೆಸರು ಅಬ್ದುಲ್ ಅಜೀಜ್ ಎಂದು ತಿಳಿಯಿತು. ಅನಕ್ಷರಸ್ಥರ ಬಾಯಲ್ಲಿ ಅಬ್‌ದುಲ್ ಅಜೀಜ್‌ನು ಅಜ್ಜಿ ಸಾಬಿಯಾಗಿದ್ದ. ಅವನ ನಿಜನಾಮವನ್ನು ಉಚ್ಚರಿಸಲು ಜನಗಳಿಗೆ ಕಷ್ಟವಾಗಿದುದ್ದರಿಂದ ಸಂಕ್ಷಿಪ್ತವಾಗಿ ಅಜ್ಜಿಸಾಬಿ ಎಂದು ಅವನನ್ನು ಕರೆಯುತ್ತಿದ್ದರು. ಅಜ್ಜಿ ಸಾಬಿಯು ಆಗುಂಬೆಯಿಂದ ಶಿವಮೊಗ್ಗದವರೆಗೆ ಬಹಳ ಪ್ರಖ್ಯಾತನಾಗಿದ್ದ. ಅಂದರೆ ಅವನು ಕೃಷಿಕನಾಗಿರಲಿಲ್ಲ. ಸಂಗೀತಗಾರನೂ ಆಗಿರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರನೂ ಆಗಿರಲಿಲ್ಲ. ಸಾಹಿತಿಯೂ ಆಗಿರಲಿಲ್ಲ. ಹುಲಿ ಶಿಕಾರಿಯಲ್ಲಿ ಅವನು ನಿಷ್ಣಾತನಾಗಿದ್ದ. ನಮ್ಮ ಹಿರಿಯರು ಹುಲಿಗಳನ್ನು ಮರಸು ಕೂತು ಗುಂಡಿಕ್ಕಿದರೆ ಅಜ್ಜಿ ಸಾಬಿಯು ಹುಲಿಯೊಡನೆ ಚಾಕು ಹಿಡಿದು ಮುಖಾಮುಖಿ ಹೋರಾಟ ಮಾಡಿ ಕೊಲ್ಲುತ್ತಿದ್ದ. ಆತ ಒಂದು ಹುಲಿ ಕೊಂದು ಅದರೊಡನೆ ಸೆಣಸಾಡಿದ. ಕಷ್ಟಗಳನ್ನು ಕೇಳಲು ಜನ ಅವನ ಸುತ್ತಮುತ್ತ ಘೇರಾಯಿಸುತ್ತಿದ್ದರು. ಹುಲಿಕೊಂದ ಕತೆಗಳನ್ನು ಅವನು ಬಹಳ ಸ್ವಾರಸ್ಯವಾಗಿ ಹೇಳುತ್ತಿದ್ದ. ಕೇಳುತ್ತಿದ್ದ ಜನರು ರೋಮಾಂಚಿತರಾಗುತ್ತಿದ್ದರು. ಹುಲಿ ಪರಚಿದ ಗಾಯಗಳು ಅವನ ದೇಹದಲ್ಲಿ ಅಲ್ಲಲ್ಲಿ ಕಲೆಗಳು ಉಳಿದಿದ್ದವು. ಅವನು ಹುಲಿ ಕೊಂದಿದ್ದಕ್ಕೆ ಅವನಿಗೆ ಸಿಗುತ್ತಿದ್ದ ಭಕ್ಷೀಸು ಕೇವಲ ಎರಡು ರೂಪಾಯಿಗಳು. ಅನಂತರ ಹುಲಿಯನ್ನು ಪೇಟೆಯಲ್ಲಿ, ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಿದಾಗ ದನಕರುಗಳನ್ನು ಸಾಕಿದವರು ಸಾರ್ವಜನಿಕರು ಅವನಿಗೆ ನಾಲ್ಕಾಣೆ ಎಂಟಾಣೆ ಕೊಡುತ್ತಿದ್ದರು. ಅವನು ತನ್ನ ಜೀವಿತ ಅವಧಿಯಲ್ಲಿ ಹುಲಿಯೊಡನೆ ಮುಖಮುಖಿ ಹೋರಾಟ ಮಾಡಿ ಹುಲಿಗಳನ್ನು ಕೊಲ್ಲುವ ಕ್ರಿಯೆಗೆ ಹಳೆತಲೆಮಾರಿನ ಜನ ಅವನನ್ನು ಹುಲಿಸಾಬಿ ಎಂದೂ ಕರೆಯುತ್ತಿದ್ದರು.

ಜನ ಜಾನುವಾರಗಳಿಗೆ ಹುಲಿಗಳಿಂದ ತೊಂದರೆ ಇಲ್ಲದಿದ್ದರೆ ಹಣದಾಸೆಗೆ ಹುಲಿಗಳನ್ನು ಕೊಲ್ಲಲು ಅವನು ಇಷ್ಟಪಡುತ್ತಿರಲಿಲ್ಲ. ಯಾರಾದರೂ ಹಳ್ಳಿಯವರು

ತಮ್ಮ ಹಳ್ಳಿಯ ಸಮೀಪದ ಕಾಡಿನಲ್ಲಿ ಒಂದು ಹುಲಿ ಸಂಚರಿಸುತ್ತಿದೆ ಎಂದು, ಅದನ್ನು ಕೊಲ್ಲಬೇಕೆಂದು ಹೇಳಿದರೆ ಅಜ್ಜಿಸಾಬಿ ರೇಗಿ ಅದರಿಂದ ಯಾರಿಗೆ ತೊಂದರೆಯಾಗಿದೆ? ಅದು ನಮ್ಮ ಹಾಗೆ ಬದುಕೋದು ಬ್ಯಾಡವಾ? ಜನಜಾನುವಾರಗಳಿಗೆ ತೊಂದರೆಯಾದರೆ ಹೇಳಿ, ಆಮೇಲೆ ನೋಡುವಾ? ನಿಮ್ಮ ಗದ್ದೆ ತೋಟಕ್ಕೆ ಕಾಡುಕುರಿ, ಜಿಂಕೆ, ಕಾಡುಕೋಣ, ಕಾಡಂದಿ, ಮುಳ್ಳಂದಿ ನುಗ್ಗಿ ಲೂಟಿ ಮಾಡುವುದಿಲ್ಲವಾ? ಅದನ್ನು ತಿನ್ನಲಿಕ್ಕೆ ಹುಲಿ ಇರೋದಲ್ಲವಾ? ಅವು ಜಾಸ್ತಿಯಾದರೆ ನಿಮ್ಮ ಗದ್ದೆ ತೋಟದ ಕತೆ ಏನು? ಎಂದು ಬಿಡುತ್ತಿದ್ದ. ತೀವ್ರ ಬಡತನದಲ್ಲಿದ್ದ ಅಜ್ಜಿಸಾಬಿಯ ಹೇಳಿಕೆ ನೋಡಿ ಜನ ಆಶ್ಚರ್ಯ ಪಡುತ್ತಿದ್ದರು.

ಒಮ್ಮೆ ಅಜ್ಜಸಾಬಿಯ ನಮ್ಮೂರಿನ ಹೋಟೆಲಿನ ಮುಂಗಟ್ಟಿನಲ್ಲಿ ಕೂತು ಅವರಿವರೊಡನೆ ಹರಟೆ ಹೊಡೆಯುತ್ತಿದ್ದ. ಹಳ್ಳಿಯ ಗೌಡರೊಬ್ಬರು ಬಂದು ಅವನೊಂದಿಗೆ ತಮ್ಮ ಎಮ್ಮೆಯೊಂದನ್ನು ಹುಲಿ ಹಿಡಿದಿದೆ ಎಂದೂ ಅದನ್ನು ಕೊಲ್ಲಬೇಕೆಂದು ಕೇಳಿಕೊಂಡರು. ಗೌಡರ ಎಮ್ಮೆ ಇತ್ತಿಚೆಗೆ ಕರು ಹಾಕಿದ್ದು, ಅದು ಭರ್ಜರಿ ಹಾಲು ಕೊಡುತ್ತಿದ್ದು ಅದನ್ನು ಹುಲಿ ಹಿಡಿದು ಗೌಡರು ಬಹಳ ಆತಂಕಕ್ಕೆ ಒಳಗಾಗಿದ್ದರು. ಅಜ್ಜಿಸಾಬಿಯು ತಾಳ್ಮೆಯಿಂದ ಎಮ್ಮೆಯನ್ನು ಎಲ್ಲಿ ಹುಲಿ ಹಿಡಿದಿದೆ? ಹಗಲೋ? ರಾತ್ರಿಯೋ? ಎಂದು ಹುಲಿ ಎಮ್ಮೆಯನ್ನು ಹಿಡಿದ ಸ್ಥಳ ಪುರಾಣವನ್ನು ಕೇಳಿ ತಿಳಿದುಕೊಂಡ. ಹುಲಿ ಎಮ್ಮೆಯನ್ನು ಬಯಲಿನಲ್ಲಿ ಹಗಲು ಹೊತ್ತು ಹಿಡಿದು ಪೊದೆಗಳ ಮರೆಗೆ ಎಳೆದುಕೊಂಡು ಹೋಗಿ ಹಾಕಿತ್ತು. ಸತ್ತ ಎಮ್ಮೆಯನ್ನು ತಿನ್ನಲು ಅದು ರಾತ್ರಿ ಬರಬೇಕಿತ್ತಷ್ಟೆ. ಅಜ್ಜಿ ಸಾಬಿಗೆ ಹುಲಿ ಶಿಕಾರಿ ಮಾಡಲು ಒಪ್ಪಿಗೆ ಏನೋ ಆಯಿತು. ಆದರೆ ಹುಲಿ ಕೊಂದರೆ ಗೌಡರು ಕೊಡುವ ಹಣ ಬಗ್ಗೆ ತೀರ್ಮಾನವಾಗಬೇಕಿತ್ತಷ್ಟೆ. ಈ ಮೊದಲು ಅವನು ಒಂದು ಹುಲಿ ಕೊಂದರೆ ಎರಡು ರೂಪಾಯಿ ಕೂಲಿ ಕೇಳುತ್ತಿದ್ದ. ಈಗ ಆ ದರವನ್ನು ಅವನು ನಾಲ್ಕು ರೂಪಾಯಿಗೆ ಏರಿಸಿದ್ದ. ಅಕ್ಕಿ, ಎಣ್ಣೆ, ಬೇಳೇಕಾಳುಗಳ ಬೆಲೆ ಏರಿದುದ್ದರಿಂದ ಅವನೂ ಹುಲಿ ಕೊಲ್ಲುವ ದರ ಏರಿಸಿದ್ದ. ತನ್ನ ಮನದ ಇಂಗಿತವನ್ನು ಅವನು ಗೌಡರಿಗೆ ಹೇಳಿದ. ಗೌಡರಿಗೆ ದಿಗಿಲಾಯಿತು. ನಾಲ್ಕಾಣೆಯನ್ನೋ ಎಂಟಾಣೆಯನ್ನೋ ಸಾಬಿ ಏರಿಸಿದ್ದರೆ ಒಪ್ಪಿಕೊಳ್ಳುತ್ತಿದ್ದರು. ಎರಡು ರೂಪಾಯಿಯಿಂದ ನಾಲ್ಕು ರೂಪಾಯಿ ನಾಲ್ಕಕ್ಕೆ ಏರಿಸಿದ್ದರಿಂದ ಅವರಿಗೆ ಉಸಿರು ಕಟ್ಟಿದಂತಾಯಿತು. ಅವರು "ನಿನಗೆ ನಾಲ್ಕು ಕೊಡೋ ಬದಲು ಹುಲೀನ ಗುಂಡಿನಿಂದ ಹೊಡೆದು ಕೊಲ್ಲಬಹುದಲ್ಲ?" ಎಂದರು. ಅಜ್ಜಿಸಾಬಿ "ಹಾಗೆ ಮಾಡಿಸ್ವಾಮಿ. ಗುಂಡಿನಾಗೆ ಹೊಡೆದು ಹುಲಿ ಕೊಲ್ಲೋದು ಮರೆಲಿ ನಿಂತು ಅಲ್ಲವಾ? ನಾನು ಪ್ರಾಣವನ್ನು ಪಣಕ್ಕೆ ಇಟ್ಟು ಹುಲಿ ಹತ್ರ ಕುಸ್ತಿ ಮಾಡಿ ಕೊಲ್ಲೋದಲ್ಲವಾ? ನಾನೇದರೂ ಸತ್ತುಹೋದರೆ ನನ್ನ ಹೆಂಡತಿ ಮಕ್ಕಳ ಗತಿ ಏನು? ಅವರು ಉಪವಾಸ ಬೀಳೋದಿಲ್ಲವಾ? ಎಂದ. ಗೌಡರು ಮುಂದಾಲೋಚನೆ ಮಾಡಿ "ಹುಲಿ ಕೊಂದಮೇಲೆ ಹುಲಿ ಮೆರವಣಿಗೆ ಮಾಡುವಾಗ ನಿನಗೆ ಮತ್ತಷ್ಟು ಹಣ ಸಿಗತದಲ್ಲ?" ಎಂದರು. ಸಾಬಿಯು ಗೌಡರಿಗಿಂತ ಮುಂದೆ ಹೋಗಿ ಹೇಳಿದ. "ಈಗ ನೀವು ಇಪ್ಪತ್ತೈದು ರೂಪಾಯಿ ಕೊಡಿ. ಹುಲಿ ಮೆರವಣಿಗೆ ಮಾಡುವಾಗ ಬರುವ ಹಣ ನೀವೆ ತಕ್ಕೊಳ್ಳಿ. ಆಗಬಹುದಾ? ಏನು? ಗೌಡರು ಚಾಪೆ ಕೆಳಗೆ ನುಸುಳಿದರೆ ಸಾಬಿ ರಂಗೋಲಿ ಕೆಳಗೆ ನುಸುಳಿದ್ದ. ಅವರಿಬ್ಬರ ಸಂಭಾಷಣೆ ಕೇಳಿ ಹೋಟೆಲಲ್ಲಿ ಇದ್ದವರೆಲ್ಲರೂ ನಕ್ಕರು. ಕೆಲವರ ಮಧ್ಯಸ್ಥಿಕೆಯಿಂದಾಗ ಅಜ್ಜಿಸಾಬಿ ಹುಲಿ ಕೊಂದರೆ ಮೂರುವರೆ ರೂಪಾಯಿ ಗೌಡರು ಕೊಡಬೇಕೆಂದು ತೀರ್ಮಾನವಾಯಿತು. ಕೂಲಿ ಬಗ್ಗೆ ತಕರಾರು ಬಗೆಹರಿದ ಕೂಡಲೆ ಅಜ್ಜಿ ಸಾಬಿ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಬಾಕುಗಳನ್ನು ಬಿಚ್ಚಿ ಅಂಗಡಿಯ ಮುಂದಿನ ಮೋರಿಯ ಕಲ್ಲಿಗೆ ಉಜ್ಜಿ ಹರಿತ ಮಾಡಿಕೊಂಡು ಗೌಡರೊಂದಿಗೆ ಹುಲಿ ಎಮ್ಮೆಯನ್ನು ಹಿಡಿದ ಜಾಗಕ್ಕೆ ಹೊರಟೇಬಿಟ್ಟ. ಸಾಬಿಯು ಯಾವಾಗಲೂ ಸೊಂಟದಲ್ಲಿ ಎರಡು ಬಾಕುಗಳನ್ನು ಇಟ್ಟುಕೊಂಡೇ ಇರುತ್ತಿದ್ದ. ಎಮ್ಮೆಯನ್ನು ಹುಲಿ ಹಿಡಿದು ಗೋಣು ಮುರಿದು ಹಾಕಿತ್ತು. ಕೆಚ್ಚಲು ಭಾಗವನ್ನು ಮಾತ್ರ ತಿಂದಿತ್ತು. ಮಾಂಸ ತಿನ್ನಲು ಅದು ರಾತ್ರಿ ಬರಬೇಕಿತ್ತಷ್ಟೆ. ಸಾಬಿಯು ಹುಲಿ ರಾತ್ರಿ ಯಾವ ಕಡೆಯಿಂದ ಬರಬಹುದು ತಾನು ಎಲ್ಲಿ ಕೂರಬೇಕೆಂದು ಸ್ಥಳವನ್ನು ಅಮೂಲಾಗ್ರವಾಗಿ ಪರಿಶೀಲಿಸಿದ, ಎಮ್ಮೆ ಬಿದ್ದಿದ್ದ ಹತ್ತಿರವೇ ಒಂದು ದೊಡ್ಡ ಪೊದೆ ಇತ್ತು. ಅದರೊಳಗೆ ಕೂತರೆ ಹುಲಿಗೆ ಅವನು ಕಾಣುವಂತಿರಲಿಲ್ಲ ಪೊದೆಯ ಎಲೆಗಳು ಅಷ್ಟು ಕಿಕ್ಕಿರಿದು ಬೆಳೆದಿತ್ತು. ಆಗ ಸಮಯ ಮಧ್ಯಾಹ್ನವಾದ್ದರಿಂದ ಸಾಬಿಯು ಸಂಜೆ ಬರತೇನೆ ಬನ್ನಿ' ಎಂದು ಗೌಡರೊಂದಿಗೆ ಹಿಂದಿರುಗಿದ.

ಹಳ್ಳಿಗೆ ಬೈಗು ಬೈಗಾಗುವ ಹೊತ್ತಿಗೆ ಸಾಬಿಯು ಗೌಡರನ್ನು ಮಾತನಾಡಿಸಿಕೊಂಡು ಹುಲಿ ಹಿಡಿದ ಜಾಗಕ್ಕೆ ಹಾಜರಾದ. ಬಿಸಿಲಿಳಿದು ಕಾಡು ಕತ್ತಲೆಯಲ್ಲಿ ಕರಗಹತ್ತಿತ್ತು. ಹಕ್ಕಿಗಳು ಕತ್ತಲಾಗುವುದನ್ನು ನೋಡಿ ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಹಾರಿ ಹೋಗುತ್ತಿದ್ದವು. ಶಿಕಾರಿಯಲ್ಲಿ ಬೀಡಿ, ಸಿಗರೇಟು, ನಶ್ಯ ಸೇದುವುದು ನಿಷಿದ್ಧವಾದ್ದರಿಂದ ಸಾಬಿ ಮೊದಲೇ ಒಂದು ಬೀಡಿ ಸೇದಿಕೊಂಡು ಅನಂತರ ಸೇದುವುದಕ್ಕಾಗುವುದಿಲ್ಲ, ಎಂದು ಬೀಡಿ, ಸಿಗರೇಟು, ನಶ್ಯದ ವಾಸನೆಗೆ ಪ್ರಾಣಿಗಳು ವಾಸನೆ ಬಂದತ್ತ ಸುಳಿಯುವುದಿಲ್ಲ. ಹುಲಿ ಬರುವುದು ಏನಿದ್ದರೂ ಮಧ್ಯರಾತ್ರಿ ಹೊತ್ತಿಗೆ ಎಂದು ಬಾಕುಗಳನ್ನು ಬಿಚ್ಚಿ ಇಟ್ಟುಕೊಂಡ. ಜನ ಸಂಚಾರವಿಲ್ಲದ ಕಾಡಿನಲ್ಲಿ ಹುಲಿಗಳು ಹಿಡಿದು ಹಾಕಿದ ಕೊಳ್ಳೆಯನ್ನು ತಿನ್ನಲು ಬೇಗನೆ ಬರುವುದೂ ಇದೆ. ನಿಶ್ಯಬ್ಧ ಕಾಡಿನಲ್ಲಿ ಹುಲಿರಾಯನಿಗೆ ಸಾಬಿ ಕಾಯುತ್ತಾ ಕೂತ. ಬೇಟೆಗಾಗಿ ಕಾಯುತ್ತಾ ಕೂರುವುದು ಬೇಸರದ ಕೆಲಸ. ಪ್ರಾಣಿಗಳು ಬಂದರೆ ಬಂದಾವು ಇಲ್ಲವಾದಲ್ಲಿ ಇಲ್ಲ. ಎಷ್ಟೋ ಸಾರಿ ಬೇಟೆಯಾಗದೆ ಬೆಳಿಗ್ಗೆ ಬಂದೂಕು ಹಿಡಿದು ಮನೆಗೆ ಬೇಟೆಗಾರ ವಾಪಸ್ಸಾಗುವ ಪ್ರಸಂಗಗಳೂ ಇವೆ. ಅಜ್ಜಿಸಾಬಿ ಬೇಟೆಯಾಗದೆ ವಾಪಸಾಗುವ ಸಂದರ್ಭ ಇಲ್ಲ. ಹುಲಿ ಕೊಂಚ ತಡವಾದರೂ ಬರುವುದು ಖಚಿತವಾಗಿತ್ತು. ತಾನೇ ಹಿಡಿದು ಹಾಕಿದ್ದ ಕೊಳ್ಳೆಯನ್ನು ತಿನ್ನಲು ಅದು ಬರಲೇಬೇಕಿತ್ತು. ಸಾಬಿಯು ಇತರೆ ಬೇಟೆಗಾರರಂತೆ ಬೇಟೆಯನ್ನು ಹುಡುಕಿಕೊಂಡು ಹೋಗಬೇಕಾಗಿದ್ದಿರಲಿಲ್ಲ. ಕತ್ತಲು ಮಾಯವಾಗಿ ಚಂದ್ರನ ಬೆಳಕು ಮೂಡಿತು. ಗಿಡಮರಗಳು ಎದ್ದು ಯಾವುದೋ ಹಕ್ಕಿ ಭಯವನ್ನು ಹುಟ್ಟಿಸುವಂತೆ ಕೂಗುತ್ತಿತ್ತು. ಸಾಬಿಗೆ ಅದೆಲ್ಲವೂಮಾಮೂಲಿ ಆಗಿದ್ದರಿಂದ ನಿರ್ಭೀತಿಯಿಂದ ಕೂತಿದ್ದ. ಆಕಾಶದಲ್ಲಿ ಮೋಡಗಳು ಚಂದ್ರನ ಮೇಲೆ ಹಾದುಹೋಗಿ ಒಮ್ಮೊಮ್ಮೆ ಕತ್ತಲೆಯಾಗೊ ಮತ್ತೆ ಬೆಳಕು ಬರುತ್ತಿತ್ತು. ಸಮಯ ನಿಧಾನವಾಗಿ ಸರಿಯುತ್ತಿತ್ತು. ಸಾಬಿಯು ಕಾದೇ ಕಾದ, ಕಾಡು ಮೌನವಾಗಿತ್ತು. ಹುಲಿ ಬರುವ ಚಿಹ್ನೆ ಕಾಣಲಿಲ್ಲ. ಇನ್ನು ಹುಲಿ ಬೇಟೆಯನ್ನು ಬಿಟ್ಟು ಬೇರೆನಾದರೂ ಉದ್ಯೋಗ ಮಾಡಬೇಕೆನ್ನುವಷ್ಟು ಬೇಸರವಾಯಿತು. ಅಷ್ಟರಲ್ಲಿ ಏನೋ ಕಾಡಿನ ಒಣ ಎಲೆಗಳ ಸರ ಸರ ಸದ್ದು ಮಾಡುತ್ತಾ ಬರುವುದು ಕೇಳಿಸಿತು. ಸಾಬಿ ಮೈ ಎಲ್ಲಾ ಕಣ್ಣಾಗಿ ಉಸಿರು ಬಿಗಿ



ಹಿಡಿದು ಹುಲಿರಾಯನ ಆಗಮನಕ್ಕಾಗಿ ಕಾದ. ಕೂತಲ್ಲೇ ಎಲೆಗಳ ಮರೆಯಲ್ಲಿ ಕತ್ತು ಬಗ್ಗಿಸಿ ನೋಡಿದ. ಬಂದದ್ದು ಹುಲಿಯಲ್ಲ ನರಿ. ನರಿಯೊಂದು ಬಂದು ಸತ್ತ ಎಮ್ಮೆಯನ್ನು ದೂರದಲ್ಲಿ ನಿಂತು ಸಂಶಯಾತ್ಮಕವಾಗಿ ನೋಡಿ ಗಾಳಿಯಲ್ಲಿ ವಾಸನೆಯನ್ನು ಗ್ರಹಿಸಿ ಎಮ್ಮೆ ಸತ್ತಿದೆ ಎಂದು ಖಾತ್ರಿ ಮಾಡಿಕೊಂಡು. ಹತ್ತಿರ ಬಂದು ಎಮ್ಮೆಯನ್ನು ಅಲ್ಲಿ ಇಲ್ಲಿ ಮೂಸಿ ಹುಲಿ ತಿಂದುಬಿಟ್ಟ ಕೆಚ್ಚಲು ಭಾಗಕ್ಕೆ ಬಾಯಿ ಹಾಕಿತು. ನಿಧಾನವಾಗಿ ಚಪ ಚಪ ಸದ್ದು ಮಾಡುತ್ತಾ ಭೋಜನವನ್ನು ಶುರುಮಾಡಿತು. ಬಾರಿಬಾರಿಗೂ ಏನಾದರೂ ಅಪಾಯವಿದೆಯೇ ಎಂದು ಸುತ್ತ ಮುತ್ತ ನೋಡಹತ್ತಿತ್ತು. ಹುಲಿಯೋ ಚಿರತೆಯೋ ಪಾಲಿಗಾಗಿ ಬರಬಹುದೆಂಬ ಆತಂಕ ಅದಕ್ಕೆ. ಏಕೆಂದರೆ ಆಗಲೆ ಎಮ್ಮೆಯ ಕೆಚ್ಚಲನ್ನು ಯಾವುದೋ ಪ್ರಾಣಿ ತಿಂದಿರಬೇಕಾದರೆ ಯಾವುದೋ ಪ್ರಾಣಿಗೆ ಎಮ್ಮೆ ಬಲಿಯಾಗಿರಬೇಕೆಂದು ಅದರ ಊಹೆ. ಅತ್ತಿತ್ತ ನೋಡುತ್ತಾ ಎಮ್ಮೆಯ ಮಾಂಸವನ್ನು ಹರಿದು ತಿನ್ನುವಾಗ ಏನೋ ಅಪಾಯ ಕಂಡು ನರಿ ಗುಡಕ್ಕನೆ ಓಟ ಕಿತ್ತಿತ್ತು.

ನರಿ ಇದ್ದಕ್ಕಿದ್ದಂತೆ ಓಡಿದ್ದು ಯಾಕೆ? ಹುಲಿ ಬಂದಿತೆ ಎಂದು ಸಾಬಿ ಎಲೆಗಳ ಮರೆಯಲ್ಲಿ ನೋಡಿದ. ಭರ್ಜರಿ ಪಟ್ಟೆ ಹುಲಿಯೊಂದು ರಭಸದಿಂದ ಓಡಿಬಂದು ನರಿಯನ್ನು ಒಂದಷ್ಟು ದೂರ ಓಡಿಸಿಕೊಂಡು ಹೋಗಿ ನರಿಯನ್ನು ದೂರ ಅಟ್ಟಿ ರಾಜ ಠೀವಿಯಿಂದ ಕೊಳ್ಳೆಯ ಸಮೀಪ ನಿಧಾನವಾಗಿ ಬಂದಿತು. ಬೆಳೆದ ಹುಲಿಯ ಭಯಂಕರ ಆಕೃತಿಯನ್ನು ತೀರ ಹತ್ತಿರದಿಂದ ನೋಡಿದ ಸಾಬಿಗೆ ನಡುಕ ಹುಟ್ಟಿತು. ಹಿಂದೆ ಅವನು ಕೊಂದ ಹುಲಿಗಳು ಅಷ್ಟು ದೊಡ್ಡದ್ದಾಗಿರಲಿಲ್ಲ. ಭಯ ಕೊಂಚ ಹೊತ್ತು ಅವನನ್ನು ಬಾಧಿಸಿದ್ದಷ್ಟೇ. ಅನೇಕ ಹುಲಿಗಳನ್ನು ಬಾಕು ಬಿಚ್ಚಿ ಬಾಯಿಗೆ ಇರಿದು ಕೊಂದವನಿಗೆ ಈ ಹುಲಿ ಯಾವ ಲೆಕ್ಕ ಎಂದೆನಿಸಿ ಹುಲಿ ಕೊಳ್ಳೆಯನ್ನು ತಿನ್ನಲು ಶುರು ಮಾಡುವುದನ್ನು ಕಾದ. ಹುಲಿ ತಕ್ಷಣ ಕೊಳ್ಳೆಯನ್ನು ಮುಟ್ಟಲಿಲ್ಲ. ಕೊಳ್ಳೆಯ ಹತ್ತಿರ ಕೂತು ರಾಜ ಗಾಂಭೀರ್ಯದಿಂದ ಸುತ್ತ ಮುತ್ತು ನೋಡಹತ್ತಿತು. ನರಿಗೆ ಹುಲಿ ಚಿರತೆಗಳ ಭಯ, ಹುಲಿಗೆ ಮನುಷ್ಯರ ಭಯ. ದುಷ್ಟ ಮನುಷ್ಯರು ಮರೆಯಲ್ಲಿ ಕುಳಿತು ಗುಂಡುಹಾರಿಸುವನೇನೋ ಎಂದು. ಅದು ಗುಂಡೇಟು ತಿಂದ ಹುಲಿಗಳ ಅನುಭವ. ಹುಲಿ ಬಹಳ ಹೊತ್ತು ಕಾದು ನೋಡಿತು. ಏನು ಅಪಾಯವಿಲ್ಲ ಅನ್ನಿಸಿದಾಗ

ಕೊಳ್ಳೆಯನ್ನು ಸಮೀಪಿಸಿ ಉದ್ದಕ್ಕೆ ಮಲಗಿಕೊಂಡು ನಿರ್ಭೀತಿಯಿಂದ ನೆನ್ನೆ ತಿಂದು ಬಿಟ್ಟ ಕಡೆಗೆ ಬಾಯಿ ಹಾಕಿ ಮಾಂಸವನ್ನು ಹರಿದು ತಿನ್ನಹತ್ತಿತು. ಚಪ ಚಪ ಸದ್ದು ಸಾಬಿಯ ಕಿವಿ ನಿಮಿರಿಸಿತು. ಹುಲಿ ಅವನ ಎದುರಿಗೆ ಮುಖಮಾಡಿ ಮಲಗಿತ್ತು. ಎಮ್ಮೆಯ ಬೆನ್ನು ಅವನಿಗೆ ಅಡ್ಡವಾಗಿದ್ದು ಹುಲಿಯ ಮುಖ ಕಾಣುತ್ತಿರಲಿಲ್ಲ. ಅವನು ನಿಧಾನವಾಗಿ ಪೊದೆಗಳು ಸದ್ದು ಮಾಡದಂತೆ ಎದ್ದ. ಹುಲಿ ಮಾಂಸ ಭಕ್ಷಿಸುತ್ತಾ ಒಮ್ಮೊಮ್ಮೆ ಎಡಕ್ಕೆ ಬಲಕ್ಕೆ ನೋಡುತ್ತಲಿತ್ತು. ಸಾಬಿ ಮುಖಾಮುಖಿ ಹೋರಾಟಕ್ಕೆ ಸಿದ್ಧನಾದ. ಎರಡೂ ಕೈಯ್ಯಲ್ಲಿ ಎರಡು ಬಾಕು ಹಿಡಿದು ಪೊದೆಯಿಂದ ಹೊರಬಂದ. ಹುಲಿ ನಿರಾತಂಕವಾಗಿ ಮಾಂಸ ಭಕ್ಷಿಸುತ್ತಿತ್ತು. ಸಾಬಿ ಎರಡು ಹೆಜ್ಜೆ ಮಂದೆ ಬಂದು "ಚಿ ಚಿ" ಎಂದ ಹುಲಿಯ ಗಮನ ಸೆಳೆದ. ಏನೋ ಸದ್ದಾದ್ದು ಕೇಳಿ ಹುಲಿ ತಟ್ಟನೆ ತಲೆ ಎತ್ತಿ ನೋಡಿತು. ಎದುರಿಗೆ ಮನುಷ್ಯ ನಿಂತಿದ್ದ. ಮಲಗಿದಲ್ಲೇ ಅದು ಗುರುಗುಟ್ಟಿತು. ಅನಂತರ ಮೇಲೆ ಎರಗಲು ಮಲಗಿದ ದೇಹವನ್ನು ಚಿಕ್ಕದ ಮಾಡಿ ಕೂತಿತು. ಸಾಬಿ ಇನ್ನೂ ಒಂದು ಹೆಜ್ಜೆ ಮುಂದೆ ಬಂದ. ಬಾಕು ಹಿಡಿದ ಕೈ ಎತ್ತಿದ. ಹುಲಿ ತಡಮಾಡಲಿಲ್ಲ. ಕಾಡೆಲ್ಲ ನಡುಗುವಂತೆ ಗರ್ಜಿಸಿ ಅವನ ಮೇಲೆ ಹಾರಿತು. ಸಾಬಿ ಬಲಗೈ ಬಾಕುವನ್ನು ಹುಲಿಯ ಬಾಯಿಗೆ ಇರಿದ ಗುರಿ ತಪ್ಪಿ ಬಾಯಿಗೆ ಬೀಳದೆ ಕಣ್ಣಿನ ಭಾಗದಲ್ಲಿ ಸವರಿಕೊಂಡು ಹೋಯಿತು. ಮತ್ತೊಮ್ಮೆ ಕೈ ಎತ್ತುವುದರೊಳಗೆ ಹುಲಿ ಅವನ ಭುಜದ ಮೇಲೆ ಮುಂದಿನ ಕಾಲುಗಳನ್ನಿಟ್ಟು ಅವನ ಗಂಟಲು ಹರಿದಿತ್ತು. ಸಾಬಿ ನಿತ್ರಾಣನಾಗಿ ಕೆಳಗೆ ಬಿದ್ದ. ಮತ್ತೆ ಅವನು ಕೈ ಎತ್ತದಂತೆ ಹುಲಿ ಅವನ ಮೇಲೆ ಭೀಕರವಾಗಿ ದಾಳಿ ಮಾಡಿ ಹೊರಟುಹೋಯಿತು.

ಬೆಳಿಗ್ಗೆ ಗೌಡರು, ಹಳ್ಳಿಯವರು 'ಹುಲಿಸಾಬಿ' ಬಾರದಿದ್ದುದ್ದನ್ನು ನೋಡಿ ಅವನು ಹುಲಿಕೊಂದನೆ ಅಥವಾ ಹೆದರಿಕೊಂಡು ಪೇಟೆಗೆ ಹೋದನೆ ಎಂದು ನೋಡಲು ಎಮ್ಮೆ ಸತ್ತ ಸ್ಥಳಕ್ಕೆ ಹೋದರು. ಅಲ್ಲಿನ ದೃಶ್ಯ ಭಯಾನಕವಾಗಿತ್ತು. ಎಮ್ಮೆ, ಸಾಬಿ ಅಕ್ಕಪಕ್ಕದಲ್ಲಿ ಮಲಗಿದ್ದರು. ಸಾಬಿಯ ದೇಹ ಚಿಂದಿಯಾಗಿ ರಕ್ತ ಅಲ್ಲೆಲ್ಲಾ ಹರಡಿಕೊಂಡಿತ್ತು.

ಚಿರತೆ ಅದು ಸಮೀಪದಲ್ಲೆಲ್ಲೋ ಇದೆ ಹಾಗೂ ಅಷ್ಟೇ ಸಮೀಪದಲ್ಲಿ ಹುಲಿ ಸಹ ಇದೆ ಎಂದು.



ಹಸುವಿನ ಬಲಕ್ಕಿದ್ದ ಬಯಲಿನಾಚೆಗೆ ಕಡಿದಾದ ಕಮರಿಯೊಂದು ಉದ್ದಕ್ಕೂ ಹಾಸಿದಂತೆ ಮಲಗಿತ್ತು. ಆ ಕಮರಿಯ ತುಂಬಾ ದಟ್ಟವಾದ ಕುರುಚಲು ಕಾಡಿತ್ತು. ನರಭಕ್ಷಕಿ ಅಲ್ಲೇ ಎಲ್ಲೋ ಇದೆ ಅನಿಸುತ್ತಿತ್ತು. ಅದು ಬಹಿರಂಗವಾಗಿ ಕಾಣಿಸದಿದ್ದರೂ ಅದರ ಇರುವು ಅಲ್ಲಿನ ಪ್ರಾಣಿಗಳಿಗೆ ಮನೋವೇದ್ಯವಾದ ಸಂಗತಿಯಾಗಿತ್ತು. ಹಾಗಾಗಿಯೇ ಹಸುವಿನ ಕಳೇಬರ ಅಲ್ಲಿ ಸುರಕ್ಷಿತವಾಗಿತ್ತು. ಚಿರತೆಗಳನ್ನು ಸಾಮಾನ್ಯವಾಗಿ ಈ ಹಕ್ಕಿಗಳು ಕೇರ್ ಮಾಡುವುದಿಲ್ಲ.

ಅಲ್ಲಿದ್ದ ಬಯಲಿನ ಕಾರಣದಿಂದಾಗಿ ನಾನು ಹೇಗೂ 'ಕೊಂದವನ' ಮತ್ತು 'ಕಾದಿದ್ದವಳ' ಕಣ್ಣು ತಪ್ಪಿಸಿ ಅಲ್ಲಿಗೆ ಹೋಗುವುದು ಸಾಧ್ಯವಿರಲಿಲ್ಲ. ಇದಕ್ಕಿದ್ದ ಪರ್ಯಾಯವೆಂದರೆ ಹಸುವಿನ ಎಡಭಾಗಕ್ಕಿದ್ದ ನಾಂದೋರ್ ನದಿ ಕಣಿವೆಯವರೆಗೆ ಸ್ವಲ್ಪ ದೂರದಿಂದ ಬಳಸಿಕೊಂಡು ಹೋಗಿ, ಮುಂದೊಂದು ಕಡೆ ಜಾಡು ಸಿಕ್ಕಿದಲ್ಲಿ ಕಾಡೊಳಕ್ಕಿಳಿದು ರಣಹದ್ದುಗಳು ಕುಳಿತಿದ್ದ ಮರ ಸಮೀಪಿಸುವುದು. ಈ ಮರ ಒಂದು ಕಮರಿಯ ದಡದಲ್ಲಿ ಬೆಳೆದು ಹಸುವಿನತ್ತ ಚಾಚಿಕೊಂಡಿತ್ತಾದ್ದರಿಂದ ಸ್ವಲ್ಪ ಪ್ರಯಾಸಪಟ್ಟರೆ ಅದರ ಮೇಲೆ ಹತ್ತಬಹುದೆಂದು ತರ್ಕಿಸದೆ. ಸ್ಥಳೀಯರಿಂದ ಅಲ್ಲಿನ ವಿವರಗಳನ್ನು ಪಡೆದುಕೊಂಡೆ. ಆಗಲೇ ಸೂರ್ಯ ದಿಗಂತಕ್ಕೆ ಹತ್ತಿರನಾಗುತ್ತಿದ್ದ. ಬೆಳಕು ಹೆಚ್ಚು ಹೊತ್ತು ಲಭ್ಯವಿರಲಿಲ್ಲ. ಶಿಕಾರಿ ನಿಂತಿರುವುದೇ ಬೆಳಕಿನ ಮೇಲೆ. ಎಲ್ಲವೂ ನಾನಂದುಕೊಂಡಂತೆಯೇ ನಡೆದರೆ ಕತ್ತಲಾಗುವ ಮುನ್ನ ಹಿಂತಿರುಗಬಹುದಿತ್ತು.

ಹೊರಡುವ ಮುನ್ನ ನಮ್ಮವರನ್ನು ಕರೆದು "ನನ್ನಿಂದೇನಾದರೂ ಗುಂಡು ಹಾರಿದ ಶಬ್ದ ಕೇಳಿಸಿದರೆ, ನೀವು ಬಂದು ಈಗ ಹಸು ಬಿದ್ದಿರುವ ಬಯಲಿನತ್ತ ನೋಡಿ, ಅಲ್ಲಿ ನಾನು ಕಾಣಿಸಿಕೊಂಡರೆ, ನಾಲ್ಕು ಜನ ಕೂಡಲೇ ಹೊರಟು ಹಳ್ಳಿಯಿಂದ ಅಲ್ಲಿಗೆ ತಲುಪುವ ದಾರಿಯಲ್ಲಿ ಬಂದು ನನ್ನನ್ನು ಕೂಡಿಕೊಳ್ಳಿ. ಆಕಸ್ಮಿಕ ನಾನು ಗುಂಡು ಹೊಡೆಯದೇ ಇದ್ದು, ರಾತ್ರಿ ಕ್ಯಾಂಪಿಗೆ ಹಿಂತಿರುಗದೇ ಹೋದರೆ ಬೆಳ್ಳಿಗೆ ಹಳ್ಳಿಗರೊಂದಿಗೆ ಕೂಡಿ ಒಂದು ತಂಡ ಕಟ್ಟಿಕೊಂಡು ಹುಡುಕಲು ಬನ್ನಿ" ಎಂದು ಹೇಳಿದೆ.

ನಾನು ನಡೆದಿದ್ದ ಕಣಿವೆಯ ಭಾಗ ರಾಸ್ಬೆರಿ ಪೊದೆಗಳಿಂದ ದಟ್ಟೆಸಿದ್ದು, ನಡುನಡುವೆ ಬೃಹದಾಕಾರದ ಬಂಡೆಗುಂಡುಗಳೂ ಸೇರಿ ಅಮಾನುಷವಾಗಿ

ಹಿಡಿದುಕೊಂಡಿತ್ತು. ಗಾಳಿ ಬೇರೆ ಕಣಿವೆಯ ದಿಕ್ಕಿನ ಕಡೆಗೇ ಬೀಸುತ್ತಿತ್ತು. ನಾನು ಮರದ ದಿಕ್ಕಿಗೆ ಇಳಿದು ನೋಡಿದಾಗ ಬಯಲು ನಾನು ಅಂದುಕೊಂಡಿದ್ದಕ್ಕಿಂತ ವಿಶಾಲವಾಗಿತ್ತು, ಹಸು ಮರದಿಂದ ನಾನು ಮಾಡಿದ್ದ ಅಂದಾಜಿಗಿಂತ ಹೆಚ್ಚು ದೂರದಲ್ಲಿದ್ದುದು ತಿಳಿಯಿತು. ಅಲ್ಲಿನ ಒಟ್ಟೂ ಪರಿಸ್ಥಿತಿಯಲ್ಲಿ ನನಗೆ ಹಸುವಿನ ಕಾಲುಭಾಗ ಮಾತ್ರ ಕಾಣುತ್ತಿತ್ತು. ಇಲ್ಲಿ ನನ್ನ ಮುಂದಿದ್ದ ಸಾಧ್ಯತೆಗಳು ಎರಡೇ: ನಾನು ಹಸುವಿನ ಪಕ್ಕದಲ್ಲಿದ್ದ ಪೊದೆಗಳ ನಡುವೆ ತೂರಿ ಮುಂದೆ ಹೋಗಿ ಬಯಲಿಗೆ ಅಡ್ಡಡ್ಡವಾಗಿ ಬೆಳೆದಿದ್ದ ಇನ್ನೊಂದು ಕೋನದಲ್ಲಿದ್ದ ಪೊದೆಗಳ ನಡುವೆ ಅಡಗಿ ಕೂರುವುದು. ಇಲ್ಲವೇ, ಈ ರಣಹದ್ದುಗಳೊಂದಿಗೆ ಮರವನ್ನು ಹಂಚಿಕೊಳ್ಳುವುದು. ಪೊದೆಗಳ ನಡುವೆ ತೂರಿ ಹೋಗುವ ದುಸ್ಸಾಹಸಕ್ಕಿಂತ ನನಗೆ ಮರ ಏರುವುದೇ ಹೆಚ್ಚು ಜೀವರಕ್ಷಕವಾಗಿ ಕಂಡಿತು.

ಮರದ ಮೇಲಕ್ಕೆ ಹತ್ತುವುದಾದರೆ, ಹಸಿವಿನಿಂದ ನನಗಿದ್ದ ದೂರ ನನ್ನ ಬಂದೂಕದಿಂದ ನಿಭಾಯಿಸುವಷ್ಟಿತ್ತು. ಮರ ಹತ್ತಲು ಮುಂದಾದೆ. ತಕ್ಷಣ ಹೊಳೆಯಿತು: ಆಕಸ್ಮಿಕ ಅವೇನಾದರೂ ನನ್ನ ಇರುವನ್ನು ಕಂಡರೆ ಹಾರಿ ಹೋಗುತ್ತವೆ. ಅವು ಹಾರಿದ ವೈಖರಿಯಲ್ಲೇ ಅವು ಏನನ್ನು ಕಂಡು ಹಾರಿ ಹೋಗಿವೆ ಎಂದು ಊಹಿಸುವುದು ಮಾಂಸಾಹಾರಿ ಪ್ರಾಣಿಗಳಿಗೆ ರಕ್ತಗತವಾದ ವಿದ್ಯೆ. ಈ ಹದ್ದಿನ ಕಣ್ಣು ತಪ್ಪಿಸಿ ಹತ್ತುವುದು ಅಸಾಧ್ಯವಾದದ್ದು ಅನಿಸಿತು. ಅಷ್ಟರಲ್ಲಿ ಇನ್ನೊಂದು ಸಂಗತಿ ನನ್ನ ಗಮನಕ್ಕೆ ಬಂತು. ಮರದ ಮೇಲೆ ಈಗಾಗಲೇ ಸುಮಾರು ಇಪ್ಪತ್ತು ಹದ್ದುಗಳು ಸರತಿಸಾಲಿನಲ್ಲಿ ಕುಳಿತುದ್ದವು. ಇವುಗಳ ಜೊತೆಗೆ ಹೊಸ ಹೊಸ ಹದ್ದುಗಳ ಆಗಮನ–ಸೇರ್ಪಡೆ–ನಿರ್ಗಮನಗಳೂ ನಡೆಯುತ್ತಿದ್ದವು. ನಿರ್ಗಮಿಸಿದ ಹದ್ದುಗಳು ಆಕಾಶದಲ್ಲಿ ಗಸ್ತು ಆರಂಭಿಸಿದರೆ, ಆಗಮಿಸಿದ ಹದ್ದುಗಳು ಕುಳಿತಿದ್ದ ಹದ್ದುಗಳೊಂದಿಗೆ ಕೂರುವ ಜಾಗಕ್ಕಾಗಿ ಕಿತ್ತಾಡುತ್ತಿದ್ದವು. ಅಲ್ಲಿದ್ದ ಸ್ಥಳ ಹೆಚ್ಚು ಹದ್ದುಗಳು ಕೂರಲು ಪ್ರಶಸ್ತವಾಗಿರಲಿಲ್ಲ. ಈಗಾಗಲೇ ಅಲ್ಲಿ ಇಪ್ಪತ್ತಕ್ಕೂ ಹೆಚ್ಚು ಹದ್ದುಗಳು ತುಂಬಿಕೊಂಡಿದ್ದವು. ಹಾಗಾಗಿ ಅವುಗಳ ನಡುವೆ ಜಾಗಕ್ಕಾಗಿ ಕಿತ್ತಾಟ ನಡೆಯುತ್ತಿತ್ತು. ಆಗ ಹೆಚ್ಚು ಕಡಿಮೆ ನಾಯಿಗಳಂತೆಯೇ ಕಿತ್ತಾಡುವಾಗ ವಿಪರೀತ ಗದ್ದಲವೇಳುತ್ತಿತ್ತು. ನಾನು ಈ ಸಮಯವನ್ನು ಆರಿಸಿಕೊಂಡು ಅವು ಕಿತ್ತಾಟದಲ್ಲಿ ತಲ್ಲೀನವಾಗಿದ್ದಾಗ, ನಿಶ್ಯಬ್ದವಾಗಿ ಕಳೇಬರ ಸ್ಪಷ್ಟವಾಗಿ ಕಾಣುವಷ್ಟು



ಎತ್ತರಕ್ಕೇರಿ ಒಂದು ಕೊಂಬೆಯ ಮೇಲೆ ಆಶ್ರಯಪಡೆದೆ. ಇದೊಂದು ಅತಂತ್ರವಾದ ಜಾಗವಾಗಿತ್ತು. ಆಕಸ್ಮಿಕ ಕಾಲುಜಾರಿದರೆ ಇಲ್ಲಿಂದ ನೂರಾರು ಅಡಿ ಆಳದ ಕಮರಿಯ ತಳದಲ್ಲಿದ್ದ ಚೂಪುಕಲ್ಲುಗಳ ಮೇಲೆ ಬಿದ್ದು ರಣಹದ್ದುಗಳಿಗೆ ಪುಷ್ಕಳ ಭೋಜನವಾಗುತ್ತಿದ್ದೆ.

ಈಗ ನಾನು ನಿಂತ ಜಾಗದಿಂದ ಕಳೇಬರ ಸಂಪೂರ್ಣವಾಗಿ ಕಾಣುತ್ತಿತ್ತು. ಕೆಲವು ಕೇಜಿಗಳಷ್ಟು ಮಾಂಸವನ್ನು ಮಾತ್ರ ಕಿತ್ತು ತಿನ್ನಲಾಗಿತ್ತು. ನಾನು ಸ್ವಲ್ಪ ಹೊತ್ತು ಹೊಂದಿಕೊಳ್ಳಲು ಪರದಾಡಿದೆ. ನನ್ನಂತೆ ರಣಹದ್ದುಗಳು ವಿಚಿತ್ರ ಸಂದಿಗ್ಧದಲ್ಲಿ ಕುಳಿತಿದ್ದವು. ಆಕಾಶದಲ್ಲಿ ಗಸ್ತು ಹೊಡೆಯುತ್ತಿದ್ದ ಎರಡು ರಣಹದ್ದುಗಳಿಂದ ಅವುಗಳಿಗೆ ಸ್ಪಷ್ಟವಾದ ಮಾಹಿತಿ ಸಿಗುತ್ತಿಲ್ಲ. ಅಲ್ಲಿಂದ ಸೂಚನೆ ಬರುವವರೆಗೂ ಇವುಗಳು ಕಳೇಬರದತ್ತ ಹೋಗುವುದಿಲ್ಲ. ಹೀಗೆ ನಿಮಿಷಗಳು ನಿಧಾನವಾಗಿ ಕಳೆಯುತ್ತಿದ್ದವು. ಸ್ವಲ್ಪ ಹೊತ್ತಿನ ನಂತರ ಮೇಲೆ ಹಾರುತ್ತಿದ್ದ ರಣಹದ್ದುಗಳು ಗಾಬರಿಯಿಂದೆಂಬಂತೆ ದೂರಕ್ಕೆ ಹಾರಿದವು. ತಕ್ಷಣ ನಾನು ಕೆಳಕ್ಕೆ ನೋಡಿದೆ ಅದೇ ಹೊತ್ತಿಗೆ ಕಳೇಬರದ ಪಕ್ಕದ ಪೊದೆಯಿಂದ ಬಲಿಷ್ಠವಾದ ಗಂಡು ಚಿರತೆಯೊಂದು ಸ್ವಲ್ಪ ಹಿಂಜರಿಯುತ್ತ ಹೊರಬಂತು.

ಈ ಚಿರತೆಗಳನ್ನು ಅವುಗಳ ಸ್ವಾಭಾವಿಕ ನೆಲೆಗಳಲ್ಲಿ ಸಹಜ ಪರಿಸ್ಥಿತಿಯಲ್ಲಿ ಕಂಡಿಲ್ಲದ ಹೊರತು ಅವುಗಳ ಧೀಮಂತಿಕೆಯಾಗಲಿ, ಶರೀರ; ವರ್ಣ ವಿನ್ಯಾಸದ ಅನನ್ಯತೆಗಳನ್ನಾಗಲಿ ಊಹಿಸುವುದು ಸಾಧ್ಯವಿಲ್ಲ. ಭಾರತದ ಕಾಡುಗಳ ಜೀವ ಸಂಕುಲದಲ್ಲೇ ಆಭರಣಗಳಂತೆ ಹೊಳೆಯುವ ಇವುಗಳ ಸೌಂದರ್ಯಕ್ಕೆ ಇವುಗಳು ಮಾಂಸವನ್ನು ಕಿತ್ತು ತಿನ್ನುವ ಆತುರತೆಯ ಕಾರಣದಿಂದ ಕುಂದೇನು ಬರುವುದಿಲ್ಲ. ಇವು ಸ್ನಾಯು ಸಾಮರ್ಥ್ಯದಲ್ಲಾಗಲೀ, ಧೈರ್ಯ ಸಾಹಸ ಗಳಲ್ಲಾಗಲೀ ಯಾವುದಕ್ಕೂ ಎರಡನೆಯವಲ್ಲ. ಆದರೂ ಈ ದೇಶದ ಅನೇಕ ಕಡೆ ಇವಕ್ಕೆ ಉಪದ್ರವಕಾರಿಗಳು ಎಂಬ ಕೆಟ್ಟ ಹೆಸರಿದೆ. ಇವುಗಳ ಅನನ್ಯತೆಯ ಬಗ್ಗೆ ತಿಳುವಳಿಕೆಯಿಲ್ಲದವರೆಗೆ ಚಿರತೆಗಳು ಅರೆಹೊಟ್ಟೆ ತಿಂದ ಬಡಕಲುಗಳಾಗಿಯೂ, ಚರ್ಮರೋಗ ತಗುಲಿದ, ಕೊಳಕಾದ ಶಾಶ್ವತ ಹಿಂಸಾವಾದಿಗಳಂತೆ ಕಾಣುತ್ತವೆ. ಮುಖ್ಯವಾಗಿ ತಮ್ಮ ಶಿಕಾರಿಯನ್ನು ತಿನ್ನುವ ಹೊತ್ತಿನಲ್ಲಿ ನನ್ನ ಮುಂದಿದ್ದ ಚಿರತೆಯಂತೂ ಈ ಎಲ್ಲಾ ಆಪಾದನೆಗಳನ್ನೂ ಧಿಕ್ಕರಿಸಿ ನಿಂತ ಮಾದರಿಯಂತೆ

ಕಾಣುತ್ತಿತ್ತು. ದುರದೃಷ್ಟವಶಾತ್ ಇದರ ಜೀವ ಈಗಾಗಲೇ ಮುಟ್ಟುಗೋಲಿಗೊಳಗಾಗಿತ್ತು. ದನಗಳನ್ನು ಹಿಡಿದುತಿಂದ ತಪ್ಪಿಗೆ ಅದು ತಲೆದಂಡ ತೆರಲೇಬೇಕಾಗಿತ್ತು. ಸುತ್ತಮುತ್ತಲ ಹಳ್ಳಿಯ ಜನರ ಒತ್ತಡಕ್ಕೆ ನಾನು ಬದ್ಧನಾಗಿಬಿಟ್ಟಿದ್ದೆ. ಕಳೆದಬಾರಿಯೇ ಇದನ್ನು ಕೊನೆಗಾಣಿಸಬೇಕಿತ್ತು. ಆದರೆ ನರಭಕ್ಷಕಿ ಒಬ್ಬ ಹರೆಯದ ತಾಯಿಯನ್ನು ಹಿಡಿದು ಇದನ್ನು ಉಳಿಸಿತ್ತು. ಅಲ್ಲಿಂದ ಬಚಾವಾದ ಈ ಚಿರತೆಯು ಜನರನ್ನು ಸದರ ಮಾಡಿಕೊಂಡು ಹೆಚ್ಚು ಅವಾಂತರಕಾರಿಯಾಗಿಬಿಟ್ಟಿತ್ತು. ಈಗ ನಾನು ಇದನ್ನು ಕೊಲ್ಲದೆ ಹೋದರೆ ಹಳ್ಳಿಗರಿಗೆ ನಾನು ಚಿರತೆಗಿಂತ ದೊಡ್ಡ ಶತ್ರುವಾಗಿಬಿಡುತ್ತಿದ್ದೆ. ಕುದುರೆ ಎಳೆದೆ. ಬಹುಶಃ ತನ್ನನ್ನು ಪರಂದಾಮಕ್ಕಟ್ಟಿದ ಗುಂಡಿನ ಸದ್ದು ಅದಕ್ಕೆ ಕೇಳಿಸಿತೋ ಇಲ್ಲವೋ ಅಷ್ಟರಲ್ಲಿ ಅದು ದಿವಂಗತವಾಗಿತ್ತು.

ಅನೇಕ ದುರಂತಗಳು ಏಕತ್ರವಾಗಿ ಒಂದೇ ಜೀವಿಯನ್ನು ಬೆನ್ನತ್ತಿದಾಗ ಅದಕ್ಕೆ ಮಾನವರ ಮಿತಿಯಲ್ಲಿ ಕಾರಣಗಳನ್ನು ಹುಡುಕುವುದು ಕಷ್ಟ. ಈ ಏಕತ್ರ ದಾಳಿಗೆ ಯಾರು ಬೇಕಾದರೂ ಬಲಿಯಾಗಬಹುದು! ಒಂದು ನಾಯಿ, ಒಬ್ಬ ಮನುಷ್ಯ ಅಥವಾ ಒಂದು ಕುಟುಂಬವೇ ಈಡಾಗಬಹುದು!! ಉದಾರಣೆಗೆ ಈ ಚಿರತೆಯ ಮುಂದೆ ಸತ್ತು ಬಿದ್ದಿದೆಯಲ್ಲಾ_ ಆ ಹಸುವಿನ ಮಾಲೀಕನನ್ನೇ ತೆಗೆದುಕೊಳ್ಳಿ. ಇವನೊಬ್ಬ ಎಂಟು ವರ್ಷದ ಹುಡುಗ ಹಾಗೂ ತನ್ನ ಕುಟುಂಬದಲ್ಲಿ ಉಳಿದುಕೊಂಡಿರುವ ಏಕೈಕ ಸದಸ್ಯ. ಇಲ್ಲಿಗೆ ಎರಡು ವರ್ಷಗಳ ಹಿಂದೆ ಇವನ ತಾಯಿ ಹುಲ್ಲು ತರಲು ಹೋಗಿದ್ದಾಗ ಇದೇ ನರಭಕ್ಷಕಿ ಅವಳನ್ನು ಕೊಂದುತಿಂದಿತ್ತು. ಮತಿಭ್ರಾಂತನಾದ ಈಕೆಯ ಗಂಡ  ವರ್ಷ ತುಂಬುವುದರೊಳಗೆ ಸ್ವರ್ಗಸ್ಥನಾದ. ಮನೆಯಲ್ಲಿದ್ದ ನಾಲ್ಕು ಕುಡಿಕೆ ಮಡಿಕೆಗಳು ಅವನ ಸಾಲಕ್ಕೆ ಮುಟ್ಟುಗೋಲಾಗಿ ಮನೆ ದಿವಾಳಿ ಎದ್ದಿತು. ಉಳಿದದ್ದು ಈ ಹುಡುಗ ಹಾಗೂ ಈ ಬಿಳಿ ಹಸು. ಇದನ್ನು ಆಧರಿಸಿ ಹುಡುಗ ಕಾಲಾಯಾಪನೆ ಮಾಡುತ್ತಿದ್ದ. ಈಗ ಚಿರತೆ ಇವನ ಹಸುವನ್ನೇ ಹಿಡಿದೆದೆ! ಮುನ್ನೂರು ನಾನ್ನೂರು ದನಗಳಿದ್ದ ಮಂದೆಯಲ್ಲಿ ಚಿರತೆ ಇವನ ಬಿಳಿ ಹಸುವನ್ನೇ ಆರಿಸಿಕೊಂಡಿದ್ದೇಕೆ? (ಕಾಲದ ಈ ಅಮಾನುಷ ಅಟ್ಟಹಾಸವನ್ನು ರಿಪೇರಿಮಾಡಲು ಪ್ರಯತ್ನಿಸಿದ ನಾನು ನಿಜಕ್ಕೂ ಚಕಿತನಾದೆ. ಅವನ ಬಿಳಿ ಹಸುವಿನ ಬದಲಿಗೆ ಕೆಂದಹಸುವನ್ನು ಕೊಡಿಸಿದೆ. ಆದರೆ ಆ ಹುಡುಗ ಅದನ್ನು ಬಿಳಿ ಹಸುವಿನಂತೆ ತನ್ನ ಬದುಕಿನ ಭಾಗವೆಂದು ಸ್ವೀಕರಿಸಲೇ ಇಲ್ಲ.)



ನಾನು ದಲ್ಕಾನಿಯ ಬಿಡುವಾಗ ಒಬ್ಬರ ಸುಪರ್ದಿಗೆ ಒಪ್ಪಿಸಿ ಹೋಗಿದ್ದ ನಮ್ಮ ಎಳೆಯ ಕೋಣಗಳು ಸುಸ್ಥಿತಿಯಲ್ಲಿದ್ದವು. ನಾನು ಮರುದಿನವೇ ಇವನ್ನು ಕಟ್ಟಿ ಹುಲಿಯನ್ನು ಆಕರ್ಷಿಸುವ ಪ್ರಯತ್ನವನ್ನು ಆರಂಭಿಸಿದೆ. ಈ ಬಾರಿ ನನ್ನ ಕೋಣಗಳು ಆ ಮಹಾತಾಯಿಗೆ ಇಷ್ಟವಾಗುತ್ತದೆ, ಅದು ಇವನ್ನು ಕೊಲ್ಲುತ್ತದೆ ಎಂದು ಆಶಿಸಿದ್ದೆ.

ಇಲ್ಲಿಂದ ಐದು ಮೈಲಿಗಳ ದೂರದ ನಾಂದೋರ್ ಕಣಿವೆಯ ಇಳಿಜಾರಿನಲ್ಲಿ ಸಾವಿರಾರು  ಅಡಿ ಎತ್ತರಕ್ಕೆ ಚಿಮ್ಮಿನಿಂತ ಕೋಡುಗಲ್ಲೊಂದು ತಾನೇ ಒಂದು ಪರ್ವತವೇನೋ ಎಂಬಂತೆ ಹಾಸಿ ಬಿದ್ದಿತ್ತು. ಸುತ್ತಲೂ ದಟ್ಟವಾದ ಕಾಡು ಗಿಡಿದುಕೊಂಡಿದ್ದ ಈ ಬಂಡೆಯ ಬುಡದಲ್ಲಿ ಒಂದು ಹಳ್ಳಿಯಿತ್ತು. ಕಳೆದ ಕೆಲವು ತಿಂಗಳುಗಳಲ್ಲಿ ನರಭಕ್ಷಕಿ ಈ ಹಳ್ಳಿಗಳ ಸುತ್ತಮುತ್ತಲೇ ಠಿಕಾಣಿ ಹೂಡಿ ನಾಲ್ಕು ಜನರನ್ನು ತಿಂದು ತೇಗಿತ್ತು. ನಾನು ಚಿರತೆಯನ್ನು ಕೊಂದು ಹಿಂತಿರುಗುವ ಹೊತ್ತಿಗೆ ಈ ಹಳ್ಳಿಯ ಜನರಿಂದ ನನ್ನ 'ವರ್ಗಾವಣೆ'ಯ ಆದೇಶ ಬಂದಿತ್ತು. ಈ ಹಳ್ಳಿಯ ಜನ 'ಸದ್ಯಕ್ಕೆ ಹುಲಿ ನಮ್ಮ ಹಳ್ಳಿಯ ಸರಹದ್ದಿನಲ್ಲಿರುವುದರಿಂದ ನೀವು ಈ ದಲ್ಕಾನಿಯಾದ ಬದಲು ನಮ್ಮ ಹಳ್ಳಿಗೆ ಬಂದು ಬಿಡಾರ ಹೂಡಬೇಕೆಂದು, ಅದಕ್ಕೆ ಅಗತ್ಯವಾದ ಜಾಗವನ್ನು ಈಗಾಗಲೇ ನಾವು ಹುಡುಕಿಟ್ಟಿದ್ದೇವೆಂದು' ಹೇಳಿದರು. ಹಾಗೇ 'ಹುಲಿ ಕೋಡುಗಲ್ಲಿನ ಮೇಲೆ ಆಗಾಗ್ಗೆ ಕಾಣಿಸಿಕೊಳ್ಳುತ್ತಿದೆ ಎಂದೂ, ಅದನ್ನು ನಾವೆಲ್ಲರೂ ನೋಡಿದ್ದೇವೆಂದೂ, ಆ ಕೋಡುಗಲ್ಲಿನ ಪಕ್ಕದ ಕಮರಿಯಲ್ಲಿ ಅನೇಕ ಗುಹೆಗಳಿವೆಯೆಂದೂ ಇಂತಹ ಯಾವುದೋ ಒಂದು ಗುಹೆಯಲ್ಲಿ ಅದು ವಾಸಮಾಡುತ್ತಿರಬೇಕೆಂದೂ' ಹೇಳಿದರು. ಅಂದು ಬೆಳ್ಳಿಗೆ ಕೆಲವು ಹೆಂಗಸರು ಹುಲ್ಲುಕೊಯ್ಯುತ್ತಿದ್ದಾಗ ಹುಲಿಯನ್ನು ನೋಡಿದ್ದರಂತೆ, ಹೀಗಾಗಿ ಅದು ಮತ್ತೆ ನರಬಲಿಗೆ ಹೊಂಚು  ಹಾಕುತ್ತಿದೆ ಎಂದು ಖಾತರಿಯಾಗಿ ಇಡೀ ಹಳ್ಳಿ ಭಯಗ್ರಸ್ಥವಾಗಿ ಕುಳಿತ್ತಿತ್ತು. ಯಾರು ಮನೆಯಿಂದ ಹೊರಬರುವ ಸಾಹಸ ಮಾಡುತ್ತಿರಲಿಲ್ಲ. ಇದರಿಂದಾಗಿ ಇಡೀ ಹಳ್ಳಿಯ ಬದುಕೇ ಹೇಗೆ ಸ್ತಬ್ಧವಾಗಿದೆ ಎಂದು ವಿವರಿಸಿದರು.

ನಾನು ಅವರ ಮನವಿಯನ್ನು ಒಪ್ಪಿಕೊಂಡೆ. ನಾನು ಅಲ್ಲಿಗೆ ಬಂದು ನನ್ನ ಕೈಲಾದ ಸಹಾಯ ಮಾಡುತ್ತೇನೆಂದು ಮಾತುಕೊಟ್ಟೆ. ಕೊಟ್ಟ ಮಾತಿನಂತೆ ಮರುದಿನ

ಮುಂಜಾನೆಯೇ ಎದ್ದು ಆ ಹಳ್ಳಿಯತ್ತ ಹೊರಟೆ. ಕೋಡುಗಲ್ಲಿನ ಪೂರ್ಣದೃಶ್ಯ ಸಿಗುವ ಆಯಕಟ್ಟಿನ ಜಾಗದಲ್ಲಿ ನಿಂತು ಬೈನಾಕ್ಯುಲರ್‌ನಿಂದ ಗಂಟೆಗಟ್ಟಲೆ ವೀಕ್ಷಿಸದೆ. ಆ ಬಂಡೆ ಮತ್ತು ಸುತ್ತಮುತ್ತಲ ಪರಿಸರ ನನ್ನಲ್ಲಿ ಭಯ ಹುಟ್ಟಿಸಿತೇ ವಿನಃ ಹುಲಿ ಕಾಣಲಿಲ್ಲ. ಎಚ್ಚರಿಕೆಯಿಂದ ಕಣಿವೆ ಇಳಿದು ಅಡ್ಡಬಂದ ಕೊರಕಲುಗಳನ್ನು ದಾಟಿ ಮತ್ತೆ ಕಣಿವೆಯನ್ನು ಹತ್ತಿ ಹಳ್ಳಿಯತ್ತ ಹೊರಟೆ. ಇದು ನಾನು ಓಡಾಡಿದ್ದ ದಾರಿಗಳಲ್ಲೇ ಹೆಚ್ಚು ಹಿಂಸಾಜನಕವಾದದ್ದು ಎಂದು ಮಾತ್ರ ಹೇಳಬಲ್ಲೆ. ಚತುಷ್ಪಾದಿಯಾಗಿ ಸಾಗುವುದಲ್ಲದೆ ಬೇರೊಂದು ರೀತಿ ಸಾಧ್ಯವಿಲ್ಲದ, ಒಂದು ಕ್ಷಣ ಎಡವಟ್ಟಾದರು ಬಿದ್ದ ರಭಸಕ್ಕೇ ಕುತ್ತಿಗೆಯೇ ಮೊದಲಾಗಿ ದೇಹದ ಅಂಗಾಗಗಳೆಲ್ಲಾ ನುಚ್ಚುನೂರಾಗಿ ದಾರುಣ ಸಾವನ್ನು ಆಹ್ವಾನಿಸುವಂತ ಈ ದಾರಿಯಲ್ಲಿ ನನ್ನನ್ನು ನಾನು ರಕ್ಷಿಸಿಕೊಳ್ಳುವುದೇ ಯಮಸಾಹಸವಾಗಿತ್ತು. ಹೀಗೆನ್ನುವುದಕ್ಕಿಂತ ಜೀವಂತ ಹಿಂತಿರುಗುವುದು ಅಗೋಚರ ಶಕ್ತಿಯ ಕೃಪೆಯಾಗಿತ್ತು.

ನಡುದಿನದ ಎರಡು ಗಂಟೆಯ ಹೊತ್ತಿಗೆ ಈ ಭಾಗವನ್ನು ಸಂಪೂರ್ಣವಾಗಿ ಸರ್ವೆಮಾಡಿದೆ. ಅಲ್ಲಿನ ಒಂದೊಂದು ಕೋಡುಗಲ್ಲು, ಕಣಿವೆ, ಕಂದರ ಪೊದೆಗಳನ್ನು ತಡಕಾಡಿದೆ. ನಾನು ಮತ್ತೆ ಇದನ್ನು ನೋಡುವುದು ಅಗತ್ಯವಿಲ್ಲ ಎಂದೆನಿಸುವವರೆಗೂ ಇಂಚಿಂಚಾಗಿ ಹುಡುಕಾಡಿದೆ. ನನಗೆ ಏನೊಂದೂ ಕಾಣಲಿಲ್ಲ. ಹೊಟ್ಟೆ ಬೇರೆ ಹಸಿಯುತ್ತಿತ್ತು. ತಿಂಡಿ ತಿಂದು ಹಿಂತಿರುಗುವ ಆಶಯದೊಂದಿಗೆ ದಾಲ್ಕಾನಿಯಾದ ಕ್ಯಾಂಪಿನತ್ತ ಹೊರಟೆ.

ಕೊರಕಲನ್ನು ಏರುವ ಮುನ್ನ ಕೊನೆಯ ಬಾರಿ ಹಿಂತಿರುಗಿ ನೋಡಿದಾಗ ನಾನು ಈವರೆಗೂ ನಡೆದು ಬಂದಿರುವ ದಾರಿಯಲ್ಲಿ ಹಳ್ಳಿಯ ಕಡೆಯಿಂದ ಇಬ್ಬರು ಬಿದ್ದೇಹೋಗುವಂತೆ ಓಡೋಡಿ ಬರುತ್ತಿರುವುದು ಕಾಣಿಸಿತು. ನಾನು ಅವರಿಗೆ ಎದುರಾಗಿ ಓಡಿದೆ. ಅಡ್ಡ ಸಿಕ್ಕ ಅವರು 'ಇದೀಗ ತಾನೆ ಕೋಡುಗಲ್ಲಿನ ಹಳ್ಳಿಯ ಕಡೆಯ ಕಮರಿಯಲ್ಲಿ ಹುಲಿ ಒಂದು ಎತ್ತನ್ನು ಹಿಡಿದು ಕೊಂದಿದೆ' ಎಂದು ಹೇಳಿದರು. ನಾನು ಬಂದಿದ್ದ ಇಬ್ಬರಲ್ಲಿ ಒಬ್ಬನನ್ನು 'ಕ್ಯಾಂಪಿಗೆ ಹೋಗಿ ತಿನ್ನಲಿಕ್ಕೆ ಒಂದಿಷ್ಟು ಊಟವನ್ನು ಜೊತೆಗೆ ಒಂದಿಷ್ಟು ಟೀಯನ್ನು ತರುವಂತೆ ಹೇಳಬೇಕೆಂದು' ಸೂಚಿಸಿ ಇನ್ನೊಬ್ಬನನ್ನು ಕರೆದುಕೊಂಡು ಎತ್ತು ಬಿದ್ದಿದ್ದ ಜಾಗದತ್ತ ಓಡಿದೆ.



ಹುಲಿ ಎತ್ತನ್ನು ಕೊಂದಿದ್ದ ಕಣಿವೆ ಸುಮಾರು ಇನ್ನೂರು ಅಡಿ ಆಳವಾಗಿದ್ದು ನಾನ್ನೂರು ಅಡಿ ಅಗಲವಾಗಿತ್ತು. ನಾವು ಅಲ್ಲಿಗೆ ತಲುಪಿದಾಗ ಅಲ್ಲಿ ರಣಹದ್ದುಗಳ ಜಾತ್ರೆಯೇ ನೆರೆದಿತ್ತು. ನೂರಾರು ಹದ್ದುಗಳು ಆ ಎತ್ತನ್ನು ಸಂಪೂರ್ಣ ಸ್ವಾಹಮಾಡಿ ಬಿಟ್ಟಿದ್ದವು. ಕೆಲವು ತುಣುಕು ಮೂಳೆ ಮತ್ತು ಚರ್ಮದ ಹೊರತು ಅಲ್ಲಿ ಮತ್ತೇನೂ ಇರಲಿಲ್ಲ. ಇದು ಬಿದ್ದಿದ್ದ ಜಾಗಕ್ಕೆ ಹಳ್ಳಿಯಿಂದ ನೇರವಾಗಿ ಹಗ್ಗ ಎಳೆದಿದ್ದರೆ ನೂರ ಗಜವಾಗುತ್ತಿತ್ತು. ಆದರೆ ಈಗ ನಾವು ನಿಂತ ಜಾಗದಿಂದ ಕೆಳಕ್ಕಿಳಿಯುವುದು ಅಸಾಧ್ಯವಾಗಿತ್ತು. ನನ್ನ ಜೊತೆಯಲ್ಲಿದ್ದವನು ಹೇಳದೆ ಕೇಳದೆ ಮುಂದಕ್ಕೆ ಓಡಿದ.. ನಾನು ಅವನನ್ನು ಹಿಂಬಾಲಿಸಿದೆ. ಅವನು ಆ ಕಣಿವೆಯ ದಂಡೆಯಲ್ಲೇ ಕಾಲು ಮೈಲಿಗಳಷ್ಟು ಸಾಗಿ ಬಲಕ್ಕೆ ತಿರುಗಿ ಕಣಿವೆಯೊಳಕ್ಕೆ ದನಗಳು ಇಳಿದಿದ್ದ ಜಾಡಿನಲ್ಲಿ ಒಳಕ್ಕಿಳಿದ. ಅದೊಂದು ವಿಕಾರವಾದ ಕಮರಿ. ಅದರ ಒಳಹೊರ ಮೈಯಲ್ಲೆಲ್ಲಾ ದಟ್ಟವಾದ ಕುರುಚಲು ಹಾಗೂ ಹುಲ್ಲಿನ ಪೊದೆಗಳು ಗಿಡಿದುಕೊಂಡು ಭಯಾಜನಕವಾಗಿತ್ತು. ಪೂರ್ವಾಪರಗಳ ಅರಿವಿಲ್ಲದೆ ಒಳಹೊಕ್ಕರೆ ಸಾವಿನ ಮನೆಯನ್ನು ಹೊಕ್ಕಂತಾಗುತ್ತಿತ್ತು. ನಾನು ಅಷ್ಟೊಂದು ಹತಾಶನಾಗಿರಲಿಲ್ಲ. ಹಿಂತಿರುಗಿ ಹಳ್ಳಿಗೆ ಬಂದೆವು. ನಾನು ಹಳ್ಳಿಯ ಮುಖ್ಯಸ್ಥನನ್ನು ಕುರಿತು ನೋಡಿ ಹದ್ದುಗಳು ಇಡೀ ಎತ್ತನ್ನು ಖಾಲಿ ಮಾಡಿಬಿಟ್ಟಿವೆ. ರಾತ್ರಿ ಅದರ ಮೇಲೆ ಗೊತ್ತು ಕೂರುವುದು ಉಪಯೋಗವಿಲ್ಲ. ತಿನ್ನಲು ಏನೂ ಇರದಿದ್ದಾಗ ಹುಲಿಯನ್ನು ನಿರೀಕ್ಷಿಸುವುದು ಮೂರ್ಖತನ. ಆದ್ದರಿಂದ ನನಗೊಂದು ಎಳೆಯ ಕೋಣ ಹಾಗೂ ಒಂದು ಮಾರಿನಷ್ಟು ಗಟ್ಟಿಯಾದ ಹಗ್ಗವನ್ನು ಕೊಡಿ' ಎಂದು ಕೇಳಿದೆ. ಮುಖ್ಯಸ್ಥ ವ್ಯವಸ್ಥೆ ಮಾಡಲು ಒಪ್ಪಿದ. ಇವೆಲ್ಲ ವ್ಯವಸ್ಥೆಯಾಗುವ ಹೊತ್ತಿಗೆ ದಲ್ಕಾನಿಯಾದ ಕ್ಯಾಂಪಿನಿಂದ ನಮ್ಮ ಕಡೆಯ ಇಬ್ಬರು ಟೀ ಹಾಗೂ ಊಟದ ರಾಶಿಯನ್ನೇ ಹೊತ್ತುತಂದರು.

ನಾನು ಮತ್ತೆ ಕಣಿವೆಯೊಳಕ್ಕಿಳಿದಾಗ ಸೂರ್ಯ ಸಾವಿಗೆ ಹತ್ತಿರವಾಗುತ್ತಿದ್ದ. ಇಂಥ ಹೊತ್ತಿನಲ್ಲಿ ಒಂದು ಯಮಗಾತ್ರದ ಕೋಣವನ್ನು ಮುಂದೆ ಬಿಟ್ಟುಕೊಂಡು ಅನೇಕ ಹಳ್ಳಿಗರು ಹೊರಟಿದ್ದರು. ಆ ಕೋಣವನ್ನು ಹಳ್ಳಿಯ ಮುಖ್ಯಸ್ಥ ಪಕ್ಕದ ಹಳ್ಳಿಯಿಂದ ನನಗಾಗಿ ಖರೀದಿಸಿ ತಂದಿದ್ದ. ಹುಲಿ ಎತ್ತನ್ನು ಕೊಂದ ಜಾಗದಿಂದ ಐವತ್ತು ಗಜಗಳ ದೂರದಲ್ಲಿ ಕಮರಿಯ ಗೋಡೆಯಿಂದ ಅನೇಕ ಪೈನ್ ಮರಗಳು

ಟಿಸಿಲೊಡೆದು ಕಣಿವೆಯೊಳಕ್ಕೆ ಚಾಚಿಕೊಂಡಿದ್ದವು. ನಾನು ಅಂಥ ಒಂದು ಪೈನ್ ಮರದ ಕೊಂಬೆಗೆ ಕೋಣವನ್ನು ಕಟ್ಟಿಸಿದೆ. ಇದಾದ ನಂತರ ಹಳ್ಳಿಗರು ಹಿಂತಿರುಗಿದರು. ಆ ಸುತ್ತಮುತ್ತ ನಾನು ಹತ್ತಿ ಕೂರಬಹುದಾದ ಒಂದು ಮರವೂ ಇರಲಿಲ್ಲ. ಈ ಕಮರಿಯ ಹಳ್ಳಿಯ ಕಡೆಗಿದ್ದ ಭಾಗದಲ್ಲಿ ಒಂದು ಕಡಿದಾದ ಕಂಬದ ಮಾದರಿಯ ಏಣುಗಲ್ಲಿತ್ತು. ನೆತ್ತಿಯಲ್ಲಿ ಎರಡು ಅಡಿ ಅಗಲ ಐದು ಅಡಿ ಉದ್ದವಾಗಿದ್ದ ಈ ಏಣುಗಲ್ಲು ಸಮತಟ್ಟಾಗಿತ್ತು. ತೀರಾ ವಿಚಿತ್ರವಾದ ಮೇಲ್ಮೈಯನ್ನು ಹೊಂದಿದ್ದ ಅದನ್ನು ಹೇಗಾದರು ಮಾಡಿ ಒಮ್ಮೆ ಹತ್ತಿ ಕುಳಿತರೆ ಹೆಚ್ಚೇನು ಭಯವಿರಲಿಲ್ಲ. ಅದರ ನೆತ್ತಿ ಹಳ್ಳಿಯ ಕಡೆಗೆ ಇಳಿಜಾರಾಗಿದ್ದರಿಂದ ನಾನು ನಿರೀಕ್ಷಿಸಿದ ದಿಕ್ಕಿನಿಂದ ಹುಲಿ ಬಂದರೆ ಅದಕ್ಕೆ ನಾನು ಕಾಣುವ ಸಾಧ್ಯತೆಯಿರಲಿಲ್ಲ. ತೀವ್ರ ಪರದಾಟದ ನಂತರ ನಾನು ಅದನ್ನು ಹತ್ತಿ ಇಳಿಜಾರಿನ ಕಡೆಗೆ ಕಾಲುಚಾಚಿ ಕೋಣವನ್ನು ಎಡಕ್ಕೆ ಬಿಟ್ಟುಕೊಂಡು ಬಂದೂಕದೊಂದಿಗೆ ಸ್ಥಿಡಿಯಾದೆ. ಈಗ ನನ್ನ ಮತ್ತು ಕೋಣದ ನಡುವೆ ಅಂದಾಜು ಮೂವತ್ತು ಗಜ ಅಂತರವಿತ್ತು. ಕೋಣ ನಿಂತಲ್ಲಿಂದ ಆರಂಭವಾಗುವ ಇಳಿಜಾರು ನನ್ನತ್ತ ಸಾಗಿ, ನಾನು ಕುಳಿತಿದ್ದ ಬಂಡೆಯ ತಳದವರೆಗೂ ಹರಿದಿತ್ತು.

ಸೂರ್ಯ ಅವಸರದಲ್ಲಿದ್ದಂತೆ ಅಸ್ತಂಗತನಾಗುತ್ತಿದ್ದ. ನನ್ನ ನಿರೀಕ್ಷೆ ಮೀರಿ ಹೊತ್ತು ಹೋಗುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ಎಲ್ಲೋ ಕಲ್ಲೊಂದು ಉರುಳಿ ಹೋದ ಸದ್ದಾಯಿತು. ನಾನು ಹುಲಿಯನ್ನು ನಿರೀಕ್ಷಿಸಿದ ದಿಕ್ಕು ನೋದಿದೆ. ಏನೂ ಕಾಣಲಿಲ್ಲ. ಕೋಣದತ್ತ ನೋಡಿದೆ. ಈವರೆಗೂ ಎತ್ತೆತ್ತಲೋ ನೋಡುತ್ತಿದ್ದ ಕೋಣ ಈಗ ನನ್ನ ಕೆಳಗಿನ ತಗ್ಗಿನತ್ತ ನೋಡುತ್ತಿತ್ತು. ನಿಜವಾಗಿಯೂ ಬೆಬ್ಬರು ಬಿದ್ದು ನೋಡುತ್ತಿತ್ತು. ನಾನು, ಅದು ನೋಡುತ್ತಿದ್ದ ಜಾಗವನ್ನು ನಿಧಾನವಾಗಿ ತಡಕುತ್ತ ಹಿಂದೆ ಸರಿದೆ. ಮೊದಲು ಏನೂ ಕಾಣಲಿಲ್ಲ. ಮತ್ತೆ ಮುಂದೆ ನೋಡುತ್ತಿದ್ದಾಗ ನನ್ನ ತಳದ ಕಮರಿಯ ತಗ್ಗಿನಲ್ಲಿ ಏನೋ ಚಲನೆ ಕಂಡಿತು__?! ಹೌದು !...... ಅದು ಹುಲಿಯ ತಲೆ........!! ಹುಲಿಯ ತಲೆ ನನಗೆ ಕಾಣಿಸುತ್ತಿತ್ತೇ ವಿನಃ ನಾನು ಕುಳಿತ ಜಾಗದಿಂದ ಅದಕ್ಕೆ ಗುರಿಕಟ್ಟಲು ಸಾಧ್ಯವಿರಲಿಲ್ಲ. ಅದು ಅನೇಕ ಅಡಿಗಳಷ್ಟು ಮುಂದೆ ಬಂದರೆ ಮಾತ್ರ ನನ್ನ ಬಂದೂಕಿನ ವ್ಯಾಪ್ತಿಗೆ ಸಿಗುತ್ತಿತ್ತು. ಕಾಯುತ್ತಾ ಕುಳಿತೆ. ಹುಲಿ ಸುತ್ತಮುತ್ತ ನೋಡುತ್ತಿತ್ತು. ಅದಕ್ಕೆ ಏನನ್ನಿಸುತ್ತಿತ್ತೋ ಗೊತ್ತಿಲ್ಲ,



ಸಮಾಧಾನವಾಯಿತೇನೋ ಎಂಬಂತೆ ನಿಧಾನವಾಗಿ ಏಣಿನ ಮರೆಯಲ್ಲೇ ಕೋಣದತ್ತ ಸಾಗಿತು. ಹೋಗಿದ್ದು ಸೀದಾ ಕೋಣದ ಹಿಂಭಾಗಕ್ಕೆ ಹೋಯಿತು. ಹುಲಿಯ ಅಸ್ಪಷ್ಟ ದರ್ಶನದಿಂದಲೇ ಗಾಬರಿಯಾಗಿದ್ದ ಕೋಣ ಹುಲಿಯ ಸಾಕ್ಷಾತ್ ಹಾಜರಿಯಿಂದ ಸಿಟ್ಟಿಗೆದ್ದು; ಸಿರುಗುಟ್ಟುತ್ತ ಪ್ರತಿಭಟಿಸತೊಡಗಿತು. ಇಂತಹ ಕೊಬ್ಬಿದ ಕೋಣವನ್ನು ಸಿಟ್ಟಿಗೆದ್ದ ಸಮಯದಲ್ಲಿ ಕೊಂಬಿನ ಕಡೆಯಿಂದ ಆಕ್ರಮಿಸುವುದು ಕಷ್ಟವೆಂದು ಹುಲಿಗೂ ಅದರ ಅನುಭವ ಕಲಿಸಿರಬೇಕು. ಹಾಗಾಗಿ ಅದು ಕೋಣದ ಹಿಂಬದಿಯನ್ನೇ ಆಶ್ರಯಿಸಿತು. ಆದರೆ ನನಗೆ ಫಜೀತಿಗಿಟ್ಟುಕೊಂಡಿತು. ಹುಲಿ ಸುತ್ತಿ ಬಳಸಿ ಕೋಣದ ಮೇಲೆ ಬೀಳಲು ಸಂಚು ಮಾಡುತ್ತಿತ್ತು. ಇವೆರಡೂ ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ಒಬ್ಬರಿಂದೊಬ್ಬರು ರಕ್ಷಿಸಿಕೊಳ್ಳುವ ಆಟದಲ್ಲಿ ನನಗೆ ಹುಲಿಯೇ ಕಾಣುತ್ತಿಲ್ಲ! ಇನ್ನೇನು ಹುಲಿ ನನ್ನ ಕಡೆ ಬಂದಿದೆ ಎಂದಾಗ..... ಕ್ಷಣಾರ್ಧದಲ್ಲಿ ಕೋಣ ಅದಕ್ಕೆ ಅಡ್ಡಾಗುತ್ತಿತ್ತು. ಈ ಬಗ್ಗೆಯ ನಿರಂತರ ಏಳುಬೀಳುಗಳ ನಡುವೆ ಕೊನೆಗೂ ಹುಲಿ ಹೇಗೋ ಮಾಡಿ ಕೋಣದ ಕುತ್ತಿಗೆಗೆ ಬಾಯಿಹಾಕಿತು. ಕೋಣ ಥಕ ಥಕ ಕುಣಿಯುತ್ತಾ ಒದ್ದಾಡಹತ್ತಿತು. ಸಾಮಾನ್ಯವಾದ ನಂಬಿಕೆ ಎಂದರೆ ಹುಲಿಗಳು ಪ್ರಾಣಿಗಳ ಕುತ್ತಿಗೆಗೆ ಪಂಜದಿಂದ ಹೊಡೆದು ಕೆಳಕ್ಕೆ ಕೆಡವಿ ಕೊಲ್ಲುತ್ತವೆ ಎಂಬುದು. ಆದರೆ ಹಾಗಲ್ಲ. ಹುಲಿಗಳು ನೇರವಾಗಿ ಶಿಕಾರಿಯ ಕುತ್ತಿಗೆಗೆ ಬಾಯಿ ಹಾಕಿ ಕೋರೆದಾಡೆಗಳ ಮೂಲಕ ಕೊಲ್ಲುತ್ತವೆ. ಕ್ಷಣದಿಂದ ಕ್ಷಣಕ್ಕೆ ಕೋಣದ ಪರದಾಟ ಹೆಚ್ಚುತ್ತಿತ್ತು. ಹುಲಿ ನನ್ನ ಕಡೆ ತಿರುಗುವುದನ್ನು ಗುರಿ ಇಟ್ಟು ಕಾಯುತ್ತಿದ್ದೆ. ಅದೋ ಹುಲಿ ನನಗೆ ಕಾಣಿಸಿತು ಎನ್ನುತ್ತಿದ್ದಂತೆ ನನ್ನ ಪಾಯಿಂಟ್ 275 ರೈಫಲ್ ಕಿಡಿಗಾರಿತು. ಒಂದೇ ಕ್ಷಣ, ಕೋಣ ಕುಕ್ಕರಿಸಿ ಬಿತ್ತು. ಹುಲಿ ತೃಣ ಮಾತ್ರ ಶಬ್ದ ಮಾಡದೆ ಚಂಗನೆ ನೆಗೆದು ಮಾಯವಾಯಿತು. ನಾನು ಮಹತ್ವಾಕಾಂಕ್ಷೆಯ ಶಿಕಾರಿಯಲ್ಲಿ ಗುರಿತಪ್ಪಿದ್ದು ಖಚಿತವಾಯಿತು. ಬಹುಶಃ ನನ್ನ ಬಂದೂಕದ ಗುರಿ ಹುಲಿಯಾಗಿದ್ದರೂ ತಕ್ಷಣ ಅಡ್ಡ ತಿರುಗಿದ ಕೋಣಕ್ಕೆ ಅದು ಬಂದಿರಬೇಕು. ಇದಕ್ಕೆ ನಾನೇನೂ ಕಾರಣ ಕೊಡಲಾರೆ. ಆದರೆ ಆ ಹುಲಿಗೆ ಏನಾಗಿದೆ, ಯಾವ ಕಡೆಯಿಂದ ಗುಂಡು ಬಡಿದಿದೆ ಎಂಬುದು ಅದರ ಗಮನಕ್ಕೆ ಬಂದಂತಿರಲಿಲ್ಲ. ಎಲ್ಲವೂ ಕ್ಷಣಾರ್ಧದಲ್ಲಿ ಸಂಭವಿಸಿ ಕೋಣ ಬಿದ್ದುಹೋಗಿತ್ತು. ನಾನಂತೂ ಏನೊಂದೂ ಅರಿವಾಗದ ಪರವಶ ಸ್ಥಿತಿಯಲ್ಲಿದೆ.

ಆದರೆ ಒಂದಂತೂ ನಿಜ, ಕೋಣ ಸತ್ತು ಬಿದ್ದಿರುವುದು ಹುಲಿಗೆ ತಿಳಿದಿದೆ. ಅದು ಮತ್ತೆ ಬಂದರೂ ಬರಬಹುದಿತ್ತು. ನಾನು ಬಂದೂಕಕ್ಕೆ ಖಾಲಿಯಾದ ಗುಂಡನ್ನು ತುಂಬಿ ಕಾಯುತ್ತಾ ಕುಳಿತೆ.

ನನ್ನ ಕಾಯುವಿಕೆ ದೀರ್ಘವಾಗುತ್ತಿತ್ತು. ಇಷ್ಟಾದರೂ ಕೋಣ ಏಳಲಿಲ್ಲವಾದ್ದರಿಂದ ನನ್ನ ಗುಂಡು ಅದಕ್ಕೆ ಬಿದ್ದಿದೆ ಎಂಬುದು ಖಚಿತವಾಗಿತ್ತು. ಹತ್ತು–ಹದಿನೈದು ನಿಮಿಷಗಳು ನಿಧಾನವಾಗಿ ಸರಿದವು. ಅಷ್ಟರಲ್ಲಿ ಮತ್ತೆ ಹುಲಿ ನನ್ನ ಕೆಳಗಿನ ಕೊರಕಲಿನಿಂದಲೇ ತಲೆಯನ್ನು ಮುಂಚಾಚಿ ನಿಂತಿದ್ದು ಕಾಣಿಸಿತು. ಸುಮಾರು ಹೊತ್ತು ಅಲ್ಲೇ ಸುಮ್ಮನೆ ನಿಂತಿತು. ಆಮೇಲೆ ಮೀನಾಮೇಷಾ ಎಣಿಸುತ್ತಾ ಒಂದೊಂದೆ ಹೆಜ್ಜೆ ಸರಿಯುತ್ತ ಕೋಣದತ್ತ ಸಾಗಿತು. ಅದು ಕೋಣದ ಬಳಿಗೆ ಬರುವವರೆಗೂ ನಾನು ಆತಂಕದಿಂದ ನಿರೀಕ್ಷಿಸುತ್ತ ಕುಳಿತೆ. ನನ್ನ ಕಣ್ಣೆದುರಿಗೆ ಉದ್ದಕ್ಕೆ–ಕಪ್ಪಗೆ ಬಿದ್ದಿದ್ದ ಕೋಣದ ಸಮೀಪದಲ್ಲಿ ಕೋಣದ ಬಣ್ಣದೊಂದಿಗೆ ಮಿಳಿತವಾದ ಹುಲಿಯ ಪಟ್ಟೆಗಳ ನಡುವಿನ ಬಂಗಾರ ಮಿಶ್ರಿತ ಬಣ್ಣಕ್ಕೆ ಗುರಿ ಕಟ್ಟಿ ಕುದುರೆ ಎಳೆದೆ. ಚಂಗನೆ ಹುಲಿ ನೆಗೆದಿದ್ದು ಕಾಣಿಸಿತು. ನಾನು ನಿರೀಕ್ಷಿಸಿದಂತೆ ಮುಮ್ಮುಖ ಹಾರಿ ಬೀಳದೆ ದಿಕ್ಕೆಟ್ಟ ಪಾತರಗಿತ್ತಿಯಂತೆ ಪಕ್ಕದ ಕಮರಿಯನ್ನು ಹಾರಿ ಕಡಿದನ್ನು ಏರಿಸುತ್ತಾ ಏರುವ ರಭಸಕ್ಕೆ ಕಾಲಿಗೆ ಸಿಕ್ಕ ಕಲ್ಲುಗಳನ್ನು ರಕ್ತಪಿಶಾಚಿಯಂತೆ ಉದುರಿಸುತ್ತಾ ಓಡೇಬಿಟ್ಟಿತು.

ನಾನು ಇನ್ನೊಮ್ಮೆ ಗುರಿ ತಪ್ಪಿದ್ದೇ. ಏಕೆಂದು ಗೊತ್ತಿಲ್ಲ. ಎಲ್ಲವೂ ಸರಿಯಾಗಿಯೇ ಇತ್ತು. ಗಾಳಿ, ಬೆಳಕು, ಗಿಡ ಮರಗಳು ಅವುಗಳ ನೆರಳುಗಳಾದಿಯಾಗಿ ಎಲ್ಲವೂ ನನ್ನನ್ನು ಸಮರ್ಥಿಸಿಕೊಳ್ಳುವಂತಹ ಯಾವ ಕಾರಣಗಳೂ ನನಗೆ ಕಾಣಲಿಲ್ಲ. ನಾನು ಸರಿಯಾಗಿ ಗುರಿಕಟ್ಟುವುದರಲ್ಲೇ ತಪ್ಪು ಮಾಡಿದ್ದೇನೆ ಎಂದು ಒಪ್ಪಿಕೊಳ್ಳಲೇಬೇಕಾಗಿತ್ತು. ನನ್ನ ಜೀವಮಾನದಲ್ಲೇ ಹಿಂದೆಂದೂ ಹೀಗಾಗಿರಲಿಲ್ಲ.

ಇನ್ನು ಹುಲಿಯೊಂದು ಹಿಂತಿರುಗುವ ಸಾಧ್ಯತೆ ಇದ್ದಿದ್ದರೆ ಅದಕ್ಕೆ ತಲೆಕೆಟ್ಟಿರಬೇಕು. ಅಲ್ಲದೆ ಅದಾಗಿ ಹಿಂತಿರುಗಿ ಬಂದರೂ ಈಗಿದ್ದ ಬೆಳಕಿನಲ್ಲಿ ಅದನ್ನು ಗಾಯಗೊಳಿಸಬಹುದೇ ವಿನಃ ಕೊಲ್ಲುವ ಭರವಸೆ ನನಗಿರಲಿಲ್ಲ. ಇದ್ದಿದ್ದರಲ್ಲಿ ಒಳ್ಳೇ ಬೆಳಕಿದ್ದಾಗಲೇ ಗುರಿತಪ್ಪಿದ ನಾನು ಈ ಕತ್ತಲಿನಲ್ಲಿ ಮುಗಿಸುತ್ತೇನೆಂಬ



ಭರವಸೆ ನನಗಿರಲಿಲ್ಲ.

ಬೆಳಗಿನ ಅಲೆದಾಟದ ಸಮಯದಿಂದಲೂ ನಾನು ತೊಟ್ಟ ಬಟ್ಟೆಗಳು ಬಹುಪಾಲು ತೇವವಾಗಿಯೇ ಇದ್ದವು. ಬಿಸಿಲಿನ ಝಳಕ್ಕೆ, ಸುರಿಯುವ ಬೆವರು ಬಟ್ಟೆಗಳನ್ನು ನೀರಿನಲ್ಲಿ ಅದ್ದಿದಂತೆ ನೆನೆಸಿಟ್ಟಿತ್ತು. ಈಗಂತೂ ಶೀತಗಾಳಿ ಶುರುವಾಗಿತ್ತು. ಇದು ಹಿಮಾಲಯದ ವೈಚಿತ್ರಗಳಲ್ಲೊಂದು. ಈಗ ಶೀತ–ನೆಗಡಿ ಹಿಡಿಯುವುದು ಗ್ಯಾರಂಟಿ ಎನಿಸುತ್ತಿತ್ತು. ನಾನು ತೊಟ್ಟಿದ್ದ ಮೊಣಕಾಲುವರೆಗಿನ ಖಾಕಿ ಚಡ್ಡಿಯು ಸಧ್ಯದ ಥಂಡಿಯನ್ನು ತಡೆಯಲು ವಿಫಲವಾಗಿತ್ತು. ನನ್ನ ವಿಫಲತೆಯೊಂದಿಗೆ ಈ ದರಿದ್ರ ಬಟ್ಟೆಗಳು ಹಾಗೂ ಶೀತಗಾಳಿಯೂ ಸೇರಿ ನನ್ನ ಹಿಂಸೆಯನ್ನು ದ್ವಿಗುಣಗೊಳಿಸುತ್ತಿದ್ದವು. ನನ್ನ ಮಂಕುಕವಿದ ಮನಸ್ಸು ಒಂದು ಲೋಟ ಬಿಸಿ ಬಿಸಿ ಟೀಗಾಗಿ ಹಂಬಲಿಸುತ್ತಿತ್ತು. ಹಳ್ಳಿಗೆ ಹಿಂತಿರುಗುವುದು ಸಾಧ್ಯವಿದ್ದರೆ ಅಲ್ಲಿ ಟೀ ಸಿಗುವುದೂ ಗ್ಯಾರಂಟಿಯಾಗಿತ್ತು. ನನಗೆ ಹಿಂತಿರುಗಲು ಇದಕ್ಕಿಂತ ಬಲವಾದ ಪ್ರಲೋಭನೆ ಬೇಕಾಗಿರಲಿಲ್ಲ. ಆದರೆ ಸಾವಿನ ಭೀತಿ! ಇಲ್ಲಿಂದ ಹಳ್ಳಿಗೆ ಹಿಂತಿರುಗುವಾಗ ದಾಟಬೇಕಾದ ಕಮರಿ, ಕತ್ತಲು ಕವಿದ ದಾರಿ, ಆಜುಬಾಜಿನ ನರಕಸದೃಶ ಪೊದೆಗಳು ಎಲ್ಲವೂ ಕುಂತಲ್ಲೇ ಭಯ ಹುಟ್ಟಿಸುತ್ತಿದ್ದವು. ಹಿಂತಿರುಗಲು ಮನಸ್ಸು ಹಾತೊರೆಯುತ್ತಿತ್ತು. ಸಧ್ಯಕ್ಕೆ ಹುಲಿ ಎಲ್ಲಿದೆ ಎಂಬುದನ್ನು ಅಂದಾಜು ಮಾಡಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಅದು ಇಲ್ಲಿಂದ ಐವತ್ತು ಗಜ ದೂರದಿಂದ ಐವತ್ತು ಮೈಲಿಗಳವರೆಗೆ ಎಲ್ಲಿ ಬೇಕಾದರೂ ಇರಬಹುದು. ಅಥವಾ ನಾನು ಹೋಗಬೇಕಾದ ದಾರಿಯಲ್ಲೇ ಅಡ್ಡಾಡುತ್ತಿರಬಹುದು. ಇಂದಿನ ನನ್ನ ವಿಫಲತೆಯನ್ನು ನೋಡಿದರೆ ಅದನ್ನು ಮುಗಿಸುವುದಾದರೆ ಹಗಲಿನಲ್ಲಿ ಮಾತ್ರ ಎನಿಸುತ್ತಿತ್ತು. ಏಕೋ ಗೊತ್ತಿಲ್ಲ. ಹಾಗಾಗದಿದ್ದರೆ; ಅದೇ ಮುದಿ ವಯಸ್ಸಾಗಿ ಸಾಯುವವರೆಗೂ ಅದನ್ನು ಕೊಲ್ಲಲಾಗದು ಎಂಬ ಗುಮಾನಿ ಆರಂಭವಾಯಿತು, ಇದನ್ನು ಒಪ್ಪಿಕೊಳ್ಳಲೂ ಸಾಧ್ಯವಿಲ್ಲ. ಹಾಗೆಂದು ನಿರಾಕರಿಸಲೂ ಆಗುತ್ತಿಲ್ಲ. ಆದರೆ ಇದನ್ನು ಪ್ರತಿಭಟಿಸುವವನಂತೆ ನಾನು ಕುಳಿತ ಕಡಿದನ್ನು ಅಪ್ರಜ್ಞಾಪೂರ್ವಕವಾಗಿ ಇಳಿಯತೊಡಗಿದೆ. ಈ ಅನಿಶ್ಚಿತ ಮನಃಸ್ಥಿಯಲ್ಲಿ ಹೆಜ್ಜೆ ಹಿಡಿತ ತಪ್ಪಿತು. ಸೀದಾ ಕೆಳಕ್ಕೆ ಜಾರಿದೆ. ಅದೃಷ್ಟಕ್ಕೆ ತಳದಲ್ಲಿ ಮರಳಿತ್ತು. ಕೈಕಾಲು ಮುರಿಯದೆ ಕ್ಷೇಮವಾಗಿ

ಕುಕ್ಕರುಬಿದ್ದೆ.

ನಾನು ಹಿಂತಿರುಗಿದಾಗ ಇಡೀ ಹಳ್ಳಿ ಎಚ್ಚರವಾಗಿತ್ತು. ಎಲ್ಲರೂ ನನ್ನ ಸುತ್ತ ಸುತ್ತಿಕೊಂಡರು. ಸುತ್ತಲಿಂದ ನೂರಾರು ಕುತೂಹಲದ ಪ್ರಶ್ನೆಗಳು ತೂರಿಬಂದವು. ಈ ಎಲ್ಲಾ ಪ್ರಶ್ನೆಗಳಿಗೂ ನನ್ನಲ್ಲಿ ಸಾಧ್ಯವಿದ್ದದ್ದು ಒಂದೇ ಉತ್ತರ..! 'ಕಲ್ಪನೆಯ ಹುಲಿಗೆ, ಖಾಲಿ ಬಂದೂಕಿನಿಂದ ಗುಂಡು ಹೊಡೆದೆ; ಎಲ್ಲವೂ ಮಂಗಮಾಯವಾದವು', ಎಲ್ಲರೂ ಚಕಿತರಾಗಿ ನನ್ನನ್ನೇ ನೋಡುತ್ತಿದ್ದರು. ನಾನು ಹಾರಿಸಿದ ಎರಡು ಗುಂಡುಗಳ ಸದ್ದಿಗೆ ಅವರ ಕಿವಿಗಳು ಭೌತಿಕ ಸಾಕ್ಷಿಯಾಗಿದ್ದವು.

ನಾವೆಲ್ಲಾ ಧಗಧಗಿಸಿ ಉರಿಯುತ್ತಿದ್ದ ಬೆಂಕಿಯ ಸುತ್ತ ಕುಳಿತಿದ್ದೆವು. ಬೆಂಕಿಯ ಝಳ ನನ್ನ ಒಳ-ಹೊರಗನ್ನು ಕಾಯಿಸುತ್ತಿತ್ತು. ಸುಮ್ಮನೆ ಲೋಟಗಟ್ಟಲೆ ಟೀ ಕುಡಿಯುತ್ತಿದ್ದೆ. ಇದರಲ್ಲೇ ಏನನ್ನೋ ಮುಚ್ಚಿಹಾಕಲು ಬಯಸಿದಂತೆ. ಪ್ರಜ್ವಲವಾಗಿದ್ದ ಬೆಂಕಿ, ಒಳ ಸೇರುತ್ತಿದ್ದ ಟೀ ನನ್ನ ಹತಾಷೆಯನ್ನು ತಹಬಂದಿಗೆ ತರುತ್ತಿದ್ದವೆನಿಸುತ್ತದೆ. ಆಗ ಅಲ್ಲೇನು ನಡೆಯಿತು ಎಂದು ನೆರದಿದ್ದವರಿಗೆ ಹೇಳಿದೆ. ನನ್ನ ಸುತ್ತಮುತ್ತ ಬಹುಪಾಲು ಯುವಕರೇ ಕುಳಿತಿದ್ದರು. ನನ್ನ ಮಾತುಗಳನ್ನು ಕೇಳಿದ ಅವರು 'ಬನ್ನಿ, ಈಗಲೇ ಪರೀಕ್ಷಿಸಿ ಬಿಡುವ, ಏನಾಗಿದೆ ಎಂದು' ಎನ್ನುತ್ತಾ ಉತ್ತೇಜಿತರಾಗಿ ಹೊರಟೇ ಬಿಟ್ಟರು. ನನಗೂ ಹಾಗೆ ಅನಿಸುತ್ತಿತ್ತು. ಎಲ್ಲರನ್ನೂ ಹಿಂದಿಟ್ಟುಕೊಂಡು ನಾನು ಕುಳಿತಿದ್ದ ಜಾಗಕ್ಕೆ ಬಂದೆ, ಅಲ್ಲಿ ನಿಂತು, ನಾನು ಹೇಗೆ ಕುಳಿತಿದ್ದೆ... ಹುಲಿ ಹೇಗೆ ನನ್ನ ಕೆಳಗಿನ ಗುಂಡಿಯಿಂದ ಎದ್ದು ಬಂತು_ ಹೇಗೆ ಕೋಣದ ಮೇಲೆ ದಾಳಿ ಮಾಡಿತು. ನಾನು ಹೇಗೆ ಗುಂಡು ಹೊಡೆದೆ_ ಅದು ಹೇಗೆ ಯಾವ ಕಡೆಗೆ ಎಗರಿ ಓಡಿ ಹೋಯಿತು. ಎಂಬುದನ್ನು ಅಭಿನಯಪೂರ್ವಕವಾಗಿ ಆಯಾದಿಕ್ಕಿಗೆ ಕೈತೋರಿಸುತ್ತಾ ವಿವರಿಸುತ್ತಿದ್ದೆ. ಅಷ್ಟರಲ್ಲಿ ನಾನು ಮೊದಲು ಗುಂಡು ಹೊಡೆದ ದಿಕ್ಕಿನಿಂದ ಹರ್ಷೋದ್ಗಾರ! 'ನೋಡಿ ಸಾಹೇಬ್ರೇ.. ಇಲ್ಲೊಂದು ಹುಲಿ ಸತ್ತು ಬಿದ್ದಿದೆ!' ನಾನು ತಬ್ಬಿಬ್ಬಾದೆ. ಈ ಅಪಾರಾತ್ರಿಯಲ್ಲಿ ತಮಾಷೆ ಮಾಡುತ್ತಿದ್ದಾರೆಯೇ? ನನ್ನಂತೆ ಇವರ ಕಣ್ಣುಗಳಿಗೂ ಮಬ್ಬು ಹಿಡಿದಿದೆಯೇ? ಅನಿಸಿತು. ಅಸಮಧಾನದಿದಲೇ ಹತ್ತಿರ ಹೋಗಿ ನೋಡಿದರೆ_ ಹೌದು, ಈ ಹೊತ್ತು ಇತರರಿಗೆ ಮಾತ್ರವಲ್ಲ ನನ್ನ ಕಣ್ಣಗಳಿಗೂ ಒಂದು ಹುಲಿ ಬಿದ್ದಿರುವುದು ಕಾಣುತ್ತಿದೆ! ಅಲ್ಲಿ ನಿಜಕ್ಕೂ ಒಂದು ಹುಲಿ ಸತ್ತು ಬಿದ್ದಿದೆ. ಮರುಕ್ಷಣ ನನ್ನ



ತಲೆಯಲ್ಲಿ ಹುಟ್ಟಿದ ಪ್ರಶ್ನೆ ಎಂದರೆ 'ಹಾಗಾದರೆ ನಾನು ಎರಡನೆಯ ಗುಂಡನ್ನು ಯಾವುದಕ್ಕೆ ಹೊಡೆದೆ, ಅದೂ 20-30 ನಿಮಿಷಗಳ ತರುವಾಯ?' ನಾನು ಇದೇ ಪ್ರಶ್ನೆಗಳನ್ನು ಅವರ ಮುಂದಿಟ್ಟು, ಅದು ಹೇಗೆ ಸಂಭವಿಸಿತು ಎಂದು ದಿಕ್ಕನ್ನು ನಿರ್ದೇಶಿಸಿ ವಿವರಿಸಿದೆ. ಅಷ್ಟರಲ್ಲಿ ಇನ್ನೊಂದು ಹುಲಿ ಓಡಿಹೋದ ದಿಕ್ಕಿನಿಂದ ಮತ್ತಷ್ಟು ಧ್ವನಿಗಳ ಒಕ್ಕೊರಲಿನ ಚೀತ್ಕಾರ_. 'ನೋಡಿ ಸಾಹೇಬ್ರೆ.. ಇಲ್ಲೂ ಒಂದು ಹುಲಿ ಸತ್ತು ಬಿದ್ದಿದೆ!? ನಾನು ಮೂರ್ಛೆ ಹೋಗುವುದೊಂದು ಬಾಕಿ ಉಳಿದಿತ್ತು. ಆ ಜಾಗದತ್ತ ಓಡಿದೆ ನಿಜ_ ಅಲ್ಲೂ ಒಂದು ಹುಲಿ ಸತ್ತು ಬಿದ್ದಿದೆ. ಎರಡೂ ಹೆಚ್ಚೂ ಕಡಿಮೆ ನಾನು ಗುಂಡು ಹೊಡೆದ ಜಾಗದಿಂದ ಸುಮಾರು ಅರವತ್ತು ಗಜಗಳ ಅಂತರದಲ್ಲಿ ಬಿದ್ದಿವೆ. ಬಹುಪಾಲು ಎರಡೂ ಒಂದೇ ಗಾತ್ರಕ್ಕಿವೆ.

ಈಗ ಇನ್ನೊಂದು ಸಂಧಿಗ್ಧಕ್ಕೆ ಸಿಕ್ಕಿಬಿದ್ದೆ. 'ಹಾಗಾದರೆ ಈ ಎರಡನೆಯ ಹುಲಿ ಯಾವುದು?' ಇದಕ್ಕೆ ಹಳ್ಳಿಗರು 'ಈವರೆಗೂ ನಾಲ್ಕು ಜನರನ್ನು ಕೊಂದಾಗಲಾಗಲೀ, ಬೆಳಿಗ್ಗೆ ಎತ್ತನ್ನು ಹಿಡಿದಾಗಲಾಗಲೀ, ನಮ್ಮವರು ನೋಡಿದ್ದು ಒಂದೇ ಹುಲಿಯನ್ನು ಈ ಎರಡನೆಯ ಹುಲಿ ಯಾವುದೆಂದು ಗೊತ್ತಿಲ್ಲ. ಬಹುಶಃ ಇದು ಆಕೆಯ ಜೊತೆಗಾರನಿರಬೇಕು. ಇದು ಹುಲಿಗಳ ಬೆದೆಯ ಕಾಲವಲ್ಲವೇ' ಎಂದು ನನ್ನ ಮುಂದೆ ಬಿದ್ದಿರುವ ಎರಡು ಹುಲಿಗಳಲ್ಲಿ ಒಂದು ನಿಜಕ್ಕೂ ಆ ಪುರಾತನ ನರಭಕ್ಷಕಿಯೇ ಆಗಿದ್ದರೆ ಜನರ ಮಾತು ಸತ್ಯವೆಂಬುದರದಲ್ಲಿ ಅನುಮಾನವಿರಲಿಲ್ಲ.

ನಾನು ಎರಡನೆಯ ಹುಲಿಯನ್ನು ಹತ್ತಿರದಿಂದ ನೋಡಿದಾಗಲೇ ಇದೊಂದು ಮಧ್ಯಮ ಪ್ರಾಯದ ಗಂಡು ಹುಲಿ ಎಂಬುದು ಸ್ಪಷ್ಟವಾಗಿತ್ತು. ಸೀದಾ ಮೊದಲ ಹುಲಿಯತ್ತ ಓಡಿದೆ. ಜನ ಕುತೂಹಲದಿಂದ ನನ್ನನ್ನು ಹಿಂಬಾಲಿಸಿದರು. ಮೊದಲ ನೋಟದಲ್ಲಿ ಜನರ ಊಹೆ ಸರಿಯಾಗಿರುವಂತೆ ಕಾಣುತ್ತಿತ್ತು. ಅದೊಂದು ವಯಸ್ಸಾದ ಹೆಣ್ಣು ಹುಲಿಯಾಗಿತ್ತು. ಪಕ್ಕದಲ್ಲಿದ್ದ ಒಬ್ಬನ ಕೈಗೆ ಬಂದೂಕ ಕೊಟ್ಟು ಹುಲಿಯ ಪಂಜಗಳ ಮುಂದೆ ದಗ್ಗಾಲುಮಂಡಿಯೂರಿ ಕುಳಿತು, ಅದರ ಪಂಜಗಳನ್ನು ನನ್ನ ಕೈಯ್ಯಲಿಡಿದು ಪರೀಕ್ಷಿಸಿದೆ. ಈ ಹಿಂದೆ ಗೋಧಿ ಹೊಲ ಕೊಯ್ಯುತ್ತಿದ್ದ ಹೆಂಗಸಿನ ಮೇಲೆ ಈ ನರಭಕ್ಷಕಿ ಧಾಳಿ ಮಾಡಿ ಓಡಿ ಹೋಗಿದ್ದಾಗ

ಅವಳ ಹೆಜ್ಜೆ ಗುರುತುಗಳು ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿವೆ. ಅವು ನನ್ನ ಕಣ್ಣಿಗೆ ಬಿದ್ದ ಈ ನರಭಕ್ಷಕಿಯ ಮೊಟ್ಟಮೊದಲ ಹೆಜ್ಜೆ ಗುರುತುಗಳಾಗಿದ್ದವು. ಹಾಗಾಗಿ ನಾನು ಅವುಗಳನ್ನು ಮರೆಯುವಂತೆಯೇ ಇರಲಿಲ್ಲ. ನನ್ನ ತಲೆಯಲ್ಲಿ ಹಚ್ಚೆ ಹೊಯ್ದಂತೆ ಕೂತಿದ ಆ ಚಿತ್ರಗಳೊಂದಿಗೆ ಈ ಪಾದಗಳನ್ನು ಹೋಲಿಸಿ ಪರೀಕ್ಷಿಸಿದೆ, ಇನ್ನೊಮ್ಮೆ ಮತ್ತೊಮ್ಮೆ ಪರೀಕ್ಷಿಸಿದೆ. ತನ್ನ ತಲೆಯಲ್ಲಿದ್ದ ಅಲ್ಲಿನ ಹೆಜ್ಜೆ ಗುರುತುಗಳ ಪ್ರಕಾರ ಅದೊಂದು ತುಂಬಾ ವಯಸ್ಸಾದ ಹೆಣ್ಣು ಹುಲಿಯಾಗಿತ್ತು. ಎಷ್ಟು ವಯಸ್ಸಾದ ಹುಲಿಯೆಂದರೆ, ಅವಳ ಪಾದಗಳು ವಯಸ್ಸಿನ ಪರಿಣಾಮವಾಗಿ ಸವೆದು ಹೋಗಿದ್ದವು. ನಡುಪಾದದಲ್ಲಿರುವ ಸೀಬೆಯಂತಹ ಉಬ್ಬು ಮತ್ತು ಬೆರಳುಗಳ ನಡುವಿನ ತಗ್ಗಿನ ಉದ್ದಕ್ಕೂ ಒಂದು ಆಳವಾದ ಸೀಳು ಹರಿದಿತ್ತು. ನಾನು ಇಂಥ ಇನ್ನೊಂದು ಹುಲಿಯ ಪಾದವನ್ನು ಈವರೆಗೂ ನೋಡಿರಲೇ ಇಲ್ಲ. ಇಷ್ಟೊಂದು ವಿಲಕ್ಷಣಗಳಿದ್ದ ಒಂದು ಪಾದದ ಗುರುತನ್ನು ಸತ್ತು ಬಿದ್ದಿರುವ ನೂರು ಹುಲಿಗಳ ನಡುವೆಯೂ ನಾನು ಗುರುತಿಸಬಲ್ಲವನಾಗಿದ್ದೆ. ಹಾಗಾದರೆ ಈ ಹುಲಿ? ಹೆಣ್ಣು ಹುಲಿ..! ವಯಸ್ಸಾದ ಹುಲಿ..! ಎಲ್ಲವೂ ಹೌದು! ಆದೆ ಇದು ಆ ಪುರಾತನ ಚಾವ್‌ಫರ್ ನರಭಕ್ಷಕಿಯಲ್ಲ ಈ ನನ್ನ ತೀರ್ಮಾನವನ್ನು ನಾನು ಅಲ್ಲಿದ್ದವರಿಗೆ ತಿಳಿಸಿದೆ. ತಕ್ಷಣ ಅವರ ನಡುವೆ ಗೊಣಗಾಟಗಳ ಬಿರುಗಾಳಿ ಎದ್ದಿತು. ಕ್ಷಣ ಮಾತ್ರದಲ್ಲಿ ಅತ್ತಲಿಂದ ಪ್ರಬಲವಾದ ಪ್ರತಿರೊಧ ನುಗ್ಗಿಬಂತು. 'ಮೊದಲು ಬಂದಾಗ ನೀವೇ ಹೇಳಿದಿರಿ ಆ ನರಭಕ್ಷಕಿ ಒಂದು ವಯಸ್ಸಾದ ಹೆಣ್ಣು ಹುಲಿ ಎಂದು. ಇದೇ ಹುಲಿ ನಮ್ಮ ಕಣ್ಣೆದುರಿಗೇ ನಾಲ್ಕು ಜನರನ್ನು ಕೊಂದು ತಿಂದಿರುವುದನ್ನು ನಾವೇ ಕಣ್ಣಾರೆ ನೋಡಿದ್ದೇವೆ. ನೀವೇನೋ ಕಾಲುಗಳನ್ನು ನೋಡಿ ಇದು ಅದಲ್ಲ ಎನ್ನುತ್ತಿದ್ದೀರಿ. ಕಾಲಿನಲ್ಲೇನಿರುತ್ತೆ. ಬಿಡಿ. ಕಾಡಿನ ಎಲ್ಲಾ ಹುಲಿಗಳ ಕಾಲುಗಳೂ ಒಂದೇ ಥರ ಇರ್ತವೆ. ಅದೇನು ಮಹಾ ಎನ್ನುತ್ತಾ ವಾದಕ್ಕಿಳಿದರು.

ನಾವೇನೂ ಮಾತನಾಡಲಿಲ್ಲ. ಆ ಗಂಡು ಹುಲಿಯನ್ನು ಹೊತ್ತು ತರಲು ಹೇಳಿದೆ. ಕಂದಕದ ಆಚೆಗಿದ್ದ ಅದನ್ನು ಕೂಗುತ್ತಾ ಕೇಕೆ ಹಾಕುತ್ತಾ ತಮಾಷೆ ಮಾಡುತ್ತಾ ಜನ ಹೊತ್ತು ತಂದರು. ಅದನ್ನು ಮೊದಲ ಹುಲಿಯ ಪಕ್ಕದಲ್ಲಿ ಮಲಗಿಸಿದರು. ಅದು ನಿಜಕ್ಕೂ ನಡು ಪ್ರಾಯದ ಬಲಿಷ್ಠ ಗಂಡು ಹುಲಿ.



ಇದ್ಯಾಕೆ ಬಂತೋ ಈ ಹೊಸ ನರಭಕ್ಷಕಿಯ ಜೊತೆಯಲ್ಲಿ? ಅರ್ಥವಾಗಲಿಲ್ಲ. ಆದರೆ ಪರಿಸ್ಥಿತಿ ಕೈಮೀರಿತ್ತು. ಇವುಗಳ 'ಚರ್ಮಕಾಂಡ' ಮುಗಿಸಲು ನನಗೆ ಹದಿನಾಲ್ಕು ಗಂಟೆಗಳು ಹಿಡಿದವು. ಸುತ್ತಲೂ ಮುತ್ತಿದ್ದ ಜನ, ಹೊತ್ತೇರಿದಂತೆ ಬೆನ್ನಿನ ಚರ್ಮ ಸುಲಿದು ಹೋಗುವಂತೆ ಅಪ್ಪಳಿಸುತ್ತಿದ್ದ ಬಿಸಿಲಿನಿಂದ ನಾನು ಬಸವಳಿದು ಹೋದೆ. ಚರ್ಮವನ್ನು ಹೊರೆಕಟ್ಟಿ ನಮ್ಮವರ ಕೈಗೆ ಕೊಟ್ಟು ಸೀದಾ ದಲ್ಕಾನಿಯಾಧತ್ತ ಹೊರಟೆ.

ಇವೆಲ್ಲಾ ಮುಗಿದ ಮೇಲೆ ದಿನಗಳ ಮೇಲೆ ದಿನಗಳು ಗತಿಸುತ್ತಾ ಹೋದವು. ವಾರಗಟ್ಟಲೆ ನರಭಕ್ಷಕಿಯ ಮಾಹಿತಿಗಾಗಿ ನಿರೀಕ್ಷಿಸುತ್ತಾ ಕುಳಿತೆ. ಅದರ ಸುದ್ದಿ ಇಲ್ಲ, ನನಗೆ ಅದು ಜೀವಂತವಾಗಿರುವ ಬಗ್ಗೆ ಯಾವ ಸಂದೇಹಗಳೂ ಇರಲಿಲ್ಲ. ಆದರೆ ಅದರ ಕಡೆಯಿಂದ ಯಾವ ಸುದ್ದಿಯೂ ಇಲ್ಲ. ಭೂಮಿಯಿಂದಲೇ ವಾಯುವಾದಂತೆ ಅದು ಕಾಣೆಯಾಗಿಬಿಟ್ಟಿತ್ತು. ನನಗೆ ತೆರೆಐನ ಜಿಲ್ಲಾಧಿಕಾರಿಗಳೊಂದಿಗೆ ಪೂರ್ವನಿರ್ಧಾರಿತ ಕೆಲಸವಿದ್ದುದ್ದರಿಂದ ನಾನು ದಲ್ಕಾನಿಯಾದಿಂದ ಹೊರಡಲೇಬೇಕಾಗಿತ್ತು.

*****

ಮಾದರಿ ಪ್ರಶ್ನೆಪತ್ರಿಕೆ

# ಮೂರನೇ ಸೆಮಿಸ್ಟರ್ ಬಿಎಸ್ಸಿ ಫ್ಯಾಡ್

## ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : ೩ ಗಂಟೆಗಳು** **ಅಂಕಗಳು :೭೦**

**ಅ. ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೫x೨=೧೦**

೧. ನಾಯಿ ಮರಿಯನ್ನು ಕಂಡ ಮಕ್ಕಳ ಪ್ರತಿಕ್ರಿಯೆಯೇನು?

೨. ನಗರ ಪರಿಸರ 'ಸಂಪರ್ಕ ' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

೩. ಮನುಷ್ಯನ ಮೇಲೆ ನಿಸರ್ಗ ತೋರುವ ಕ್ರೌರ್ಯವೆಂತಹದ್ದು?

೪. ಸಿದ್ದಯ್ಯ ಯಾರು? ಕಾಗೋಡಿನಲ್ಲಿ ಬಸ್ಸು ಇಳಿದು ಓಡಿಹೋಗಲು ಕಾರಣವೇನು?

೫. ನೇಗಿಲಯೋಗಿ ಯಾರು? ಅವನ ಕೆಲಸವೇನು?

೬. ರೈತಸಂಘ ಹುಟ್ಟಿದ್ದು ಯಾವಾಗ? ಕಾರಣವೇನು?

೭. ಅಜ್ಜಿಸಾಬಿ ಹುಲಿಗಳನ್ನು ಯಾವ ರೀತಿ ಕೊಲ್ಲುತ್ತಿದ್ದ?

೮. ಬ್ರಿಟಿಷರು ಕಾಡು ನಾಯಿಗಳನ್ನು ನೀಚ ಜೀವಿಗಳೆಂದು ಜರಿಯಲು ಕಾರಣವೇನು?

**ಆ. ನಾಲ್ಕು ಪ್ರಶ್ನೆಗಳಿಗೆ ನೂರು ಶಬ್ದಗಳನ್ನು ಮೀರದಂತೆ ಉತ್ತರಿಸಿ. ೪x೫=೨೦**

೧. 'ನನ್ನ ನಾಯಿ' ಕವನದಲ್ಲಿ 'ಕರುಣೆ ಒಲುಮೆಗೆ ಸಾಟಿಯೇ' ಈ ವಾಕ್ಯವನ್ನು ಸಮರ್ಥಿಸಿ.

೨. ಪ್ರೀತಿಯಿಂದಾಗುವ ಪ್ರಯೋಜನವೇನು?

೩. ರಾಜಣ್ಣ ಅವ್ವನನ್ನು ತಿರುಪತಿ ದರ್ಶನ ಮಾಡಿಸಿದ ಸಂದರ್ಭ ಕುರಿತು ಬರೆಯಿರಿ.

೫. 'ನೇಗಿಲಯೋಗಿ ' ಕುವೆಂಪುರವರ ಕವನದ ಆಶಯವೇನು?

೬. ಹರಿಶ್ಚಂದ್ರ ಮಹಾರಾಜ ಹಂದಿಯನ್ನು ಬೇಟೆಯಾಡಲು ಕಾರಣ ಮತ್ತು ಪರಿಣಾಮವೇನಾಯಿತು.

**ಇ. ಮೂರು ಪ್ರಶ್ನೆಗಳಿಗೆ ಇನ್ನೂರು ಶಬ್ದಗಳನ್ನು ಮೀರದಂತೆ ಉತ್ತರಿಸಿ ೩x೧೦=೩೦**

೧. ಸಂಕೀರ್ಣತೆ ಮತ್ತು ಸರಳತೆ ಸಂಪರ್ಕ ಕವಿತೆಯಲ್ಲಿ ಸಂಭಾವಿಸುವ ಬಗ್ಗೆ ಚರ್ಚಿಸಿ.

೨. ಕೌಶಿಕ ಮಹರ್ಷಿಯ ಮಾಯಾ ವರಹದ ಬೇಟೆಯ ಸಂದರ್ಭದ ಭಯಂಕರತೆಯನ್ನು ಕುರಿತು ಬರೆಯಿರಿ.

೩. ಶಿಕಾರಿಯನ್ನು ಅಜ್ಜಿಸಾಬಿ ಮತ್ತು ಹನೀಫ್ ಸಾಬಿ ಪರಿಭಾವಿಸುವ ಬಗೆಯನ್ನು ವಿವರಿಸಿ.

೪. ಕಾಡು ನಾಯಿಗಳ ಬೇಟೆಯ ರಹಸ್ಯವನ್ನು ಕುರಿತು ಬರೆಯಿರಿ.

೫. ಬಸ್ಸು ಅನ್ನುವ ಅದ್ಬುತ ಕಾಗೋಡಿಗೆ ಬಂದಾಗ ಜನರಲ್ಲಿ ಉಂಟಾದ ಸಂಭ್ರಮವೆಂತದ್ದು ವಿವರಿಸಿ.

**ಈ. ಎರಡು ಪ್ರಶ್ನೆಗಳಿಗೆ ನೂರು ಶಬ್ದಗಳಲ್ಲಿ ಉತ್ತರಿಸಿ. (ಓದುಪಠ್ಯದಿಂದ) ೨x೫=೧೦**

೧. ಪ್ರೀತಿ ಶಾಶ್ವತ! ಪ್ರೀತಿಸುವವರು ನಶ್ವರ ಲೇಖನದ ಆಶಯವೇನು?

೨. 'ಸಕಲ ಜೀವರಾಶಿಗಳೂ ಭೂಮಿಯ ಹಕ್ಕುದಾರರು' ಲೇಖನದ ಹಿನ್ನೆಲೆಯಲ್ಲಿ ಸಮರ್ಥಿಸಿ.

೩. ಭಾರತೀಯರು ದಕ್ಷಿಣ ಆಫ್ರಿಕಾಗೆ ಬಂದ ಕಥೆಯನ್ನು ವಿವರಿಸಿ.

೪. ನರಭಕ್ಷಕ ಹುಲಿಯನ್ನು ಬೇಟೆಯಾಡಿದ ಪ್ರಸಂಗ.

## ಸಂಪಾದಕರ ವಿಳಾಸ:

**ಪ್ರೊ. ರೇಣುಕಮ್ಮ ಜೆ.**
ಸಹ ಪ್ರಾದ್ಯಾಪಕರು, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು
ಯಲಹಂಕ ಉಪನಗರ, ಬೆಂಗಳೂರು,
ಸಂಚಾರಿವಾಣಿ : ೯೯೮೦೫೩೨೦೩೧
ವಿ–ಅಂಚೆ : renukamma@sfgc.ac.in

**ಡಾ. ಆರ್. ವಾದಿರಾಜು**
ಸಹಾಯಕ ಪ್ರಾದ್ಯಾಪಕರು, ವಿಜಯ ಪದವಿ ಕಾಲೇಜು
ಆರ್.ವಿ.ರಸ್ತೆ, ಬಸವನಗುಡಿ, ಬೆಂಗಳೂರು–೫೬೦೦೦೪
ಸಂಚಾರಿವಾಣಿ : ೯೭೩೧೭೩೩೨೪೫
ವಿ–ಅಂಚೆ : rvrajurao1973@gmail.com

**ಪ್ರೊ. ನಾರಾಯಣ ಸ್ವಾಮಿ ಎಸ್.ಜಿ.**
ಸಹ ಪ್ರಾದ್ಯಾಪಕರು, ವಿ.ಇ.ಟಿ ಪ್ರಥಮ ದರ್ಜೆ ಕಾಲೇಜು
ಜೆ.ಪಿ.ನಗರ, ಬೆಂಗಳೂರು
ಸಂಚಾರಿವಾಣಿ : ೯೯೦೧೮೪೪೭೦೯
ವಿ–ಅಂಚೆ : dhruthiknswamy@gmail.com